ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಸೋಮವಾರ, 27 ಏಪ್ರಿಲ್ 2026
ಸಂಪುಟ 16, ಸಂಚಿಕೆ 33, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಟ್ರಂಪ್ ಹತ್ಯೆ ಯತ್ನ
ಶ್ವೇತಭವನದಲ್ಲಿ ಗುಂಡಿನ ಸದ್ದು

• ಪುಟ 2

ಕಿರುಸುದ್ದಿ

ಅಭಿವೃದ್ಧಿಗೆ ಬದ್ಧ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ನಂ 48 ಪ್ರಭಾತ ಕಾಲೋನಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಯೋಗಭವನದ ಮುಂದುವರೆದ ಕಾಮಗಾರಿಗಳಿಗೆ ಶಾಸಕರ 20 ಲಕ್ಷ ರೂ. ಅನುದಾನದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸುಮಾರು ವರ್ಷದಗಳ ಇಲ್ಲಿನ ಜನರ ಬೇಡಿಕೆಗೆ ನಾನು ಸ್ಪಂದಿಸಿದ್ದೇನೆ. ಮುಂದೆಯೂ ಸಹ ನಾನು ವಾರ್ಡ್‌ನಲ್ಲಿ ಎಲ್ಲ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲು ಬದ್ಧನಿದ್ದೇನೆ ಎಂದರು.

ವಾರ್ಡ್ ಅಧ್ಯಕ್ಷ ರವಿರಾಜ್ ಕೊಡ್ಲಿ ಮಾತನಾಡಿ, ಕಳೆದ 20 ವರ್ಷಗಳಿಂದ ವಾರ್ಡಿನ ಜನರು ಸಾರ್ವಜನಿಕರಿಂದ ಯೋಗ ಭವನ ನಿರ್ಮಾಣಕ್ಕೆ ಬೇಡಿಕೆ ಇತ್ತು ಜನರ ಬೇಡಿಕೆಗೆ ಸ್ಪಂದಿಸಿದ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು, ಜನರ ಆಶೋತ್ತರಗಳಿಗೆ ಸ್ಪಂದಿಸಿ ಶಾಸಕರ ವಿಶೇಷ ಅನುದಾನದಡಿ ಇಂದು ಭೂಮಿಪೂಜೆ ನೆರವೇರಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ರಮೇಶ್ ಬೆಳಗಾವಿ, ರವೀಂದ್ರ ಬೆಳಗಲ, ರವಿರಾಜ್ ಕೊಡ್ಲಿ, ಲಿಂಗರಾಜ್ ಬೆಳಗಟ್ಟಿ, ಶ್ರೀಕೃಷ್ಣ ಉಪರ್, ಶಿವಮೂರ್ತಿ ಪಾಟೀಲ್, ಪ್ರೇಮಾನಂದ ಶೆಟ್ಟಿ, ರಾಜು ಕೊಳ್ಳೇಕರ್, ವಿಜಯಕುಮಾರ್ ಪಾಟೀಲ್, ಕುಲಕರ್ಣಿ, ಉಷಾ ಬಳಿಗಾರ್ ಹಾಗೂ ಇತರರಿದ್ದರು.

ಇಂದು ಕೆಡಿಪಿ ಸಭೆ

ಧಾರವಾಡ: ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅಧ್ಯಕ್ಷತೆಯಲ್ಲಿ ಮಾರ್ಚ್ ಅಂತ್ಯದ ನಾಲ್ಕನೇ ತ್ರೈಮಾಸಿಕ ಕೆಡಿಪಿ (ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ) ಪ್ರಗತಿ ಪರಿಶೀಲನಾ ಸಭೆ ಏ.27ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜರುಗಲಿದೆ. ಜಿಲ್ಲಾಮಟ್ಟದ ಅಧಿಕಾರಿಗಳು ಅಗತ್ಯ ಅನುಪಾಲನಾ ವರದಿಯೊಂದಿಗೆ ಸಭೆಗೆ ಹಾಜರಾಗುವಂತೆ ಜಿಪಂ ಸಿಇಒ ಭುವನೇಶ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಸಂಪರ್ಕ ಸಭೆ ನಾಳೆ

ಧಾರವಾಡ: ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಕುಂದಗೋಳ ಪಟ್ಟಣದ ಸವಾಯಿ ಗಂಧರ್ವ ಸ್ಮಾರಕ ಭವನದಲ್ಲಿ ಜಿಲ್ಲಾಮಟ್ಟದ ಜನಸಂಪರ್ಕ ಸಭೆ ನಡೆಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ. ಸಾರ್ವಜನಿಕರು ಪಾಲ್ಗೊಂಡು, ಅಹವಾಲು ಹಾಗೂ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ನಾಟಕೋತ್ಸವ



ಧಾರವಾಡ: ಥೆರೇಸಮ್ಮ ಡಿಸೋಜ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಮೂರು ದಿನಗಳ ನಾಟಕೋತ್ಸವ ಹಾಗೂ ಥೆರಸಮ್ಮ ಡಿಸೋಜ ಪ್ರಶಸ್ತಿ ಪ್ರದಾನ ಸಮಾರಂಭ ಏ.27, 28 ಮತ್ತು 29ರಂದು ಹಮ್ಮಿಕೊಳ್ಳಲಾಗಿದೆ ಎಂದು ಕಲಾವಿದೆ ಡಾ.ಹೆಲನ್ ಮೈಸೂರ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕರ್ನಾಟಕ ನಾಟಕ ಜಾನಪದ ಕಲಾವಿದರ ಅಭಿವೃದ್ಧಿ ಸಂಘ ಹಾಗೂ ಕನ್ನಡ-ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಕವಿಸಂನ ನಾಡೋಜ ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದಾಗಿಯೂ ತಿಳಿಸಿದರು.

ಏ.27ರ ಸಂಜೆ 5.30ಕ್ಕೆ ನಾಟಕೋತ್ಸವಕ್ಕೆ ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಚಾಲನೆ ನೀಡಲಿದ್ದು, ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಕವಿಸಂ ಕೋಶಾಧ್ಯಕ್ಷ ಸತೀಶ ತುರಮರಿ, ಸದಸ್ಯ ವಿಶ್ವೇಶ್ವರಿ ಹಿರೇಮಠ ಪಾಲ್ಗೊಳ್ಳಲಿದ್ದಾರೆ. ಮಹದೇವ ಹೊಸೂರ ನಿರ್ದೇಶನದ ಅಕ್ಕ ಅಂಗಾರ, ತಂಗಿ ಬಂಗಾರ ನಾಟಕ ಪ್ರದರ್ಶನವೂ ಜರುಗಲಿದೆ. ಏ.28 ಸಂಜೆ 5.30ರ ಕಾರ್ಯಕ್ರಮದಲ್ಲಿ ಕಲಾವಿದೆ ಮಾಲತಿ ಸುಧೀರ, ರಂಗಕರ್ಮಿಗಳಾದ ಝಾಕೀರ ನದಾಫ್, ಪ್ರಕಾಶ ಗರುಡ, ಸುಭಾಷ ಶಿಂಧೆ, ಚಿಂದೋಡಿ ಮಧುಕೇಶ, ಚಿಂದೋಡಿ ಚಂದ್ರಧರ, ಬಸವರಾಜ ಗುರಿಕಾರ, ಬಿ.ಐ.ಈಳಿಗೇರ ಪಾಲ್ಗೊಳ್ಳಲಿದ್ದಾರೆ ಎಂದರು. ರಂಗ ಬದುಕು ಟ್ರಸ್ಟ್ ಅರ್ಪಿಸುವ ಪ್ರೊ.ರಹಮತ್ ತರೀಕೆರೆ ಅವರ ಅಮೀರ್‌ಬಾಯಿ ಕರ್ನಾಟಕಿ ನಾಟಕ ಪ್ರದರ್ಶನ ಜರುಗಲಿದೆ. ಏ.29ರ ಸಂಜೆ 5.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಪ್ರೊ.ಐ.ಜಿ.ಸನದಿ, ಮಾಜಿ ಮೇಯರ್ ಪಾಂಡುರಂಗ ಪಾಟೀಲ, ಮುಖಂಡ ದೀಪಕ ಚಿಂಚೋರೆ, ವಕೀಲ ಉದಯಕುಮಾರ ದೇಸಾಯಿ, ಚಿಂದೋಡಿ ಬಂಗಾರೇಶ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು. 2025-26ನೇ ಸಾಲಿನ ಥೆರೇಸಮ್ಮ ಡಿಸೋಜ ಪ್ರಶಸ್ತಿಗೆ ಮಾಜಿ ಸಚಿವೆ ಹಾಗೂ ನಟಿ ಉಮಾಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ. ಏ.29 ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ ರೂ.25 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಪ್ರಶಸ್ತಿ ಪ್ರದಾನಿಸುವ ಜೊತೆಗೆ ಕಿತ್ತೂರು ಚನ್ನಮ್ಮ ಪ್ರಶಸ್ತಿ ಪುರಸ್ಕೃತೆ ಗೀತಾ ಚಿಕ್ಕಮಠ ಅವರಿಗೆ ಸನ್ಮಾನಿಸುವುದಾಗಿ ಹೇಳಿದರು.



ಕುಂದಗೋಳ: ತಾಲೂಕಿನ ಗುಡಗೇರಿ ಗ್ರಾಮದ ಪೊಲೀಸ್ ಠಾಣೆಗೆ ಉತ್ತರ ವಲಯ ಬೆಳಗಾವಿ ಐಜಿಪಿ ಡಾ. ಚೇತನಸಿಂಗ್ ರಾಠೋಡ ಭೇಟಿ ನೀಡಿ ಪರಿಶೀಲಿಸಿದರು. ಠಾಣೆಯ ಕಡತಗಳನ್ನು ಪರಿಶೀಲಿಸಿ ನಾಗರಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಅಪರಾಧ ಕೃತ್ಯಗಳನ್ನು ಹತೋಟಿಗೆ ತರಬೇಕೆಂದು ಸಿಬ್ಬಂದಿಗೆ ಸಲಹೆ ನೀಡಿದರು. ಎಸ್.ಪಿ. ಗುಂಜಳ ಆರ್ಯ, ಸಿಪಿಐ ಸಮೀರ್ ಮುಲ್ಲಾ, ಗುಡಗೇರಿ ಠಾಣೆಯ ಪಿಎಸ್ಐ ಪ್ರವೀಣ್ ನೇಸರಗಿ ಇದ್ದರು.

ವಿಶ್ವ ಪಾರಂಪರಿಕ ದಿನ: ಕಾರ್ಯಾಗಾರ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ವಿಶ್ವ ಪಾರಂಪರಿಕ ದಿನದ ಅಂಗವಾಗಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಕಾಲೇಜ್ ಆವರಣದಲ್ಲಿ ಆಯೋಜಿಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ವಿಶ್ರಾಂತ ಕುಲಸಚಿವ (ಆಡಳಿತ) ಡಾ. ಶಾಂತಿನಾಥ ದಿಬ್ಬದ ಅವರು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆ, ಪರಂಪರೆಯ ಮಹತ್ವ ಮತ್ತು ಅವುಗಳನ್ನು ಉಳಿಸಿ ಬೆಳೆಸುವ ಅವಶ್ಯಕತೆಯ ಕುರಿತು ವಿಶ್ಲೇಷಣಾತ್ಮಕವಾಗಿ ಮಾತನಾಡಿದರು.

ಭಾರತೀಯ ಸಂಸ್ಕೃತಿಯ ಆಳವಾದ ಅರ್ಥವನ್ನು ಹಾಗೂ ಭಾರತದ ವೈವಿಧ್ಯಮಯ ಸಂಸ್ಕೃತಿ, ಆಚರಣೆಗಳು, ಭಾಗಗಳು ಮತ್ತು ಪರಂಪರೆಗಳು ದೇಶದ ಏಕತೆಯನ್ನು ಬಲಪಡಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ ಎಂದರು. ಇಂದಿನ ಆಧುನಿಕ ಯುಗದಲ್ಲಿ ಪಾಶ್ಚಾತ್ಯ ಪ್ರಭಾವ ಹೆಚ್ಚುತ್ತಿರುವ ಸಂದರ್ಭದಲ್ಲಿ ನಮ್ಮ ಸ್ವಂತ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಸುಮಂಗಲಾ ಬಿ. ಪಾಟೀಲ ಅವರು ಮಾತನಾಡಿದರು. ಐಕ್ಯೂಎಸಿ ಸಂಯೋಜಕ ಡಾ. ಸಿದ್ದೇಶ್ ಎಂ.ಬಿ., ಸಂಘಟನಾ ಕಾರ್ಯದರ್ಶಿ ವಿ.ಬಿ. ರಾಹುತ ಹಾಗೂ ಸಂಚಾಲಕ ಡಾ. ಬಸವರಾಜ ಜಿ. ಜಿಗಳಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.



ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ವಿಶ್ವ ಪಾರಂಪರಿಕ ದಿನದ ಅಂಗವಾಗಿ ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಕಾಲೇಜ್ ಆವರಣದಲ್ಲಿ ಆಯೋಜಿಸಲಾಯಿತು.

ನೌಕರರ ಸಾಹಿತ್ಯ ಪರಿಷತ್ ಪದಗ್ರಹಣ | ಸಭಾಪತಿ ಹೊರಟ್ಟಿ ಅಭಿಮತ

ಶಿಕ್ಷಣದೊಂದಿಗೆ ಸಂಸ್ಕಾರ ನೀಡಿ

ಧಾರವಾಡ: ಮನೆಯಲ್ಲಿ ಪಾಲಕರು ಹಾಗೂ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣದ ಜತೆ ಸಂಸ್ಕಾರ ಕಲಿಸಬೇಕು. ಅವರಲ್ಲಿ ಮೌಲ್ಯಗಳನ್ನು ಬಿತ್ತಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಭಾನುವಾರ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ ರಾಜ್ಯಘಟಕ ಮತ್ತು ಜಿಲ್ಲಾಘಟಕದ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಬದುಕಿನಲ್ಲಿ ಸಂತೋಷ ಮುಖ್ಯ. ಈ ಸಂತೋಷನಾಡಿನ ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ ಹಾಗೂ ಸಂಸ್ಕೃತಿಯಲ್ಲಿ ಅಡಗಿದೆ. ಪ್ರತಿಭೆಗಳ ಅನಾವರಣದ ಜೊತೆಗೆ ನಾಡಿನ ಸಂಸ್ಕೃತಿಯ ಉಳುವಿಗೆ ನೌಕರರ ಸಂಸ್ಕೃತಿ-ಸಾಹಿತ್ಯ ಪರಿಷತ್ ಸ್ಥಾಪನೆ ಶ್ಲಾಘಿಸಿದರು.



ಉತ್ತಮ ಕಾರ್ಯ ಮಾಡಿ

ಕನ್ನಡ ನಾಡಿನಲ್ಲಿ ಮತ್ತೊಂದು ಸಂಸ್ಕೃತಿ-ಸಾಹಿತ್ಯ ಪರಿಷತ್ ಉದಯಿಸಿರುವುದು ಹೆಮ್ಮೆ ಸಂಗತಿ. ಇದು ರಾಷ್ಟ್ರವ್ಯಾಪ್ತಿ ಬೆಳೆದು ಉತ್ತಮ ಕಾರ್ಯ ಮಾಡುವಂತೆ ಅಖಿಲ ಭಾರತ ಶಿಕ್ಷಕರ ಫಡರೇಷನ್ ಅಧ್ಯಕ್ಷ ಬಸವರಾಜ ಗುರಿಕಾರ ಮಾತನಾಡಿ ಶುಭ ಕೋರಿದರು.

ನೌಕರರ ಸಂಸ್ಕೃತಿ-ಸಾಹಿತ್ಯ ಪರಿಷತ್ ಸಂಘದ ಅಧ್ಯಕ್ಷೆ ರಮಾ ಆರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಸ್.ಎಫ್. ಸಿದ್ದನಗೌಡರ, ಮಹಿಳಾ ನೌಕರರಸಂಘದ ರಾಜ್ಯಾಧ್ಯಕ್ಷೆ ಲತಾ ಬಿರಾದಾರ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ತಹಶೀಲ್ದಾರ್ ಎಸ್.ಎ.ಪ್ರಸಾದ ಸೇರಿ ಅನೇಕರು ಇದ್ದರು. ಎಲ್.ಐ.ಲಕ್ಕಮ್ಮನವರ, ಭಾರತಿ ಗಾಣಿಗೇರ, ಕೆ.ಸಿ.ರಮೇಶ, ಕೆ.ಎಸ್. ಸುರೇಶ, ಅನುಷಾ ಹಿರೇಮಠ, ಪರ್ವೀನಬಾನು ಬುಳ್ಳಣ್ಣವರ, ಟಿ.ವೀಣಾ, ಚಂದ್ರಶೇಖರ ಪಾಟೀಲ, ಗೀತಾ ಪ್ರಧಾನಿ, ಆರ್.ಉಷಾರಾಣಿ, ಬಸವರಾಜ ಬಾಗಲ ಪಾಲ್ಗೊಂಡಿದ್ದರು.

» ಸಮಾರಂಭದಲ್ಲಿ ರಾಜ್ಯದ 30 ಜಿಲ್ಲೆಗಳ ವಿವಿಧ ರಂಗದ ಸಾಧಕರಿಗೆ, ನೌಕರರಿಗೆ, ಅತ್ಯುತ್ತಮ ಸೇವಾ ಸಂಸ್ಥೆಗಳಿಗೆ ಕಾಯಕರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು

“ ಬದುಕಿನ ಸಾರವನ್ನು ಪ್ರಾಯೋಗಿಕವಾಗಿ ನೋಡಬೇಕು. ನಾಡಿನ ಮಾತೃಸಂಸ್ಕಾರ ಉಳಿಸಿ, ಬೆಳೆಸುವ ಕಾರ್ಯಕ್ರಮ ನಡೆಯಬೇಕು. ಕನಿಷ್ಠ ಮೂರು ತಿಂಗಳಿಗೊಮ್ಮೆ ಕಾರ್ಯಕ್ರಮ ಏರ್ಪಡಿಸಿ ಪ್ರತಿಭೆಗೆ ನೌಕರರ ಪರಿಷತ್ ವೇದಿಕೆ ಕಲ್ಪಿಸಿ.

■ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ

ನವಲಗುಂದ: ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಪ್ರಾಯೋಜಿತ ಇಂಗ್ಲಿಷ್ ವಿಭಾಗದ ಒಂದು ದಿನದ ಕಾರ್ಯಾಗಾರ ಹಾಗೂ ಸಮಾರೋಪ ಸಮಾರಂಭ ಜರುಗಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಅಳ್ನಾವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ವಿಭಾಗದ ಸಹಪ್ರಾಧ್ಯಾಪಕ ಬಿ.ಬಿ.ಪಾಟೀಲ ಮಾತಾನಾಡಿ, ಜೀವನದಲ್ಲಿ ಕಠಿಣ ಪರಿಶ್ರಮದಿಂದ ಸಾಧನೆ ಮಾಡಬೇಕು. ಅರ್ನೆಸ್ಟ್ ಹ್ಯಾಮಿಂಗವೆ ಅವರ ಪ್ರಸಿದ್ಧ ಕಾದಂಬರಿಯನ್ನು ಉದಾಹರಿಸಿ ಅದರಲ್ಲಿರುವ ಸ್ಯಾಟಿಗೋ ಎಂಬ ವಯೋವೃದ್ಧ ಸಮುದ್ರದಲ್ಲಿ ಮೀನು ಹಿಡಿಯಲು 84 ಸಲ ಪ್ರಯತ್ನ ಪಟ್ಟು ಕೊನೆಗೆ ಯಶಸ್ಸು ಕಾಣುತ್ತಾನೆ. ಇವರಂತೆಯೇ ಎಲ್ಲ ವಿದ್ಯಾರ್ಥಿಗಳು ತಕ್ಷಣಕ್ಕೆ ಕೈ ಚೆಲ್ಲದೆ ಕಠಿಣ ಪರಿಶ್ರಮದಿಂದ ಗುರಿ ಬೆನ್ನತ್ತಿ ಜೀವನದಲ್ಲಿ ಸಾಧನೆ ಮಾಡಬೇಕು ಎಂದರು.

ಫರ್ಹತಬಾನು ತಂದೂರ ನಿರೂಪಿಸಿದರು, ಬಿ.ವಿ.ಎಣಗಿ ಸ್ವಾಗತಿಸಿದರು. ಡಾ ಸಂತೋಷ್ ಹುಬ್ಬಳ್ಳಿ ಪ್ರಾಸ್ತಾವಿಸಿದರು. ಡಾ. ಪ್ರಸನ್ನ ಪಂಢರಿ ಅತಿಥಿಗಳನ್ನು ಪರಿಚಯಿಸಿದರು. ಶ್ವೇತಾ ಕುರಹಟ್ಟಿ ವಂದಿಸಿದರು. ಈ ಸಂದರ್ಭದಲ್ಲಿ ಪ್ರೊ. ಐ.ಬಿ. ಸಾತಿಹಾಳ, ಶ್ರೀಧರ ಲೋಣಕರ, ಸವಿತಾ ಚಿಕ್ಕಣ್ಣವರ, ಗಣೇಶ್ ಧೋಂಗಡಿ, ಗಂಗಾಧರ ಗೌಡರ, ನಾಗರತ್ನ ಕುರಡೇಕರ್, ವಸಂತ ಮುಂದಿನಮನಿ, ಸುರೇಶ ಬಾರಕೇರ, ಖಾದಿರಬಿ ನಧಾಪ, ಸುಜಾತ ಬರದೂರ, ಭಾರತಿ ಭೋವಿ, ಮಲ್ಲಿಕಾರ್ಜುನ ಗಡಾದ, ಮಂಜುನಾಥ ಜಾಡರ, ಚೈತ್ರಾ ಟಿ., ಪ್ರತಿಭಾ ಮುಂತಾದವರಿದ್ದರು.

ಕಠಿಣ ಪರಿಶ್ರಮ ಅವಶ್ಯ

ವಿದ್ಯಾರ್ಥಿಗಳು ಯಶಸ್ಸಿಗೆ ಪರ್ಯಾಯ ಮಾರ್ಗಗಳನ್ನು ಅನುಸರಿಸದೆ ಆತ್ಮ ವಿಶ್ವಾಸದಿಂದ, ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧಿಸಬೇಕು ಎಂದು ಪ್ರಾಂಶುಪಾಲ ಡಾ. ಎಂ.ಬಿ.ಬಾಗಡಿ ಹೇಳಿದರು.



ಎಸ್‌ಎಸ್‌ಎಲ್‌ಸಿ: ಶೇ.100ರಷ್ಟು ಫಲಿತಾಂಶ

ಕುಂದಗೋಳ: ಪಟ್ಟಣದ ಪ್ರತಿಷ್ಠಿತ ಬಸವೇಶ್ವರ ಶಿಕ್ಷಣ ಸಂಸ್ಥೆಯ ಸನ್‌ಶೈನ್ ಆಂಗ್ಲ ಮಾಧ್ಯಮ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಸಾಧಿಸಿ ಗಮನಸೆಳೆದಿದೆ. ಶಾಲೆಯ ತನ್ಮಯ ಆರ್. ಹೆಬಸೂರ ಶೇ. 97.12 ಅಂಕಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದು, ಅಮೂಲ್ಯ ಕೆ. ಕಲ್ಲಪ್ಪನಮಠ ಶೇ. 93.76 ಹಾಗೂ ವೈಭವ ಜಿ. ಹೊಳಗಣ್ಣವರ ಶೇ. 92.8 ಅಂಕಗಳೊಂದಿಗೆ ಮುಂದಿನ ಸ್ಥಾನಗಳನ್ನು ಪಡೆದಿದ್ದಾರೆ. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ಕೊಪ್ಪದ ಮಾತನಾಡಿ, ಗುಣಮಟ್ಟದ ಶಿಕ್ಷಣ, ಶಿಸ್ತು ಮತ್ತು ಶಿಕ್ಷಕರ ಪರಿಶ್ರಮದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ. ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡುವ ವಿಶ್ವಾಸವಿದೆ ಎಂದರು. ವಿದ್ಯಾರ್ಥಿಗಳ ಸಾಧನೆಗೆ ಉಪಾಧ್ಯಕ್ಷ ಆರ್.ಎಸ್. ಮಂತ್ರಶೆಟ್ಟಿ, ಕಾರ್ಯದರ್ಶಿ ಪಿ.ಎಂ. ಕಾಳೆ, ಖಜಾಂಚಿ ಬಿ.ಟಿ. ಬಾಳಿಕಾಯಿ, ನಿರ್ದೇಶಕರಾದ ಎಸ್.ಎಸ್. ಗಂಗಾಯಿ, ಬಿ.ಟಿ. ಗಂಗಾಯಿ, ಯು.ಸಿ. ಬೀಡನಾಳ ಹಾಗೂ ಮುಖ್ಯೋಪಾಧ್ಯಾಯ ಎಸ್.ಎಂ. ಬಡಿಗೇರ ಸೇರಿದಂತೆ ಶಿಕ್ಷಕರು ಹರ್ಷವ್ಯಕ್ತಪಡಿಸಿದ್ದಾರೆ.





ನಗರೀಕರಣದಲ್ಲಿ ಮುಳುಗದೆ ನಿಮ್ಮತನ ಉಳಿಸಿಕೊಳ್ಳಿ

ಹುಬ್ಬಳ್ಳಿ: ನಗರೀಕರಣದಲ್ಲಿ ಗ್ರಾಮೀಣ ಸಂಸ್ಕೃತಿಸೊಗಡುಮುಳುಗಿಹೋಗಬಾರದು. ಕುಸುಗಲ್ ಗ್ರಾಮದಲ್ಲಿ ಗ್ರಾಮ ದೇವತೆಯ ಪುನರ್ ಸ್ಥಾಪನೆ ಮಾಡುವ ಮೂಲಕ ನಗರೀಕರಣದಲ್ಲಿ ಮುಳುಗದೆ ನಿಮ್ಮತನ ಉಳಿಸಿಕೊಂಡಿರುವುದು ಸಂತಸವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲೂಕಿನ ಕುಸುಗಲ್ಲ ಗ್ರಾಮದಲ್ಲಿ ಗ್ರಾಮದೇವತೆಯರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕುಸುಗಲ್ ಗ್ರಾಮ ನಮ್ಮ ತಂದೆ ಎಸ್. ಆರ್. ಬೊಮ್ಮಾಯಿ ಅವರಿಗೆ ಬಹಳ ಅಚ್ಚು ಮೆಚ್ಚು. ಅವರು ಮೂರು ಬಾರಿ ಇಲ್ಲಿ ಶಾಸಕರಾಗಿ ಆಯ್ಕೆಯಾಗಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಸೇವೆ ಮಾಡಲು ಕುಸುಗಲ್ ಗ್ರಾಮದ ಗುರು ಹಿರಿಯರು ಮತ್ತು ಯುವಕರ ಬಹಳ ದೊಡ್ಡ ಆಶೀರ್ವಾದ ಇತ್ತು ಎಂದರು.

ಈ ಊರಿನ ಜನರು ಶ್ರಮಜೀವಿಗಳು ಅಲ್ಪಸಂಖ್ಯಾತರು, ಎಸ್ಸಿ, ಎಸ್ಟಿ, ಲಿಂಗಾಯತರು ಎಲ್ಲರೂ ಇದ್ದಾರೆ. ನಗರೀಕರಣದ ಭರದಲ್ಲಿ ಕುಸುಗಲ್ ತನ್ನತನ ಕಳೆದುಕೊಳ್ಳಬಾರದು. ಒಂದು ಗ್ರಾಮದಲ್ಲಿ ಆತ್ಮೀಯವಾದ ಸಂಬಂಧ, ಮಾವ ಅಳಿಯ, ಸೋದರ ಸಂಬಂಧ, ಅಕ್ಕ ತಂಗಿಯರ ಸಂಬಂಧ ಬಹಳ ಚೆನ್ನಾಗಿರುತ್ತದೆ. ಈ ಸಂಸ್ಕೃತಿ ಸೊಗಡು ನಗರೀಕರಣದಲ್ಲಿ ಮುಳುಗಿ ಹೋಗಬಾರದು ಎಂದರು.

ಈ ಊರಿನಲ್ಲಿ ನೀರಿನ ಸಮಸ್ಯೆ ಬಹಳ ಇತ್ತು. ಕುಸುಗಲ್ ಕೆರೆಗೆ ಎಷ್ಟೆ ಮಳೆ ಬಂದರೂ ನೀರು ನಿಲ್ಲುತ್ತಿರಲಿಲ್ಲ. ಈಗ ನೀರು ನಿಲ್ಲುತ್ತಿದೆ. ನಾನು ಜಲ ಸಂಪನ್ಮೂಲ ಸಚಿವನಾಗಿದ್ದಾಗ ಕುಸುಗಲ್, ಬ್ಯಾಹಟ್ಟಿ, ಅಣ್ಣಿಗೇರಿ ಗ್ರಾಮಗಳಿಗೆ ಮಲಪ್ರಭದಿಂದ ನೀರು ತರಲು ಅನುಕೂಲವಾಯಿತು ಎಂದು ತಿಳಿಸಿದರು. ಭೂಮಿ ತೆಗೆದುಕೊಂಡರೂ ಮಕ್ಕಳಿಗೆ ವಿದ್ಯೆ ನೀಡುವುದನ್ನು ಮರೆಯಬೇಡಿ. ಕುಸುಗಲ್ ಮಕ್ಕಳಿಗೆ ವಿದ್ಯೆ ನೀಡಿದರೆ ಅವರು ಜಗತ್ತಿನಲ್ಲಿ ಒಳ್ಳೆಯ ಹೆಸರು ಮಾಡುತ್ತಾರೆ. ನನ್ನನ್ನು ನೆನಪಿಟ್ಟು ಕರೆಯಿಸಿದ್ದಕ್ಕೆ ಧನ್ಯವಾದಗಳು, ನನ್ನ ಕೊನೆ ಉಸಿರಿರುವವರೆಗೂ ಈ ಊರಿನ ಜೊತೆಗೆ ಸಂಬಂಧ ಇರುತ್ತದೆ. ಸದಾ ನಿಮ್ಮ ಸೇವೆಗೆ ನಾನು ನಿಮ್ಮ ಜೊತೆಗೆ ಇರುತ್ತೇನೆ ಎಂದರು.




ದೈಹಿಕ ಕ್ಷಮತೆಗೆ ಕ್ರೀಡೆ ಅಗತ್ಯ: ಗಾಣಿಗೇರ



ಧಾರವಾಡ: ನಗರದ ಮರಾಠ ವಿದ್ಯಾಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕಲಾ ಹಾಗೂ ವಾಣಿಜ್ಯ ಪದವಿ ಕಾಲೇಜಿನ ವಾರ್ಷಿಕ ಕ್ರೀಡಾಕೂಟ ಜರುಗಿದವು. ಅಥ್ಲೆಟಿಕ್ಸ್‌ನಲ್ಲಿ ಪುರುಷ ಹಾಗೂ ಮಹಿಳೆಯರು 100, 200 ಮೀಟರ್, ರಿಲೆ ಸ್ಪರ್ಧೆಗಳು, ಗುಂಡು ಎಸೆತ ಹೀಗೆ ವೈಯಕ್ತಿಕ ಸ್ಪರ್ಧೆಗಳ ಜೊತೆ ಗುಂಪು ಸ್ಪರ್ಧೆ ಕೂಡ ನಡೆದವು. ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಪ್ರಾಚಾರ್ಯ ಎಂ.ಎಸ್.ಗಾಣಿಗೇರ ಮಾತನಾಡಿ, ಶಿವಾಜಿ ಶೌರ್ಯ ಮತ್ತು ಸಾಹಸ ಯುವಶಕ್ತಿಗೆ ಬೇಕಿದೆ. ಕ್ರೀಡೆ ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು ಮತ್ತು ಏಕಾಗ್ರತೆ ಬೆಳೆಸುತ್ತದೆ. ದೈಹಿಕ-ಮಾನಸಿಕ ಕ್ಷಮತೆಗೆ ಕ್ರೀಡೆ ಬೇಕು ಎಂದರು.

ಉಪನ್ಯಾಸಕರಾದ ವಿಶಾಲ ಪೋಳ, ನಂದೀಶ ಕಡಕೋಳ, ಅಜ್ಜನಗೌಡ ಮೂಲಿಮನಿ, ಪ್ರವೀಣ ಉಳ್ಳಿಗೇರಿ, ಮಂಜುನಾಥ ವಾಲ್ಮೀಕಿ, ಸುನಿತಾ ಮಾನೆ, ಸವಿತಾ ಬೆಂತೂರ, ಸವಿತಾ ಕುಸುಗಲ್ಲ, ಕಾವ್ಯಾ ಯಲಿಗಾರ, ರಂಜಿತಾ ಅರ್ಕಸಾಲಿ, ಸೀಮಾ ಶಿಂಧೆ, ಆಶಾರಾಣಿ ಸಾಲಗಟ್ಟಿ, ಸಹನಾ ಬೋಸ್ಲೆ, ಸುಧೀರ ಕಳ್ಳಿಮನಿ, ಬಾಲಕೃಷ್ಣ ಚವ್ಹಾಣ ಇದ್ದರು.

ಎಸ್‌ಎಸ್‌ಎಲ್‌ಸಿ: ವಿದ್ಯಾರ್ಥಿಗಳಿಗೆ ಗೌರವ



ಅಳ್ನಾವರ: ಪಟ್ಟಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಪಟ್ಟಣದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು. ಸಂಚಾಲಕ ರುದ್ರೇಶ ಹಡಪದ ಸಾಧಕರನ್ನು ಸತ್ಕರಿಸಿ ಮಾತನಾಡಿ, ವಿದ್ಯಾರ್ಥಿಗಳ ಮೇರು ವ್ಯಕ್ತಿತ್ವ ಅನುಕರಣೀಯ, ಈ ವಿದ್ಯಾರ್ಥಿಗಳ ಕಠಿಣ ಪರಿಶ್ರಮ ಮತ್ತು ಏಕಾಗ್ರತೆ ಉತ್ತಮ ಅಂಕಗಳಿಕೆಗೆ ಸಹಕಾರಿಯಾಗಿದೆ. ಸರ್ಕಾರಿ ಹಾಗೂ ಖಾಸಗಿ ಶಾಲೆ ಎನ್ನುವ ಆಲೋಚನೆ ದೂರ ಮಾಡಿಕೊಂಡು ಛಲದಿಂದ ಮುನ್ನಡೆದರೆ ಗುರಿ ಸಾಧನೆ ಸಾಧ್ಯ ಎಂದರು. ಹೂಲಿಕೇರಿ ಸರ್ಕಾರಿ ಶಾಲೆಯ ಶಿಕ್ಷಕ ಎ.ಕೆ.ಹೊನಗೆಕರ, ಪ್ರೇಮಚಂದ ಪಾಮಡಿ, ಶೀತಲ್ ಹೂಲಿಕೇರಿ, ದೀಪಾ ಕಲ್ಯಾಣಕರ, ಯೋಗೇಶ್ವರಿ ಪಾಟೀಲ್, ಪೂರ್ಣಿಮಾ ಸಾವಂತ, ದೀಪಾ ಹಡಪದ, ಮಧು ಮದ್ನಳ್ಳಿ ಇತರರಿದ್ದರು.

ಸಂವಿಧಾನದಲ್ಲಿ ಸರ್ವರ ಏಳ್ಗೆ ಅಡಕ

ಧಾರವಾಡ: ಕೇವಲ ದಲಿತರಿಗೆ ಮಾತ್ರವಲ್ಲದೇ ಸರ್ವರ ಏಳ್ಗೆಗಾಗಿ ಅಂಬೇಡ್ಕರ್ ಅವರು ಸಂವಿಧಾನದಡಿ ಹಕ್ಕುಗಳು ನೀಡಿದ್ದು, ಹಕ್ಕುಗಳನ್ನು ಜವಾಬ್ದಾರಿಯಿಂದ ನಿಭಾಯಿಸುವ ಅವಶ್ಯಕತೆ ಇದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ವಿಭಾಗದಿಂದ ಕವಿವಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ನಡೆದ ಎಸ್ಸಿ-ಎಸ್ಟಿ ಪದವಿ, ಸ್ನಾತಕೋತ್ತರ, ಸಂಶೋಧನಾ ವಿದ್ಯಾರ್ಥಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದರು. ಅಂಬೇಡ್ಕರ್ ಅವರನ್ನು ಎಲ್ಲ ಸಮುದಾಯದ ವಿದ್ಯಾರ್ಥಿಗಳಿಗೆ ಪರಿಚಯಿಸುವ ಅಗತ್ಯವಿದೆ. ಅನೇಕ ಸಂಕಷ್ಟ ಮತ್ತು ಸವಾಲು ಎದುರಿಸಿದ ಅಂಬೇಡ್ಕರ್, ಎಲ್ಲ ಸಮುದಾಯದ ಏಳ್ಗೆಗಾಗಿ ಸಂವಿಧಾನದ ಮೂಲಕ ವಿಶೇಷ ಹಕ್ಕುಗಳು ನೀಡಿದ್ದಾಗಿ ಸ್ಮರಿಸಿದರು.


ಬೆಂಗಳೂರಿನ ಅಕ್ಕ ಐಎಎಸ್ ಮತ್ತು ಕೆಎಎಸ್ ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ ಮಾತನಾಡಿ, ಸಮಾಜದಲ್ಲಿ ದಮನಿತ ಸಮುದಾಯವನ್ನು ಮುಖ್ಯ ವಾಹಿನಿಗೆ ತರುವಲ್ಲಿ ಸಹ ಡಾ.ಬಿ.ಆರ್.ಅಂಬೇಡ್ಕರ್ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ಅಂಬೇಡ್ಕರ್ ಅವರಿಗೆ ಜ್ಞಾನವೇ ಒಂದು ಬಂಡವಾಳ. ಅವರನ್ನು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಆಗಿದ್ದಾರೆ. ಅವಕಾಶಗಳು ಸಿಕ್ಕಿದಾಗ ವಿದ್ಯಾರ್ಥಿಗಳ ಸಾಮರ್ಥ್ಯ ಸಾಬೀತುಪಡಿವುದು ಬಹಳ ಮುಖ್ಯ ಎಂದರು.

ಕವಿವಿ ಪ್ರಭಾರ ಕುಲಸಚಿವ ಡಾ.ಎನ್.ವೈ.ಮಟ್ಟಿಹಾಳ ಮಾತನಾಡಿ, ಶ್ರೇಣೀಕೃತ ಶೋಷಿತ ಸಮಾಜಕ್ಕೆ ಹೊಸ ರೂಪ ನೀಡಿದ್ದಾರೆ. ವಿದ್ಯಾರ್ಥಿಗಳು ಅಂಬೇಡ್ಕರ್ ಅವರನ್ನು ಜ್ಞಾನದ ಸ್ಫೂರ್ತಿಯಾಗಿ ತೆಗೆದುಕೊಂಡು, ಆಳವಾಗಿ ಅಧ್ಯಯನ ಮಾಡಬೇಕು ಎಂದರು.

ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್ ಅಧ್ಯಕ್ಷತೆವಹಿಸಿದ್ದರು. ಅಪರಜಿಲ್ಲಾಧಿಕಾರಿ ಗೀತಾ ಸಿ.ಡಿ., ಡಾ.ಸುಭಾಸಚಂದ್ರ ನಾಟೀಕಾರ, ಮಹೇಶ್ ಗಸ್ತೆ, ಪ್ರದೀಪಕುಮಾರ, ರಾಬರ್ಟ ದದ್ದಾಪುರಿ, ಡಾ.ಬಸವರಾಜ ಗೊರವರ, ಪರಮೇಶ್ವರ ಕಾಳೆ ಇತರರಿದ್ದರು.



ವಿದ್ಯಾರ್ಥಿನಿಯರಿಗೆ ಸನ್ಮಾನ



ಕುಂದಗೋಳ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಬೆಟದೂರ ಗ್ರಾಮದ ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಯರಾದ ಸ್ಪಂದನಾ ಮಠದ ಹಾಗೂ ರಾಜೇಶ್ವರಿ ಕಾರಿಗನೂರ ಅವರನ್ನು ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

ಪರಿಷತ್ ತಾಲೂಕು ಅಧ್ಯಕ್ಷ ಲೋಕೇಶ ಸರಾವರಿ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಕೂಡ ಉತ್ತಮ ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಚಾರವಾಗಿದ್ದು ಇಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಮಕ್ಕಳ ಸಾಹಿತ್ಯ ಪರಿಷತ್ತಿನ ಕರ್ತವ್ಯ ಎಂದರು.

ನಿವೃತ್ತ ಶಿಕ್ಷಕ ಎನ್.ಎಫ್. ನದಾಫ ಮಾತನಾಡಿ, ಕುಂದಗೋಳ ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಬೆಳವಣಿಗೆ ಕಂಡುಬರುತ್ತಿದ್ದು, ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ಹಾಗೂ ಪಾಲಕರ ಶ್ರಮವೂ ಅಡಗಿದೆ ಎಂದರು.

ಶಾಲೆಯ ಹಿರಿಯ ಶಿಕ್ಷಕಿ ಅನಿಷಾ ಡಂಬಳ, ವೀಣಾ ದಾಮೋದರ ಹಾಗೂ ಪಾಲಕರು ಇದ್ದರು.

ವಚನಗಳು ವೇದಗಳಿಗೆ ಸಮಾನ

ನವಲಗುಂದ: ನಗರದ ತಾ.ಶಿ.ಸಂ ಶ್ರೀ ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐ.ಕ್ಯೂ.ಎ.ಸಿ ಅಡಿಯಲ್ಲಿ ಕನ್ನಡ ಸಂಘ ಹಾಗೂ ಸಾಂಸ್ಕೃತಿಕ ಸಂಘದಿಂದ ಜಗಜ್ಯೋತಿ ಬಸವಣ್ಣನವರ ಜಯಂತಿ ನಿಮಿತ್ತ ವಿದ್ಯಾರ್ಥಿಗಳಿಗಾಗಿ ಬಸವಣ್ಣನವರ ವಚನಗಳ ಕಂಠಪಾಠ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ವಚನಗಳ ಗಾಯನ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ವಚನ ಕಂಠಪಾಠದಲ್ಲಿ ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿ ದೇವರಾಜ ಬೆಳ್ಳಿಗಟ್ಟಿ, ಬಸವಣ್ಣನವರ 30 ವಚನಗಳನ್ನು ಹೇಳುವುದರ ಮೂಲಕ ಪ್ರಥಮ, 23 ವಚನಗಳನ್ನು ಹೇಳಿದ ಬಸವ್ವ ಸುಳ್ಳದ ದ್ವಿತೀಯ ಹಾಗೂ 18 ವಚನಗಳನ್ನು ಹೇಳಿದ ರಾಜಶ್ರೀ ಹೊಸಮನಿ ತೃತೀಯ ಸ್ಥಾನ ಪಡೆದರು. ವಚನಗಾಯನ ಸ್ಪರ್ಧೆಯಲ್ಲಿ ರಾಜಶ್ರೀ ಹೊಸಮನಿ ಪ್ರಥಮ, ದೇವರಾಜ ಬೆಳ್ಳಿಗಟ್ಟಿ ದ್ವಿತೀಯ, ಲಕ್ಷ್ಮೀ ಕೊಪ್ಪದ ತೃತೀಯ ಸ್ಥಾನ ಒಡೆದರು. ಫಲಿತಾಂಶವನ್ನು ಪ್ರಕಟಿಸಿ ವಿಜೇತರನ್ನುದ್ದೇಶಿಸಿ ಮಾತನಾಡಿದ ಪ್ರಾಚಾರ್ಯ ಡಾ.ಎಸ್.ವಿ ಬಡಿಗೇರ, ಕನ್ನಡದ ವಚನಗಳು ವೇದಗಳಿಗೆ ಸಮಾನ. ಇವುಗಳನ್ನು ರಚಿಸಿದ ಮಹಾನ್ ಶರಣರು ಕಾಯಕ ಮತ್ತು ಭಕ್ತಿಗೆ ಬಹಳಷ್ಟು ಮಹತ್ವವನ್ನು ಕೊಟ್ಟು ಸಮಾಜ ಸುಧಾರಣೆಗೆ ಅವಿರತವಾಗಿ ದುಡಿದಿದ್ದಾರೆ. ಅಂಥವರ ವಚನಗಳನ್ನು ಹೇಳುತ್ತಿರುವುದು, ನಿವೆಲ್ಲಾ ಭಾಗ್ಯಶಾಲಿಗಳೆಂದು ವಿದ್ಯಾರ್ಥಿಗಳಿಗೆ ಮೆಚ್ಚುಗೆ ಮಾತುಗಳನ್ನಾಡಿದರು.

ಈ ಕಾರ್ಯಕ್ರಮ ಆಯೋಜಕರಾದ ಡಾ.ಎಂ.ಎನ್.ಹಾರೋಗೇರಿ, ಡಾ.ಜಿ.ಎಸ್. ಚಿಣಗಿ ಅವರು ಮಕ್ಕಳ ಪ್ರತಿಭೆಗೆ ಪ್ರಸಂಶೆ ವ್ಯಕ್ತಪಡಿಸಿದರು.



ಡಾ.ಬಿ.ಆರ್.ಹಿರೇಮಠ ಸವಿನೆನಪು



ಧಾರವಾಡ: ಡಾ. ಬಿ.ಆರ್.ಹಿರೇಮಠ ಅವರ ವಿಮರ್ಶಾತ್ಮಕ ಸಂಶೋಧನೆ ಕಾರ್ಯಗಳು ಸಂಶೋಧನಾ ಕ್ಷೇತ್ರಕ್ಕೆ ಮಾದರಿ ಎಂದು ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ.ಎ.ಮುರಿಗೆಪ್ಪ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಭಾನುವಾರ ಡಾ. ಬಿ.ಆರ್.ಹಿರೇಮಠ ಅಭಿಮಾನಿ ಬಳಗ ಆಯೋಜಿಸಿದ್ದ ಲಿಂ. ಡಾ.ಬಿ.ಆರ್.ಹಿರೇಮಠ ಅವರ ಸವಿನೆನಪು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಡಾ.ಬಿ.ಆರ್.ಹಿರೇಮಠ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸಿ, ಡಾ.ಬಿ.ಆರ್.ಅವರ ಸಾಧನೆ ಮತ್ತು ಸಾಹಿತ್ಯ, ಸಂಸ್ಕೃತಿ ಕಾರ್ಯ ನಡೆಸಲು, ಉತ್ತಮ ಸಂಶೋಧನೆಗಳಿಗೆ, ವಿದ್ಯಾರ್ಥಿಗಳಿಗೆ ಡಾ.ಬಿ.ಆರ್.ಹಿರೇಮಠ ಹೆಸರಿನಲ್ಲಿ ಪ್ರಶಸ್ತಿ ನೀಡಲು ನಿರ್ಧರಿಸಿದೆ ಎಂದರು. ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ, ಡಾ.ಬಿ.ಆರ್. ಅವರ ಶಿಷ್ಯರಾದ ಕುಲಪತಿ ಡಾ.ಶಿವಾನಂದ ಕೆಳಗಿನಮನಿ, ಡಾ.ವೆಂಕಟೇಶ ಮಾಚಕನೂರ, ಡಾ.ಬಸವರಾಜ ಸಾದರ, ಡಾ.ವಿ.ಎಸ್.ಮಾಳಿ, ಡಾ.ಅಶೋಕ ನರೋಡೆ, ಡಾ.ಎಫ್.ಟಿ.ಹಳ್ಳಿಕೇರಿ, ಡಾ.ವೀರೇಶ ಬಡಿಗೇರ, ಡಾ.ಎಸ್.ಸಿ.ಪಾಟೀಲ ಹಾಗೂ ಶೈಲಜಾ ಹೊಸಳ್ಳೇರ ಮಾತನಾಡಿದರು. ಡಾ.ಬಿ.ಆರ್.ಹಿರೇಮಠ ಅವರ ಚಿರಂಜೀವಿ ಡಾ.ಮೃತ್ಯುಂಜಯ ಹಿರೇಮಠ ಸ್ವಾಗತಿಸಿ, ಪ್ರಾಸ್ತಾವಿಸಿದರು. ಡಾ.ವೈ.ಎಂ.ಯಾಕೊಳ್ಳಿ ನಿರೂಪಿಸಿದರು. ಡಾ.ಬಿ.ಆರ್. ಸಹೋದರ ಶಿವಪೂಜಯ್ಯ ಹಿರೇಮಠ ವಂದಿಸಿದರು. ಡಾ.ಬಿ.ಆರ್.ಹಿರೇಮಠ ಅವರ ಒಡನಾಡಿಗಳು, ಸಹೋದ್ಯೋಗಿಗಳಿಗೆ ಡಾ.ಬಿ.ಆರ್.ಹಿರೇಮಠ ಅವರ ಕುಟುಂಬದಿಂದ ಸನ್ಮಾನಿಸಲಾಯಿತು.

ಜೆಎಸ್ಸೆಸ್‌ನ 10 ಪ್ರಾಧ್ಯಾಪಕರಿಗೆ ಪಿಎಚ್‌ಡಿ

ಧಾರವಾಡ: ಈಚೆಗೆ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನಗರದ ಜನತಾ ಶಿಕ್ಷಣ ಸಮಿತಿಯ ವಿವಿಧ ಅಂಗ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಹತ್ತು ಜನ ಪ್ರಾಧ್ಯಾಪಕರು ಡಾಕ್ಟರೇಟ್ ಪದವಿ ಪಡೆದರು.

ದೈಹಿಕ ನಿರ್ದೇಶಕ ಡಾ.ಜಿನ್ನಪ್ಪ ಕುಂದಗೋಳ, ಇತಿಹಾಸ ವಿಭಾಗದ ಡಾ. ವೈಶಾಲಿ ಮುನವಳ್ಳಿ, ಪ್ರಾಣಿಶಾಸ್ತ್ರ ವಿಭಾಗದ ಡಾ.ಐಶ್ವರ್ಯಾ ಶೆಟ್ಟಿ ಮತ್ತು ಡಾ.ಹರ್ಷವರ್ಧನ ಜಮಖಂಡಿ, ರಸಾಯನಶಾಸ್ತ್ರ ವಿಭಾಗದ ಡಾ.ಓಶಿನ್ ಡಿಸೋಜಾ, ಸಸ್ಯಶಾಸ್ತ್ರ ವಿಭಾಗದ ಡಾ.ಶ್ರೇಯಸ್ ಬೆಟಗೇರಿ, ಗಣಿತಶಾಸ್ತ್ರ ವಿಭಾಗದ ಡಾ.ಕವಿತಾ ಬೆಟಗೇರಿ, ಜೈವಿಕ ತಂತ್ರಜ್ಞಾನ ವಿಭಾಗದ ಡಾ.ಅನಿತ ಪುರಾಣಿಕ, ಮಂಜುನಾಥ ಪರಾರಿ, ಡಾ.ಬಸವರಾಜ ಮುಂಡಪ್ಪನವರಿಗೆ ಡಾಕ್ಟರೇಟ್ ಪದವಿ ದೊರೆತಿದೆ. ಹತ್ತು ಜನ ಪ್ರಾಧ್ಯಾಪಕರು ಡಾಕ್ಟರೇಟ್ ಪದವಿ ಪಡೆದಿದ್ದಕ್ಕೆ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯ ಡಾ. ವೆಂಕಟೇಶ ಮುತಾಲಿಕ್, ಮಹಾವೀರ ಉಪಾದ್ಯೆ, ಡಾ.ಸೂರಜ್ ಜೈನ್, ಡಾ. ಜ್ಯೋತಿ ಹಳ್ಳದ ಹರ್ಷವ್ಯಕ್ತಪಡಿಸಿದ್ದಾರೆ.



ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಸೋಮವಾರ, 27 ಏಪ್ರಿಲ್ 2026
ಸಂಪುಟ 16, ಸಂಚಿಕೆ 33, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಖ್ಯಾತ ಛಾಯಾಗ್ರಾಹಕ ರಘು ರಾಯ್ ನಿಧನ | 02
ಪಾಕ್‌ನಲ್ಲಿ ತೀವ್ರ ಹಸಿವಿನ ಸಂಕಷ್ಟ | 02
ದೋವಲ್, ಯುಎಇ ಅಧ್ಯಕ್ಷರ ಭೇಟಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪೂರ್ವ

ದಿನದ ಮಾತು

ನಮ್ಮ ದೇಹಕ್ಕೆ ರೋಗವಿಲ್ಲದಿರುವುದೇ ನಾವು ಗಳಿಸತಕ್ಕಂತಹ ಪ್ರಥಮ ಐಶ್ವರ್ಯವಾಗುತ್ತದೆ.

▲ಮು. ವರಜರಾಜನ್

ಕೈಕಾಲುಗಳೆರಡೂ ಇಲ್ಲದ ಹುಡುಗಿ ವಿಶ್ವ ಚಾಂಪಿಯನ್!

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಪತ್ರಿಕೆ ಓದಿಸಲು ಸೂಚನೆ

• ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಮತ್ತು ಸರ್ಕಾರದ ವಿವಿಧ ಇಲಾಖೆಗಳಿಂದ ನಡೆಯುತ್ತಿರುವ ವಸತಿ ಶಾಲೆ, ನಿಲಯಗಳು/ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪ್ರತಿನಿತ್ಯ ಬೆಳಗ್ಗಿನ ಪ್ರಾರ್ಥನೆ ಸಮಯದ ನಂತರ ವಿದ್ಯಾರ್ಥಿಗಳಿಂದ 10 ನಿಮಿಷಗಳ ಕಾಲ ಕಡ್ಡಾಯವಾಗಿ ಕನ್ನಡ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಅನುಷ್ಠಾನ ಗೊಳಿಸುವಂತೆ ಶಿಕ್ಷಣ ಇಲಾಖೆ ಆದೇಶಿಸಿದೆ. ➡ಪುಟ ೪

ಬೆಳಗಾವಿ ವಕೀಲೆ ಮನೆ ಮೇಲೆ ಗುಂಡಿನ ದಾಳಿ

• ಬೆಳಗಾವಿ: ನಗರದಲ್ಲಿ ವಕೀಲೆಯೊಬ್ಬರ ಮನೆ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಬೆಳಗಾವಿ ನಗರದ ಮಂಡೋಳಿ ರಸ್ತೆಯಲ್ಲಿರುವ ವಕೀಲೆ ಪೂಜಾ ಕಾಕತಕರ್ ಮನೆಯ ಮೊದಲ ಮಹಡಿ ಮೇಲೆ ದುಷ್ಕರ್ಮಿಗಳು ಶನಿವಾರ ತಡರಾತ್ರಿ ಏಕಾಏಕಿ ಗುಂಡಿನ ದಾಳಿ ನಡೆಸಿದ್ದು, ಕಿಟಕಿ ಗಾಜಿಗೆ ಹಾನಿಯಾಗಿದೆ.

• ಪುಟ ೫

736 ಸ್ಥಾನಗಳಲ್ಲಿ ಬಿಜೆಪಿ ಅವಿರೋಧ ಆಯ್ಕೆ

• ಪುಟ ೭

ಮಾತೆಯರಿಗೆ, ನಿರುದ್ಯೋಗಿ ಯುವಕರಿಗೆ ಮಾಸಿಕ ನೆರವು

• ಪುಟ ೭

ಭಾರತ-ನ್ಯೂಜಿಲೆಂಡ್ ಎಫ್‌ಟಿಎಗೆ ಸಹಿ ಇಂದು

• ಪುಟ ೭

ದೇಶಕ್ಕಿಲ್ಲ ಇಂಧನ ಸಮಸ್ಯೆ: ಪ್ರಲ್ಹಾದ ಜೋಶಿ

• ಪುಟ ೪



ಎಲ್ ನಿನೋ ಭಾರತಕ್ಕೆ ಮಳೆ ಕಡಿಮೆ?

• ಪುಟ ೭

ಸುದ್ದಿ ಸಮಗ್ರ

ಶ್ವೇತಭವನದಲ್ಲಿ ಗುಂಡಿನ ಸದ್ದು | ಶೂಟರ್ ಬಂಧನ

ಟ್ರಂಪ್ ಹತ್ಯೆ ಯತ್ನ

• ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಹತ್ಯೆಗೆ ಯತ್ನ ನಡೆದ ಘಟನೆ ಶ್ವೇತಭವನ ವರದಿಗಾರರ ಔತಣಕೂಟದಲ್ಲಿ ಭಾರೀ ಆತಂಕ ಸೃಷ್ಟಿಸಿದೆ. ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಗುಂಡಿನ ಸದ್ದು ಕೇಳಿಬಂದ ತಕ್ಷಣ ಸೀಕ್ರೆಟ್ ಸರ್ವೀಸ್ ಅಧಿಕಾರಿಗಳು



ಟ್ರಂಪ್ ಅವರನ್ನು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು.

ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ನಡೆದ ವಾರ್ಷಿಕ ಕಾರ್ಯಕ್ರಮದಲ್ಲಿ ನೂರಾರು ಪತ್ರಕರ್ತರು, ರಾಜಕೀಯ ಮುಖಂಡರು ಹಾಗೂ ಅತಿಥಿಗಳು ಭಾಗವಹಿಸಿದ್ದರು. ಗುಂಡಿನ ಸದ್ದು ಕೇಳುತ್ತಿದ್ದಂತೆ ಸಭಾಂಗಣದಲ್ಲಿ ಗೊಂದಲ ಉಂಟಾಗಿ ಅತಿಥಿಗಳು ಮೇಜುಗಳ ಕೆಳಗೆ ಅಡಗಿ ಕುಳಿತರು. ಭದ್ರತಾ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ಸಾಕ್ಷಿಗಳ ಪ್ರಕಾರ ಐದರಿಂದ ಎಂಟು ಸುತ್ತು ಗುಂಡಿನ ಶಬ್ದ ಕೇಳಿಬಂದಿದೆ. ದಾಳಿಕೋರನು ಬಾಲ್ ರೂಮ್ ಒಳಗೆ ಪ್ರವೇಶಿಸಲು ವಿಫಲವಾದ ಬಳಿಕ ಮ್ಯಾಗ್ನೆಟೋಮೀಟರ್ ತಪಾಸಣೆ ಕೇಂದ್ರದ ಬಳಿ ಗುಂಡು ಹಾರಿಸಿದ್ದಾನೆ ಎಂದು ವರದಿಯಾಗಿದೆ. ಕೆಲವೇ ಕ್ಷಣಗಳಲ್ಲಿ ಸೀಕ್ರೆಟ್ ಸರ್ವೀಸ್ ದಾಳಿಕೋರನನ್ನು ಬಂಧಿಸಿದೆ. ➡ಪುಟ ೪



ವ್ಯಾಪಕ ತನಿಖೆ

ಫೆಡರಲ್ ಸಂಸ್ಥೆಗಳು ಘಟನೆ ಕುರಿತು ವ್ಯಾಪಕ ತನಿಖೆ ಆರಂಭಿಸಿವೆ. ದಾಳಿಯ ಉದ್ದೇಶ ಹಾಗೂ ಹಿನ್ನೆಲೆಯನ್ನು ಪತ್ತೆಹಚ್ಚಲು ಎಫ್‌ಬಿಐ ಸೇರಿದಂತೆ ಹಲವು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಭದ್ರತಾ ಲೋಪದ ಕುರಿತು ಕೂಡ ಪರಿಶೀಲನೆ ನಡೆಯುತ್ತಿದೆ.

ಹತ್ಯೆಗೆ ಯತ್ನಿಸಿದ ವ್ಯಕ್ತಿ ಯಾರು?



ಶ್ವೇತಭವನ ವರದಿಗಾರರ ಔತಣಕೂಟಕ್ಕೆ ಅತಿಥಿಯಾಗಿ ಆಗಮಿಸಿದ್ದ ನಾಸಾ ಉದ್ಯೋಗಿ ಕ್ಯಾಲಿಫೋರ್ನಿಯಾದ ಟೊರಾನ್ಸ್ ಮೂಲದ 31 ವರ್ಷದ ಕೋಲ್ ಥಾಮಸ್ ಅಲೆನ್ ಶಂಕಿತ ದಾಳಿಕೋರ ಎಂದು ತನಿಖಾಧಿಕಾರಿಗಳು ಗುರುತಿಸಿದ್ದಾರೆ. ಈತ ಏಕಾಂಗಿಯಾಗಿ ಕಾರ್ಯನಿರ್ವಹಿಸಿದ್ದಾನೆ ಎಂಬ ಶಂಕೆ ವ್ಯಕ್ತವಾಗಿದ್ದು, ಭದ್ರತಾ ತಪಾಸಣೆ ಕೇಂದ್ರವನ್ನು ಉಲ್ಲಂಘಿಸಲು ಯತ್ನಿಸಿದ ಬಳಿಕ ಗುಂಡು ಹಾರಿಸಿದ್ದಾನೆ. ದಾಳಿಕೋರ ಹಲವು ಶಸ್ತ್ರಾಸ್ತ್ರ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಲ್ ರೂಮ್‌ನಿಂದ ಕೆಲವೇ ಮೀಟರ್ ದೂರದಲ್ಲಿ ಅವನನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಫೆಡರಲ್ ಆರೋಪಗಳನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತನಿಖಾಧಿಕಾರಿಗಳು ಆತನ ಡಿಜಿಟಲ್ ಹಿನ್ನೆಲೆ, ಉದ್ದೇಶ ಹಾಗೂ ಇನ್ನಿತರ ಸಂಪರ್ಕಗಳನ್ನು ಪರಿಶೀಲಿಸುತ್ತಿದ್ದಾರೆ. ಇರಾನ್ ಯುದ್ಧಕ್ಕೂ, ಈತನಿಗೂ ಸಂಬಂಧವಿಲ್ಲ ಎಂದು ಸ್ವತಃ ಟ್ರಂಪ್ ಹೇಳಿದ್ದಾರೆ.

ನಮ್ಮ ಸೀಕ್ರೆಟ್ ಸರ್ವಿಸ್ ಅದ್ಭುತ ಕೆಲಸ ಮಾಡಿದೆ

ಸೀಕ್ರೆಟ್ ಸರ್ವಿಸ್ ಮತ್ತು ಕಾನೂನು ಜಾರಿ ಸಂಸ್ಥೆಗಳು ಅದ್ಭುತವಾಗಿ ಕೆಲಸ ಮಾಡಿವೆ. ಸಂಸ್ಥೆಗಳು ಶಂಕಿತ ದಾಳಿಕೋರನನ್ನು ಬಂಧಿಸಿವೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅದ್ಧೂರಿ ಕಾರ್ಯಕ್ರಮವನ್ನು ಮುಂದಿನ 30 ದಿನಗಳೊಳಗೆ ಮತ್ತೆ ಆಯೋಜಿಸಲಾಗುವುದು ಎಂದು ಘೋಷಿಸಿದ್ದಾರೆ. ಇದು ನನ್ನನ್ನು ಇರಾನ್ ಯುದ್ಧದಲ್ಲಿ ಗೆಲ್ಲುವುದರಿಂದ ತಡೆಯುವುದಿಲ್ಲ. ಈ ಶೂಟೌಟ್‌ಗೂ ಇರಾನ್ ಮೇಲಿನ ಯುದ್ಧಕ್ಕೂ ಯಾವುದೇ ಸಂಬಂಧವಿಲ್ಲವೆಂದು ನಾನು ಭಾವಿಸುತ್ತೇನೆ ಎಂದು ವೈಟ್ ಹೌಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಟ್ರಂಪ್ ಪತ್ರಕರ್ತರಿಗೆ ತಿಳಿಸಿದ್ದಾರೆ.

ದಾಳಿ ಖಂಡಿಸಿದ ಮೋದಿ

ಪ್ರಧಾನಿ ನರೇಂದ್ರ ಮೋದಿ ಘಟನೆ ಬಗ್ಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ. 'ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಯಾವುದೇ ಸ್ಥಾನವಿಲ್ಲ' ಎಂದು ಅವರು ಹೇಳಿದ್ದಾರೆ. ಟ್ರಂಪ್ ಹಾಗೂ ಇತರ ನಾಯಕರು ಸುರಕ್ಷಿತರಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸರ್ ಇಸ್ರೇಲ್ ಅಮೆರಿಕ ಮತ್ತು ಟ್ರಂಪ್‌ನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತದೆ. ಶೂಟಿಂಗ್ ಘಟನೆಯನ್ನು ಖಂಡಿಸುತ್ತೇನೆ ಎಂದು ಸರ್ ಹೇಳಿದ್ದಾರೆ.

ಅಮೆರಿಕದ ಸೇನಾ ನೆಲೆಗಳಿಗೆ ಇರಾನ್ ದಾಳಿಯಿಂದ ಹಾನಿ

• ಪುಟ ೭

ಪರಿಸರ, ಸಂಸ್ಕೃತಿ ಕ್ಷೇತ್ರಗಳಲ್ಲಿ ಭಾರತ ದೌಡು
ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಶ್ಲಾಘನೆ

ಕಲ್ಪಕ್ಕಂ ಅಣು ಸಾಧನೆ ಶಕ್ತಿಯ ಸ್ವಾವಲಂಬನೆ

• ಹೊಸದಿಲ್ಲಿ: ಭಾರತದ ಅಣುಶಕ್ತಿ ಪಯಣದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿರುವ ತಮಿಳುನಾಡಿನ ಕಲ್ಪಕ್ಕಂ ಫಾಸ್ಟ್ ಬ್ರೀಡರ್ ರಿಯಾಕ್ಟರ್‌ನ 'ಕ್ರಿಟಿಕಲಿಟಿ' ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

133ನೇ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಸಾಧನೆ ಭಾರತವನ್ನು ಶಕ್ತಿ ಸ್ವಾವಲಂಬನೆಯತ್ತ ಮತ್ತಷ್ಟು ಮುಂದೆ ಕೊಂಡೊಯ್ಯುವ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು.

ಈ ರಿಯಾಕ್ಟರ್ ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನದಿಂದ ನಿರ್ಮಾಣವಾಗಿದ್ದು, 'ಕ್ರಿಟಿಕಲಿಟಿ' ಹಂತ ತಲುಪುವುದರಿಂದ ಇದು ಸ್ವಯಂ-ಸತತ ನ್ಯೂಕ್ಲಿಯರ್ ಚೈನ್ ರಿಯಾಕ್ಷನ್ ಆರಂಭಿಸಿರುವುದನ್ನು ಸೂಚಿಸುತ್ತದೆ. ಇದು ಕಾರ್ಯಾಚರಣೆಯ ಹಂತಕ್ಕೆ ಪ್ರವೇಶಿಸಿರುವುದನ್ನು ಸೂಚಿಸುವ ಮಹತ್ವದ ಬೆಳವಣಿಗೆ ಎಂದು ಪ್ರಧಾನಿ ವಿವರಿಸಿದರು.ಬ್ರೀಡರ್ ರಿಯಾಕ್ಟರ್‌ನ ವಿಶೇಷತೆಯಾಗಿ, ಇದು ವಿದ್ಯುತ್ ಉತ್ಪಾದನೆಯ ಜತೆ ಭವಿಷ್ಯಕ್ಕಾಗಿ ಹೊಸ ಇಂಧನವನ್ನೂ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. 2024ರ ಮಾರ್ಚ್‌ನಲ್ಲಿ ರಿಯಾಕ್ಟರ್ ಕೋರ್ ಲೋಡಿಂಗ್ ಸಂದರ್ಭದಲ್ಲಿ ತಾವು ಸಾಕ್ಷಿಯಾಗಿದ್ದನ್ನು ಸ್ಮರಿಸಿದ ಪ್ರಧಾನಿ, ಭಾರತದ ಅಣುಶಕ್ತಿ ವಿಜ್ಞಾನಿಗಳ ಕೊಡುಗೆಯನ್ನು ಶ್ಲಾಘಿಸಿದರು. ➡ಪುಟ ೪

ಬೈಲುಕುಪ್ಪೆಯ ಕರ್ಮಾ ಮೊನಾಸ್ಟರಿಗೆ ಪ್ರಶಂಸೆ

ಕರ್ನಾಟಕದಲ್ಲಿ ಪರಿಸರ ಸಂರಕ್ಷಣೆಯ ಮಾದರಿಯಾಗಿ ಬೈಲುಕುಪ್ಪೆಯಲ್ಲಿನ ಬೌದ್ಧ ನಿರಾಶ್ರಿತರ ಕೇಂದ್ರದಲ್ಲಿರುವ ಕರ್ಮಾ ಮೊನಾಸ್ಟರಿ ಕಾರ್ಯವನ್ನು ಪ್ರಧಾನಿ ಉಲ್ಲೇಖಿಸಿದರು. ಕರ್ನಾಟಕದಲ್ಲಿರುವ ಈ ಪ್ರದೇಶವು ಸುಮಾರು 100 ಎಕರೆ ವ್ಯಾಪ್ತಿಯಲ್ಲಿ 700ಕ್ಕೂ ಹೆಚ್ಚು ದೇಸೀಯ ಮರಗಳನ್ನು ಸಂರಕ್ಷಿಸಿರುವ ಬೋಧಿ ಸತ್ವ ಟ್ರಸ್ಟ್ ಜೀವಂತ ಅರಣ್ಯವಾಗಿ ಬೆಳೆಯುತ್ತಿದ್ದು, ಪ್ರಕೃತಿ-ಅಧ್ಯಾತ್ಮದ ಸಮನ್ವಯದ ಮೂಲಕ ದೇಶಕ್ಕೆ ಪ್ರೇರಣೆಯಾಗುತ್ತಿದೆ ಎಂದು ಹೇಳಿದರು. ➡ಪುಟ ೪



ಅಧಿಕಾರ ಚುಕ್ಕಾಣಿ ನಮ್ಮದೇ: ಮೋದಿ

• ಕೋಲ್ಕತ್ತಾ : ಪಶ್ಚಿಮ ಬಂಗಾಳದಲ್ಲಿ ಮುಂದಿನ ಕೊನೇ ಹಂತದ ಮತದಾನದಲ್ಲಿ ಬಿಜೆಪಿ ಜಯಭೇರಿ ಬಾರಿಸಿ ಅಧಿಕಾರ ಸೂತ್ರ ಹಿಡಿಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತುಂಬು ಭರವಸೆ ವ್ಯಕ್ತಪಡಿಸಿದ್ದಾರೆ. ಮೊದಲ ಹಂತದ ಮತದಾನದಲ್ಲಿ ಪ.ಬಂಗಾಳ ಗಮನಾರ್ಹ ಪ್ರಮಾಣದ ಮತದಾನ ದಾಖಲಿಸಿದೆ. ಈ ಮೂಲಕ ಟಿಎಂಸಿ ದುರಹಂಕಾರ ಮಣ್ಣುಗೂಡಿದೆ ಎಂದು ಹೇಳಿದ್ದಾರೆ. ಉತ್ತರ 24ಪರಗಣ ಜಿಲ್ಲೆಯ ಬಾಂಗಾಂವ್‌ನಲ್ಲಿ ವಿಜಯ ಸಂಕಲ್ಪ ಸಭಾ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ಆಳುವ ಟಿಎಂಸಿ ಉತ್ತಮ ಆಡಳಿತ ನೀಡಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ. ➡ಪುಟ ೪

ಮೇ 9ಕ್ಕೆ ಚಿತ್ರದುರ್ಗದಲ್ಲಿ ಬಿಎಸ್‌ವೈಗೆ ಅಭಿನಂದನಾ ಕಾರ್ಯಕ್ರಮ

ಅಭಿಮಾನೋತ್ಸವಕ್ಕೆ ಭೂಮಿಪೂಜೆ

• ಚಿತ್ರದುರ್ಗ: ಅಪ್ರತಿಮ ಹೋರಾಟಗಾರ, ಛಲದಂಕ ಮಲ್ಲ, ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಇಂದಿನ ಯುವ ರಾಜಕಾರಣಿಗಳಿಗೆ ಪ್ರೇರಣೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಾಜಿಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನ ಕುರಿತು ಮೇ 9ರಂದು ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲುದ್ದೇಶಿಸಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಭಾನುವಾರ ಭೂಮಿಪೂಜೆ, ಧ್ವಜಾರೋಹಣ ಹಾಗೂ ಗೋಪೂಜೆ ನೆರವೇರಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಿ.ಎಸ್. ಯಡಿಯೂರಪ್ಪನವರು ಬಡವರು, ದೀನದಲಿತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನಾಂಗದವರ ಅಭಿವೃದ್ಧಿಗಾಗಿ ಶ್ರಮಿಸಿದರು. ➡ಪುಟ ೪



ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ: ಡಿಸಿಎಂ ಡಿಕೆಶಿ

ಇನ್ಮುಂದೆ ರಾಜಕೀಯ ಮಾತಾಡಲ್ಲ

• ಬೆಂಗಳೂರು: ಇನ್ನು ಮುಂದೆ ರಾಜಕೀಯ ವಿಚಾರವಾಗಿ ನಾನು ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ. ಯಾವಾಗ



ಏನು ಆಗಬೇಕೋ ಅದು ಆಗುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸೂಕ್ಷ್ಮವಾಗಿ ಹೇಳಿದ್ದಾರೆ.

ಸದಾಶಿವನಗರ ನಿವಾಸದಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ, ಯಾವ ರಾಜಕೀಯವೂ ಇಲ್ಲ, ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ ಎಂದು ಸ್ಪಷ್ಟಪಡಿಸಿದರು.

ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ. ನಾಯಕತ್ವ ಬದಲಾವಣೆ ಬಗ್ಗೆ ನಾನು ಯಾವತ್ತು ಚರ್ಚೆ ಮಾಡಲ್ಲ, ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಆವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಹಾಗೂ ಸಿಎಂ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ತಿಳಿಸಿದರು. ➡ಪುಟ ೪

ಕೊಟ್ಟ ಮಾತಿನಂತೆ ಒಳಮೀಸಲಾತಿ

ಬಲ ಹಾಗೂ ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡು ಹಿಡಿಯಲಾಗಿದೆ. ಬಲವಿರಲಿ, ಎಡವಿರಲಿ, ಲಂಬಾಣಿ, ಭೋವಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. 40 ವರ್ಷಗಳಿಂದ ಇದ್ದ ಸಮಸ್ಯೆಯನ್ನು ನಾವು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ ಎಲ್ಲರೂ ಒಟ್ಟಾಗಿ ಹೋಗಬೇಕು ಅಷ್ಟೇ ಎಂದರು.

ಶಿವಮೊಗ್ಗದಲ್ಲಿ ಅಣು ಸ್ಥಾವರ ಆತಂಕ ಬೇಡ: ರಾಘವೇಂದ್ರ

• ಶಿವಮೊಗ್ಗ: ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ಸಾರ್ವಜನಿಕರು ಅನಾವಶ್ಯಕವಾಗಿ ಆತಂಕಕ್ಕೊಳಗಾಗುವ ಅಗತ್ಯವಿಲ್ಲ. ಪರಿಸರ ಹಾನಿಯಾಗುವ ಯಾವುದೇ ಯೋಜನೆಗೂ ತಮ್ಮ ಸ್ಪಷ್ಟ ವಿರೋಧವಿದ್ದು, ಜನರ ಹಿತಾಸಕ್ತಿ ಕಾಪಾಡಲು ಬದ್ಧರಾಗಿರುವುದಾಗಿ ಸಂಸದ ಬಿ.ವೈ. ರಾಘವೇಂದ್ರ ಸ್ಪಷ್ಟಪಡಿಸಿದ್ದಾರೆ. ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಸಂಬಂಧ ಗ್ರಾಮೀಣ ಭಾಗದ ಜನರು ಆತಂಕದಲ್ಲಿರುವುದು ಗಮನಕ್ಕೆ ಬಂದಿದೆ. ಆದರೆ ಯೋಜನೆ ಕಾರ್ಯಗತಕ್ಕೂ ಮುನ್ನ ಸಾಧಕಬಾಧಕಗಳ ಬಗ್ಗೆ ಚರ್ಚಿಸಬೇಕಿದೆ ಎಂದು ಹೇಳಿದ್ದಾರೆ. ➡ಪುಟ ೪

ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ: ಸಂಸದ

ಬಿಸಿಲಿಗೆ ತತ್ತರಿಸಿದ ಕಲ್ಯಾಣ ಕರ್ನಾಟಕ

• ಕಲಬುರಗಿ: ಪ್ರಸಕ್ತ ಬೇಸಿಗೆಯ ಬಿಸಿಲಿಗೆ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ ಜನ ಬಿಸಿಲಿನ ಶಾಖಕ್ಕೆ ಅಕ್ಷರಶಃ ಹೈರಾಣಾಗಿದ್ದು, ರಾಜ್ಯದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ ಕಲಬುರಗಿಯಲ್ಲಿ ದಾಖಲಾಗಿದೆ. ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯ ನಗರ ಜಿಲ್ಲೆಗಳಲ್ಲಿ ಕಳೆದ ವಾರ ತಾಪಮಾನ ಸರಾಸರಿ 40ಕ್ಕೂ ಹೆಚ್ಚು ಡಿಗ್ರಿ ಸೆ. ದಾಖಲಾಗಿದೆ.

• ವಿವರ ಪುಟ ೪

ಬಿಸಿಲಿಗೆ ತತ್ತರಿಸಿದ ಕಲ್ಯಾಣ ಕರ್ನಾಟಕ

ರಾಚಪ್ಪಾ ಜಂಬಗಿ

ಕಲಬುರಗಿ: ಪ್ರಸಕ್ತ ಬೇಸಿಗೆಯ ಬಿಸಿಲಿಗೆ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಜನ ಬಿಸಿಲಿನ ಶಾಖಕ್ಕೆ ಅಕ್ಷರಶಃ ಹೈರಾಣಾಗಿದ್ದು, ಈವರೆಗೆ ರಾಜ್ಯದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ ಕಲಬುರಗಿಯೊಂದರಲ್ಲೇ ದಾಖಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಕಳೆದ ಒಂದು ವಾರದ ಬಿಸಿಲಿನ ತಾಪಮಾನ ಸರಾಸರಿ 40ಕ್ಕೂ ಮೇಲ್ಪಟ್ಟು ದಾಖಲಾಗಿದ್ದು, ಬಿಸಿಲಿನ ಶಾಖಕ್ಕೆ ಇಡೀ ಕಲ್ಯಾಣ ಕರ್ನಾಟಕ ಸೇರಿದಂತೆ ಉತ್ತರ ಕರ್ನಾಟಕದ ಒಳನಾಡಿನ ಜಿಲ್ಲೆಗಳು ಸಹ ಅಕ್ಷರಶಃ ಬಸವಳಿದಿವೆ.

ಕ.ಕ.ಭಾಗದ ಬಿಸಿಲಿನ ಅಂಕಿ ಅಂಶ: ಕಳೆದ ಒಂದು ವಾರದಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಧಿಕ ತಾಪಮಾನ ದಾಖಲಾಗಿದ್ದು, ಕಳೆದ ಏ.25ರಂದು ಕಲಬುರಗಿ 41.2, ಬೀದರ್ 40.7, ಯಾದಗಿರಿ 41.6, ಬಳ್ಳಾರಿ 41.2, ಕೊಪ್ಪಳ, 41.1, ರಾಯಚೂರು 42.5 ಹಾಗೂ ವಿಜಯನಗರ 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಕಳೆದ ಒಂದು ವಾರದಲ್ಲಿ ಕಲಬುರಗಿ (ಏ.17,ಏ.23) ಹಾಗೂ ರಾಯಚೂರು(ಏ.24)ರಂದು ರಾಜ್ಯದಲ್ಲೇ ಅತ್ಯಧಿಕ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.





ಕಲಬುರಗಿಯಲ್ಲಿ ಅತ್ಯಧಿಕ 45.3 ಡಿಗ್ರಿ ತಾಪಮಾನ ದಾಖಲು


ರಣ ಬಿಸಿಲಿನಿಂದ ಜನ ತತ್ತರಿಸಿ ಹೋಗಿದ್ದು, ಟ್ರಾಫಿಕ್ ಸಿಗ್ನಲ್‌ನಲ್ಲಿ ನೆರಳಿನ ಹೊದಿಕೆ ನಿರ್ಮಿಸಬೇಕು. ಬೆಂಗಳೂರಿಗೆ ಹವಾನಿಯಂತ್ರಿತ ಸಾರಿಗೆ ಸಂಪರ್ಕ ಕಲ್ಪಿಸುವ ಸರ್ಕಾರ ರಣಬಿಸಿಲಿರುವ ಕಲಬುರಗಿ ಜಿಲ್ಲೆಗೆ ಏಕೆ ಹವಾನಿಯಂತ್ರಿತ ಬಸ್ ನೀಡುತ್ತಿಲ್ಲ. ಜಿಲ್ಲೆಯ ಪ್ರತಿ ತಾಲೂಕಿಗೆ ಬೀದರ, ಭಾಲ್ಕಿ, ಬಸವಕಲ್ಯಾಣ, ಯಾದಗಿರಿ, ಸುರಪುರ, ರಾಯಚೂರು, ವಿಜಯಪುಪುರ, ಹೈದರಾಬಾದ ನಗರಗಳಿಗೆ ಹವಾನಿಯಂತ್ರಿತ ಸಾರಿಗೆ ಸೌಲಭ್ಯ ಕಲ್ಪಿಸಬೇಕು.

■ ಮುತ್ತಣ್ಣ ನಡಗೇರಿ, ಹೋರಾಟಗಾರ, ಕಲಬುರಗಿ

ಸಂಚಾರಿ ಪೊಲೀಸರಿಗೆ ಎಸಿ ಹೆಲ್ಮೆಟ್!

ಜಿಲ್ಲೆಯಾದ್ಯಂತ ಪ್ರಸಕ್ತ ಬಿಸಿಲಿನ ತಾಪಮಾನ 45 ಡಿಗ್ರಿ ಸೆಲ್ಸಿಯಸ್ ದಾಟುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳ ವೇಳಾಪಟ್ಟಿ ಬದಲಾವಣೆ ಮಾಡಲಾಗಿದೆ. ಜತೆಗೆ ಇಷ್ಟೊಂದು ಬಿಸಿಲಿನ ತಾಪದ ಮಧ್ಯೆಯೂ ಕರ್ತವ್ಯ ನಿರ್ವಹಿಸುವ ಸಂಚಾರಿ ಪೋಲಿಸರಿಗೆ ಕಲಬುರಗಿ ಪೊಲೀಸ್ ಆಯುಕ್ತಾಲಯದಿಂದ ವಿಶೇಷ ಎಸಿ ಹೆಲ್ಮೆಟ್ ನೀಡಲಾಗಿದ್ದು, ಈ ಹೆಲ್ಮೆಟ್ ಟ್ರಾಫಿಕ್ ಪೊಲೀಸರು ಹಾಕಿಕೊಂಡರೆ ಬಿಸಿಲಿನಿಂದ ಕೊಂಚ ರಿಲೀಫ್ ಸಿಕ್ಕಂತಾಗಿದೆ. ಎಸಿ ಹೆಲ್ಮೆಟ್ ಧರಿಸುವುದರಿಂದ ತಲೆ ಹಾಗೂ ಮುಖದ ಮೇಲೆ ತಣ್ಣನೆ ಗಾಳಿ ಬೀಸಲಿದೆ. ಇದರಿಂದಾಗಿ ಬಿಸಿಲಿನಲ್ಲಿ ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಬಿಸಿಲಿನ ಶಾಖ ಅಷ್ಟೊಂದು ಪ್ರಮಾಣದಲ್ಲಿ ತಾಕುವುದಿಲ್ಲ. ಜತೆಗೆ ಸೊಂಟಕ್ಕೊಂದು ಸಣ್ಣ ಬ್ಯಾಟರಿ ನೀಡಿರುವ ಪರಿಣಾಮ ಇಡೀ ದಿನ ತಂಪಿನ ಗಾಳಿ ಸಿಗಲಿದೆ.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾರತ ನರಕದ ಕೂಪ –ಟ್ರಂಪ್ ಹೇಳಿಕೆ
– ಕೆಸರು ನೀರಿನಲ್ಲಿ ಹೊರಳಾಡಿ ಸ್ವರ್ಗವನ್ನು ಕಾಣುವ ಎಮ್ಮೆಗೆ ಶುದ್ಧ ನೀರಿನ ಕೆರೆ ನರಕವಾಗಿ ಕಾಣಿಸುವುದು ಸಹಜ!

ದಿನ ಭವಿಷ್ಯ

ಮೇಷ ಸಾಧನೆಯ ದಿನ. ವ್ಯವಹಾರದಲ್ಲಿ ಸಫಲತೆ. ಕೆಲಕಾಲದಿಂದ ಕಾಡುತ್ತಿದ್ದ ಚಿಂತೆ ಪರಿಹಾರ. ನೆರೆಮನೆಯವರ ಜತೆ ವಾಗ್ವಾದ ಸಂಭವ.

ವೃಷಭ ಹೊಸ ವ್ಯವಹಾರಕ್ಕೆ ಅಡ್ಡಿಗಳು. ನಂಬಿಗಸ್ಥರ ಜತೆ ವ್ಯವಹಾರ ನಡೆಸಿ. ಆಪ್ತರ ಜತೆಗಿನ ಸಂಬಂಧದಲ್ಲಿ ಉದ್ವಿಗ್ನತೆ. ಹೊಂದಾಣಿಕೆ ಮುಖ್ಯ. ಖರ್ಚು ಹೆಚ್ಚಳ.

ಮಿಥುನ ನಿಮ್ಮ ಭಾವನೆ, ಮನಸ್ಥಿತಿ ಆಪ್ತರ ಜತೆ ಹಂಚಿಕೊಳ್ಳಿ. ಇದರಿಂದ ಮನಸ್ಸು ಹಗುರ. ಸುಮ್ಮನೇ ಕೊರಗುತ್ತಾ ಕೂರಬೇಡಿ.

ಕಟಕ ಸಂಗಾತಿ ಜತೆ ಸಂಘರ್ಷ ನಡೆದೀತು. ಅವರ ದೃಷ್ಟಿಕೋನ ಕೂಡಾ ಪರಾಮರ್ಶಿಸಿ. ಸ್ನೇಹಿತರ ಜತೆ ಆತ್ಮೀಯ ಕಾಲಕ್ಷೇಪ. ಆರ್ಥಿಕ ಒತ್ತಡ.

ಸಿಂಹ ಸಣ್ಣಪುಟ್ಟ ಜಗಳದಲ್ಲಿ ತೊಡಗಿಕೊಳ್ಳಬೇಡಿ. ಅದರಿಂದ ಮನಸ್ಸಿನ ನೆಮ್ಮದಿ ಹಾಳು. ವೃತ್ತಿಯಲ್ಲಿ ಹೊಸ ಅವಕಾಶ. ಸ್ನೇಹದಲ್ಲಿ ಬಿರುಕು.

ಕನ್ಯಾ ಹೆಚ್ಚುವರಿ ಹೊಣೆಗಾರಿಕೆ ಒತ್ತಡ ಸೃಷ್ಟಿಸಲಿದೆ. ದುಡುಕಿನ ನಿರ್ಧಾರ ತಾಳದಿರಿ. ಖರೀದಿಯ ಉತ್ಸಾಹಕ್ಕೆ ಕಡಿವಾಣ ಹಾಕಿ.

ತುಲಾ ನಿಶ್ಚಿತ ಸಮಯದಲ್ಲಿ ಕೆಲಸ ಪೂರೈಸಲು ವಿಫಲ. ಇದರಿಂದ ಒತ್ತಡ ಹೆಚ್ಚಳ. ಬೇರೆಯವರಿಂದ ಸಿಗಬೇಕಾದುದನ್ನು ಕೇಳಿ ಪಡೆಯಿರಿ.

ವೃಶ್ಚಿಕ ಅಡ್ಡಿಗಳನ್ನು ನಿವಾರಿಸಿಕೊಂಡು ವಿಳಂಬವಿಲ್ಲದೆ ಕಾರ್ಯ ಎಸಗುವಿರಿ. ಆರ್ಥಿಕ ಸ್ಥಿರತೆ. ವೃತ್ತಿ ಒತ್ತಡ ನಿವಾರಣೆಯಾಗಲಿದೆ.

ಧನು ಕುಟುಂಬ ಸದಸ್ಯರ ಜತೆ ಹೆಚ್ಚು ಕಾಲ ಕಳೆಯಿರಿ. ಆರೋಗ್ಯದ ಕುರಿತು ಕಾಳಜಿ ವಹಿಸಿರಿ. ಕಲಾವಿದರಿಗೆ ಯಶ. ಸಾಧನೆಯ ತೃಪ್ತಿ.

ಮಕರ ಮನೆಯವರ ಜತೆ ಉತ್ತಮ ಹೊಂದಾಣಿಕೆ. ಭಿನ್ನಮತ ನಿವಾರಣೆ. ವದಂತಿಗಳಿಗೆ ಹೆಚ್ಚು ಕಿವಿಗೊಡಬೇಡಿ. ನಿಮ್ಮ ಕೆಲಸ ಮಾಡುತ್ತಿರಿ.

ಕುಂಭ ಆಸ್ತಿ ಖರೀದಿಗೆ ಉದ್ದೇಶಿಸಿದ್ದರೆ ಇಚ್ಛಿಸಿದ ಬೆಲೆಗೆ ದೊರಕದು. ಕೌಟುಂಬಿಕ ಪರಿಸರ ಶಾಂತ. ಮಕ್ಕಳ ಸಾಧನೆಯಿಂದ ತೃಪ್ತಿ.

ಮೀನ ಕಾಲಮಿತಿಯಲ್ಲಿ ನಿಮ್ಮ ಗುರಿ ಸಾಧಿಸುವಿರಿ. ಯಾವುದೇ ವಿಘ್ನ ಬಾಧಿಸದು. ಕೌಟುಂಬಿಕ ಸಂತೃಪ್ತಿ. ವಿದ್ಯಾರ್ಥಿಗಳ ಆಶಯ ಪೂರೈಸಲಿದೆ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 2,7,4,1

ಶ್ರೀಕೃಷ್ಣ ಭಾವಚಿತ್ರಕ್ಕೆ ಅಪಮಾನ

ಬೆಂಗಳೂರು: ಹಿಂದುಗಳ ಆರಾಧ್ಯ ದೈವ ಶ್ರೀಕೃಷ್ಣನ ಭಾವಚಿತ್ರವನ್ನು ಅವಹೇಳನಕಾರಿಯಾಗಿ ಬಳಸಿ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವ ಆರೋಪದ ಮೇಲೆ ಎಲೆಕ್ಟ್ರಾನಿಕ್ ಸಿಟಿಯ ನಾದವಿ ಮಂಡಿ ರೆಸ್ಟೋರೆಂಟ್ ವಿರುದ್ಧ ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ಮತ್ತು ಬಜರಂಗದಳ ಆಕ್ರೋಶ ವ್ಯಕ್ತಪಡಿಸಿದ್ದು, ಪೊಲೀಸರಿಗೆ ದೂರು ನೀಡಿದೆ.



ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್ ಒಂದರಲ್ಲಿ ಬಾಲಕೃಷ್ಣನ ಕೈಯಲ್ಲಿ ಮಾಂಸದ ತುಂಡನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ವಿಶು ಹಬ್ಬದ ಸಂದರ್ಭದಲ್ಲಿ ಶುಭಾಶಯ ಕೋರಲು ಈ ಪೋಸ್ಟರ್ ಬಳಸಲಾಗಿದ್ದು, ಇದು ಉದ್ದೇಶಪೂರ್ವಕವಾಗಿ ಹಿಂದು ಧರ್ಮದ ಶ್ರದ್ಧಾಕೇಂದ್ರಗಳನ್ನು ಅವಮಾನಿಸುವ ಕೃತ್ಯವಾಗಿದೆ ಎಂದು ವಿಎಚ್‌ಪಿ ಮತ್ತು ಬಜರಂಗಳದಳ ಕಿಡಿಕಾರಿದೆ.

ಪೊಲೀಸ್ ದೂರು ದಾಖಲು: ಈ ಸಂಬಂಧ ಬಜರಂಗದಳದ ಸಂಯೋಜಕ ಮೋಹನ್ ಕುಮಾರ್.ಎಂ. ಬೆಂಗಳೂರಿನ ಪೊಲೀಸ್ ಆಯುಕ್ತರಿಗೆ ಮತ್ತು ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಾದವಿ ಮಂಡಿ ರೆಸ್ಟೋರೆಂಟ್ ತನ್ನ ಪ್ರಚಾರಕ್ಕಾಗಿ ಹಿಂದು ಭಾವನೆಗಳನ್ನು ಕೆರಳಿಸುವಂತಹ ಚಿತ್ರವನ್ನು ಬಳಸಿದೆ. ಇದು ಸಮಾಜದಲ್ಲಿ ಅಶಾಂತಿ ಮೂಡಿಸುವ ಸಂಚಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಭರವಸೆ

ರಾಜಸ್ಥಾನ ಹೂಡಿಕೆ ಸ್ನೇಹಿ

ಬೆಂಗಳೂರು: ರಾಜಸ್ಥಾನ ಸರ್ಕಾರವು ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಸೃಷ್ಟಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಹೂಡಿಕೆಗೆ ವಿಪುಲ ಅವಕಾಶವಿದ್ದು, ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್ (ಜಿ.ಆರ್.ಎ.ಎಂ)–2026 ಕ್ಕೆ ಎಲ್ಲಾ ಹೂಡಿಕೆದಾರರನ್ನು ನಾವು ಸ್ವಾಗತಿಸುತ್ತೇವೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಹೇಳಿದರು.

ಮೇ 23 ರಿಂದ 25ರವರೆಗೆ ಜೈಪುರದಲ್ಲಿ ನಡೆಯುವ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್–2026ಕ್ಕೆ ಪೂರಕವಾಗಿ ರಾಜಸ್ಥಾನ ಸರ್ಕಾರದ ಕೃಷಿ ಇಲಾಖೆ, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘಟನೆ (ಎಫ್‌ಐಸಿಸಿಐ) ಮತ್ತು ರಾಜಸ್ಥಾನ ಪ್ರತಿಷ್ಠಾನದ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ರೋಡ್ ಶೋನಲ್ಲಿ ಅವರು ಮಾತನಾಡಿದರು.

ರಾಜಸ್ಥಾನವು ತನ್ನ ಸಾಂಪ್ರದಾಯಿಕ ಕೃಷಿ ಸಾಮರ್ಥ್ಯಗಳನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಸಂಯೋಜಿಸುವ ಮೂಲಕ ಕೃಷಿ ತಂತ್ರಜ್ಞಾನ ಆಧಾರಿತ ಆರ್ಥಿಕತೆಯನ್ನು ಸದೃಢಗೊಳಿಸಲು ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಗ್ಲೋಬಲ್ ರಾಜಸ್ಥಾನ ಅಗ್ರಿಟೆಕ್ ಮೀಟ್ (ಜಿ.ಆರ್.ಎ.ಎಂ)–2026 ಹಮ್ಮಿಕೊಳ್ಳಲಾಗುತ್ತಿದೆ. 2024ರ ರೈಸಿಂಗ್ ರಾಜಸ್ಥಾನ ಜಾಗತಿಕ ಹೂಡಿಕೆ ಶೃಂಗಸಭೆಯ ಸಂದರ್ಭದಲ್ಲಿ ಸಹಿ ಹಾಕಲಾದ 35 ಲಕ್ಷ ಕೋಟಿ ರೂ. ಒಪ್ಪಂದಗಳಲ್ಲಿ ಈಗಾಗಲೇ 9 ಲಕ್ಷ ಕೋಟಿ ರೂ. ಹೂಡಿಕೆ ಪ್ರಸ್ತಾವನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲೂ ಇದೇ ರೀತಿಯ ಹೂಡಿಕೆಗೆ ವಿಪುಲ ಅವಕಾಶವಿದೆ ಎಂದರು. ರಾಜಸ್ಥಾನವು ಅಭಿವೃದ್ಧಿಯ ಜತೆಗೆ ವಿಕಸನಗೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಪ್ರಗತಿಪರ ಬದಲಾವಣೆಯನ್ನು ಅಳವಡಿಸಿಕೊಳ್ಳುತ್ತಿದೆ. ಕೃಷಿ ಕ್ಷೇತ್ರದಲ್ಲೂ ಇದೇ ರೀತಿಯ ಬದಲಾವಣೆಗಳಾಗುತ್ತಿದ್ದು, ಕರ್ನಾಟಕದೊಂದಿಗೆ ಸೇರಿ ರೈತರನ್ನು ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ಮುಂದುವರಿಯಲು ಆಸಕ್ತಿ ಹೊಂದಿದ್ದೇವೆ. ಎರಡೂ ರಾಜ್ಯಗಳ ಮಧ್ಯೆ ಸೌಹಾರ್ದಯುತ ವಾತಾವರಣವಿದ್ದು, ರಾಜಸ್ಥಾನದ ಪ್ರಗತಿ ಮತ್ತು ಕೃಷಿ ಕ್ರಾಂತಿಯಲ್ಲಿ ಕರ್ನಾಟಕವನ್ನು ನಮ್ಮೊಂದಿಗೆ ಪಾಲುದಾರರಾಗಿ ಹೊಂದಲು ಮುಕ್ತ ಆಹ್ವಾನ ನೀಡುತ್ತಿದ್ದೇವೆ ಎಂದು ಹೇಳಿದರು.

ಕೃಷಿ ಮತ್ತು ತೋಟಗಾರಿಕೆ ಸಚಿವ ಡಾ. ಕಿರೋಡಿ ಲಾಲ್ ಮೀನಾ ಮಾತನಾಡಿ, ರಾಜಸ್ಥಾನ ಸರ್ಕಾರವು ಹೂಡಿಕೆದಾರರಿಗೆ ಅನುಕೂಲವಾಗುವಂತೆ ನೀತಿ ರೂಪಿಸುತ್ತಿದೆ. ಅದಕ್ಕೆ ಪೂರಕವಾಗಿ ಮೂಲ ಸೌಕರ್ಯ ಅಭಿವೃದ್ಧಿ ಜೊತೆಗೆ ಹೊಸ ಆವಿಷ್ಕಾರಗಳ ಮೂಲಕ ಕೃಷಿ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ. ಹೂಡಿಕೆದಾರರು ಮತ್ತು ಉದ್ಯಮಿಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂದು ತಿಳಿಸಿದರು.

ಬಾರ್ಮರ್‌ನ ಪ್ರಗತಿಪರ ರೈತ ವಿಕ್ರಮ್ ಸಿಂಗ್ ರಾಥೋಡ್ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜು ಪಾಲ್, ಎಫ್‌ಐಸಿಸಿಐ ಕರ್ನಾಟಕ ರಾಜ್ಯ ಕೃಷಿ ಮಂಡಳಿಯ ಉಪಸಮಿತಿ ಅಧ್ಯಕ್ಷ ರವೀಂದ್ರ ಅಗರ್‌ವಾಲ್, ರಾಜಸ್ಥಾನ್ ಫೌಂಡೇಶನ್‌ನ ಬೆಂಗಳೂರು ವಿಭಾಗದ ನಾಯಕರು ಸೇರಿದಂತೆ ರಾಜಸ್ಥಾನದ ಪ್ರತಿನಿಧಿಗಳು ರಾಜ್ಯದಲ್ಲಿ ಹೂಡಿಕೆ ಮತ್ತು ಪಾಲುದಾರಿಕೆಗಳಿಗೆ ಇರುವ ಅವಕಾಶಗಳ ಬಗ್ಗೆ ಮಾತನಾಡಿದರು.



ಸಾಕ್ಷ್ಯಾಚಿತ್ರ ಪ್ರದರ್ಶನ

ಜಿಆರ್‌ಎಎಂ ಸಮಾವೇಶದಲ್ಲಿ ರಾಜಸ್ಥಾನದ ಕೃಷಿ ಮತ್ತು ಕೃಷಿ ತಂತ್ರಜ್ಞಾನ ವಲಯಗಳಲ್ಲಿನ ವಿಪುಲ ಅವಕಾಶಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸುವ ಜಿ.ಆರ್.ಎ.ಎಂ–2026 ಕುರಿತ ಸಾಕ್ಷ್ಯಾಚಿತ್ರವನ್ನು ಪ್ರದರ್ಶಿಸಲಾಯಿತು. ಕೃಷಿ, ಕೃಷಿ ತಂತ್ರಜ್ಞಾನ, ಹೂಡಿಕೆ ಮತ್ತು ಪಾಲುದಾರಿಕೆ ಅವಕಾಶಗಳ ಕುರಿತು ವ್ಯಾಪಕ ಚರ್ಚೆಗಳು ನಡೆದವು.

ಜನಿವಾರ ಮುಟ್ಟಲು ಬಿಡಬೇಡಿ: ಡಿಕೆಶಿ

ಬೆಂಗಳೂರು: ಪರೀಕ್ಷೆ ಬರೆಯಲು ಹೋದಾಗ ಜನಿವಾರ ತೆಗೆಸಿದ್ದಾರೆ ಎಂಬುದನ್ನು ಕಳೆದ ಕೆಲವು ದಿನಗಳಿಂದ ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇನೆ. ಜನಿವಾರ ಯಾರಿಗೂ ಮುಟ್ಟಲು ಬಿಡಬಾರದು. ಅದು ಶ್ರೇಷ್ಠ ಭಾವನೆ. ನಾನು ಉಡುದಾರ ಹಾಕಿರುವೆ. ಬೇರೆ ದೇಶಕ್ಕೆ ಹೋಗುವಾಗ ತಾಂತ್ರಿಕ ಕಾರಣಗಳಿಗೆ ತೆಗೆಸುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರಿನಲ್ಲಿ ಭಾನುವಾರ ಏರ್ಪಡಿಸಿದ್ದ ರಾಜ್ಯಮಟ್ಟದ ವಧು–ವರರ ಸಮಾವೇಶದಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಶ್ರೀಗಳ ಮಾರ್ಗದರ್ಶನದಲ್ಲಿ ಮುಂದಿನ ಪೀಳಿಗೆಗೆ ಅಡಿಪಾಯ ಹಾಕಲು, ಸಮುದಾಯವನ್ನು ಒಗ್ಗೂಡಿಸಲು ಸಂಘಟನೆ ಮಾಡುತ್ತಿದ್ದಾರೆ. ಎಲ್ಲಾ ಮನುಷ್ಯರ ರಕ್ತದ ಬಣ್ಣ ಕೆಂಪು, ಕಣ್ಣೀರಿನ ರುಚಿ ಉಪ್ಪಿರುತ್ತದೆ. ಎಲ್ಲಾ ಮಾನವರು ಒಂದೇ ಎಂದರು.

ಸಮುದಾಯ ಹಿಂದುಳಿದಿದೆ ಎಂದು ನಂಜುಂಡಿ ಹೇಳಿದ್ದಾರೆ. ಅವರ ಮಾತನ್ನು ನಾನು ಒಪ್ಪುವುದಿಲ್ಲ, ಏಕೆಂದರೆ ದೇವರು ಯಾರಿಗೂ ನೀಡದ ಪ್ರತಿಭೆ ನಿಮಗೆ ನೀಡಿದ್ದಾನೆ. ನೀವು ಪ್ರತಿಭೆಯಲ್ಲಿ ಮುಂದಿರುವವರು ಎಂದರು. ಕಲ್ಲು ಪ್ರಕೃತಿ, ಕಡೆದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ. ಆ ಕಲ್ಲನ್ನು ಕಡೆದು ಸರ್ವರೂ ಪೂಜೆ ಮಾಡುವಂತೆ ಮಾಡುವವರು ನೀವು. ಊರಲ್ಲಿ ಇರುವ ನೂರಾರು ಹೋರಿಗಳು ಬಸವ ಆಗಲು ಸಾಧ್ಯವೇ? ನೀವು ಮಾಡುವ ಪವಿತ್ರ ಕೆಲಸ ನಿಮ್ಮಿಂದ ಮಾತ್ರ ಮಾಡಲು ಸಾಧ್ಯ ಎಂದರು.

ಹಿಂದುಳಿದವರು ಎನ್ನುವ ಭಾವನೆ ಬಿಟ್ಟುಬಿಡಿ: ಕಳೆದ ಬಾರಿಯ ಸದನದಲ್ಲಿ ನನ್ನ ಬಗ್ಗೆ ವಿರೋಧ ಪಕ್ಷಗಳು ಮಾತನಾಡುವಾಗ ನಾನು ಒಂದು ಮಾತು ಹೇಳಿದೆ. ಸಿದ್ದರಾಮಯ್ಯ ಅವರು ಸೇರಿ ನನ್ನ ಜೊತೆ 138 ಜನ ಶಾಸಕರು ಇದ್ದಾರೆ. ಒಬ್ಬ ಸರಿಯಾದ ಧೈರ್ಯವಂತ ಇದ್ದರೆ ಅವನೇ ಮುಂದಾಳು. ಅವನೇ ಎಲ್ಲರನ್ನು ಕರೆದುಕೊಂಡು ಹೋಗುವವನು. ಅದಕ್ಕೆ ನೀವು ಹಿಂದುಳಿದವರು ಎನ್ನುವ ಭಾವನೆ ಬಿಟ್ಟುಬಿಡಿ ಎಂದರು.

ಇತ್ತೀಚಿನ ದಿನಗಳಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗುತ್ತಿವೆ. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಲೂ ಅನೇಕ ಬದಲಾವಣೆ ಆಗುತ್ತಿವೆ. ಜನರು ಜಾತಿ, ಧರ್ಮಗಳನ್ನು ಮೀರಿ ಮದುವೆಯಾಗುತ್ತಿದ್ದಾರೆ. ಗಂಡು ಒಂದು ಜಾತಿ ಹೆಣ್ಣು ಒಂದು ಜಾತಿ ಆನಂತರ ಅವರಿಗೆ ಜನಿಸಿದ ಮಗುವಿಗೆ ಯಾವ ರೀತಿ ಹೆಸರು ಇಡುತ್ತಾರೆ. ಅದಕ್ಕೆ ಹೆಸರು ಇಡುವುದೇ ಧರ್ಮ. ಇದೆಲ್ಲವೂ ಧಾರ್ಮಿಕ ಕಾರ್ಯ. ಸತ್ತ ಮೇಲೆ ಹೂಳಬೇಕೋ, ಸುಡಬೇಕೋ ಎಂದು ತೀರ್ಮಾನಿಸುವುದು ಧರ್ಮ. ಅಂದರೆ ಹಿರಿಯರು ಹಳೆಯ ತೀರ್ಮಾನದಂತೆ ಮಾಡುತ್ತಾರೆ. ಯಾರೂ ಧರ್ಮ ಬಿಟ್ಟು ಹೋಗಲು ಸಾಧ್ಯವಿಲ್ಲ ಎಂದರು.

ಶಿವಮೊಗ್ಗದಲ್ಲಿ ಅಣು ಸ್ಥಾವರ ಆತಂಕ ಬೇಡ: ರಾಘವೇಂದ್ರ

ಪುಟ ೩➡ ಕೇಂದ್ರ ಸರ್ಕಾರ ಅಧೀನದ ಎನ್.ಟಿ.ಪಿ.ಸಿ (National Thermal Power Corporation) ಸಂಸ್ಥೆಯಿಂದ ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ವಿಜಯಪುರ, ಕೊಪ್ಪಳ, ಶಿವಮೊಗ್ಗ, ಉತ್ತರ ಕನ್ನಡ ಹಾಗೂ ರಾಯಚೂರು ಜಿಲ್ಲೆಗಳನ್ನು ಗುರುತಿಸಲಾಗಿದೆ. ಈ ಜಿಲ್ಲೆಗಳಲ್ಲಿ ಸೂಕ್ತ ಸ್ಥಳಗಳ ಆಯ್ಕೆಗಾಗಿ ಪ್ರಾಥಮಿಕ ಅಧ್ಯಯನಗಳು ಹಾಗೂ ಭೂ–ವೈಜ್ಞಾನಿಕ ಪರಿಶೀಲನೆಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ

ಜಿಲ್ಲಾಧಿಕಾರಿಗಳೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದು, ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ರಾಜ್ಯ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲವೆಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ ಎಂದು ತಿಳಿಸಿದ್ದಾರೆ. ಶರಾವತಿ ಸಂತ್ರಸ್ತರಿಗೆ ಇಂದಿಗೂ ಸಮರ್ಪಕ ಭೂ ಪರಿಹಾರ ಒದಗಿಸಲಾಗಿಲ್ಲ. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸಂಬಂಧಿಸಿದಂತೆ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪರಿಸರ ಆಸಕ್ತರು ಮತ್ತು ಬುದ್ಧಿಜೀವಿಗಳು ವ್ಯಾಪಕ ವಿರೋಧ ವ್ಯಕ್ತಪಡಿಸಿರುತ್ತಾರೆ. ಅಣು ವಿದ್ಯುತ್ ಸ್ಥಾವರ ಯೋಜನೆಯನ್ನು ಕೈಬಿಡಲು ಕೇಂದ್ರ ಸಚಿವರಿಗೆ ಮನವರಿಕೆ ಮಾಡುವುದಾಗಿ ತಿಳಿಸಿದ್ದಾರೆ.

ಇನ್ಮುಂದೆ ರಾಜಕೀಯ ಮಾತಾಡಲ್ಲ



ಪುಟ ೩➡ **ಹುಟ್ಟುಹಬ್ಬಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಬೇಡಿ:** ನನ್ನ ಜನ್ಮದಿನದಂದು ಯಾರೂ ಫ್ಲೆಕ್ಸ್ ಹಾಗೂ ಬ್ಯಾನರ್ ಹಾಕುವಂತಿಲ್ಲ, ಹಾಕಿದರೆ ಅವರ ವಿರುದ್ಧ ಪಾಲಿಕೆ ವತಿಯಿಂದ ಕ್ರಮ ಜರುಗಿಸಲು ಸೂಚಿಸಿದ್ದೇನೆ. ಅವಶ್ಯಕತೆ ಇದ್ದಲ್ಲಿ ಹಣ ಪಾವತಿಸಿ ಜಾಹೀರಾತು ಕೊಡಬಹುದು. ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ರಸ್ತೆಯ ಸೌಂದರ್ಯ ಹಾಳು ಮಾಡಬಾರದು. ಇದು ನಾನು ಎಲ್ಲರಿಗೂ ಕೊಡುತ್ತಿರುವ ಸೂಚನೆ. ಅನಧಿಕೃತವಾಗಿ ರಸ್ತೆಯಲ್ಲಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸಿ ಎಂದು ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಶಾಲೆಗಳಲ್ಲಿ ಮಕ್ಕಳಿಗೆ ನಿತ್ಯ ಪತ್ರಿಕೆ ಓದಿಸಲು ಸೂಚನೆ

ಪುಟ ೩➡ ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳು ಇಂಟರ್‌ನೆಟ್ ಶಿಕ್ಷಣ, ಮನರಂಜನೆ ಮತ್ತು ಸಾಮಾಜಿಕ ಜಾಲತಾಣಗಳಿಗೆ ಹೆಚ್ಚಿನ ಸಮಯಾವಕಾಶ ನೀಡುತ್ತಿದ್ದಾರೆ. ಈ ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿಯ ಕೊರತೆ, ಶ್ರವಣದೋಷ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವ ಲಕ್ಷಣಗಳು ಕಂಡುಬರುತ್ತಿವೆ. ಆದ್ದರಿಂದ ಮಕ್ಕಳು ಶಾಲೆಗಳಲ್ಲಿ ನಿತ್ಯವೂ ಕನಿಷ್ಠ 10 ರಿಂದ 15 ನಿಮಿಷ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಂಡಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾದ ಸಿದ್ಧತೆ, ಪ್ರಚಲಿತ ವಿದ್ಯಮಾನಗಳ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳಲು ಸಹಾಯವಾಗಲಿದೆ. ಅಲ್ಲದೆ, ಶಬ್ದಕೋಶ, ಭಾಷಾ ಶೈಲಿ ಹಾಗೂ ಬರವಣಿಗೆಯ ಕೌಶಲಗಳನ್ನು ಸುಧಾರಿಸಲು ಇದು ಸಹಕಾರಿಯಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

ಟ್ರಂಪ್ ಹತ್ಯೆ ಯತ್ನ

ಪುಟ ೩➡ ಘಟನೆಯಲ್ಲಿ ಒಬ್ಬ ಸೀಕ್ರೆಟ್ ಸರ್ವೀಸ್ ಅಧಿಕಾರಿಗೆ ಗಾಯವಾಗಿದೆ. ಹೆಡ್ ಟೇಬಲ್‌ನಲ್ಲಿ ಟ್ರಂಪ್, ಪ್ರಥಮ ಮಹಿಳೆ ಮಲೇನಿಯಾ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸೇರಿದಂತೆ ಹಲವು ಕ್ಯಾಬಿನೆಟ್ ಸದಸ್ಯರು ಉಪಸ್ಥಿತರಿದ್ದರು. ಸದ್ಯ ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯ ನಂತರ ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ 'ಸೀಕ್ರೆಟ್ ಸರ್ವೀಸ್ ಮತ್ತು ಪೊಲೀಸ್ ಸಿಬ್ಬಂದಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದೆ. ಶೂಟರ್ ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ. ಆರಂಭದಲ್ಲಿ ಕಾರ್ಯಕ್ರಮವನ್ನು ಮುಂದುವರಿಸಲು ಸೂಚಿಸಿದರೂ, ನಂತರ ಭದ್ರತಾ ಕಾರಣಕ್ಕೆ ಭೋಜನವನ್ನು ಮುಂದೂಡಲಾಗಿದೆ.

ತನಿಖೆಗೆ ಸಹಕರಿಸದ ಶಂಕಿತ

ಅಮೆರಿಕದ ಹಂಗಾಮಿ ಅಟಾರ್ನಿ ಜನರಲ್ ಟಾಡ್ ಬ್ಲಾಂಚೆ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಶಂಕಿತ ಶೂಟರ್ ಟ್ರಂಪ್ ಆಡಳಿತಾಧಿಕಾರಿಗಳನ್ನು ಗುರಿಯಾಗಿಸಿಕೊಂಡಿದ್ದಾನೆ ಎಂದು ಶಂಕಿಸಿದ್ದಾರೆ. ಶಂಕಿತನು ತನಿಖಾಧಿಕಾರಿಗಳೊಂದಿಗೆ ಸಹಕರಿಸುತ್ತಿಲ್ಲ ಎಂದು ಬ್ಲಾಂಚೆ ಹೇಳಿದ್ದಾರೆ.

ಅಭಿಮಾನೋತ್ಸವಕ್ಕೆ ಭೂಮಿಪೂಜೆ

ಪುಟ ೩➡ ಸಮಾಜ ಸೇವೆಗೆ ತಮ್ಮ ಜೀವನ ಮುಡಿಪಾಗಿಟ್ಟ ಅವರು, ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದರು. ಅಧಿಕಾರಕ್ಕಾಗಿ ಹೋರಾಟ ಮಾಡದ ಅವರು, ಹಣ, ಪ್ರಭಾವದಿಂದ ಅಧಿಕಾರ ಹಿಡಿಯಲು ಸಾಧ್ಯವಿಲ್ಲ, ಜನರ ಪ್ರೀತಿ, ಆಶೀರ್ವಾದದಿಂದ ಏನನ್ನಾದರೂ ಸಾಧಿಸಬಹುದೆಂದು ತೋರಿಸಿಕೊಟ್ಟವರು ಬಿ.ಎಸ್. ಯಡಿಯೂರಪ್ಪನವರು ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಪಯಣವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಾಡಿಗೆ ಯಡಿಯೂರಪ್ಪ ನೀಡಿದ ಕೊಡುಗೆಗೆ ಎಲ್ಲ ವರ್ಗದವರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಅರ್ಥಪೂರ್ಣ ಕಾರ್ಯಕ್ರಮ ನಡೆಸುತ್ತಿದ್ದೇವೆ. ರಾಜ್ಯದ ಮೂಲೆಮೂಲೆಗಳಿಂದ ಅಭಿಮಾನಿಗಳು ಲಕ್ಷಾಂತರ ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದೆ ಎಂದು ಹೇಳಿದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಕಾಂಗ್ರೆಸ್‌ಗೆ ಶಕ್ತಿ ನೀಡಿದಂತೆ, ಚಿತ್ರದುರ್ಗದ ಈ ಅಭಿಮಾನೋತ್ಸವ ಬಿಜೆಪಿಯನ್ನು ಮತ್ತೆ ಅಧಿಕಾರದ ಗದ್ದುಗೆಗೆ ಏರಿಸಲಿದೆ. ಹಾಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.



ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಎ. ನಾರಾಯಣಸ್ವಾಮಿ, ಜಿ.ಎಂ. ಸಿದ್ದೇಶ್ವರ್, ಕಟ್ಟಾ ಸುಬ್ರಹ್ಮಣ್ಯನಾಯ್ಡು, ಬಿ.ಸಿ. ಪಾಟೀಲ್, ರೇಣುಕಾಚಾರ್ಯ, ಹರತಾಳು ಹಾಲಪ್ಪ, ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕ ಮುನಿರತ್ನ, ಮಾಜಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಮತ್ತಿತರರು ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ ಸ್ವಾಗತಿಸಿದರು.

ಕಲ್ಪಕ್ಕಂ ಅಣು ಸಾಧನೆ ಶಕ್ತಿಯ ಸ್ವಾವಲಂಬನೆ

ಪುಟ ೩➡ **ಪವನಶಕ್ತಿಯಲ್ಲಿ ಸಾಧನೆ:** ಇದೇ ವೇಳೆ ಪವನಶಕ್ತಿ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಉಲ್ಲೇಖಿಸಿದ ಅವರು, ದೇಶದ ವಿಂಡ್ ಎನರ್ಜಿ ಸಾಮರ್ಥ್ಯ 56 ಗಿಗಾವಾಟ್ ಮೀರಿ, ಭಾರತ ಜಗತ್ತಿನಲ್ಲಿ ನಾಲ್ಕನೇ ಸ್ಥಾನಕ್ಕೇರಿರುವುದಾಗಿ ಹೇಳಿದರು. ಕಳೆದ ಒಂದು ವರ್ಷದಲ್ಲಿ 6 ಗಿಗಾವಾಟ್ ಹೊಸ ಸಾಮರ್ಥ್ಯ ಸೇರ್ಪಡೆಯಾಗಿದೆ. ಗುಜರಾತ್, ತಮಿಳುನಾಡು, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಹೊಸ ಅವಕಾಶಗಳು, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಹೆಚ್ಚುತ್ತಿರುವುದಾಗಿ ಹೇಳಿದರು.

ಇದೇ ವೇಳೆ, ಬುದ್ಧ ಪೂರ್ಣಿಮೆಯ ಹಿನ್ನೆಲೆ ಉಲ್ಲೇಖಿಸಿದ ಪ್ರಧಾನಿ, ಭಗವಾನ್ ಗೌತಮ ಬುದ್ಧನ ಶಾಂತಿ, ಕರುಣೆ ಮತ್ತು ಆತ್ಮಜಯದ ಸಂದೇಶಗಳು ಇಂದಿನ ಜಗತ್ತಿಗೆ ಅತ್ಯಂತ ಪ್ರಸ್ತುತ ಎಂದು ಹೇಳಿದರು. ಚಿಲಿಯಲ್ಲಿ ಬೌದ್ಧ ವಿಚಾರಗಳನ್ನು ಹರಡುವ ಕಾರ್ಯಗಳನ್ನೂ ಅವರು ಪ್ರಶಂಸಿಸಿದರು. ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಲ್ಲಿ ಭಾರತೀಯ ಸಂಗೀತದ ಸಮ್ಮಿಲನ ಹೆಚ್ಚುತ್ತಿರುವುದನ್ನು ಗಮನಿಸಿದ ಪ್ರಧಾನಿ, ಈ ಕಾರ್ಯಕ್ರಮದ ಸಂಗೀತವನ್ನು 'ವೇವ್ಸ್' ಒಟಿಟಿ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಿರುವುದಾಗಿ ತಿಳಿಸಿದರು.

ಪ್ರಕೃತಿ ಸಂರಕ್ಷಣೆಯ ಉದಾಹರಣೆಗಳಾಗಿ ಕಚ್‌ನ ಫ್ಲೆಮಿಂಗೊ ಸಿಟಿ, ಉತ್ತರ ಪ್ರದೇಶದ 'ಗಜ ಮಿತ್ರ' ಅಭಿಯಾನ, ಛತ್ತೀಸ್ಗಢದಲ್ಲಿ ಕೃಷ್ಣಮೃಗಗಳ ಪುನಃ ವಾಪಸ್ಸು ಮತ್ತು ಗ್ರೇಟ್ ಇಂಡಿಯನ್ ಬಸ್ಟರ್ಡ್ ಸಂರಕ್ಷಣಾ ಕಾರ್ಯಗಳನ್ನು ಉಲ್ಲೇಖಿಸಿದರು. ಈಶಾನ್ಯ ಭಾರತದ ಬಿದಿರು ಕ್ಷೇತ್ರದಲ್ಲಿ 2017ರ ಕಾನೂನು ಬದಲಾವಣೆಯ ನಂತರ ಮಹತ್ತರ ಬೆಳವಣಿಗೆ ಕಂಡುಬಂದಿದೆ ಎಂದು ಹೇಳಿದರು. ತ್ರಿಪುರಾ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಸಿಕ್ಕಿಂ ಪ್ರದೇಶಗಳಲ್ಲಿ ಉದ್ಯೋಗ, ನಾವೀನ್ಯತೆ ಮತ್ತು ಮಹಿಳಾ ಸಬಲೀಕರಣ ಹೆಚ್ಚುತ್ತಿದೆ ಎಂದರು.

ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ 20 ಕೋಟಿಗೂ ಹೆಚ್ಚು ದಾಖಲೆಗಳನ್ನು ಡಿಜಿಟೈಸ್ ಮಾಡಿ ಸಾರ್ವಜನಿಕರಿಗೆ ಮುಕ್ತಗೊಳಿಸಿರುವುದನ್ನು ಉಲ್ಲೇಖಿಸಿ, ಇತಿಹಾಸ ಅಧ್ಯಯನಕ್ಕೆ ಇದು ದೊಡ್ಡ ಅವಕಾಶ ಎಂದು ಹೇಳಿದರು.

ಫ್ರಾನ್ಸ್‌ನ ಬೋರ್ಡೋದಲ್ಲಿ ನಡೆದ ಯುರೋಪಿಯನ್ ಗರ್ಲ್ಸ್ ಮ್ಯಾಥಮೆಟಿಕಲ್ ಒಲಿಂಪಿಯಾಡ್‌ನಲ್ಲಿ ಭಾರತೀಯ ವಿದ್ಯಾರ್ಥಿನಿಯರು ವಿಶ್ವದಲ್ಲಿ ಆರನೇ ಸ್ಥಾನ ಪಡೆದು ಗಮನ ಸೆಳೆದಿರುವುದನ್ನು ಪ್ರಧಾನಿ ಅಭಿನಂದಿಸಿದರು. ಈ ಬಾರಿಯ ಜನಗಣತಿ ಸಂಪೂರ್ಣ ಡಿಜಿಟಲ್ ಆಗಿದ್ದು, ಜನರಿಗೆ ಸ್ವಯಂ ಮಾಹಿತಿ ದಾಖಲಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ವಿವರಿಸಿದ ಅವರು, ಪ್ರತಿಯೊಬ್ಬರೂ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಹಾಗೆಯೇ, ಭಾರತೀಯ ಚೆಸ್ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವುದನ್ನು ಉಲ್ಲೇಖಿಸಿದ ಪ್ರಧಾನಿ, ಸ್ಥಳೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವಂತೆ ಕರೆ ನೀಡಿದರು. ಮೇಲ್ಲಿ ಗುರುದೇವ ರವೀಂದ್ರನಾಥ ಟ್ಯಾಗೋರ್ ಜಯಂತಿ ಹಾಗೂ 1857ರ ಸ್ವಾತಂತ್ರ್ಯ ಸಮರದ ನೆನಪನ್ನು ಸ್ಮರಿಸಿದ ಅವರು, ವಿದ್ಯಾರ್ಥಿಗಳು ರಜೆಯಲ್ಲಿ ಹೊಸ ಕೌಶಲ್ಯಗಳನ್ನು ಕಲಿಯುವಂತೆ ಹಾಗೂ ಆರೋಗ್ಯದ ಕಡೆ ಗಮನ ಹರಿಸುವಂತೆ ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಸಾಧನೆ: ಯುರೋಪಿಯನ್ ಗರ್ಲ್ಸ್ ಮ್ಯಾಥಮೆಟಿಕಲ್ ಒಲಿಂಪಿಯಾಡ್‌ನಲ್ಲಿ ಶ್ರೇಯಾ ಮುಂದಡಾ ಗೋಲ್ಡ್ ಪದಕ ಗೆದ್ದು ಇತಿಹಾಸ ನಿರ್ಮಿಸಿದರೆ, ಸಂಜನಾ ಚಾಕೋ ಸಿಲ್ವರ್ ಮತ್ತು ಶಿವಾನಿ ಭರತ್ ಕುಮಾರ್ ಕಂಚಿನ ಪದಕ ಪಡೆದು ದೇಶದ ಗೌರವ ಹೆಚ್ಚಿಸಿದ್ದಾರೆ ಎಂಬುದನ್ನು ಉಲ್ಲೇಖಿಸಿ ಶ್ಲಾಘಿಸಿದರು.

ಬೈಲುಕುಪ್ಪೆಯ ಕರ್ಮಾ ಮೊನಾಸ್ಟರಿಗೆ ಪ್ರಶಂಸೆ

ಪುಟ ೩➡ ಇಲ್ಲಿ ಪ್ರಕೃತಿ ಸಂರಕ್ಷಣೆ ನಿಟ್ಟಿನಲ್ಲಿ ನಡೆದಿರುವ ಪ್ರಯತ್ನಗಳು ಗಮನಾರ್ಹವಾಗಿವೆ ಎಂದು ಶ್ಲಾಘಿಸಿದರು. ಬೌದ್ಧ ಸಂಪ್ರದಾಯವು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧವನ್ನು ಬೌದ್ಧವಿಹಾರ ತೋರಿಸುತ್ತಿದೆ. ಬರಡಾಗಿದ್ದ 100 ಎಕರೆ ಭೂಮಿಯನ್ನು ಧರ್ಮಗುರು ಸಮ್ಮೆನ್ನಿಂಗ್ಲಾ ರಿನ್‌ಪೋಚೆ ಅವರ ಮಾರ್ಗದರ್ಶನದಲ್ಲಿ, ಅರಣ್ಯ ಸಂರಕ್ಷಣಾ ವಲಯವಾಗಿ ರೂಪಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರ ಚುಕ್ಕಾಣಿ ನಮ್ಮದೇ: ಮೋದಿ

ಪುಟ ೩➡ ಟಿಎಂಸಿಯ ಗೂಂಡಾಗಳು ತಾವೇ ಸ್ವಯಂ ಸರಕಾರವೆಂಬಂತೆ ವರ್ತಿಸುತ್ತಿದ್ದಾರೆ. ಮಾ, ಮಾಟಿ ಮತ್ತು ಮನುಶ್ ಘೋಷಣೆ ಬಳಸಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ನಂತರ ಇವನ್ನು ಮರೆತೇಬಿಟ್ಟರು ಮತ್ತು ಅಕ್ರಮ ನುಸುಳುಕೋರರು ಮತ್ತು ಸಿಂಡಿಕೇಟ್‌ಗಳನ್ನು ಬೆಂಬಲಿಸತೊಡಗಿದ್ದಾರೆ ಎಂದು ಟಿಎಂಸಿ ಮತ್ತು ಪಕ್ಷ ನಾಯಕಿಯನ್ನು ಪ್ರಧಾನಿ ಮೋದಿ ಕಟುವಾಗಿ ತರಾಟೆಗೆತ್ತಿಕೊಂಡರು.

ಜಂಗಲ್‌ರಾಜ್‌ಗೆ ನಮ್ಮ ಸೋದರಿಯರು ಬಲಿ: ಟಿಎಂಸಿ ಆಳ್ವಿಕೆಯಲ್ಲಿ ಪ.ಬಂಗಾಳದಲ್ಲಿ ಹಿಂಸಾಚಾರಗಳು ಮಾಮೂಲಾಗಿದ್ದು, ಮಹಿಳೆಯರಿಗೆ ಸುರಕ್ಷೆಯೇ ಇಲ್ಲವಾಗಿದೆ. ಟಿಎಂಸಿಯ ರಾಜಾರೋಷ ಜಂಗಲ್‌ರಾಜ್‌ಗೆ ಬಲುದೊಡ್ಡ ಬಲಿಪಶುಗಳಾಗಿರುವುದು ನಮ್ಮ ಸೋದರಿಯರು ಮತ್ತು ಕುವರಿಯರು ಎಂದು ಪ್ರಧಾನಿ ಮೋದಿ ಆತಂಕ ವ್ಯಕ್ತಪಡಿಸಿದರು. ಸಂದೇಶ್‌ಖಲಿಯಲ್ಲಿ ಗೂಂಡಾಗಳು ಮೇರೆ ಮೀರಿ ನಮ್ಮ ಸೋದರಿಯರ ಮೇಲೆ ದೌರ್ಜನ್ಯ–ಅನ್ಯಾಯವೆಸಗಿದರೂ ಟಿಎಂಸಿ ಸರಕಾರ ಈ ಕ್ರಿಮಿನಲ್‌ಗಳನ್ನೇ ಬೆಂಬಲಿಸಿದ್ದು ತೀರಾ ದುರದೃಷ್ಟಕರವೆಂದು ಪ್ರಧಾನಿ ವಿಷಾದಿಸಿದರು. ರಾಜ್ಯದ ಸೆಣಬು ಕೃಷಿಕರು ಮತ್ತು ಕಾರ್ಮಿಕರ ಸಮಸ್ಯೆಗಳು ನಮಗೆ ಅರ್ಥವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕಳೆದ 11ವರ್ಷಗಳಲ್ಲಿ ಸೆಣಬಿನ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿರುವುದು ಇದೇ ಹಿನ್ನೆಲೆಯಲ್ಲಿ ಎಂದು ಗಮನ ಸೆಳೆದರು. ರಾಷ್ಟ್ರಭಕ್ತ ಸುಭಾಸ್‌ಚಂದ್ರ ಬೋಸ್ ಅವರ ರಾಷ್ಟ್ರಪ್ರೇಮವನ್ನು ಪ್ರಧಾನಿ ಮೋದಿ ಜನರಿಗೆ ನೆನಪಿಸಿದರು.

ಗೃಹಲಕ್ಷ್ಮೀ ಸಂಸಾರಕಷ್ಟೇ ಅಲ್ಲ, ಮಕ್ಕಳ ಭವಿಷ್ಯ ರೂಪಿಸುವ ಶಕ್ತಿ

ಬೆಂಗಳೂರು: ಗೃಹಲಕ್ಷ್ಮೀ ಯೋಜನೆಯ ಹಣ ಕೇವಲ ಸಂಸಾರಕಷ್ಟೇ ಅಲ್ಲ, ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿಯೂ ಪರಿಣಮಿಸಿದೆ. ಇದಕ್ಕೆ ಮೈಸೂರಿನ ಮಾಧುರಿ ಆರ್. ಎಂಬ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ 2ನೇ ರ‍್ಯಾಂಕ್ ಗಳಿಸಿರುವುದೇ ಉದಾಹರಣೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.



ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ನಮ್ಮ ಗ್ಯಾರಂಟಿ ಯೋಜನೆಗಳು ಇಂತಹ ಹತ್ತು ಹಲವು ಸಾಧನೆಗಳಿಗೆ ಮುನ್ನುಡಿ ಬರೆದಿವೆ. ಬಡವರ ಮನೆಯ ಮಗು ರ‍್ಯಾಂಕ್ ಪಡೆಯಲು ಗ್ಯಾರಂಟಿ ಹಣವೇ ಆಧಾರವಾಗಿದೆ ಎಂಬುದು ನಮಗೆ ಹೆಮ್ಮೆಯ ವಿಷಯ. ನಮ್ಮ ಸರ್ಕಾರ ನಮ್ಮ ಹೆಮ್ಮೆ, ನಮ್ಮ ಗ್ಯಾರಂಟಿ ನಮ್ಮ ಹೆಮ್ಮೆ ಎಂಬುದು ಈ ಮೂಲಕ ಸಾಬೀತಾಗಿದೆ ಎಂದರು.

ಮೈಸೂರು ತಾಲೂಕಿನ ಇಲವಾಲದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಮಾಧುರಿ, 625ಕ್ಕೆ 624 ಅಂಕ ಗಳಿಸಿ ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಟಾಪರ್ ಆಗಿದ್ದಾರೆ. ಮಾಧುರಿ ತಾಯಿ ಸರಿತಾ ಅವರು ಈ ಹಿಂದೆ ಖಾಸಗಿ ಸಂಸ್ಥೆಯಲ್ಲಿದ್ದರು, ಆದರೆ ಅನಾರೋಗ್ಯದ ಕಾರಣ ಕೆಲಸ ಬಿಡಬೇಕಾಯಿತು. ಆ ಸಂಕಷ್ಟದ ಸಮಯದಲ್ಲಿ ಆಸರೆಯಾಗಿದ್ದು ಗೃಹಲಕ್ಷ್ಮೀ ಯೋಜನೆ ಎಂದು ಶಿವಕುಮಾರ್ ತಿಳಿಸಿದರು.

ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಹೊರೆ ಎನ್ನುವ ವಿರೋಧ ಪಕ್ಷದವರು ಇನ್ನಾದರೂ ಅಸತ್ಯ ನುಡಿಯುವುದನ್ನು ಮತ್ತು ದಾರಿ ತಪ್ಪಿಸುವುದನ್ನು ನಿಲ್ಲಿಸಲಿ. ಆರ್ಥಿಕ ಅಡೆತಡೆಗಳ ಕಾರಣದಿಂದ ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ ಗ್ಯಾರಂಟಿ ಯೋಜನೆಗಳು ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ಗ್ಯಾರಂಟಿ ಯೋಜನೆಗಳು ಓದಿಗೆ ನೆರವು, ಭವಿಷ್ಯಕ್ಕೆ ಭರವಸೆ ಮೂಡಿಸುತ್ತಿವೆ ಎಂದರು.



ಚಾಲನೆ

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪೆರೇಡ್ ಮೈದಾನದಲ್ಲಿ ಭಾನುವಾರ ಏರ್ಪಡಿಸಿದ್ದ ಟಿಸಿಎಸ್ ವರ್ಲ್ಡ್ 10ಕೆ ಓಟಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಇದ್ದರು.

ಸಾಮಾಜಿಕ ನ್ಯಾಯ ಸಿಕ್ಕಿಲ್ಲ: ಸಿಟಿ ರವಿ

ಚಿಕ್ಕಮಗಳೂರು: ಒಳ ಮೀಸಲಾತಿ ಜಾರಿಯಲ್ಲಿ ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯವನ್ನು ಪಾಲಿಸಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ. ಸಿ.ಟಿ. ರವಿ ಆರೋಪಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ನಿರ್ಧಾರವು ಸಾಮಾಜಿಕ ಅನ್ಯಾಯವನ್ನುಂಟುಮಾಡಿದೆ ಎಂದು ಅವರು ಟೀಕಿಸಿದ್ದಾರೆ. ಒಳ ಮೀಸಲಾತಿ ಯನ್ನು ಜಾರಿಗೆ ತರಲು ಸರ್ಕಾರ ಎರಡು ವರ್ಷಕ್ಕೂ ಹೆಚ್ಚು ಕಾಲ ವಿಳಂಬ ಮಾಡಿದ್ದು, ಅಂತಿಮವಾಗಿ ಜಾರಿಗೊಳಿಸಿದ ಮಾದರಿಯೂ ನ್ಯಾಯಸಮ್ಮತವಾಗಿಲ್ಲ. ಹೈಕೋರ್ಟ್ ಶೇ.50 ಮಿತಿಯೊಳಗೆ ಮೀಸಲಾತಿ ನೀಡುವಂತೆ ಸೂಚಿಸಿದ್ದೇ ಹೊರತು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೀಸಲಾತಿಯನ್ನು ಕಡಿತಗೊಳಿಸಲು ಹೇಳಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಒಳ ಮೀಸಲಾತಿ ರೂಪಿಸುವಲ್ಲಿ ವಿವಿಧ ಸಮಿತಿಗಳ ಶಿಫಾರಸುಗಳನ್ನು ಪರಿಗಣಿಸಿಲ್ಲ. ಸದಾಶಿವ ಆಯೋಗ, ಮಾಜಿ ಸಚಿವ ಮಾಧುಸ್ವಾಮಿ ವರದಿ ಹಾಗೂ ಸ್ವತಃ ಈ ಸರ್ಕಾರವೇ ನೇಮಿಸಿದ ನ್ಯಾಯ ಮೂರ್ತಿ ನಾಗಮೋಹನ್ ದಾಸ್ ಸಮಿತಿ ವರದಿಗಳನ್ನೂ ಕಡೆಗಣಿಸ ಲಾಗಿದೆ ಎಂದು ಹೇಳಿದರು. ಸಚಿವ ಸಂಪುಟದಲ್ಲಿ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಎ, ಬಿ ಮತ್ತು ಸಿ ವರ್ಗಗಳಾಗಿ ವಿಭಜಿಸಿರುವ ಕ್ರಮದ ಮೇಲೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಹೆಚ್ಚಿಸಲಾಗಿತ್ತು ಎಂದು ನೆನಪಿಸಿದ್ದಾರೆ. ಎ ವರ್ಗಕ್ಕೆ ಶೇ.6 ಮತ್ತು ಬಿ ವರ್ಗಕ್ಕೆ ಶೇ.5.5 ಇದ್ದ ಮೀಸಲಾತಿಯನ್ನು ತಲಾ ಶೇ.5.25ಕ್ಕೆ ಇಳಿಸಿ, ಎರಡೂ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ಭೋವಿ, ಬಂಜಾರ, ಕೊರಚ, ಕೊರಮ ಸೇರಿದಂತೆ ಹಲವು ಸಮುದಾಯಗಳಿಗೆ ಶೇ.4.5 ಮೀಸಲಾತಿ ಇತ್ತು. ಅವುಗಳನ್ನು ಸಿ ವರ್ಗದಲ್ಲಿ ಒಗ್ಗೂಡಿಸಲಾಗಿದೆ. ಇದರೊಡನೆ, ಅಲೆಮಾರಿ ಸಮುದಾಯಕ್ಕೆ ಶೇ.1 ಮೀಸಲಾತಿ ಇತ್ತು. ಅವರನ್ನೂ ಸಿ ವರ್ಗಕ್ಕೆ ಸೇರಿಸಲಾಗಿದೆ. ನ್ಯಾಯಯುತವಾಗಿ ಸಿ ವರ್ಗಕ್ಕೆ ಸಿಗಬೇಕಿದ್ದ ಶೇ.5.5 ಮೀಸಲಾತಿಯ ಬದಲು ಕೇವಲ ಶೇ.4.5 ಮಾತ್ರ ನೀಡಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಗೋ ಸಮ್ಮಾನ ಅಭಿಯಾನ

ಬೆಂಗಳೂರು: ಸೋಮವಾರ (ಏ.27)ರ ಭಾರತದಾದ್ಯಂತ ಗೋ ಗೌರವ ದಿನವಾಗಿ ಆಚರಿಸಲಾಗುವುದು. ಅಂದು ದೇಶದ ಎಲ್ಲಾ 5400 ತಹಸೀಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ, ಪ್ರಧಾನಿಗಳು ಹಾಗೂ ದೇಶದ ಎಲ್ಲ ಮುಖ್ಯಮಂತ್ರಿ, ರಾಜ್ಯಪಾಲರಿಗೆ ಏಕಕಾಲದಲ್ಲಿ ಮನವಿ ಸಲ್ಲಿಸಲಾಗುವುದು ಎಂದು ಎಂದು ರಾಮೋಹಳ್ಳಿಯ ಶ್ರೀ ಸಿದ್ದಾರೂಢ ಮಿಷನ್ ಅಧ್ಯಕ್ಷ ಡಾ.ಆರೂಢಭಾರತೀ ಸ್ವಾಮೀಜಿ ತಿಳಿಸಿದ್ದಾರೆ. ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋಮಾತೆಯನ್ನು ರಾಷ್ಟ್ರಮಾತೆಯನ್ನಾಗಿ ಘೋಷಿಸಿ ಸಂರಕ್ಷಿಸಬೇಕು. ರಾಷ್ಟ್ರದಾದ್ಯಂತ ಏಕಕಾನೂನಿನಡಿ ಗೋಹತ್ಯೆ ನಿಷೇಧವನ್ನು ಜಾರಿಗೆ ತರಬೇಕು. ಗೋಮಾಳವನ್ನು ಗೋವುಗಳಿಗಾಗಿಯೇ ಮುಡಿಪಾಗಿಡಬೇಕು. ಗೋಶಾಲೆ ಗೋ ಉದ್ಯಮಗಳಿಗೆ ಅನುದಾನ-ಬೆಂಬಲ ನೀಡಬೇಕು ಇತ್ಯಾದಿ ಅಂಶಗಳು ಮನವಿಯಲ್ಲಿರಲಿವೆ ಎಂದು ತಿಳಿಸಿದರು. ಗೋ ಸಮ್ಮಾನ ಆಹ್ವಾನ ಅಭಿಯಾನ ಹೆಸರಿನಲ್ಲಿ ನಾಲ್ಕು ಹಂತಗಳಲ್ಲಿ ಒಂದೂವರೆ ವರ್ಷ ನಡೆಯುವ ಈ ಅಭಿಯಾನ ಯಾವುದೇ ನಿರ್ದಿಷ್ಟ ಒಂದೇ ವ್ಯಕ್ತಿ, ಒಂದೇ ಸಂಘಟನೆಗೆ ಸಂಬಂಧ ಪಡದ ದೇಶವ್ಯಾಪಿ ಶಾಂತಿಯುತ ಜನಾಂದೋಲನವಾಗಿದೆ. ಸಂತರು, ಮಠಾಧಿಪತಿಗಳು, ಗೋ ಭಕ್ತರು, ಗೋ ಸಂರಕ್ಷಕರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಡಾ.ಆರೂಢ ಭಾರತೀ ಸ್ವಾಮೀಜಿ ತಿಳಿಸಿದರು.

ವಕೀಲೆ ಮನೆ ಮೇಲೆ ಗುಂಡಿನ ದಾಳಿ: ದೂರು ದಾಖಲು

ಬೆಳಗಾವಿ: ನಗರದಲ್ಲಿ ವಕೀಲೆಯೊಬ್ಬರ ಮನೆ ಮೇಲೆ ದುಷ್ಕರ್ಮಿಗಳು ಗುಂದಿನ ದಾಳಿ ನಡೆಸಿರುವ ಘಟನೆಯು ತಡವಾಗಿ ಬೆಳಕಿಗೆ ಬಂದಿದೆ. ಏ.25ರಂದು ಶನಿವಾರ ತಂಡರಾತ್ರಿ ವೇಳೆ ದುಷ್ಕರ್ಮಿಗಳು ಏಕಾಏಕಿಯಾಗಿ ಗುಂಡಿನ ದಾಳಿ ಬೆಳಗಾವಿ ನಗರದ ಮಂಡೋಳಿ ರಸ್ತೆಯಲ್ಲಿರುವ ಪೂಜಾ ಕಾಕತಕರ್ ಎಂಬ ವಕೀಲೆಯ ಮನೆಯ ಮೊದಲ ಮಹಡಿ ಮೇಲೆ ದುಷ್ಕರ್ಮಿಗಳು ಫೈರಿಂಗ್ ನಡೆಸಿದ್ದು, ಕಿಡಕಿ ಗಾಜುಗಳು ಪುಡಿಯಾದ ಘಟನೆ ನಡೆದಿದೆ. ವಕೀಲೆ ಮಗಳು ರಾತ್ರಿ ಮನೆಯ ಮೊದಲ ಮಹಡಿಯಲ್ಲಿ ಕುಳಿತಿದ್ದಳು. ತಡ ರಾತ್ರಿಯಾದ್ದರಿಂದ ಕೆಳಗೆ ಬರುವಂತೆ ಪೋಷಕರು ಕರೆದಿದ್ದಾರೆ. ಮಗಳು ಕೆಳಗೆ ಬಂದ ಕೆಲ ಸಮಯದಲ್ಲೇ ಗುಂಡಿನ ದಾಳಿ ನಡೆದಿದೆ. ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಅಲ್ಲಿಂದ ಪರಾರಿ ಆಗಿದ್ದಾರೆ. ವಕೀಲೆ ಪೂಜಾ ಕಾಕತಕರ್ ಘಟನೆಯ ಕುರಿತು ಪೊಲೀಸ ರಿಗೆ ದೂರು ನೀಡಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಹಾಗೂ ಎಫ್‌ಎಸ್ ಎಲ್ ತಂಡ, ಆಗಮಿಸಿ ಗುಂಡನ್ನು ವಶಕ್ಕೆ ಪಡೆದು, ತನಿಖೆ ಮುಂದುವರಿಸಿದ್ದಾರೆ. ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಬಸ್ ಪಲ್ಟಿ: ಗಾಯ

ಚಿಕ್ಕಮಗಳೂರು: ಚಾರ್ಮಾಡಿ ಘಾಟ್‌ನ ನಾಲ್ಕನೇ ತಿರುವಿನಲ್ಲಿ ಖಾಸಗಿ ಬಸ್‌ವೊಂದು ಉರುಳಿಬಿದ್ದಿದ್ದು, 20ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಧರ್ಮಸ್ಥಳದಲ್ಲಿ ಮದುವೆ ಮುಗಿಸಿಕೊಂಡು ತುಮಕೂರು ಜಿಲ್ಲೆಯ ಪಾವಗಡಕ್ಕೆ ಪ್ರಯಾಣಿಕರು ವಾಪಸ್ಸಾಗುತ್ತಿದ್ದರು. ಈ ಸಂದರ್ಭದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಈ ದುರ್ಘಟನೆ ನಡೆದಿದೆ. ಅಪಘಾತ ನಡೆದ ಕೂಡಲೇ ಸ್ಥಳೀಯರು ರಕ್ಷಣಾ ಕಾರ್ಯಕ್ಕೆ ಧಾವಿಸಿದ್ದು, ಗಾಯಾಳುಗಳನ್ನು ಆಂಬುಲೆನ್ಸ್‌ಗಳ ಮೂಲಕ ಕಕ್ಕಿಂಜೆಯ ಕೃಷ್ಣ ಆಸ್ಪತ್ರೆ ಹಾಗೂ ಬೆಳ್ತಂಗಡಿಯ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿದ್ದಾರೆ. ಬೆಳ್ತಂಗಡಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

133ನೇ ಮನ್ ಕೀ ಬಾತ್ ವೀಕ್ಷಿಸಿದ ಸಚಿವ ಪ್ರಹ್ಲಾದ ಜೋಶಿ

ದೇಶಕ್ಕಿಲ್ಲ ಇಂಧನ ಸಮಸ್ಯೆ

ಹುಬ್ಬಳ್ಳಿ: ದೂರದೃಷ್ಟಿ ನಾಯಕತ್ವದಿಂದ ದೇಶದ ಇಂಧನ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕೀ ಬಾತ್ ಮೂಲಕ ಭಾರತದ ಸೌರಶಕ್ತಿ, ಪವನ ಶಕ್ತಿ ಮೇಲೆ ಪ್ರಖರ ಬೆಳಕು ಚೆಲ್ಲಿದ್ದಾರೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ ಜೋಶಿ ಬಣ್ಣಿಸಿದರು. ಹುಬ್ಬಳ್ಳಿಯ 52ನೇ ವಾರ್ಡ್ ಬೂತ್ ನಂ.202ರಲ್ಲಿ ಜನಸಾಮಾನ್ಯರೊಡಗೂಡಿ ಪ್ರಧಾನಿ ಮೋದಿ ಅವರ 133ನೇ ಮನ್ ಕೀ ಬಾತ್ ವೀಕ್ಷಿಸಿ ಮಾತನಾಡಿ, ಭಾರತದ ಹೊಸ ಮತ್ತು ನವೀಕರಿಸಬಹುದಾದ ಇಂಧನ ವ್ಯವಸ್ಥೆ ಬಗ್ಗೆ ಪ್ರಧಾನಿ ಅತ್ಯಂತ ವಿಶ್ವಾಸಾರ್ಹ ಮಾತುಗಳನ್ನಾಡಿದ್ದು, ಇದು ಶುದ್ಧ ಇಂಧನ ಪರಿವರ್ತನೆ ಪಥದಲ್ಲಿ ಸಾಗಿದ ನಮ್ಮ ಪ್ರಯತ್ನಕ್ಕೆ ಮತ್ತಷ್ಟು ಸ್ಫೂರ್ತಿ ತುಂಬಿದೆ ಎಂದು ಹೇಳಿದರು.

ಪ್ರಧಾನಿಯವರ ಮನ್ ಕೀ ಬಾತ್ ಸಮಾಜ ಸೇವೆ ಮತ್ತು ರಾಷ್ಟ್ರ ನಿರ್ಮಾಣದ ಹಾದಿಯಲ್ಲಿ ನಮಗೆ ಹೊಸ ಚೈತನ್ಯ ತುಂಬಿದೆ. ದೇಶದ ಪ್ರಗತಿ, ಸಾಧಕರ ಯಶೋಗಾಥೆ ಮತ್ತು ನವ ಭಾರತದ ಸಂಕಲ್ಪಗಳನ್ನು ಹಂಚಿಕೊಳ್ಳುವ ಈ ವಿಶಿಷ್ಟ ಕಾರ್ಯಕ್ರಮ ಮಾದರಿ ಎಂದರು.

ಸಣ್ಣ ಸಣ್ಣ ಬದಲಾವಣೆಗಳ ಮೂಲಕವೇ ದೊಡ್ಡ ಕ್ರಾಂತಿಗೆ ನಾಂದಿ ಹಾಡಿದ್ದಾರೆ ಪ್ರಧಾನಿ ಮೋದಿ. ಸೌರ ವಿದ್ಯುತ್ ಮತ್ತು ಗಾಳಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುತ್ತ ಶುದ್ಧ ಇಂಧನ ವಲಯಕ್ಕೆ ಶಕ್ತಿ ತುಂಬಿದ್ದಾರೆ. ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಭಾರತ ಹೊಸ ಮೈಲುಗಲ್ಲು ಸ್ಥಾಪಿಸುವುದನ್ನು ಮನ್ ಕೀ ಬಾತ್ ಮೂಲಕ ತೆರೆದಿಟ್ಟಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.



ಭಾರತದತ್ತ ಜಗತ್ತಿನ ದೃಷ್ಟಿ

ಹೊಸ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆ ಯುವಕರಿಗೆ ಹೊಸ ಅವಕಾಶಗಳು ಮತ್ತು ಉದ್ಯೋಗಗಳನ್ನು ಸೃಷ್ಟಿಸುತ್ತಿವೆ. ಭಾರತದ ವಿಕಾಸದಲ್ಲಿ ಪವನ ಶಕ್ತಿ ಹೊಸ ಭಾಷ್ಯ ಬರೆದಿದೆ. ವಿಂಡ್ ಎನರ್ಜಿಯಲ್ಲಿ ಜಗತ್ತಿನಲ್ಲಿ 4ನೇ ಸ್ಥಾನದಲ್ಲಿರುವ ಭಾರತವನ್ನು ಇಂದು ಜಗತ್ತೇ ಅನುಸರಣೆ ಮಾಡುತ್ತಿರುವ ಬಗ್ಗೆ ಉಲ್ಲೇಖಿಸಿ ಪ್ರಧಾನಿ ಮೋದಿ ಸಂತಸ ಹಂಚಿಕೊಂಡಿದ್ದಾರೆ.

56ಜಿಡಿ ದಾಟಿದ ಪವನ ಶಕ್ತಿ: ಭಾರತದ ಪವನ ಶಕ್ತಿ ಸಾಮರ್ಥ್ಯ ಇದೀಗ 56ಜಿಡಿ ದಾಟಿದೆ, ಕಳೆದ ವರ್ಷ 6 ಜಿಡಿ ಸೇರಿಸಿದ್ದು, ಇದು ಇದುವರೆಗಿನ ಅತ್ಯಧಿಕ ಸಾಮರ್ಥ್ಯ ಸೇರ್ಪಡೆಯಾಗಿದೆ. ಭಾರತ ಪವನ ಶಕ್ತಿ ಪ್ರಯಾಣವನ್ನು ವೇಗಗೊಳಿಸುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಇಂಧನ ಸುಸ್ಥಿರತೆ, ಶುದ್ಧ ಇಂಧನ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರದ ಉತ್ತಮ ಭವಿಷ್ಯಕ್ಕಾಗಿ ಸೌರ ಮತ್ತು ಪವನ ಶಕ್ತಿ ಅಳವಡಿಕೆ ಅತ್ಯಗತ್ಯವಾಗಿದೆ ಎನ್ನುವ ಮೂಲಕ ಪ್ರಧಾನಿ ಮೋದಿ ಅವರು, ವಿಕಸಿತ ಭಾರತಕ್ಕಾಗಿ ಶುದ್ಧ ಇಂಧನ ಸಾಮರ್ಥ್ಯದ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಂಸದರು ಹಾಗೂ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಶಾಸಕರಾದ ಮಹೇಶ್ ಟೆಂಗಿನಕಾಯಿ, ವಿಭಾಗ ಸಂಘಟನಾ ಕಾರ್ಯದರ್ಶಿಗಳಾದ ಜಯತೀರ್ಥ ಕಟ್ಟಿ, ಬಂಗಾರು ಹನುಮಂತು, ಭರತ ಬೊಮ್ಮಾಯಿ, ಮಹೇಂದ್ರ ಕೌತಾಳ, ಕೃಷ್ಣಾ ಗಂಡಗಾಳೇಕರ್, ಪ್ರಭು ನವಲಗುಂದಮಠ ಸೇರಿದಂತೆ ಗಣ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದ್ದರು.

ಕೃಷಿ ಉತ್ಪನ್ನಗಳಿಗೆ ಸಂಘ ಸಂಸ್ಥೆಗಳ ಸಹಕಾರ ಅಗತ್ಯ

ಬೆಂಗಳೂರು: ರೈತರು ಉತ್ಪಾದನೆ ಮಾಡಿದರಷ್ಟೇ ಸಾಲದು. ಉತ್ಪನ್ನಗಳಿಗೆ ಮೌಲ್ಯವರ್ಧನೆ ನೀಡಬೇಕು. ಆಗ ಅಧಿಕ ಲಾಭ ಗಳಿಸಬಹುದು. ಈ ನಿಟ್ಟಿನಲ್ಲಿ ಕೃಷಿ ವಿವಿಗಳು, ತೋಟಗಾರಿಕಾ, ಪಶು ಸಂಗೋಪನೆ, ಕೃಷಿ ಸೇರಿದಂತೆ ಸರ್ಕಾರದ ಇಲಾಖೆಗಳು, ಸಂಘ, ಸಂಸ್ಥೆಗಳು, ರೈತಉತ್ಪಾದಕ ಸಂಸ್ಥೆಗಳು ಸಹಕಾರ ನೀಡಬೇಕು ಎಂದು ವಾಣಿಜ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ ತಿಳಿಸಿದರು.

ಎಫ್‌ಕೆಸಿಸಿಐ, ಕೇಂದ್ರ ಆಹಾರ ಸಂಸ್ಕರಣೆ ಸಚಿವಾಲಯ, ರಾಜ್ಯ ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ(ಕೆಪೆಕ್) ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಶೇ.55 ರಷ್ಟು ಜನರು ಕೃಷಿಯಲ್ಲಿ ತೊಡಗಿದ್ದರೂ ಸಹ ಜಿಡಿಪಿಯಲ್ಲಿ ಕೃಷಿಯ ಪಾಲು ಶೇ.15 ರಿಂದ 18 ಮಾತ್ರ ಇದೆ. ಇದು ಹೆಚ್ಚಳವಾದರೆ ರೈತರು, ಉದ್ಯಮಿಗಳು, ಗ್ರಾಹಕರಿಗೂ ಅನುಕೂಲವಾಗುತ್ತದೆ ಎಂದು ಮಾಹಿತಿ ನೀಡಿದರು.

ದೇಶವು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ, ಇನ್ನೂ ಕೆಲವು ರಂಗದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕಿದೆ. ನಾವು ಉತ್ಪಾದನೆ ಹೆಚ್ಚು ಮಾಡಿದರೂ ಉತ್ಪಾದಕತೆ ಹೆಚ್ಚಿಸಲು ಅವಕಾಶವಿದೆ. ಇದಕ್ಕೆ ತಾಂತ್ರಿಕತೆ ಒಂದೇ ಮಂತ್ರವಾಗಿದೆ. ಕಡಿಮೆ ವೆಚ್ಚದಲ್ಲಿ ತಾಂತ್ರಿಕತೆಯನ್ನು ರೈತರಿಗೆ ನೀಡಿದರೆ ಅವರು ಲಾಭಾಂಶವನ್ನು ಹೆಚ್ಚಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚು ಉತ್ಪಾದಿಸಿ ದೇಶಕ್ಕೆ ಕೊಡುಗೆ ನೀಡುತ್ತಾರೆ. ಆ ನಿಟ್ಟಿನಲ್ಲಿ ಎಲ್ಲರೂ ಸಹಕಾರ ನೀಡಬೇಕು ಎಂದರು.

ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಡಾ.ಬಿ.ಸಿ.ಮುದ್ದುಗಂಗಾಧರ್ ಇದ್ದರು.



ಮೇ 2ರಂದು ಅಂಚೆ ಮತ ಮರು ಎಣಿಕೆ

ಚಿಕ್ಕಮಗಳೂರು: 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಗೊಂಡ ಅಂಚೆ ಮತಗಳ ಮರು ಎಣಿಕೆ ನಡೆಸಲು ನ್ಯಾಯಾಲಯ ಆದೇಶಿಸಿರುವ ಹಿನ್ನೆಲೆಯಲ್ಲಿ ಈಗ ಎಲ್ಲರ ಚಿತ್ತ ಮೇ 2ರತ್ತ ನೆಟ್ಟಿದೆ.



ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆಗೆ ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದ್ದು, ಮೇ 2 ರಂದು ಬೆಳಗ್ಗೆ 8 ಗಂಟೆಯಿಂದ ಎಣಿಕೆ ಪ್ರಕ್ರಿಯೆ ಆರಂಭವಾಗಲಿದೆ. ಚುನಾವಣಾಧಿಕಾರಿ ಗೌರವ ಶೆಟ್ಟಿ ಅವರ ನೇತೃತ್ವದಲ್ಲಿ ನಾಲ್ವರು ಸಹಾಯಕ ಚುನಾವಣಾಧಿಕಾರಿಗಳು ಈ ಕಾರ್ಯವನ್ನು ನಿರ್ವಹಿಸಲಿದ್ದಾರೆ. ಪಾರದರ್ಶಕತೆ ಕಾಪಾಡಲು ಎಣಿಕೆ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದ್ದು, ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋಗ್ರಫಿ ಮಾಡಲಾಗುತ್ತದೆ. ಕೇವಲ ಒಂದೇ ಟೇಬಲ್‌ನಲ್ಲಿ ಎಣಿಕೆ ನಡೆಯಲಿದ್ದು, ಅಭ್ಯರ್ಥಿಗಳ ಪರ ಏಜೆಂಟರು ಹಾಜರಿರುತ್ತಾರೆ. ಚುನಾವಣಾ ಆಯೋಗದ ನಿಯಮಾವಳಿಗಳಂತೆ ಪ್ರತಿಯೊಂದು ಮತದ ಮಾನ್ಯತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರು ಬಿಜೆಪಿಯ ಡಿ.ಎನ್. ಜೀವರಾಜ್ ವಿರುದ್ಧ ಕೇವಲ 201 ಮತಗಳ ಅಲ್ಪ ಅಂತರದಿಂದ ಗೆಲುವು ಸಾಧಿಸಿದ್ದರು. ಆದರೆ ಆ ವೇಳೆ ಚಲಾವಣೆಯಾಗಿದ್ದ ಅಂಚೆ ಮತಗಳಲ್ಲಿ 279 ಮತಗಳನ್ನು ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿತ್ತು. ಇದರಲ್ಲಿ ಲೋಪವಾಗಿದೆ ಎಂದು ಆರೋಪಿಸಿ ಡಿ.ಎನ್. ಜೀವರಾಜ್ ಅವರು ಹೈಕೋರ್ಟ್‌ಗೆ ಮೊರೆ ಹೋಗಿದ್ದರು.

ಹದಗೆಟ್ಟ ಆರ್ಥಿಕತೆ: ಎಚ್‌ಡಿಕೆ

ತುಮಕೂರು: ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಿದೆ ಎಂದು ಪುನರುಚ್ಚರಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಗ್ರೇಟರ್ ಬೆಂಗಳೂರು ಎಲೆಕ್ಷನ್ ಮಾಡುವುದಕ್ಕೂ ಈ ಸರ್ಕಾರಕ್ಕೆ ಹಣವಿಲ್ಲ ಎಂದು ನೇರ ಆರೋಪ ಮಾಡಿದ್ದಾರೆ.



ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸೊರವನಹಳ್ಳಿ ಮತ್ತು ಕುಣಿಗಲ್ ತಾಲೂಕಿನ ಮಾದಪ್ಪನಹಳ್ಳಿ ಗ್ರಾಮಗಳಲ್ಲಿ ನೂತನ ದೇವಾಲಯಗಳ ಲೋಕಾರ್ಪಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾತನಾಡಿದರು. ಮಾತನಾಡಿದರು. ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಜೂನ್ 30ರ ಬದಲು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಜಾತಿಗಣತಿ ಮತ್ತು ಮತದಾರರ ಪಟ್ಟಿಯ ತಿದ್ದುಪಡಿ ಕಾರ್ಯಗಳಲ್ಲಿ ಸಿಬ್ಬಂದಿ ನಿರತರಾಗಿರುವುದು ಹಾಗೂ ಹಣಕಾಸಿನ ಕೊರತೆ ಇದಕ್ಕೆ ಕಾರಣವಾಗಿದ್ದು, ಆಯೋಗವು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದೆ. ಅಲ್ಲಿಗೆ ರಾಜ್ಯ ಸರ್ಕಾರ ಆರ್ಥಿಕವಾಗಿ ದುರ್ಭರ ಸ್ಥಿತಿಯಲ್ಲಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಬೆಂಕಿ ರೀತಿಯ ಬೇಸಿಗೆಯನ್ನು ನೋಡುತ್ತಿದ್ದೇವೆ. ಉಷ್ಣಗಾಳಿಗೆ ಜನರು ತತ್ತರಿಸುತ್ತಿದ್ದಾರೆ. ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಜನರ ನೆರವಿಗೆ ಧಾವಿಸುವುದು ಇರಲಿ, ಅವರ ಬಗ್ಗೆ ಕನಿಕರದ ಮಾತನ್ನು ಕೂಡ ಆಡುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕುರ್ಚಿ ಕಾಳಗದಲ್ಲಿ ಕಾಂಗ್ರೆಸ್ ನಾಯಕರು

ರಾಜ್ಯದ ಜನರು ಒಂದು ಕಡೆ ಕುಡಿಯುವ ನೀರಿನ ಸಮಸ್ಯೆಗೆ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ಅಕಾಲಿಕ ಮಳೆಯಿಂದ ಭಾರೀ ಬೆಳೆ ನಷ್ಟಕ್ಕೆ ತುತ್ತಾಗಿದ್ದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಿಶ್ಚಿತಾರ್ಥ: ಯುವತಿ ಪರಾರಿ!

ಹಾವೇರಿ: ವಿವಾಹ ನಿಶ್ಚಿತಾರ್ಥದ ರಾತ್ರಿಯೇ ಯುವತಿ ನಾಪತ್ತೆಯಾಗಿರುವ ಘಟನೆ ಜಿಲ್ಲೆಯ ಹಾನಗಲ್ಲ ತಾಲೂಕಿನ ಶಂಕ್ರಿಕೊಪ್ಪ ಗ್ರಾಮದಲ್ಲಿ ನಡೆದಿದ್ದು, ಯುವತಿಯ ಕುಟುಂಬಸ್ಥರು ಲವ್ ಜಿಹಾದ್ ಶಂಕೆ ವ್ಯಕ್ತಪಡಿಸಿ ಆಡೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿವಾಹ ನಿಶ್ಚಿತಾರ್ಥ ನಡೆದ ಬೆನ್ನಲ್ಲೇ ಯುವತಿಯನ್ನು ಅನ್ಯ ಕೋಮಿನ ಯುವಕನೊಬ್ಬ ಪುಸಲಾಯಿಸಿ ಲವ್ ಜಿಹಾದ್‌ಗೆ ಯತ್ನಿಸಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಯುವತಿ ಕುಟುಂಬಸ್ಥರಿಂದ ಲವ್ ಜಿಹಾದ್ ಶಂಕೆ

ಶಂಕ್ರಿಕೊಪ್ಪ ಗ್ರಾಮದ ಬಿ.ಕಾಂ.ಪದವೀಧರೆ ಶಂಕ್ರಮ್ಮ ಕೆರಿಮತ್ತಿಹಳ್ಳಿ (24) ನಾಪತ್ತೆಯಾದ ಯುವತಿ. ಶಂಕ್ರಮ್ಮನಿಗೆ ಇತ್ತೀಚೆಗಷ್ಟೇ ನಿಶ್ಚಿತಾರ್ಥ ನೆರವೇರಿತ್ತು. ಮೇ 11ಕ್ಕೆ ಪಾಲಕರು ಮದುವೆ ಮಾಡಲು ನಿಶ್ಚಯಿಸಿದ್ದರು. ನಿಶ್ಚಿತಾರ್ಥ ನಡೆದ ರಾತ್ರಿ ಭಾವಿ ಪತಿಯೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದ ಯುವತಿ, ತಡರಾತ್ರಿ ಮನೆಯ ಹಿಂಬದಿಯ ಬಾಗಿಲಿನಿಂದ ನಾಪತ್ತೆಯಾಗಿದ್ದಾಳೆ ಎನ್ನಲಾಗಿದೆ. ನರೇಗಲ್ ಗ್ರಾಮದ ಇಬ್ರಾಹಿಂ ನೆಗಳೂರು ಎಂಬ ಯುವಕ ಈಕೆಯನ್ನು ಪುಸಲಾಯಿಸಿ ಕರೆದೊಯ್ದಿದ್ದಾನೆ. ಇದು ಲವ್ ಜಿಹಾದ್ ಪ್ರಯತ್ನ ಎಂದು ಕುಟುಂಬಸ್ಥರು ಹಾಗೂ ಹಿಂದೂಪರ ಸಂಘಟನೆಗಳು ಆರೋಪಿಸಿವೆ.

ಅಕ್ಕಿಆಲೂರಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದ ವೇಳೆ ಯುವತಿಯ ಪರಿಚಯ ಮಾಡಿಕೊಂಡಿದ್ದ ಆರೋಪಿ ಇಬ್ರಾಹಿಂ, ಮದುವೆಯ ಸಿದ್ಧತೆ ನಡೆಯುತ್ತಿದ್ದಾಗಲೇ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಮಗಳ ನಾಪತ್ತೆಯಿಂದ ಕಂಗೆಟ್ಟ ತಾಯಿ, ನನ್ನ ಮಗಳನ್ನು ಹೇಗಾದರೂ ಮಾಡಿ ಮರಳಿ ಕರೆತನ್ನಿ ಎಂದು ಆಡೂರು ಪೊಲೀಸ್ ಠಾಣೆಯ ಮುಂದೆ ಕಣ್ಣೀರು ಹಾಕಿ ದೂರು ಸಲ್ಲಿಸಿದ್ದಾರೆ. ಈ ಘಟನೆ ಹಿನ್ನೆಲೆಯಲ್ಲಿ ಹಿಂದೂಪರ ಸಂಘಟನೆಗಳ ಜಿಲ್ಲೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದು, ಇದು ವ್ಯವಸ್ಥಿತ ಲವ್ ಜಿಹಾದ್ ಎಂದು ಕಿಡಿ ಕಾರಿವೆ. ಸದ್ಯ ಅಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಾಪತ್ತೆಯಾದ ಯುವತಿ ಹಾಗೂ ಆರೋಪಿಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ.

ವಿಮಲಾ ಕುಮಾವತ್ ಎಂಬ ಮಮತೆಯ ಮಡಿಲು

ರೂಪಶ್ರೀ ನಾಗರಾಜ್



ಸೇವಾಗಾಥ
ಕಥೆ-4

6ನೇ ಜನವರಿ 2003, 62 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿರುವ ವಿಮಲಾ ಕುಮಾವತ್ ಈ ದಿನವನ್ನೇ ತಮ್ಮ ಜನ್ಮದಿನವೆಂದು ಹೇಳುತ್ತಾರೆ - ಅದು ಜನ್ಮದಿನವಲ್ಲ, ಅವರಪ್ರಕಾರ ಪುನರ್ಜನ್ಮದಿನ .. ನಿಜವಾಗಿ ಹೇಳಬೇಕೆಂದರೆ, ಹಿಂದಿನ ಕಾಲದ ಅನೇಕರ ಹಾಗೆ, ವಿಮಲಾರವರಿಗೂ ತಮ್ಮ ಜನ್ಮದಿನಾಂಕ ನೆನಪಿರಲಿಲ್ಲ. ಆ ದಿನ ಸಂಘದ ವರಿಷ್ಠ ಪ್ರಚಾರಕರಾದ ಧನಪ್ರಕಾಶ ತ್ಯಾಗಿ ಅವರ ಪ್ರೇರಣೆಯಿಂದ ಅವರು ಜೈಪುರದಲ್ಲಿ ತಮ್ಮ ಮನೆಯ ಸಮೀಪದ ವಾಲ್ಮೀಕಿ ಸೇವಾಬಸತಿಯಿಂದ ಚಿಂದಿ ಆಯುವ 5 ಹುಡುಗರನ್ನು ಶಿಕ್ಷಣಕ್ಕೋಸ್ಕರ ತಮ್ಮ ಮನೆಗೆ ಕರೆತಂದ ದಿನಮಾತ್ರ ವಿಮಲಾ ಅವರಿಗೆ ನೆನಪಿದೆ.

ಮೂವರು ಗಂಡುಮಕ್ಕಳು, ಸೊಸೆಯರು ಮತ್ತು ಮೊಮ್ಮಕ್ಕಳೊಂದಿಗೆ ತುಂಬಿದ ಪರಿವಾರದ ಒಡತಿ, 8ನೇ ತರಗತಿಪಾಸಾಗಿದ್ದ 48 ವರ್ಷದ ವಿಮಲಾ ಅವರು ಈ ಮಕ್ಕಳ ಜೀವನವನ್ನು ಸುಧಾರಿಸುವ ಪಣತೊಟ್ಟರು. ಚಿಂದಿ ಆಯ್ದು ದುಡ್ಡು ಗಳಿಸುತ್ತಿದ್ದ, ಅದರಲ್ಲಿನ ಸ್ವಲ್ಪ ಹಣವನ್ನು ನಶೆಗಾಗಿ ಮತ್ತು ಬಾಕಿಯ ಹಣವನ್ನು ಮನೆಯ ಖರ್ಚನ್ನು ನಿಭಾಯಿಸಲು ತಾಯಿತಂದೆಗೆ ಸಹಾಯ ಮಾಡುತ್ತಿದ್ದ ಈ ಮಕ್ಕಳಿಗೋಸ್ಕರ ವಿಮಲಾ ಜೀ ದೃಢ ನಿರ್ಧಾರ ಮಾಡಿದರು. ಬೀದಿ ಗುಡಿಸುವವರ ಈ ವಸತಿಗಳ ಸ್ಥಿತಿ ಶೋಚನೀಯವಾಗಿಯೇ ಇತ್ತು, ವಸತಿಯ ಆಸುಪಾಸಿನಲ್ಲಿ ಬಹಳಷ್ಟು ಗಲೀಜೂ ಇತ್ತು. ಚಿಕ್ಕಚಿಕ್ಕಗುಡಿಸಲುಗಳಲ್ಲಿ ಹಂದಿಗಳ ಮಧ್ಯೆ ಬೆಳೆಯುತ್ತಿದ್ದ ಮಕ್ಕಳು. ಸಾಲದುಎಂಬಂತೆ, ನಶೆಯಲ್ಲಿ ಮುಳುಗಿದ್ದ ತಾಯಿತಂದೆಯರು. ಇಂಥ ಪರಿಸ್ಥಿತಿಯಲ್ಲಿ ಈ ಮಕ್ಕಳ ಓದಿನ ಬಗ್ಗೆ ಚಿಂತೆ ಮಾಡುವವರಾದರೂ ಯಾರು? ಆಗ ವಿಮಲಾ ಅವರು ಅವರ ಜೀವನದಲ್ಲಿ ಆಪದ್ಬಾಂಧವರಂತೆಬಂದರು. ಆ ಮಕ್ಕಳನ್ನು ಸ್ವಚ್ಛಗೊಳಿಸುವುದರಿಂದಹಿಡಿದು ಅವರಿಗೆ ಸಂಸ್ಕಾರ ಮತ್ತು ಶಿಕ್ಷಣ ನೀಡುವ ಕಾರ್ಯವನ್ನು ಅವರು ಆರಂಭಿಸಿದರು.

ಈ ಸಾಧಾರಣ ಗೃಹಿಣಿಯ ಅದ್ಭುತ ಸಂಕಲ್ಪ, ನಿಸ್ವಾರ್ಥ ಸೇವಾಮನೋಭಾವ ಮತ್ತು ಅವಿರತ ಪರಿಶ್ರಮಗಳು ಮಕ್ಕಳ ಜೀವನದ ಸ್ಥಿತಿ ಮತ್ತು ದಿಕ್ಕು ಎರಡನ್ನೂ ಬದಲಿಸಿತು. ಸೇವಾಭಾರತಿಯ ಕಾರ್ಯಕರ್ತರ ಸಹಾಯದಿಂದ, ಮೊದಲ ಮೂರು ವರ್ಷಗಳ ಕಾಲ ವಿಮಲಾಜಿಯವರ ಮನೆಯಲ್ಲೇ ನಡೆಯುತ್ತಿದ್ದ ಈ ತರಗತಿಗಳು ಕ್ರಮೇಣ 'ಸೇವಾಭಾರತಿ ಬಾಲ ವಿದ್ಯಾಲಯ'ವಾಗಿ ಮಾರ್ಪಟ್ಟವು. ಇಂದು ಇಲ್ಲಿ 400ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಬನ್ನಿ, 12 ನೇ ತರಗತಿಯಲ್ಲಿ ಓದುತ್ತಿರುವ ಶಿವಾನಿಯ ಕಥೆಯನ್ನು ನೋಡೋಣ ವಿಮಲಾರವರು ಶಿವಾನಿಯನ್ನು ಮತ್ತು ಅವಳ ತಂಗಿಯನ್ನು ಮೊದಲ ಬಾರಿಗೆ ವಸತಿ ನಿಲಯಕ್ಕೆ ಕರೆತಂದ ಆ ದಿನವನ್ನು ಈ ಹುಡುಗಿ ಇಂದು ಕೂಡ ಮರೆತಿಲ್ಲ. ಪೋಷಕರ ಮರಣದ ನಂತರ, ಈ ಇಬ್ಬರು ಸಹೋದರಿಯರು ತಮ್ಮ ದೊಡ್ಡಪ್ಪ-ದೊಡ್ಡಮ್ಮ ಮತ್ತು ಅವರ ನಾಲ್ಕು ಮಕ್ಕಳೊಂದಿಗೆ ಒಂದು ಪುಟ್ಟ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಅವರು ಇಲ್ಲಿಗೆ ಬಂದಾಗ ಶಿವಾನಿಯ ತಂಗಿಯಆರೋಗ್ಯವೂ ಸರಿ ಇರಲಿಲ್ಲ, ಆದರೆ 10ನೇ ತರಗತಿಯಲ್ಲಿ ಶೇಕಡಾ 62 ರಷ್ಟು ಅಂಕಗಳನ್ನು ಗಳಿಸಿದ ನಂತರ, ಅವಳು ತನ್ನ ಅಜ್ಜಿ ವಿಮಲಾರನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು ಮತ್ತು ಅವರ ಬಗ್ಗೆ ಒಂದು ಕವಿತೆಯನ್ನೂ ಬರೆದಿದ್ದಳು. ಹಾಗೆಬಿ.ಕಾಂ. ತೃತೀಯ ವರ್ಷದಲ್ಲಿರುವ ಲೋಕೇಶ್ ಕೋಲಿ ಅವರ ಬಗ್ಗೆ ಈಗ ತಿಳಿಯೋಣ. ಲೋಕೇಶ್ ಓದುವುದರ ಜೊತೆಜೊತೆಗೆ ಇದೇ ಬಾಲವಿದ್ಯಾಲಯದಲ್ಲಿ ಶಿಕ್ಷಕರೂ ಆಗಿದ್ದಾರೆ. ಲೋಕೇಶ್ ಅತಿ ಸುಮಧುರವಾಗಿ ಕೊಳಲನ್ನೂ ನುಡಿಸಬಲ್ಲರು. ವಿಧವೆ ತಾಯಿ ಮತ್ತು ಮೂವರು ತಮ್ಮ ತಂಗಿಯರಲ್ಲಿ ಎಲ್ಲರಿಗಿಂತ ದೊಡ್ಡವನಾದ ಲೋಕೇಶನನ್ನು ಓದಿಗೋಸ್ಕರ ವಿಮಲಾ ಅವರು ಬಲವಂತವಾಗಿ ಕರೆತಂದಾಗ ಅವನಿಗಿನ್ನೂ 8 ವರ್ಷವಾಗಿತ್ತಷ್ಟೇ. ಹಾಗೇಯೇ ಬಿ. ಎ. ಪ್ರಥಮ ವರ್ಷದ ವಿದ್ಯಾರ್ಥಿನಿ ಲಕ್ಷ್ಮಿಗೆ 8ನೇ ತರಗತಿಯ ಪರೀಕ್ಷೆಯನ್ನು ಕೊಡಿಸುವ ಸಲುವಾಗಿ, ವಿಮಲಾ ಅವರು ತಮ್ಮ 52ನೇ ವಯಸ್ಸಿನಲ್ಲಿ ತಾವೇ ಖುದ್ದಾಗಿ 8ನೇ ತರಗತಿಯ ಪರೀಕ್ಷೆಯನ್ನು ಮತ್ತೊಮ್ಮೆ ಬರೆದರು. ಇಂತಹ ಎಷ್ಟೋ ಕಥೆಗಳು ನಮಗೆ ಇಲ್ಲಿ ಸಿಗುತ್ತವೆ.

ವಿಮಲಾ ಅವರು ಓದಿನೊಂದಿಗೆ ಮಕ್ಕಳಿಗೆ ಭಗವದ್ಗೀತೆಯ ಶ್ಲೋಕಗಳು, ಬಾಲರಾಮಾಯಣ, ಭಜನೆ, ಇತ್ಯಾದಿಗಳನ್ನು ಕಲಿಸುತ್ತಿದ್ದರು. ಈ ಮಕ್ಕಳು ಹಾರ್ಮೋನಿಯಂ, ಡೋಲಕ್, ಮಂಜೀರಾ ಇವುಗಳನ್ನೂ ಕಲಿತರು ಮತ್ತು ಬೇಸಿಗೆ ರಜೆಯಲ್ಲಿ ಹೊಲಿಗೆ ಕಸೂತಿಯಂಥ ಹವ್ಯಾಸಿ ವಿಷಯಗಳನ್ನೂ ಕಲಿತರು. ಜೈಪುರ ಹಿಂದೂ ಅಧ್ಯಾತ್ಮಿಕ ಮೇಳದ ವೇದಿಕೆಯಲ್ಲಿ ಈ ಮಕ್ಕಳು ತಮ್ಮ ಸುಮಧುರ ಕಂಠದಲ್ಲಿ ಬಾಲರಾಮಾಯಣದ ಶ್ಲೋಕಗಳನ್ನು ಹಾಡಿದಾಗ, ಧನಪ್ರಕಾಶ್ ಅವರಿಗೆ ಆನಂದದ ಬಾಷ್ಪ ತುಂಬಿಬಂದಿತ್ತು. ಮೇಳದಲ್ಲಿ ದೊರಕಿದ ತಮ್ಮ ಅನೇಕ ಪಾರಿತೋಷಕಗಳನ್ನು ಮಕ್ಕಳು ಹೆಮ್ಮೆಯಿಂದ ತೋರಿಸುತ್ತಾರೆ. ಇಂದು ಶಾರದಾ ಎನ್‌ಕ್ಲೇವ್‌ನ (Sharda Enclave) ಎರಡಂತಸ್ತಿನ ಭವನದಲ್ಲಿ ನಡೆಯುತ್ತಿರುವ ಈ ಶಾಲೆಯ 325 ಮಕ್ಕಳ ಸಂಪೂರ್ಣ ವೆಚ್ಚವು ಸಮಾಜದ ಸಹಕಾರದಿಂದ ನಡೆಯುತ್ತಿದೆ. 36 ಮಕ್ಕಳು ಇಲ್ಲೇ ವಸತಿ ನಿಲಯದಲ್ಲಿ (ಹಾಸ್ಟೆಲ್) ವಾಸಿಸುತ್ತಿದ್ದಾರೆ.

ಈ ಶಾಲೆಯ ಮತ್ತೊಂದು ಶಾಖೆಯು ಈಗ ಸಾಂಗಾನೇರ್‌ನ ಬಕ್ಸಾವಾಲ್‌ನಲ್ಲಿ ಟೆಂಟ್ ಅಡಿಯಲ್ಲಿ ನಡೆಯುತ್ತಿದ್ದು, ಅಲ್ಲಿ 125 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಸಂಪಾದಕೀಯ

ಸ್ವಾಗತಾರ್ಹ ನಿರ್ಧಾರ

ಶಾಲೆಗಳಲ್ಲಿ ದಿನವೂ ಬೆಳಗ್ಗೆ ಹತ್ತು ನಿಮಿಷ ಪತ್ರಿಕೆಗಳನ್ನು ಓದಿಸುವಂತೆ ರಾಜ್ಯದ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ದೇಶ-ವಿದೇಶಗಳ ಆಗುಹೋಗುಗಳ ಬಗ್ಗೆ ಅಯಾಚಿತವಾಗಿ ಜ್ಞಾನ ಲಭ್ಯವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳ ಮನಸಲ್ಲಿ ದಿನಪತ್ರಿಕೆಗಳ ಮಹತ್ವವೂ ಅಚ್ಚೊತ್ತುತ್ತದೆ. ಮುದ್ರಿತ ಪ್ರತಿಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಈ ರೀತಿ ಮಕ್ಕಳಿಗೆ ದಿನಪತ್ರಿಕೆ ಓದುವುದನ್ನು ರೂಢಿಸಲು ಮುಂದಾಗಿರುವದು ನಿಜಕ್ಕೂ ಸ್ವಾಗತಾರ್ಹ ಬೆಳವಣಿಗೆ.

ತುಂಬಾ ಹಿಂದೆ ಶಾಲೆಗಳಿಗೆ ಪತ್ರಿಕೆಗಳು ಬರುತ್ತಿದ್ದವು. ದಿನವೂ ಬೆಳಗ್ಗೆಯ ಪ್ರಾರ್ಥನೆಯ ನಂತರ ದಿನಪತ್ರಿಕೆಗಳ ಹೆಡ್‌ಲೈನ್‌ಗಳನ್ನು ಒಬ್ಬೊಬ್ಬ ವಿದ್ಯಾರ್ಥಿ ಪಾಳಿ ಪ್ರಕಾರ ಓದುವ ಪರಿಪಾಠ ಇತ್ತು. ಯಾವ ಹೆಡ್‌ಲೈನ್‌ಗಳನ್ನು ಓದಬೇಕೆಂದು ಶಿಕ್ಷಕರು ಗುರುತುಹಾಕಿ ಕೊಡುತ್ತಿದ್ದರು. ಇದರಿಂದ ಮಕ್ಕಳಿಗೆ ಪ್ರಚಲಿತ ವಿದ್ಯಮಾನಗಳು ಗೊತ್ತಾಗುವುದರ ಜತೆಗೆ, ಕನ್ನಡವನ್ನು ಸ್ಪಷ್ಟವಾಗಿ ಓದುವುದು ಕೂಡ ರೂಢಿಯಾಗುತ್ತದೆ. ಜತೆಗೆ ದಿನಪತ್ರಿಕೆಗಳನ್ನು ಓದುವುದು ಒಳ್ಳೆಯ ಹವ್ಯಾಸ ಎಂಬ ಭಾವನೆ ಮಕ್ಕಳ ಮನಸಲ್ಲಿ ಮೂಡುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಮಾಹಿತಿ- ಸುದ್ದಿಗಳ ಮಹಾಪೂರವೇ ಜನಕ್ಕೆ ದೊರೆಯುತ್ತಿದೆ. ಅದರಲ್ಲಿ ಸತ್ಯ ಯಾವುದು, ವೈಭವೀಕೃತ ಸುದ್ದಿ ಯಾವುದು? ಕೇವಲ ಓದುಗರನ್ನು ಆಕರ್ಷಿಸಲು ಪ್ರಕಟಿಸಿದ ಸುದ್ದಿ ಯಾವುದು ಎಂಬುದನ್ನು ಓದುಗರೇ ನಿರ್ಧರಿಸಬೇಕಾಗುತ್ತದೆ. ಆದರೆ ದಿನಪತ್ರಿಕೆಗಳು ಹಾಗಲ್ಲ. ದಿನಪತ್ರಿಕೆಗಳಲ್ಲಿ ಆಯ್ದ, ಪ್ರಮುಖ ಸುದ್ದಿಗಳು ಮಾತ್ರ ಪ್ರಕಟವಾಗುತ್ತವೆ. ಇಂದಿಗೂ ದಿನಪತ್ರಿಕೆಗಳನ್ನು ಸುದ್ದಿಯನ್ನು ವೈಭವೀಕರಿಸದೆ, ನೈಜವಾದ ಸುದ್ದಿಗಳನ್ನು, ಅಷ್ಟೇ ಗಾಂಭೀರ್ಯದಿಂದ ಪ್ರಕಟಿಸುತ್ತಿವೆ. ಇಂತಹ ವೇಗದ ಸಮಯದಲ್ಲೂ ಪತ್ರಿಕೆಗಳು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಂಡಿವೆ. ಹಾಗಾಗಿ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಜನರಲ್ಲಿ ರೂಢಿಸುವುದು ಅತ್ಯಂತ ಅಗತ್ಯದ ಸಂಗತಿಯೂ ಹೌದು.

ಈಗಿನ ಯುವಕರು ಹಾಗೂ ಮಕ್ಕಳು ದಿನಪತ್ರಿಕೆ ಓದುವ ಹವ್ಯಾಸದಿಂದ ದೂರಾಗುತ್ತಿದ್ದಾರೆ. ಅವರು ಪ್ರತಿಯೊಂದಕ್ಕೂ ಡಿಜಿಟಲ್ ಪ್ರಪಂಚವನ್ನೆ ಅವಲಂಬಿಸಿದ್ದಾರೆ. ಅವರನ್ನು ಮುದ್ರಿತ ಪತ್ರಿಕೆ, ಪುಸ್ತಕಗಳತ್ತ ಗಮನಹರಿಸುವಂತೆ ಮಾಡಬೇಕಾದ ಅಗತ್ಯವಿದೆ. ಈಗಾಗಲೇ ಮಕ್ಕಳಲ್ಲಿ ಡಿಜಿಟಲ್ ಸಮಯ ಕಡಿಮೆ ಮಾಡುವ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿದೆ. ದಿಟಜಿಲ್ ಸಮಯ ಹೆಚ್ಚಳದಿಂದ ಮಕ್ಕಳ ಕಣ್ಣಿನ ಮೇಲೆ ಹಾಗೂ ಅವರ ಕ್ರಿಯಾಶೀಲತೆ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮತ್ತೆ ಮುದ್ರಿತ ಅಕ್ಷರಗಳತ್ತ ವಿದ್ಯಾರ್ಥಿಗಳು ಗಮನಹರಿಸುವಂತೆ ಮತ್ತು ಅವುಗಳ ಮಹತ್ವ ಅರಿಯುವಂತೆ ಮಾಡುವುದರಿಂದ ಮಾತ್ರ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯವಿದೆ.

ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಸರ್ಕಾರಿ ಶಾಲೆ, ಅನುದಾನಿತ ಹಾಗೂ ಅನುದಾನ ರಹಿತ ಹೀಗೆ ಎಲ್ಲ ಶಾಲೆಗಳಲ್ಲಿ ಬೆಳಗ್ಗೆ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸುವ ಮೂಲಕ ಒಳ್ಳೆಯ ಹೆಜ್ಜೆಯನ್ನಿಟ್ಟಿದೆ. ಚಿಕ್ಕರಿರುವಾಗಿನಿಂದಲೆ ಮಕ್ಕಳ ಮನಸಲ್ಲಿ ದಿನಪತ್ರಿಕೆ ಓದುವ ರೂಢಿ ಬೆಳೆದರೆ, ಅದು ಅವರ ಜೀವನ ಪರ್ಯಂತ ಇರಲಿದೆ. ಅದರ ಜತಗೆ ಮಕ್ಕಳಿಗೆ ಪ್ರಪಂಚದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದುರ ಶಿಕ್ಷಣವೂ ಶಾಲೆಯಲ್ಲಿ ದೊರೆತಂತಾಗುತ್ತದೆ.

ಕೈಕಾಲುಗಳೆರಡೂ ಇಲ್ಲದ ಹುಡುಗಿ ವಿಶ್ವ ಚಾಂಪಿಯನ್!

ಶೀತಲ್ ದೇವಿಗೆ ಕೈಗಳಿಲ್ಲ. ಪಾಯಲ್ ನಾಗ್‌ಗೆ ಕೈಕಾಲುಗಳೆರಡೂ ಇಲ್ಲ. ಆದರೆ ಅವರ ಸಾಧನೆಗೆ ಈ ಕೊರತೆಗಳು ಅಡ್ಡಿಯಾಗಲಿಲ್ಲ.

ನೇರ ನೋಟ
ದು.ಗು. ಲಕ್ಷ್ಮಣ
dugulakshman@yahoo.com



ಆಗದು ಎಂದು, ಕೈಲಾಗದು ಎಂದು/ ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ/ ಮನಸ್ಸೊಂದಿದ್ದರೆ ಮಾರ್ಗವು ಉಂಟು/ ಕೆಚ್ಚೆದೆ ಇರಬೇಕೆಂದು/ ಕೆಚ್ಚದೆ ಇರಬೇಕೆಂದೆಂದು

-ಇದು 1972ರಲ್ಲಿ ತೆರೆಕಂಡ ರಾಜ್‌ಕುಮಾರ್ ನಟನೆಯ 'ಬಂಗಾರದ ಮನುಷ್ಯ' ಚಲನಚಿತ್ರದ ಒಂದು ಜನಪ್ರಿಯ ಹಾಡು. ಆರ್.ಎನ್. ಜಯಗೋಪಾಲ್ ಬರೆದು, ಪಿ. ಬಿ. ಶ್ರೀನಿವಾಸ್ ಹಾಡಿದ ಆ ಹಾಡು ತುಂಬಾ ಅರ್ಥಗರ್ಭಿತ. ಎಂತಹ ಹೇಡಿ, ಅಳ್ಳೆದೆಯವರಿಗೂ ಸ್ಫೂರ್ತಿ, ಪ್ರೇರಣೆ ನೀಡಬಲ್ಲ ಹಾಡು. ಆದರೆ ಈ ಹಾಡನ್ನು ಕೇಳಿದ ಅದೆಷ್ಟು ಮಂದಿ ಸ್ಫೂರ್ತಿ ಪಡೆದರೋ ಗೊತ್ತಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವವೂ ವಿಶಿಷ್ಟ ಹಾಗೂ ವಿಚಿತ್ರ. ಶರೀರದ ಅವಯವಗಳೆಲ್ಲ ಚೆನ್ನಾಗಿ, ಗಟ್ಟಿಮುಟ್ಟಾಗಿದ್ದರೂ ಅಯ್ಯೋ ನನ್ನಿಂದೇನು ಸಾಧ್ಯ ಎಂದು ಕೊರಗಿ ಕೊರಗಿ ಬದುಕನ್ನು ವ್ಯರ್ಥಗೊಳಿಸಿಕೊಳ್ಳುವವರಿಗೇನೂ ಕೊರತೆಯಿಲ್ಲ. ಸ್ವ ಪ್ರಯತ್ನ ಮಾಡಬೇಕೆಂಬ ಹಠ ಇರದಿರುವುದೇ ಇದಕ್ಕೆ ಕಾರಣ. ಸ್ವ ಪ್ರಯತ್ನ, ಸಾಧನೆ, ಹಠ ಇದ್ದರೆ ಏನು ಬೇಕಾದರೂ ಮನುಷ್ಯ ಮಾಡಬಹುದು. ಸಂಸ್ಕೃತದ ಶ್ಲೋಕವೊಂದನ್ನು ಎಲ್ಲರೂ ಕೇಳಿಯೇ ಇರುತ್ತಾರೆ. ''ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಂ।'' ಪರಮಾನಂದ ಮಾಧವನ ಕೃಪೆಯೊಂದಿದ್ದರೆ ಮೂಕ ಮಾತನಾಡಬಲ್ಲ. ಕುಂಟ ಪರ್ವತವನ್ನೂ ಏರಬಲ್ಲ. ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದು ಈ ಶ್ಲೋಕದ ಭಾವಾರ್ಥ. ಪರಮಾತ್ಮನ ದಯೆ ಇರಲಿಲ್ಲ. ಹಾಗಾಗಿ ನಾನು ಜೀವನದಲ್ಲಿ ಏನನ್ನೂ ಸಾಧಿಸಲಾಗಲಿಲ್ಲ ಎಂಬುದು ಬಾಲಿಷದ ಮಾತಾಗುತ್ತದೆ. ಪರಮಾತ್ಮನ ದಯೆ ಕೂಡಿ ಬರಬೇಕಾದರೆ ವ್ಯಕ್ತಿಯ ಸ್ವ ಪ್ರಯತ್ನ, ಹಠಸಾಧನೆಯೂ ಬೇಕಾಗುತ್ತದೆ.

ಈ ಬಾರಿಯ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಪಾಯಲ್ ನಾಗ್ ಎಂಬ 18ರ ಹರೆಯದ ಯುವತಿ ಆರ್ಚರಿ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದ ವಿದ್ಯಮಾನ ನೆನಪಿಸಿಕೊಂಡರೆ ಮನುಷ್ಯನಿಗೆ ಅಸಾಧ್ಯವಾದುದು ಯಾವುದು ಇಲ್ಲ ಎನಿಸುತ್ತದೆ. ಅಥವಾ ಮನಸ್ಸು ಮಾಡಿದರೆ ಯಾವುದೂ ಕೂಡ ಅಸಾಧ್ಯವಲ್ಲ ಎನಿಸುವುದು ಸಹಜ. ಪ್ಯಾರಾ ಒಲಿಂಪಿಕ್ಸ್ ಎಂದರೇನೇ ಅಂಗವಿಕಲತೆಯಿರುವ ಕ್ರೀಡಾಪಟುಗಳಿಗಾಗಿ ಏರ್ಪಡಿಸಲಾಗುವ ಜಾಗತಿಕ ಮಟ್ಟದ ಕ್ರೀಡಾಕೂಟ. ಈ ಕೂಟದ ಆರ್ಚರಿ ವಿಭಾಗದಲ್ಲಿ ಪಾಯಲ್ ನಾಗ್ ಸ್ಪರ್ಧಿಸಿದ್ದಳು. ಭಾರತದವಳೇ ಆದ ಶೀತಲ್ ದೇವಿಯನ್ನು ಸೋಲಿಸಿ ವಿಶ್ವ ಚಾಂಪಿಯನ್ ಆದಳು.

ಇದಿಷ್ಟೇ ವಿವರಣೆಯಿಂದ ನಿಮಗೆ ಈ ಪ್ರಸಂಗದಲ್ಲಿ ಯಾವ ಕುತೂಹಲವೂ ಉಂಟಾಗದು ಎಂಬುದು ನನಗೂ ಗೊತ್ತು. ಅಸಲಿ ವಿಷಯವೇನೆಂದರೆ ಸ್ಪರ್ಧೆಯಲ್ಲಿ ಚಿನ್ನದ ಪ್ರಶಸ್ತಿ ಪಡೆದ ಪಾಯಲ್ ನಾಗ್‌ಗೆ ಎರಡೂ ಕೈಗಳಿಲ್ಲ. ಎರಡೂ ಕಾಲುಗಳಿಲ್ಲ. ಕೈ ಕಾಲು ನೆಟ್ಟಗಿದ್ದವರೇ ಬಿಲ್ಲನ್ನು ಹೆದೆ ಏರಿಸಿ ಗುರಿಗೆ ಬಾಣ ಬಿಡುವುದು ಸುಲಭವಲ್ಲ. ಇನ್ನು ಕೈಕಾಲು ಎರಡೂ ಇಲ್ಲದ ಪಾಯಲ್ ನಾಗ್ ಅದು ಹೇಗೆ ಗುರಿಯೆಡೆಗೆ ಬಾಣ ಬಿಟ್ಟು ವಿಶ್ವ ಪ್ರಶಸ್ತಿ ಪಡೆದಳು ಎಂಬ ಕುತೂಹಲ ಸಹಜ. ಅದೇ ಎಲ್ಲರಿಗೂ ಸ್ಫೂರ್ತಿ ತುಂಬುವ, ಬೆರಗಾಗುವ ಕಥೆ . ಈಕೆಯ ಕಥೆ ನಿಮಗೆ ಸ್ಫೂರ್ತಿ ತುಂಬದಿದ್ದರೆ ಬಹುಶಃ ಬೇರಾವುದೂ ಸ್ಫೂರ್ತಿ ತುಂಬಲಿಕ್ಕಿಲ್ಲ. ಸಾಧಿಸುವ ಛಲವಿದ್ದರೆ ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬುದನ್ನು ಭಾರತದ ಪ್ಯಾರಾ ಆರ್ಚರಿ ಪಟು, ಎರಡು ಕೈ, ಎರಡೂ ಕಾಲುಗಳಿಲ್ಲದ ಪಾಯಲ್ ನಾಗ್ ಸಾಧಿಸಿ ತೋರಿಸಿ ಜಗತ್ತನ್ನೇ ಬೆರಗಾಗಿಸಿದ್ದಾಳೆ.

ಒಡಿಶಾದ ಪಾಯಲ್ ನಾಗ್ ಹುಟ್ಟುವಾಗ ಸಾಮಾನ್ಯ ಮಕ್ಕಳಂತೆಯೇ ಹುಟ್ಟಿದಳು. ಹಾಗೆಯೇ ತಂದೆ ದಿನಗೂಲಿ ಗಾರೆ ಕೆಲಸದವರು. ಪಾಯಲ್‌ಗೆ ಎಂಟು ವರ್ಷವಿದ್ದಾಗ ಕಾಮಗಾರಿ ನಡೆಯುತ್ತಿದ್ದ ಮನೆಯೊಂದರ ಟೆರೆಸ್ ನಲ್ಲಿ ನಿಂತಿದ್ದ ನೀರಿನಲ್ಲಿ ಆಟವಾಡುತ್ತಿದ್ದಳು. ಆಗ ವಿದ್ಯುತ್ ಅವಘಡಕ್ಕೆ ತುತ್ತಾದ ಪಾಯಲ್ ಜೀವಕ್ಕೆ ಅಪಾಯ ಕಾದಿತ್ತು. ಆಕೆಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ವೈದ್ಯರು ಪಾಯಲ್‌ಳ ಎರಡೂ ಕೈ ಹಾಗೂ ಎರಡೂ ಕಾಲುಗಳನ್ನು ಕತ್ತರಿಸಿ ತೆಗೆದಿದ್ದರು. ಇದಾದ ಬಳಿಕ ಆಕೆಯ ತಂದೆ, ತಾಯಿ ಪಾಯಲ್‌ಳನ್ನು ಅನಾಥಾಶ್ರಮಕ್ಕೆ ಸೇರಿಸಿದ್ದರು.



ತನ್ನದಲ್ಲದ ತಪ್ಪಿಗೆ ತನ್ನೆರಡು ಕೈ, ಕಾಲುಗಳನ್ನು ಕಳೆದುಕೊಂಡು ನರಕಯಾತನೆ ಅನುಭವಿಸುತ್ತಿದ್ದ ಪಾಯಲ್‌ಗೆ ಸಾಂತ್ವನ ಹೇಳಿ, ಭರವಸೆ ಕೊಟ್ಟವರೇ ಕಡಿಮೆ. ನೆರೆಹೊರೆಯವರು, ಕುಟುಂಬಸ್ಥರು ಚುಚ್ಚು ಮಾತುಗಳನ್ನಾಡಿದ್ದೇ ಹೆಚ್ಚು. 'ಅವಳಾಗಿಯೇ ನಡೆದಾಡಲು, ತಿನ್ನಲು ಸಾಧ್ಯವಿಲ್ಲ. ಇದಕ್ಕಿಂತ ಅವಳಿಗೆ ವಿಷ ಕೊಡುವುದೇ ಉತ್ತಮ' ಎಂದು ಕುಟುಂಬಸ್ಥರು ಪಾಯಲ್ ಪೋಷಕರಿಗೆ ಹೇಳಿದ್ದರಂತೆ.

ಬಾಲಂಗೀರ್‌ನ ಅನಾಥಾಲಯದಲ್ಲಿದ್ದ ಪಾಯಲ್ ನಾಗ್ ಬಾಯಿಯಲ್ಲಿ ಕುಂಚ ತುರುಕಿಕೊಂಡು ಚಿತ್ರ ಬರೆಯತೊಡಗಿದಳು. ಯಾರನ್ನಾದರೂ ಒಮ್ಮೆ ನೋಡಿದರೆ ಅವರಂತೆಯೇ ತದ್ರೂಪ ಚಿತ್ರವನ್ನು ಬಾಯಿಯಿಂದಲೇ ಬಿಡಿಸ ತೊಡಗಿದಳು. ಇಂತಹುದೊಂದು ಚಿತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಯಿತು. ಅದನ್ನು ಗಮನಿಸಿದ ಜಮ್ಮುವಿನ ಮಾತಾ ವೈಷ್ಣೋದೇವಿ ಆರ್ಚರಿ ಅಕಾಡೆಮಿಯ ಕೋಚ್ ಕುಲ್ದೀಪ್ ವೆದ್ವಾನ್ ನೇರವಾಗಿ ಬಾಲಂಗೀರ್‌ಗೆ ಬಂದು ಪಾಯಲ್ ನಾಗ್‌ಳನ್ನು ಕರೆದುಕೊಂಡು ಹೋಗಿ, ತನ್ನ ಅಕಾಡೆಮಿಗೆ ಸೇರಿಸಿಕೊಂಡರು. ಆರ್ಚರಿ ವಿದ್ಯೆಯಲ್ಲಿ ಆಕೆಯನ್ನು ತರಬೇತುಗೊಳಿಸಲು ಸಿದ್ಧರಾದರು. ನಿಜ ಹೇಳಬೇಕೆಂದರೆ, ಪಾಯಲ್‌ಗೆ ಬಿಲ್ವಿದ್ಯೆ, ಬಾಣ ಬಿಡುವುದು ಎಂದರೇನೆಂಬುದೇ ಗೊತ್ತಿರಲಿಲ್ಲ. ಕೈಕಾಲುಗಳಿಲ್ಲದ ತಾನು ಈ ವಿದ್ಯೆ ಕಲಿಯಲು ಸಾಧ್ಯವೆ? ಎಂಬ ಅನುಮಾನವೂ ಕಾಡಿತ್ತು. ಆದರೆ ಕೋಚ್ ಕುಲ್ದೀಪ್ ಬಿಡಬೇಕಲ್ಲ. 'ನಿನ್ನಿಂದ ಇದು ಸಾಧ್ಯ. ಪ್ರಯತ್ನಿಸುತ್ತಾ ಹೋಗು. ಒಂದು ದಿನ ನೀನು ಚಾಂಪಿಯನ್ ಆಗ್ತೀಯಾ' ಎಂದು ಆತ್ಮವಿಶ್ವಾಸ ತುಂಬಿ ಹುರಿದುಂಬಿಸಿದರು. ಏಕೆಂದರೆ ಅದಕ್ಕೂ ಮೊದಲು ಎರಡೂ ಕೈಗಳಿಲ್ಲದ ಶೀತಲ್ ದೇವಿ ಎಂಬ 19ರ ಯುವತಿಯನ್ನು ಆರ್ಚರಿಯಲ್ಲಿ ತರಬೇತುಗೊಳಿಸಿ ಅವರು ಯಶಸ್ವಿಯಾಗಿದ್ದರು.

ಪಾಯಲ್ ನಾಗ್‌ಗೋಸ್ಕರ ಕೋಚ್ ಕುಲ್ದೀಪ್ ವಿಶೇಷ ಉಪಕರಣವೊಂದನ್ನು ಸಜ್ಜುಗೊಳಿಸಿದರು. ಆ ಉಪಕರಣ ಬಳಸಿ ಪಾಯಲ್ ಎದೆಯಿಂದ ಬಾಣಮೀಟಿ ಗುರಿಯೆಡೆಗೆ ಹೊಡೆಯುವಂತೆ ತರಬೇತಿ ನೀಡಿದರು. ಪಾಯಲ್ ನಾಗ್ ಸೋದರಿ ವರ್ಷ ನಾಗ್ ತನ್ನ ತಂಗಿಯ ಜೊತೆಗಿದ್ದು ಆಕೆಯ ದಿನನಿತ್ಯದ ಅವಶ್ಯಕತೆಗಳನ್ನು ನೋಡಿಕೊಳ್ಳುತ್ತಿದ್ದಳು. ಕುಲ್ದೀಪ್ ತುಂಬಿದ ಆತ್ಮವಿಶ್ವಾಸ, ಸ್ಫೂರ್ತಿ ಹುಸಿಯಾಗಲಿಲ್ಲ. ನೋಡ ನೋಡುತ್ತಿದ್ದಂತೆ ಪಾಯಲ್ ನಾಗ್ ಕೈಕಾಲುಗಳಿಲ್ಲದೆಯೇ ಆರ್ಚರಿಯಲ್ಲಿ ಅಚ್ಚರಿಯ ಸಾಧನೆ ಮಾಡತೊಡಗಿದಾಗ ಸಂತಸ ಪಡುವ ಸರದಿ ಕುಲ್ದೀಪ್‌ರದಾಗಿತ್ತು. ನಂತರದ ಕಥೆ ಈಗ ಇತಿಹಾಸ. ಬ್ಯಾಂಕಾಕ್‌ನಲ್ಲಿ ನಡೆದ ಚೊಚ್ಚಲ ಆವೃತ್ತಿಯ ವಿಶ್ವ ಪ್ಯಾರಾ ಆರ್ಚರಿ ಸೀರೀಸ್‌ನ ಮಹಿಳೆಯರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಪಾಯಲ್ ವಿಶ್ವ ಚಾಂಪಿಯನ್ ಪಟ್ಟಕ್ಕೇರಿದ್ದಾಳೆ. 139-136 ಅಂಕಗಳಿಂದ ಈ ಸಾಧನೆ ಮಾಡಿದ್ದಾಳೆ.

ಅರ್ಹತಾ ಸುತ್ತಿನಲ್ಲಿ ಶೀತಲ್‌ಗಿಂತ 20 ಅಂಕ ಕಡಿಮೆ (678 - 698) ಅಂಕಗಳಿಸಿದ್ದ ಪಾಯಲ್ ಫೈನಲ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಗೆದ್ದಿದ್ದಾಳೆ. ಇದೇ ಟೂರ್ನಿಯಲ್ಲಿ ಶೀತಲ್- ಪಾಯಲ್ ಜೊತೆಗೂಡಿ ಮಹಿಳಾ ತಂಡ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಅಂದ ಹಾಗೆ, 18ರ ಪಾಯಲ್‌ಗೆ ಇದು ಶೀತಲ್ ವಿರುದ್ಧ ಎರಡನೇ ಗೆಲುವು. 2025ರ ರಾಷ್ಟ್ರೀಯ ಟೂರ್ನಿಯಲ್ಲಿ ಶೀತಲ್ ರನ್ನು ಪಾಯಲ್ ಸೋಲಿಸಿದ್ದರು.

ಪಾಯಲ್ ಸೋಲಿಸಿದ ಶೀತಲ್‌ದೇವಿಯ ಬದುಕಿನ ಕಥೆಯೂ ಕಡಿಮೆ ರೋಚಕತೆಯದೇನಲ್ಲ. 2007ರಲ್ಲಿ ಜಮ್ಮು ವಲಯದ ಕಿಶ್ತ್‌ವಾರ್‌ನ ಲೋಯಿಧರ್ ಎಂಬ ಊರಿನಲ್ಲಿ ಜನಿಸಿದ ಶೀತಲ್ ದೇವಿಗೆ ಹುಟ್ಟುವಾಗಲೇ ಎರಡೂ ಕೈಗಳಿರಲಿಲ್ಲ. ಭಾರತೀಯ ಸೇನೆಯ 'ರಾಷ್ಟ್ರೀಯ ರೈಫಲ್ ಘಟಕ' ಶೀತಲ್ ದೇವಿಯ ಪ್ರತಿಭೆಯನ್ನು ಗುರುತಿಸಿ ಆಕೆಯ ವಿದ್ಯಾಭ್ಯಾಸಕ್ಕೆ ನೆರವು ನೀಡಿತು. ಬೆಂಗಳೂರಿನಲ್ಲಿ ಆಕೆಗೆ ವೈದ್ಯಕೀಯ ನೆರವು ಕಲ್ಪಿಸಲಾಯಿತು. ಜಮ್ಮುವಿಗೆ ಮರಳಿದ ಬಳಿಕ ಶ್ರೀಮಾತಾ ವೈಷ್ಣೋದೇವಿ ಶ್ರೈನ್ ಬೋರ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಆಕೆಯನ್ನು ಕೈಬೀಸಿ ಕರೆಯಿತು. ಅಭಿಲಾಷ್ ಚೌದರಿ ಮತ್ತು ಕುಲ್ದೀಪ್ ವೇದ್ವಾನ್ ಇಬ್ಬರು ಕೋಚ್‌ಗಳು ಆಕೆಗೆ ಧೈರ್ಯ ತುಂಬಿ ಆರ್ಚರಿಯಲ್ಲಿ ತರಬೇತಿ ನೀಡಿದರು. ಕೈಗಳಿಲ್ಲದ ಕ್ರೀಡಾಳುಗಳನ್ನು ಅದುವರೆಗೆ ಅವರು ತರಬೇತುಗೊಳಿಸಿರಲಿಲ್ಲ. 11 ತಿಂಗಳ ತರಬೇತಿಯ ಬಳಿಕ ಶೀತಲ್ ದೇವಿ 2022ರ ಏಷಿಯನ್ ಪ್ಯಾರಾ ಗೇಮ್ಸ್‌ನ ಮಹಿಳೆಯರ ಕಾಂಪೌಂಡ್ ಚೌ ಇವೆಂಟ್‌ನಲ್ಲಿ ಸ್ಪರ್ಧಿಸಿ ಭಾರತಕ್ಕೆ ಮೊತ್ತ ಮೊದಲು ಎರಡು ಚಿನ್ನದ ಪದಕ ಗೆದ್ದು ಕೊಟ್ಟಿದ್ದಳು. ಅನಂತರ ಮುಟ್ಟಿದ್ದೆಲ್ಲವೂ ಚಿನ್ನ. ಶೀತಲ್ ದೇವಿ ಹಿಂತಿರುಗಿ ನೋಡಿದ್ದೇ ಇಲ್ಲ. 2024ರಲ್ಲಿ ರಾಷ್ಟ್ರಪತಿಗಳಿಂದ ಅರ್ಜುನ ಅವಾರ್ಡ್ ಕೂಡ ಪಡೆದಳು. 2025ರಲ್ಲಿ ವರ್ಲ್ಡ್ ಪ್ಯಾರಾ ಆರ್ಚರಿ ಚಾಂಪಿಯನ್ ಶಿಪ್‌ಗೂ ಭಾಜನಳಾದಳು. ಇದೀಗ 2026ರಲ್ಲಿ ತನ್ನದೇ ದೇಶದ ಕೈಕಾಲುಗಳೆರಡು ಇಲ್ಲದ ಪಾಯಲ್ ನಾಗ್ ವಿರುದ್ಧ ಸೋತರೂ ಶೀತಲ್ ದೇವಿಗೆ ಅದೇನೋ ಸಂತಸ, ಹೆಮ್ಮೆ. ಕೈಕಾಲುಗಳೆರಡೂ ಇಲ್ಲದ ಪಾಯಲ್ ನಾಗ್ ಸಾಧನೆ ಬಗ್ಗೆ ಅತೀವ ಅಭಿಮಾನ. ಆಕೆ ನನ್ನ ನಿಜವಾದ ಸೋದರಿ ಎನ್ನುತ್ತಾಳೆ ಶೀತಲ್ ದೇವಿ. ಶೀತಲ್ ದೇವಿಗೆ ಕೈಗಳಿಲ್ಲ. ಪಾಯಲ್ ನಾಗ್‌ಗೆ ಕೈಕಾಲುಗಳೆರಡೂ ಇಲ್ಲ. ಆದರೆ ಸಾಧನೆಗೆ ಈ ಕೊರತೆಗಳು ಅಡ್ಡಿಯಾಗಲಿಲ್ಲ. ಆಕೆಗೆ ವಿಷ ಕೊಟ್ಟು ಬಿಡಿ ಎಂದು ಛೇಡಿಸಿದ ಕೆಲವರಿಗೆ ಈಗ ಆಕೆಯ ಸಾಧನೆ ನೋಡಿ ಹೇಗನಿಸಿರಬಹುದು?

ಹರೆಯದವರಲ್ಲಿ ಖಿನ್ನತೆ (Adolescent Depression)

ತಾರುಣ್ಯ ತಲ್ಲಣ
ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ದೊಡ್ಡವರು ಮಾತ್ರ ಖಿನ್ನತೆಯಿಂದ ಬಳಲುತ್ತಾರೆ. ಹರೆಯದವರಲ್ಲಿ ಖಿನ್ನತೆ ಕಾಣಿಸುವುದಿಲ್ಲ ಎಂಬ ಕಾಲವೊಂದಿತ್ತು. ಮನೋವೈದ್ಯಕೀಯದಲ್ಲಿ ಅವಿಷ್ಕಾರಗಳನ್ನು ಕೈಗೊಂಡಾಗ ಮಕ್ಕಳು ಮತ್ತು ಹರೆಯದವರೂ ಖಿನ್ನತೆಯಿಂದ ಬಳಲುತ್ತಾರೆ, ಆದರೆ ಅದರ ಸ್ವರೂಪ ಸ್ವಲ್ಪ ಬೇರೆಯಾಗಿರುತ್ತದೆ ಎಂಬುದು ತಿಳಿದುಬಂತು. ಹರೆಯದವರಲ್ಲಿ ಉಂಟಾಗುವ ಖಿನ್ನತೆಯಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಸಾಮಾಜಿಕ ಸಂಬಂಧಗಳಲ್ಲಿ ವ್ಯತ್ಯಾಸವಾಗುತ್ತದೆ. ಅವರ ನಡವಳಿಕೆಯಲ್ಲಿ ವ್ಯತ್ಯಾಸಗಳುಂಟಾಗುತ್ತವೆ. ಇದರಿಂದ ಸಾಧನೆಯಲ್ಲಿ ಹಿಂದುಳಿದು, ಅವರ ಭವಿಷ್ಯವೇ ಕುಂಠಿತವಾಗುತ್ತದೆ. ಅದೇ ಕಾರಣದಿಂದ ಮಕ್ಕಳ ಸಹಜ ನಡವಳಿಕೆ ಗಳಲ್ಲಿ ವ್ಯತ್ಯಾಸಗಳು ಕಂಡಾಗ ಪೋಷಕರು ಅದನ್ನು ಗಮನಿಸಿ, ಸಾಮಾಜಿಕ ಪ್ರತಿಷ್ಠೆಯನ್ನು ಬದಿಗಿಟ್ಟು ಆ ಕೂಡಲೇ ಕ್ರಮ ತೆಗೆದುಕೊಂಡರೆ ಅಂಥವರ ಭವಿಷ್ಯವು ಹಸನಾಗುತ್ತದೆ.

ಅಂಕಿ ಅಂಶಗಳ ಪ್ರಕಾರ ಶೇಕಡಾ ಮೂರರಿಂದ ನಾಲ್ಕು ಮಂದಿ ಹರೆಯದವರು ಖಿನ್ನತೆಗೊಳಗಾಗುತ್ತಾರೆ. ಹರೆಯದವರಲ್ಲಿ ಕಾಣುವ ಖಿನ್ನತೆಯು ದೊಡ್ಡವರ ಖಿನ್ನತೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಖಿನ್ನತೆಯು ಅವರ ಯೋಚನೆಗಳನ್ನು, ಭಾವನೆಗಳನ್ನು, ನಡವಳಿಕೆಗಳನ್ನು, ಕಲಿಕೆ, ಪಠ್ಯೇತರ ಚಟುವಟಿಕೆಗಳು, ದೈಹಿಕ ಲಕ್ಷಣಗಳು, ದೈನಂದಿನ ಚಟುವಟಿಕೆಗಳು ಹೀಗೆ ಜೀವನದ ಎಲ್ಲ ಆಯಾಮಗಳನ್ನು ವ್ಯತ್ಯಾಸಗೊಳಿಸುತ್ತದೆ. ಮೊದಲು ಸಮಾಧಾನದಿಂದಿರುತ್ತಿದ್ದವರು ಒಮ್ಮೆಲೆ ಕಿರಿಕಿರಿ, ಅಸಹನೆ ತೋರಿಸಬಹುದು.



 ತಮ್ಮನ್ನು ಬೇರೆಯವರು ಕೀಳಾಗಿ ಕಾಣುತ್ತಾರೆ ಎಂದು ತಪ್ಪಾಗಿ ಭಾವಿಸಬಹುದು. ಓದಿನಲ್ಲಿ ಏಕಾಗ್ರತೆಯ ಕೊರತೆ, ಪಾಠಗಳ ಕುರಿತು ಅಸಹನೆ ತೋರಿಸಬಹುದು. ಓದುವುದನ್ನು ವಿನಾಕಾರಣ ಮುಂದೆ ಹಾಕಬಹುದು. ಎಲ್ಲದರಲ್ಲೂ ನಿರಾಸಕ್ತಿ. ಮೊದಲಿಗೆ ಶಾಲೆಯ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ವ್ಯಕ್ತಿಯು ಆಸಕ್ತಿ ಕಳೆದುಕೊಂಡು ಅವುಗಳಿಂದ ದೂರವಿರಲು ಪ್ರಾರಂಭಿಸುತ್ತಾನೆ. ಗೆಳೆಯರೊಂದಿಗೆ ಬೆರೆಯುತ್ತಿದ್ದ ವ್ಯಕ್ತಿ ಈಗ ಅವರಿಂದ ದೂರವಿದ್ದು, ಯಾವಾಗಲೂ ಒಂಟಿಯಾಗಿರಲು ಬಯಸುತ್ತಾನೆ. ಕೆಲವೊಮ್ಮೆ ಕೋಪಗೊಳ್ಳಬಹುದು. ನಕಾರಾತ್ಮಕ ಭಾವನೆಗಳೇ ಮನಸ್ಸಿನಲ್ಲಿ ತುಂಬಿ ತುಳುಕಾಡುತ್ತಿರುತ್ತವೆ. ಹಸಿವಿಲ್ಲದಿರಬಹುದು, ನಿದ್ದೆಯಲ್ಲಿ ವ್ಯತ್ಯಾಸವಾಗುತ್ತದೆ. ಕೆಲವರು ರಾತ್ರಿ ನಿದ್ದೆ ಮಾಡುವುದಿಲ್ಲ, ಮತ್ತೆ ಕೆಲವರು ದಿನವಿಡೀ ನಿದ್ದೆ ಬರದಿದ್ದರೂ, ಜಡಭರಿತವಾಗಿ ಹಾಸಿಗೆಯ ಮೇಲೆ ಬಿದ್ದುಕೊಳ್ಳುತ್ತಾರೆ. ಹಸಿವೆ ಇಲ್ಲ ಎಂದು ಊಟ ಮಾಡದೇ ಇರಬಹುದು. ಇದರಿಂದ ದೇಹದ ತೂಕ ಇಳಿದು ದೇಹ ಸಣಕಲಾಗಬಹುದು. ಖಿನ್ನತೆಯು ತೀವ್ರವಾದರೆ, ತಾನು ನಿರುಪಯೋಗಿ, ಅಸಹಾಯಕ, ತನ್ನನ್ನು ಯಾರೂ ಗುರುತಿಸುವುದಿಲ್ಲ ಎಂಬ ನಕಾರಾತ್ಮಕ ಭಾವನೆಗಳಿಂದ ನರಳುತ್ತಾನೆ. ಖಿನ್ನತೆಯು ತೀವ್ರವಾಗಿ ನಕಾರಾತ್ಮಕ ಭಾವನೆಗಳೇ ಮನಸ್ಸನ್ನು ಆವರಿಸಿದಾಗ, ಕೊನೆಯ ಹಂತವೆಂಬಂತೆ ಆತ್ಮಹತ್ಯೆಗೆ ಪ್ರಯತ್ನಿಸಬಹುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು.

ಕೆಲವರಿಗೆ ವಿನಾಕಾರಣ ಮೈಕೈ ನೋವು, ತಲೆ ನೋವು, ಮೈ ಜುಂ ಎನ್ನುವುದು, ಕೈಕಾಲು ಸೋಲು, ಸುಸ್ತು, ಹಲವು ವಿಧದ ಶಾರೀರಿಕ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇದಕ್ಕೆ ಮಾಸ್ಕಡ್ ಡಿಪ್ರೆಷನ್ (Masked Depression) ಎನ್ನುತ್ತಾರೆ.

ಹರೆಯದವರ ಖಿನ್ನತೆಗೆ ಕಾರಣಗಳು ಹಲವು. ವಂಶಾವಳಿಯನ್ನು ನೋಡಿದಾಗ ಖಿನ್ನತೆಗೊಳಗಾದವರ ಕುಟುಂಬಗಳಲ್ಲಿ ತಂದೆ-ತಾಯಿ ಇಬ್ಬರೂ ಖಿನ್ನತೆಯಿಂದ ನರಳುತ್ತಿದ್ದರೆ, ಅಂತಹ ಕುಟುಂಬಗಳಲ್ಲಿ ಹರೆಯದವರು ಖಿನ್ನತೆಗೊಳಗಾಗುವುದು ಹೆಚ್ಚು. ಮಿದುಳಿನಲ್ಲಿರುವ 5 ಹೆಚ್.ಟಿ. ಮತ್ತು ನಾರ್ ಅಡ್ರಿನಾಲಿನ್ ಎಂಬ ನರವಾಹಕಗಳ ನ್ಯೂನತೆಯು ಹರೆಯದವರ ಖಿನ್ನತೆಗೆ ಒಂದು ಮುಖ್ಯ ಕಾರಣ. ಕಲುಷಿತವಾದ ಕೌಟುಂಬಿಕ ವಾತಾವರಣದಿಂದ ಹರೆಯದವರು ಖಿನ್ನತೆಗೆ ಒಳಗಾಗುವುದು ಹೆಚ್ಚು, ಕುಟುಂಬದ ಸದಸ್ಯರ ನಡುವೆ ಆತ್ಮೀಯತೆಯ ಕೊರತೆ, ತಿರಸ್ಕಾರ ಮನೋಭಾವ, ದಾಂಪತ್ಯ ಸಮಸ್ಯೆಗಳು, ವಿವಾಹ ವಿಚ್ಛೇದನ, ಕೌಟುಂಬಿಕ ಹಿಂಸೆ, ಪೋಷಕರ ಅತಿಯಾದ ಟೀಕೆ ಟಿಪ್ಪಣಿಗಳು, ಮಿತಿಇಲ್ಲದ ನಿರೀಕ್ಷೆ, ಸಹಪಾಠಿಗಳೊಂದಿಗೆ ಹೋಲಿಸಿ ಪದೇ ಪದೇ ಟೀಕೆ ಮಾಡುವುದು ಮತ್ತು ಭೇದಭಾವ ಎಣಿಸುವ ಸದಸ್ಯರು ಇವೂ ಖಿನ್ನತೆಗೆ ಕಾರಣ. ಸಾಮಾಜಿಕವಾಗಿ ಗೆಳೆಯರ ಟೀಕೆ, ಟಿಪ್ಪಣಿಗಳು, ಕೆಟ್ಟ ಬೈಗುಳಗಳು, ಮಾಡುವ ದೂಷಣೆಗಳು ಖಿನ್ನತೆಯನ್ನುಂಟು ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಸ್ನೇಹಿತರು ತಮ್ಮ ಗುಂಪಿನಿಂದ ವ್ಯಕ್ತಿಯನ್ನು ದೂರ ಮಾಡಿದಾಗ ಖಿನ್ನತೆ ಉಂಟಾಗಬಹುದು.

ಪರೀಕ್ಷೆಯಲ್ಲಿ ವಿಫಲತೆ, ನಿರೀಕ್ಷಿತ ಫಲಿತಾಂಶ ಬಾರದೇ ಇರುವುದು, ಮತ್ತು ಇದರ ಕುರಿತು ಇತರರ ಅವಹೇಳನದ ಮಾತುಗಳು ಹರೆಯದವರು ಖಿನ್ನತೆಗೊಳಗಾಗಲು ಕಾರಣ. ಕೀಳರಿಮೆ, ಚಿಕ್ಕ ಪುಟ್ಟದಕ್ಕೂ ಭಾವನೆಗಳ ಏರಿಳಿತಕ್ಕೊಳಗಾಗುವುದು, ತಾನು ಒಂಟಿ, ತಾನು ಅಸಹಾಯಕ ತನ್ನನ್ನು ಯಾರೂ ಕೇಳುವುದಿಲ್ಲ, ಎಲ್ಲರೂ ತನ್ನನ್ನು ಅಲಕ್ಷ್ಯ ಮಾಡುತ್ತಾರೆ, ತಾನು ದಡ್ಡ, ತಾನು ಬಲಹೀನ, ಆತ್ಮವಿಶ್ವಾಸದ ಕೊರತೆ ಹೀಗೆ ನಕಾರಾತ್ಮಕ ಭಾವನೆಗಳು ಮನಸ್ಸಿನಲ್ಲಿ ತುಂಬಿಕೊಂಡಾಗ ಖಿನ್ನತೆಯುಂಟಾಗುವ ಸಂಭವ ಹೆಚ್ಚು, ಕೆಲವು ದೀರ್ಘಾವಧಿಯ ಕಾಯಿಲೆಗಳು, ಉದಾಹರಣೆಗೆ ಅಪಸ್ಮಾರ, ದಮ್ಮು ಕಾಯಿಲೆ, ಕಲಿಕಾ ತೊಂದರೆಗಳು ಇವು ಹರೆಯದವರಲ್ಲಿ ತಮ್ಮ ಕುರಿತು ಕೀಳರಿಮೆ ಉಂಟುಮಾಡಿ, ಅದು ಖಿನ್ನತೆಗೆ ಕಾರಣವಾಗುತ್ತದೆ. ಪೋಷಕರಿಂದ ಪ್ರೋತ್ಸಾಹಿಕ ನುಡಿಗಳು, ಆತ್ಮೀಯ ಮಾರ್ಗದರ್ಶನ ದೊರೆಯದಿದ್ದಾಗ ಮನಸ್ಸು ಖಿನ್ನತೆಗೊಳಗಾಗುತ್ತದೆ.

ಪ್ರಚಲಿತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಾದ ವಾಟ್ಸ್ಯಾಪ್, ಫೇಸ್‌ಬುಕ್, ಯೂಟ್ಯೂಬ್, ಇನ್ಸ್ಟಾಗ್ರಾಂ, ಟ್ವಿಟರ್ ಇತ್ಯಾದಿ, ಇವು ಹರೆಯದವರ ಮನಸ್ಸಿನ ಮೇಲೆ ಉಂಟುಮಾಡುವ ನಕಾರಾತ್ಮಕ ಭಾವನೆಗಳಿಂದ ಖಿನ್ನತೆ ಉಂಟಾಗಬಹುದು. ಸಾಮಾಜಿಕ ಜಾಲತಾಣಗಳ ಮೂಲಕ ಗೆಳೆಯರು ಪದೇ ಪದೇ ಬೈಗುಳದ ಸಂದೇಶ ಕಳಿಸುವುದು, ಮನಸ್ಸನ್ನು ಘಾಸಿಗೊಳಿಸುವ ದೃಶ್ಯಗಳನ್ನು ಪೋಸ್ಟ್ ಮಾಡುವುದು ಇವು ಹರೆಯದವರ ಸೂಕ್ಷ್ಮ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸಿ ಖಿನ್ನತೆಗೆ ಕಾರಣವಾಗಬಹುದು. ಪೋಷಕರ ಅತಿಯಾದ ನಿರೀಕ್ಷೆ, ತೀವ್ರತರದ ಟೀಕೆ ಟಿಪ್ಪಣಿಗಳು, ಇತರರೊಂದಿಗೆ ಹೋಲಿಸಿ ಟೀಕೆ ಮಾಡುವುದರಿಂದ ಖಿನ್ನತೆ ಉಂಟಾಗಬಹುದು. ಅತಿಯಾದ ಆತಂಕ, ಭಯದಿಂದ ಬಳಲುವ ಹರೆಯದವರಲ್ಲಿ ಖಿನ್ನತೆ ಉಂಟಾಗುವ ಸಂದರ್ಭಗಳು ಹೆಚ್ಚು.

ಚಿಕಿತ್ಸೆ:

ಹರೆಯದವರ ಮನಸ್ಥಿತಿ ತುಂಬಾ ಸೂಕ್ಷ್ಮವಾದದ್ದು. ಹರೆಯದವರ ಕುರಿತು ಪೋಷಕರಿಗಿರುವ ನಕಾರಾತ್ಮಕ ಧೋರಣೆಯೂ ಅಷ್ಟೇ ಅಪಾಯಕರ. ಒಂದು ಕಡೆ ಮಾನಸಿಕ ಕಾಯಿಲೆ ಕುರಿತು ಇರುವ ಅಜ್ಞಾನ, ತಮ್ಮ ಮಗು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾನೆಂದು ಹೇಳಿದರೆ ಅದರಿಂದ ಅವರ ಭವಿಷ್ಯ ಹಾಳಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ಖಿನ್ನತೆ ಇದೆ ಎಂಬುದು ಇತರರಿಗೆ ತಿಳಿದರೆ, ಅದು ಒಂದು ಸಾಮಾಜಿಕ ಅವಮಾನ ಎಂಬದು ಚಿಕಿತ್ಸೆಗೆ ಅಡ್ಡಬರುವ ಕೆಲವು ಅಂಶಗಳು. ಹರೆಯದವರು, 'ನನಗೆ ಬೇಜಾರು', 'ಓದಲಿಕ್ಕೆ ಆಸಕ್ತಿ ಇಲ್ಲ', ನನಗೆ ಕೆಲವೊಮ್ಮೆ ಜೀವನವೇ ಬೇಡ ಅನ್ಸುತ್ತೆ, ನನಗೆ ಯಾವ ಗೆಳೆಯರೂ ಬೇಡ, ಒಂಟಿಯಾಗಿ ರೂಮಲ್ಲೇ ಇರೋಣ ಅನಿಸುತ್ತೆ ಎಂದಾಗ ಪೋಷಕರು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಬದಲಾಗಿ ಯಾಕೆ ಹಾಗೆಲ್ಲಾ ಹೇಳ್ತೀಯಾ, ಹಾಗೆಲ್ಲಾ ಮಾತನಾಡಬಾರದು. ಸುಮ್ಮನೇ ಓದು ಹೋಗು ಎಂದು ಹೇಳುವ ಪೋಷಕರೇ ಹೆಚ್ಚು. ತಮ್ಮ ಮಗುವಿನ ನಡವಳಿಕೆಯಲ್ಲಿ ಇತ್ತೀಚೆಗೆ ವ್ಯತ್ಯಾಸವಾಗಿದೆ, ಮಗು ಹೇಳುವುದರಲ್ಲ ನಿಜವಿರಬಹುದು ಎಂದು ಗಮನಿಸಿ, ಅದಕ್ಕೆ ಆಪ್ತ ಸಲಹೆಯನ್ನು ನೀಡಿ, ಅವಶ್ಯವಿದ್ದಲ್ಲಿ ಚಿಕಿತ್ಸೆ ಕೊಡಿಸೋಣ ಎಂದು ಭಾವಿಸುವ ಪೋಷಕರು ಬೆರಳೆಣಿಕೆಯಷ್ಟು ಎನ್ನಬಹುದು. ಅದಕ್ಕಾಗಿ ಖಿನ್ನತೆಗೆ ಚಿಕಿತ್ಸೆಯನ್ನು ತಿಳಿಸುವ ಮೊದಲು ಈ ಪೀಠಿಕೆ.

ಹರೆಯದವರನ್ನು ಚಿಕಿತ್ಸೆಗಾಗಿ ಕರೆತಂದಾಗ ಖಿನ್ನತೆಗೆ ಕಾರಣವಾದ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಮೊದಲ ಹೆಜ್ಜೆ. ಚಿಕಿತ್ಸೆಯಲ್ಲಿ ಪೋಷಕರ ಪಾಲು ಬಹುಮುಖ್ಯ ಎಂಬುದನ್ನು ಅವರಿಗೆ ಮನದಟ್ಟು ಮಾಡಬೇಕು. ಖಿನ್ನತೆಯಿಂದ ನರಳುತ್ತಿರುವ ಹರೆಯದವರು ನಕಾರಾತ್ಮಕ ಯೋಚನೆಗಳಿಂದ ನರಳುತ್ತಿರುತ್ತಾರೆ. ಇದು ಒಂದು ದೊಡ್ಡ ಕಾಯಿಲೆ ಅಲ್ಲ, ಸರಿಯಾದ ಚಿಕಿತ್ಸೆ ಪಡೆದರೆ, ಎಲ್ಲರಂತೆ ನೀನೂ ಚೆನ್ನಾಗಿ ಓದಲು ಸಾಧ್ಯ ಎಂಬುದನ್ನು ರೋಗಿಗೆ ಮನದಟ್ಟು ಮಾಡಿ, ರೋಗಿಯ ಮನಸ್ಸನ್ನು ಗೆಲ್ಲಬೇಕು. ನಂತರದಲ್ಲಿ ಮುಖ್ಯವಾಗಿ ಆಪ್ತ ಸಮಾಲೋಚನೆ ಕೈಗೊಳ್ಳಬೇಕು. ಆಪ್ತ ಸಮಾಲೋಚನೆಯು ರೋಗಿಗೆ ಮತ್ತು ಪೋಷಕರಿಗೆ ಇಬ್ಬರಿಗೂ ಅವಶ್ಯ. ಖಿನ್ನತೆಯು ತೀವ್ರವಾಗಿದ್ದಲ್ಲಿ ಕೂಡಲೆ ಆಪ್ತಸಮಾಲೋಚನೆಯೊಂದಿಗೆ ಮನೋವೈದ್ಯರಿಂದ ಔಷಧ ಚಿಕಿತ್ಸೆಯು ಅನಿವಾರ್ಯ.

ಬೋರ್ಡ್ ಪರೀಕ್ಷೆಗಳು: ಅಂದು-ಇಂದು!

'ಒಳ್ಳೆಯ ವಿದ್ಯಾ ಸಂಸ್ಥೆಯ ಎಲ್ಲಿ ಹುಡುಕಲಿ?' ಎಂದು ಯಾರಾದರೂ ಕೇಳಿದರೆ, 'ಎಪ್ರಿಲ್-ಮೇ ತಿಂಗಳುಗಳಲ್ಲಿ ಪ್ರದರ್ಶಿಸಲಾಗುವ ಬ್ಯಾನರ್‌ಗಳಲ್ಲಿ ಹುಡುಕು' ಎನ್ನಬಹುದು.

ವಾರದ ವರಸೆ
ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಈ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳನ್ನು ಸಾಮಾನ್ಯವಾಗಿ 'ಬೋರ್ಡ್ ಪರೀಕ್ಷೆ' ಎಂದು ಕರೆಯುವುದು ರೂಢಿ. ಈ ಪರೀಕ್ಷೆಗಳನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸರ್ಕಾರಿ ಬೋರ್ಡ್‌ಗಳಾದ ಎಸ್ಎಸ್ಎಲ್‌ಸಿ ಬೋರ್ಡ್, ಪಿಯುಸಿ ಬೋರ್ಡ್, ಸಿಬಿಎಸ್‌ಇ ಬೋರ್ಡ್‌ಗಳ ಮೂಲಕ ಏಕರೂಪ ಹಾಗೂ ಏಕಕಾಲದಲ್ಲಿ ನಡೆಸುವುದರಿಂದ ಅವುಗಳನ್ನು 'ಬೋರ್ಡ್ ಪರೀಕ್ಷೆ' ಎಂದು ಕರೆಯಲಾಗುತ್ತದೆ ಇರಬೇಕು. ಆದರೆ ಸದ್ಯದ ಸನ್ನಿವೇಶದಲ್ಲಿ ಅದನ್ನು ಬೋರ್ಡ್ ಪರೀಕ್ಷೆ ಎಂದು ಕರೆಯುವುದು ಸ್ವಲ್ಪ ಕಡಿಮೆಯೇ ಆದರೂ, ಅದೀಗ 'ಬೋರ್ಡ್ ಪರೀಕ್ಷೆ'ಯೇ ಹೌದೇನೋ ಎಂಬ ಅಭಿಪ್ರಾಯ ಬಲವಾಗಲು ಬೇರೆ ಬೇರೆ ಕಾರಣಗಳು ಗೋಚರಿಸುತ್ತವೆ. ಅದರಲ್ಲೊಂದು ಈ ಪರೀಕ್ಷೆಗಳ ಫಲಿತಾಂಶ ಪ್ರಕಟವಾದ ತಕ್ಷಣ ಭಾರೀ ಸಂಖ್ಯೆಯಲ್ಲಿ ಕಾಣಿಸುವ ಬೋರ್ಡ್‌ಗಳು - ಅದೇ ಬ್ಯಾನರ್, ಹೋರ್ಡಿಂಗ್ ಇತ್ಯಾದಿಗಳು! ಹಾಗೆ ನೋಡಿದರೆ ಓರ್ವ ವಿದ್ಯಾರ್ಥಿಯ ಸಾಧನೆ, ವಿದ್ಯಾ ಸಂಸ್ಥೆಯ ಹೆಚ್ಚುಗಾರಿಕೆಗಳೆಲ್ಲವೂ ನಿರ್ಣಯವಾಗುವುದು ಈ ಬೋರ್ಡ್‌ಗಳಿಂದಲೇ ಇರಬೇಕು ಎಂದೆನಿಸುತ್ತದೆ. ಫಲಿತಾಂಶ, ಪರ್ಸೆಂಟೇಜ್, ರ್‍ಯಾಂಕ್ ಹೋಲ್ಡರ್, ಬೇರೆ ಬೇರೆ ಶ್ರೇಣಿಗಳಲ್ಲಿ ಉತ್ತೀರ್ಣರಾದವರು, ಸಂಸ್ಥೆಯ ವೈಶಿಷ್ಟ್ಯಗಳು ಇನ್ನೊಂದು ಮತ್ತೊಂದು ಎಲ್ಲವೂ ಈ ಬೋರ್ಡ್‌ಗಳಲ್ಲಿ ಅಚ್ಚಾಗಿ, ನೋಡುವವರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಪ್ರದರ್ಶಿಸಲಾಗುತ್ತದೆ. ಒಟ್ಟಾರೆ ಈ ಮೂಲಕವಾದರೂ, ತಮ್ಮ ಮಕ್ಕಳನ್ನು ಸೇರಿಸಲು ಒಂದೊಳ್ಳೆಯ ಶಾಲೆಯನ್ನು ಹುಡುಕುತ್ತಿರುವವರ ಮನಸ್ಸಿನಲ್ಲಿ ಇದೇ ಶಾಲೆ 'ಬಹುತ್ ಅಚ್ಛಾ' ಎಂದೆನಿಸುವಂತೆ ಮಾಡುವುದೇ ಈ ಬಹು ಬ್ಯಾನರ್‌ಗಳನ್ನು ಎಲ್ಲೆಂದರಲ್ಲಿ ಹಾಕಿಸುವುದರ ಮೂಲ ಉದ್ದೇಶ.

ಹಾಗೆನೋಡಿದರೆ ಮೊದಲಿನಿಂದಲೂ ಶಾಲೆ, ವಿದ್ಯಾಭ್ಯಾಸ, ವಿದ್ಯಾರ್ಥಿಗಳು, ಪರೀಕ್ಷೆ ಹಾಗೂ ಫಲಿತಾಂಶಗಳು ಎಂದರೆ ಅದು ಬೋರ್ಡ್‌ನ್ನೇ ಅವಲಂಭಿಸಿತ್ತು. ಆದರೆ ಅದು ತರಗತಿ ಕೋಣೆಯೊಳಗಿರುವ 'ಬ್ಲ್ಯಾಕ್ ಬೋರ್ಡ್' ಆಗಿತ್ತು. ತರಗತಿಯಲ್ಲಿ ಕೀಟಲೆ ಮಾಡಿದವರು, ಮಾತನಾಡಿದವರು, ಮನೆಗೆಲಸ ಮಾಡದವರು ಇನ್ನಿತರ ಹೆಸರುಗಳು, ಕ್ಲಾಸ್ ಲೀಡರ್‌ನಿಂದ ಪಟ್ಟಿಯ ರೂಪದಲ್ಲಿ ಈ ಬೋರ್ಡ್‌ಗಳ ಮೇಲೆ ಮೂಡುತ್ತಿದ್ದವು.

ಅಯ್ಯೋ ಆ ಬೋರ್ಡ್ ಮೇಲೆ ಯಾರದ್ದಾದರೂ ಹೆಸರು ಹೀಗೆ ಈ ಮೇಲಿನ ಕಾರಣಗಳಿಗೆ ಬರೆಯಲ್ಪಟ್ಟರೆ ಆಗ ಹೆದರುವ ಬೆದರುವ ಸಾಧ್ಯತೆಯೂ ಇತ್ತು. ಪದೇ ಪದೇ ಯಾರ ಹೆಸರು ಅಲ್ಲಿ ಕಾಣಿಸಿಕೊಳ್ಳುತ್ತದೋ ಅಂಥವರ ಪೋಷಕರನ್ನು ಕರೆಸುತ್ತಿದ್ದರೂ ಕೂಡಾ. ಹೀಗಾಗಿ ಆ ಬೋರ್ಡ್ ಮೇಲೆ ಹೆಸರು ಬರದಂತೆ, ಶಾಲೆಗೆ ಹೋಗಿ ಬರಬೇಕು ಎಂದು ಮಕ್ಕಳೂ, ಮಕ್ಕಳ ಹೆತ್ತವರೂ, ಶಿಕ್ಷಕರೂ ನಿರೀಕ್ಷಿಸುತ್ತಿದ್ದರು. ಹಾಗೆ ಮಾಡಿದರೆ ಅವರು ಒಳ್ಳೆಯ ಮಕ್ಕಳು ಎಂದೂ ಕರೆಸಿಕೊಳ್ಳುತ್ತಿದ್ದರು. ಆದರೆ ಇಂದಿನ ಪೋಷಕರ, ಮಕ್ಕಳ, ಶಿಕ್ಷಕರ ನಿರೀಕ್ಷೆಗಳು ಬದಲಾಗಿದ್ದು ಅವರೆಲ್ಲ ಈಗ ಹೆಸರುಗಳು ಈ ಬ್ಯಾನರ್/ಬೋರ್ಡ್‌ಗಳಲ್ಲಿ ಫೋಟೋ ಸಮೇತ ಕಾಣಿಸಿಕೊಳ್ಳಬೇಕು ಎಂದು ಬಯಸುತ್ತಾರೆ. ಹಾಗಾದರೆ ಅಂಥವರು 'ದಿ ಬೆಸ್ಟ್ ಸ್ಟೂಡೆಂಟ್' ಎಂದೆನಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಜಾಸ್ತಿ ಜಾಸ್ತಿ ಬ್ಯಾನರ್ ಹಾಕಿರುವ, ಆ ಬ್ಯಾನರ್‌ಗಳಲ್ಲಿ ಹೆಚ್ಚೆಚ್ಚು ವಿದ್ಯಾರ್ಥಿಗಳ ಫೋಟೋ ಹೆಸರು ಸೇರಿಸಲ್ಪಟ್ಟಿದ್ದರೆ ಅಂಥ ವಿದ್ಯಾಸಂಸ್ಥೆಗಳು ಜನಪ್ರಿಯ, ಅತ್ಯುತ್ತಮ ಎಂದೆಲ್ಲ ಪರಿಗಣಿಸಲ್ಪಡುವ ಸಾಧ್ಯತೆ ನಿಚ್ಚಳವಾಗಿರುವುದರಿಂದ ಆ ಸಂಖ್ಯೆಯನ್ನು ಹೆಚ್ಚಿಸಲು ಒಂದಿಲ್ಲೊಂದು ನೆಪಗಳನ್ನು ಹುಡುಕಿ, ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರೆ ಅಚ್ಚರಿ ಏನಿಲ್ಲ.

'ಒಳ್ಳೆಯ ವಿದ್ಯಾ ಸಂಸ್ಥೆಯ ಎಲ್ಲಿ ಹುಡುಕಲಿ?' ಎಂದು ಯಾರಾದರೂ ಕೇಳಿದರೆ, 'ಎಪ್ರಿಲ್-ಮೇ ತಿಂಗಳುಗಳಲ್ಲಿ ಪ್ರದರ್ಶಿಸಲಾಗುವ ಬ್ಯಾನರ್‌ಗಳಲ್ಲಿ ಹುಡುಕು' ಎಂದು ಯಾರಾದರೂ ಉತ್ತರಿಸಿದರೆ, ಆ ಉತ್ತರವನ್ನು ಯಾವುದೇ ಕಾರಣಕ್ಕೂ ತಳ್ಳಿ ಹಾಕುವಂತಿಲ್ಲ ಮತ್ತೆ! ಅಷ್ಟರ ಮಟ್ಟಿಗೆ ಈ ಸಂಸ್ಥೆಗಳು ತಮ್ಮ ಕೀರ್ತಿ ಪತಾಕೆ ಬಾನೆತ್ತರಕ್ಕೆ ಹಾರುವುದೂ ಒಂದೇ, ಈ ಬಗೆ ಬಗೆಯ ಬ್ಯಾನರ್‌ಗಳೂ ಹೀಗೆ ಬಾನಿನ ಎತ್ತರೆತ್ತರಕ್ಕೆ ಹಾರುವುದೂ ಒಂದೇ ಎಂದು ಭಾವಿಸಿದಂತಿದೆ. ಆ ನೆಲೆಯಲ್ಲಿ ನೋಡಿದರೆ, 'ಮುಖ ನೋಡಿ ಮಣೆ ಹಾಕಿದರು' ಎನ್ನುವುದರ ಪರಿವರ್ತಿತ ರೂಪವೇ 'ಬ್ಯಾನರ್ ನೋಡಿ,' 'money' ಹಾಕಿದರು ಎಂಬುವುದಾಗಿದೆ. ಬ್ಯಾನರ್‌ನಲ್ಲಿನ ಆಕರ್ಷಕ ವಿವರಗಳಿಗೆ ಮಾರುಹೋಗಿ, ಅಲ್ಲಿಯೇ ಸೇರಬೇಕು ಎಂದು ನಿಶ್ಚಯ ಮಾಡಿದರೆ, ಖಂಡಿತವಾಗಿಯೂ ಅದರ ಮುಂದಿನ ಹಂತವೇ ಫೀಸ್‌ನ ಹೆಸರಲ್ಲಿ money-ಹಣವನ್ನು ಹೇರಳವಾಗಿ ಹಾಕುವುದು. ಹಾಕುವುದೋ ಅಲ್ಲ ಸುರಿಯುವುದೋ ಎನ್ನುವುದು ಸದ್ಯದ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ಬಿಡಿಸಿ ಹೇಳುವ ಅಗತ್ಯವೇ ಇಲ್ಲ, ಇಂದು ಶಿಕ್ಷಣ ಎನ್ನುವುದು ಎಲ್ಲಾ ರೀತಿಯಲ್ಲೂ 'flexible' ಆಗಿರಬೇಕಿತ್ತು. ಆದರೆ ಹಾಗಾಗುವ ಬದಲಿಗೆ ಅದೀಗ ಹೆಚ್ಚೆಚ್ಚು 'flex'-able ಆಗುತ್ತಿದೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. .

ಈ ಬ್ಯಾನರ್, ಈ ಪರಿ ಪರಿಯಾದ ಪ್ರಚಾರ, ಊರೂರು ಸುತ್ತಿ ಜನರ ಮನವೊಲಿಸುವವೈಖರಿ ಇದೆಲ್ಲದಕ್ಕೂ ಮೂಲಾಧಾರದ ರೀತಿ ಇರುವಂಥದ್ದೇ ಪರ್ಸೆಂಟೇಜ್ ಲೆಕ್ಕಾಚಾರ. ಒಟ್ಟು ರಿಸಲ್ಟ್ ಎಷ್ಟು ಪರ್ಸೆಂಟ್ ಎನ್ನುವಂಥದ್ದು ಕೇವಲ ಮಕ್ಕಳ ಪ್ರೊಗ್ರೆಸ್ ಕಾರ್ಡ್ ಅಷ್ಟೇ ಅಲ್ಲ ಅದು ಆ ಇಡೀ ಸಂಸ್ಥೆಯ ಪ್ರೊಗ್ರೆಸ್ ಕಾರ್ಡ್ ಎಂದರೂ ಸರಿಯಷ್ಟೇ. ಪರರ ಚಿಂತೆಯ ಮಾಡುತ್ತಾರೋ ಇಲ್ಲವೋ ಆದರೆ ಪರ್ಸೆಂಟೇಜ್ ಚಿಂತೆ ಮಾಡದೇ ಯಾರಾದರೂ ನಿರುಮ್ಮಳವಾಗಿ ಇರುವುದು ಸಾಧ್ಯವೇ ಇಲ್ಲ. ಪರೀಕ್ಷೆ-ಫಲಿತಾಂಶಗಳ ಸಂದರ್ಭಗಳಲ್ಲಂತೂ ಅದು ಅಸಾಧ್ಯವಷ್ಟೇ ಅಲ್ಲ ಅಸಂಭವವೂ ಹೌದು. 'ಪಾಸ್'ನ ಪರಿಮಳವನ್ನು ಆಸುಪಾಸು ಇರುವವರಿಗೆಲ್ಲ ಪರಿಣಾಮಕಾರಿಯಾಗಿ ಪಸರಿಸುವಲ್ಲಿ ಈ ಪರ್ಸೆಂಟೇಜ್‌ನ ಪಾತ್ರ ಅತ್ಯಂತ ಮಹತ್ವದ್ದು. ಹಾಗಾಗಿ ಈ 'ಸೆಂಟ್'ನ ಸುವಾಸನೆ ಇನ್ನೂ ಹೆಚ್ಚೇ ಇರುತ್ತದೆ. ಇನ್ನು ಕೆಲವರಿಗಂತೂ ಈ ವಿಚಾರದಲ್ಲಿ ಪರರ ಪರ್ಸೆಂಟೇಜೇ ಹೆಚ್ಚು ಗಮನಸೆಳೆಯುತ್ತದೆ, ಥೇಟು ಪರರು ಪೂಸಿಕೊಂಡ ಸೆಂಟೇ ಹೆಚ್ಚು ಘಮಘಮಿಸುತ್ತಿರುವಂತೆ ಅನಿಸಿದಂತೆ. ಇನ್ನು ಈ 'ಸೆಂಟ್'ನ ನೆರವಿನಿಂದ ಅದೆಷ್ಟು ವಿದ್ಯಾರ್ಥಿಗಳನ್ನು, ಪೋಷಕರನ್ನು ಸೆಳೆಯಲಾಗುತ್ತದೆ ಎಂದರೆ, ಇದು ಸೆಂಟೋ ಮಾಯಾ ದ್ರವವೋ ಎಂಬ ಅನುಮಾನವೊಂದು ಧುತ್ತನೇ ಮೂಡುತ್ತದೆ. ಈಗಿನ ಮಕ್ಕಳಿಗೋ, ತಮ್ಮ ಶೈಕ್ಷಣಿಕ ಸಾಧನೆಯ ಜೊತೆ ಜೊತೆಗೇ ತಾವು ಓದುತ್ತಿರುವ ಸಂಸ್ಥೆಯ ಏಳಿಗೆಗೂ ಪ್ರತ್ಯಕ್ಷವಾಗಿ ದುಡಿದಂತೆಯೇ ಸರಿ. ಹಾಗೆ ನೋಡಿದರೆ, ಆ ಸಂಸ್ಥೆಗಳೇ ಅದಕ್ಕಾಗಿ ಈ ವಿದ್ಯಾರ್ಥಿಗಳಿಗೆ ಹಣ ಪಾವತಿಸಬೇಕು!

ಈ ಪರ್ಸೆಂಟೇಜ್ ಕ್ರೇಜ್ ನೋಡಿ ಯಾವುದೇ ಸಂಸ್ಥೆಯನ್ನು ಹೊಕ್ಕರೂ ಅಲ್ಲಿ ಮತ್ತೆ ಪರ್ಸ್‌ನದ್ದೇ ಮೇಲುಗೈ. ಅವರು ಹೇಳುವ ವಿವಿಧ ಶುಲ್ಕ ವಿವರ, ಡೊನೇಷನ್, ಖರ್ಚು-ವೆಚ್ಚ ವಿವರಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕಂತೆ ಎಲ್ಲವನ್ನೂ ಪಾವತಿ ಮಾಡಬೇಕು ಎಂದರೆ ಖಂಡಿತವಾಗಿಯೂ ಪರ್ಸ್-ಎಂಟೇ ಇರಬೇಕು. ಅಂದರೆ ಒಂದಲ್ಲ ಎರಡಲ್ಲ ಎಂಟೆಂಟು ಪರ್ಸ್ ಗಳಲ್ಲಿ ಹಣ ತುಂಬಿಸಿಕೊಂಡು ಹೋದರಷ್ಟೇ ಆ ಶುಲ್ಕವನ್ನೆಲ್ಲಾ ಭರಿಸಲು ಸಾಧ್ಯ ಎನಿಸುತ್ತದೆ. ಹೇಗೆ ಕೆಲವು ಸಂದರ್ಭಗಳಲ್ಲಿ ಎಂಟೆದೆಯ ಭಂಟರಂತೆ ಹೋರಾಡಬೇಕಾಗುತ್ತದೆಯೋ ಹಾಗೆಯೇ ಪರ್ಸ್-ಎಂಟನ್ನೂ ರೆಡಿ ಇಟ್ಟುಕೊಂಡು ಅಲ್ಲಿಗೆ ಹೊರಡಬೇಕು ಎನ್ನುವುದು ವಿಷಯ. ಅಷ್ಟೂ ಭರಪೂರ ಶುಲ್ಕ ಕಟ್ಟಲೇಬೇಕು. 'ಹ್ಞಾಂ.. ಹಾಗಾದರೆ ಅದೆಷ್ಟೇ ಕಟ್ಟು ಹಣವಿದ್ದರೂ ಸಾಲದೆನ್ನಿ' ಎಂದು ಹುಬ್ಬೇರಿಸುವುದು ಖಂಡಿತ. 'ಬ್ಯಾನರ್ ನೋಡಿ ಒಳ ಹೋದೆ, ಫೀಸ್ ವಿವರ ಕೇಳಿ ಬೆಚ್ಚಿಬಿದ್ದು ಹೊರಬಂದೆ' ಎಂದು ಯಾರಾದರೂ ಹೇಳಿದರೂ ಅದನ್ನು ಅಲ್ಲಗಳೆಯಲಾಗದು. ಏನೇ ಆಗಲಿ, ವಿದ್ಯಾಸಂಸ್ಥೆಯ ಹೆಸರಲ್ಲಿ ಹಾಕಿದ ಬಂಡವಾಳ ಸರಿಯಾಗಿ ವಸೂಲಿ ಆಗಬೇಕು ಎಂದರೆ, ಹಾಗೆಯೇ ಇತರೆ ಬಂಡವಾಳ ಬಟಾಬಯಲು ಆಗಬಾರದು ಎಂದರೆ ಬ್ಯಾನರ್‌ಗಳನ್ನೇ ಬಂಡವಾಳವನ್ನಾಗಿ ಬಳಸಿಕೊಳ್ಳುತ್ತಿರುವುದಂತೂ ಸತ್ಯ. ಈ ನಡುವೆ ಅದಾವುದೋ ಊರಲ್ಲಿ ವಿದ್ಯಾರ್ಥಿಯೊಬ್ಬ 35% ಅಂಕ ಗಳಿಸಿ ಪಾಸ್ ಆಗಿದ್ದಕ್ಕೂ, ಬೀದಿಯಲ್ಲಿ ಬ್ಯಾನರ್ ಹಾಕಿ ಸಂಭ್ರಮಿಸಿದ್ದಾರಂತೆ. ಅಂದರೆ ಬ್ಯಾನರ್‌ನ ವಿಷಯದಲ್ಲೂ ಒಂದು ರೀತಿಯ ಸಮಾನತೆ ಸಾಧಿಸಿದಂತಾಯ್ತು ಎನ್ನಬಹುದು.

ಓವರ್‌ಡೋಸ್: ನಮ್ಮ ಸಂಸ್ಥೆಗೇ ನಿಮ್ಮ ಮಕ್ಕಳನ್ನು ಸೇರಿಸಿ ಎಂದು ಒತ್ತಾಯಿಸಲು ಪದೇ ಪದೇ ಕಾಲ್ ಬರುವ ಕಾಲವೆಂದರೆ ಎಪ್ರಿಲ್-ಮೇ-ಜೂನ್. ಇದು 'ಕಾಲಾಯ ತಸ್ಮೈ ನಮಃ'ದ ಭಿನ್ನ ರೂಪವೆಂದರೆ ಇದೇ ಇರಬೇಕು!

ರಾಣಾಘಾಟ್‌ನಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಶಾ
ಮಾತೆಯರಿಗೆ, ನಿರುದ್ಯೋಗಿ ಯುವಕರಿಗೆ ಮಾಸಿಕ ನೆರವು

ಕೋಲ್ಕತ್ತಾ : ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಜಾರಿಗೊಳಿಸಲಿದೆ, ತ್ರಿವಳಿ ತಲಾಖ್ ರದ್ದುಪಡಿಸಲಿದೆ ಮತ್ತು ಬಹುಪತ್ನಿತ್ವಕ್ಕೆ ಕೊನೆ ಹಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ. ರಾಣಾಘಾಟ್‌ನಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಸಚಿವರು ಪಾಲ್ಗೊಂಡರು.

ಮೇ 4ರಂದು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ರಚಿಸಲಿದೆ . ಮೇ ನಂತರ ಬಿಜೆಪಿ ಸರಕಾರ ಬಂಗಾಳದ ಪ್ರತಿಯೋರ್ವ ಸೋದರಿ ಮತ್ತು ಮಾತೆಯರ ಖಾತೆಗಳಿಗೆ ಮಾಸಿಕ ತಲಾ ರೂ.3000 ರೂಗಳನ್ನು ಜಮೆ ಮಾಡಲಿದೆ. ಏಕಕಾಲಕ್ಕೆ ಪ್ರತೀ ನಿರುದ್ಯೋಗಿ ಯುವಕರ ಖಾತೆಗಳಿಗೂ ತಲಾ 3ಸಾವಿರ ರೂ. ಜಮೆ ಮಾಡಲಿದೆ. ರಾಜ್ಯದ ತಾಯಂದಿರು, ಸೋದರಿಯರು ಬಸ್ಸುಗಳಲ್ಲಿ ಟಿಕೆಟ್ ನೀಡದೆ ಉಚಿತವಾಗಿ ಪ್ರಯಾಣಿಸಲು ಬಿಜೆಪಿ ಸರಕಾರ ಅನುವು ಮಾಡಲಿದೆ ಎಂದು ಭರವಸೆ ನೀಡಿದರು. ರಾಜ್ಯದ ಹಲವು ಭಾಗಗಳಲ್ಲಿ ಮುಖ್ಯವಾಗಿ ನಾಡಿಯಾ ಜಿಲ್ಲೆಯಲ್ಲಿ ಗೋ ಕಳ್ಳಸಾಗಣೆ ಅವ್ಯಾಹತವಾಗಿದ್ದು, ಅಧಿಕಾರ ವಹಿಸಿಕೊಂಡ ಬಳಿಕ ಬಿಜೆಪಿ ಈ ಗೋಕಳ್ಳಸಾಗಣೆ ಜಾಲವನ್ನು ಮಟ್ಟ ಹಾಕಲಿದೆ ಎಂದು ಭರವಸೆ ನೀಡಿದರು.

ಸರಕಾರ ರಚಿಸಿದ ಬಳಿಕ, ಜಾನುವಾರುಗಳ ಕಳ್ಳಸಾಗಣೆಗೆ ಮೂಗುದಾರ ಹಾಕಲು ವಿಶೇಷ ತಂಡವೊಂದನ್ನು ರಚಿಸಲಿದ್ದೇವೆ ಎಂದು ಸಚಿವ ಶಾ ಹೇಳಿದರು. ಬಿಜೆಪಿಯ ರಾಷ್ಟ್ರೀಯ ಭದ್ರತಾ ದಾಖಲೆ ಅಪೂರ್ವವೆಂದು ನಾಡಿಯಾದಲ್ಲಿನ ಪ್ರತ್ಯೇಕ ಸಾರ್ವಜನಿಕ ಸಭೆಯಲ್ಲಿ ಸಚಿವ ಶಾ ಗಮನ ಸೆಳೆದರು. ನಾಡಿಯಾದಲ್ಲೀಗ ಮೊತ್ತ ಮೊದಲು ಹುತಾತ್ಮ ಜೊಂತು ಆಲಿ ಶೇಖ್‌ಗೆ ನಾನು ಹೃತ್ಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ. ಏ.22ರಂದು ಪಾಕ್ ಜತೆಗಿನ ಸಂಘರ್ಷ ಸಂದರ್ಭ ಆಲಿ ಶೇಖ್ ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿದವರು. ಈ ದುರ್ಘಟನೆ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಆಪರೇಶನ್ ಸಿಂದೂರ್‌ಗೆ ಹಸಿರು ನಿಶಾನೆ ನೀಡಿದರು.



ವಿಪಕ್ಷಗಳು ಉಗ್ರರಿಗೆ ಬಿರಿಯಾನಿ ಕೊಡುತ್ತಿದ್ದವು

ಹಿಂದಿನ ಸರಕಾರಗಳು ಭಯೋತ್ಪಾದಕರ ಬಗ್ಗೆ ಬಲು ಮೃದು ಧೋರಣೆ ಹೊಂದಿದ್ದವೆಂದು ಛೀಮಾರಿ ಹಾಕಿದ ಸಚಿವ ಶಾ, ಮಮತಾ ಮತ್ತು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಭಯೋತ್ಪಾದಕರಿಗೆ ಬಿರಿಯಾನಿ ತಿನ್ನಿಸುತ್ತಿದ್ದರು. 2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದಾಗ ಉರಿಯಲ್ಲಿ ಭಯೋತ್ಪಾದಕರು ಸೇನಾ ಶಿಬಿರ ಮೇಲೆ ದಾಳಿ ನಡೆಸಿದ್ದರು. ಪ್ರತೀಕಾರವಾಗಿ ಸರ್ಜಿಕಲ್ ಸ್ಟ್ರೈಕ್ ನಡೆಯಿತು. ಪುಲ್ವಾಮಾ ದಾಳಿಗೆ ಪ್ರತಿಯಾಗಿ ಏರ್ ಸ್ಟ್ರೈಕ್ ನಡೆಸಿದೆವು. ಪಹಲ್ಗಾಮ್ ದಾಳಿ ನಂತರ ನಾವು ಪಾಕ್‌ಗೆ ನುಗ್ಗಿ ಭಯೋತ್ಪಾದಕರನ್ನು ದಮನಿಸಿಬಿಟ್ಟೆವು. ಪ್ರಸಕ್ತ ಕೇಂದ್ರ ಸರಕಾರ ಭಯೋತ್ಪಾದನೆ ಮತ್ತು ತೀವ್ರಗಾಮಿಗಳ ವಿರುದ್ಧ ಕಠಿಣ ನಿಲುವು ಹೊಂದಿದೆ ಎಂದು ವಿವರಿಸಿದರು.

ಪಾಕ್‌ಗೆ ಪ್ರವಾಸ ಮಾಡುವುದು ಅನಗತ್ಯ: ಟ್ರಂಪ್
ಮಾತುಕತೆ ಬಯಸಿದರೆ ಕರೆ ಮಾಡಲಿ


ವಾಷಿಂಗ್ಟನ್: ಹಾರ್ಮುಜ್ ಮೇಲಿನ ಅಮೆರಿಕದ ದಿಗ್ಬಂಧನ ತೆರವು ಸಹಿತ ಮಧ್ಯಪ್ರಾಚ್ಯ ಸಂಘರ್ಷಕ್ಕೆ ಅಂತ್ಯ ಹಾಡುವ ಉದ್ದೇಶದಿಂದ ಪಾಕ್‌ನಲ್ಲಿ ನಡೆಯಬೇಕಿದ್ದ 2ನೇ ಹಂತದ ಮಾತುಕತೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಂತ್ಯ ಹಾಡಿದ್ದಾರೆ ಅಥವಾ ಪಾಕ್‌ಗೆ ತನ್ನ ಸಂಧಾನಕಾರರ ಭೇಟಿಯನ್ನು ರದ್ದುಪಡಿಸಿದ್ದಾರೆ. ಅಮೆರಿಕದ ಸಂಧಾನಕಾರರಾದ ಸ್ಟೀವ್ ವಿಟ್ಕಾಫ್ ಮತ್ತು ಜರೆಡ್ ಕುಶ್ನರ್ ಪಾಕ್‌ಗೆ ಭೇಟಿ ನೀಡುವುದಿಲ್ಲ ಎಂದು ಟ್ರಂಪ್ ಘೋಷಿಸಿದ್ದಾರೆ.



ಮಾತುಕತೆ ನಡೆಸಲು ಇರಾನ್ ಬಯಸಿದ್ದರೆ ಅವರು ನನಗೆ ಫೋನ್ ಕರೆ ಮಾಡಲಿ ಎಂದು ಟ್ರಂಪ್‌ತಮ್ಮ ಸಾಮಾಜಿಕ ಜಾಲತಾಣ ಟ್ರುತ್ ಸೋಷ್ಯಲ್‌ನಲ್ಲಿ ಶನಿವಾರ ಬರೆದಿದ್ದಾರೆ. ತನ್ಮೂಲಕ ಪಾಕ್‌ಗೆ ತನ್ನ ಸಂಧಾನಕಾರರನ್ನು ಕಳುಹಿಸುವುದಿಲ್ಲ ಎಂದು ಪರೋಕ್ಷ ಸುಳಿವು ನೀಡಿದ್ದಾರೆ. ತಮ್ಮ ನಿಲುವು ಸಡಿಲಿಸಲು ಅಮೆರಿಕ ಮತ್ತು ಟೆಹ್ರಾನ್ ಸಿದ್ಧರಿಲ್ಲದ ಕಾರಣ, ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಸಮರವನ್ನು ರಾಜತಾಂತ್ರಿಕ ಪ್ರಯತ್ನಗಳಿಂದ ಕೊನೆಗಾಣಿಸುವ ಸಾಧ್ಯತೆಗಳು ಕ್ಷೀಣವಾಗಿವೆ. ಜತೆಗೆ ಸುದೀರ್ಘ ಕದನವಿರಾಮ ಸಾಧ್ಯತೆಗಳೂ ಮಂಕಾಗಿವೆ.

ಇರಾನಿಗಳ ಅರೆಬರೆ ಮನಸ್ಸಿನ ಪ್ರಸ್ತಾವ ಪರಿಗಣನೆಗಾಗಿ ಒಂದಷ್ಟು ವೆಚ್ಚ ಮಾಡಿ ದೂರದ ಪಾಕ್‌ಗೆ ಪ್ರವಾಸ ಮಾಡುವುದು ಅನಗತ್ಯ. ಇರಾನ್‌ನ ಪ್ರಸ್ತಾವ ಸಾಲದು ಎಂದು ಟ್ರಂಪ್ ಫ್ಲೋರಿಡಾದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ಇರಾನ್ ನಾಯಕತ್ವದೊಳಗೆ ಸಾಕಷ್ಟು ಒಳಜಗಳವಿದೆ. ಯಾರು ಉಸ್ತುವಾರಿ ಎಂಬುದು ಯಾರಿಗೂ ಗೊತ್ತಿಲ್ಲ. ಈ ವಿಚಾರದಲ್ಲಿ ನಾವು ಉತ್ತಮ ವ್ಯವಸ್ಥೆ ಹೊಂದಿದ್ದೇವೆ, ಆದರೆ ಅವರು ಹೊಂದಿಲ್ಲ. ಅವರಿಗೆ ಮಾತುಕತೆಯ ಆಶಯವಿದ್ದಲ್ಲಿ ತನಗೊಂದು ಕರೆ ಮಾಡಲಿ ಎಂದು ಟ್ರಂಪ್ ಜಾಲತಾಣಕ್ಕೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತನ್ಮೂಲಕ ಇಡೀ ಜಗತ್ತನ್ನು ಕಾಡಿರುವ ಪ.ಏಷ್ಯಾ ಸಂಘರ್ಷಕ್ಕೆ ಸದ್ಯ ಕೊನೆಯಿಲ್ಲ ಎಂಬ ಸಂದೇಶವನ್ನು ಟ್ರಂಪ್ ಪರೋಕ್ಷ ನೀಡಿದ್ದಾರೆ.

2026ರಲ್ಲಿ ಭಾರತ ತೀವ್ರ ಹವಾಮಾನ ಸವಾಲುಗಳನ್ನು ಎದುರಿಸುವ ಸಾಧ್ಯತೆ ಹೆಚ್ಚಿದೆ. ವಿಶ್ವ ಹವಾಮಾನ ಸಂಸ್ಥೆ ನೀಡಿರುವ ಎಚ್ಚರಿಕೆಯಂತೆ, ಫೆಸಿಫಿಕ್ ಮಹಾಸಾಗರದಲ್ಲಿ ರೂಪುಗೊಳ್ಳುವ ಎಲ್ ನಿನೋ ಸ್ಥಿತಿ ಮೇ-ಜುಲೈ ಅವಧಿಯಲ್ಲಿ ಆರಂಭವಾಗುವ ಸಾಧ್ಯತೆ ಇದ್ದು, ಇದರ ಪರಿಣಾಮವಾಗಿ ದೇಶದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ ಹಾಗೂ ಹೆಚ್ಚಿನ ಉಷ್ಣತೆ ಕಾಣಿಸಿಕೊಳ್ಳಬಹುದು. ತಜ್ಞರ ಪ್ರಕಾರ ಈ ಬಾರಿ ಎಲ್ ನಿನೋ ಸ್ಥಿತಿ ಬಲಿಷ್ಠವಾಗುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ಮುಂಗಾರು ದುರ್ಬಲಗೊಳ್ಳುತ್ತದೆ. ಪರಿಣಾಮವಾಗಿ ಮಳೆಯ ಪ್ರಮಾಣ ಕುಸಿಯುವುದರ ಜೊತೆಗೆ, ಉಷ್ಣತೆಯ ತೀವ್ರತೆ ಹೆಚ್ಚುವ ಸಾಧ್ಯತೆ ಇದೆ.



ಎಲ್ ನಿನೋ ಭಾರತಕ್ಕೆ ಮಳೆ ಕಡಿಮೆ?

ವಿಶ್ವ ಹವಾಮಾನ ಸಂಸ್ಥೆ ಎಚ್ಚರಿಕೆ ಮೇ, ಜುಲೈ ಅವಧಿಯಲ್ಲಿ ಪರಿಣಾಮ ಆರಂಭ ಸಾಧ್ಯ

ಮುಂದಿನ ಸವಾಲುಗಳು

2026ರಲ್ಲಿ ಎದುರಾಗುವ ಸಾಧ್ಯತೆ ಇರುವ ಎಲ್ ನಿನೋ ಪರಿಸ್ಥಿತಿ ದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಮಳೆ ಕೊರತೆಯಿಂದ ಕೃಷಿ ಉತ್ಪಾದನೆ ಕುಸಿಯುವ ಭೀತಿ ಇದ್ದು, ಇದರ ಪರಿಣಾಮವಾಗಿ ಆಹಾರ ಭದ್ರತೆ ಮೇಲೆ ಒತ್ತಡ ಹೆಚ್ಚಬಹುದು.

ಇನ್ನೊಂದೆಡೆ, ಉಷ್ಣತೆಯ ಏರಿಕೆಯಿಂದ ವಿದ್ಯುತ್ ಬಳಕೆ ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರ ಹೆಚ್ಚಾಗಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ಕುಸಿತ ಕಂಡುಬರುವ ಸಾಧ್ಯತೆ ಇದ್ದು, ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.ಒಟ್ಟಾರೆ, 2026ರಲ್ಲಿ ಸಂಭವಿಸುವ ಎಲ್ ನಿನೋ ಪರಿಸ್ಥಿತಿ ಭಾರತಕ್ಕೆ ಗಂಭೀರ ಹವಾಮಾನ ಸವಾಲುಗಳನ್ನು ತಂದೊಡ್ಡುವ ಸಾಧ್ಯತೆ ಇದೆ. ಬಿಸಿಲು, ಮಳೆ ಕೊರತೆ ಮತ್ತು ಕೃಷಿ ಸಂಕಷ್ಟವನ್ನು ಎದುರಿಸಲು ಮುಂಚಿತ ಸಿದ್ಧತೆ ಹಾಗೂ ಸಮರ್ಪಕ ಯೋಜನೆ ಅಗತ್ಯವಾಗಿದೆ ಎಂದು ತಜ್ಞರು ಸೂಚಿಸಿದ್ದಾರೆ.



ಹಿಮದ ಪ್ರಮಾಣ ಕುಸಿತ

ದಿ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ಮೌಂಟೇನ್ ಡೆವಲಪ್‌ಮೆಂಟ್ ವರದಿ ಪ್ರಕಾರ, ಹಿಂದೂ ಕುಶ್ ಹಿಮಾಲಯದಲ್ಲಿ ಹಿಮದ ಹೊದಿಕೆ ದೀರ್ಘಾವಧಿ ಸರಾಸರಿಗಿಂತ ಶೇ.27.8ರಷ್ಟು ಕಡಿಮೆಯಾಗಿದೆ. ಇದು ಸತತ ನಾಲ್ಕು ವರ್ಷಗಳ ದಾಖಲೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣವಾಗಿದೆ. ಈ ಪ್ರದೇಶವು ಗಂಗಾ, ಸಿಂಧೂ ಮತ್ತು ಬ್ರಹ್ಮಪುತ್ರದಂತಹ ಪ್ರಮುಖ ನದಿಗಳಿಗೆ ನೀರನ್ನು ಪೂರೈಸುತ್ತದೆ. ಸಾಮಾನ್ಯವಾಗಿ ಹಿಮದ ಮಟ್ಟಗಳು ಮುಖ್ಯವಾಗಿವೆ ಏಕೆಂದರೆ ಅವು ನೈಸರ್ಗಿಕ ನೀರಿನ ಶೇಖರಣೆಯಾಗಿ ಕಾರ್ಯನಿರ್ವಹಿಸುತ್ತವೆ. ಹಿಮವು ನಿಧಾನವಾಗಿ ಕರಗಿದಾಗ, ಅದು ಒಣ ತಿಂಗಳುಗಳಲ್ಲಿ ನದಿಗಳಲ್ಲಿ ನೀರಿನ ಹರಿವನ್ನು ಹೆಚ್ಚಿಸುತ್ತದೆ. ಕಡಿಮೆ ಹಿಮ ಎಂದರೆ ಬೇಸಿಗೆಯಲ್ಲಿ ನದಿಯ ಹರಿವು ಕಡಿಮೆಯಾಗುವುದು, ಕೆಳಭಾಗದ ಪ್ರದೇಶಗಳಲ್ಲಿ ಬರಗಾಲದ ಹೆಚ್ಚಿನ ಅಪಾಯ, ಕುಡಿಯುವ ನೀರು ಮತ್ತು ನೀರಾವರಿ ವ್ಯವಸ್ಥೆಗಳ ಮೇಲೆ ಒತ್ತಡ ಎದುರಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಪರಿಣಾಮ

ಎಲ್ ನಿನೋ ಪರಿಣಾಮ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಜಾಗತಿಕ ಮಟ್ಟದಲ್ಲಿಯೂ ಹವಾಮಾನ ಅಸ್ಥಿರತೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವು ದೇಶಗಳಲ್ಲಿ ಅತಿಯಾದ ಮಳೆಯಾಗುವ ಸಾಧ್ಯತೆ ಇದ್ದರೆ, ಇನ್ನೂ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ಉಂಟಾಗಬಹುದು. ಈ ಪರಿಸ್ಥಿತಿ ಜಾಗತಿಕ ಆಹಾರ ಉತ್ಪಾದನೆ ಹಾಗೂ ಸರಬರಾಜು ವ್ಯವಸ್ಥೆಯ ಮೇಲೆ ಒತ್ತಡವನ್ನು ಹೆಚ್ಚಿಸಬಹುದು. ಹವಾಮಾನ ಬದಲಾವಣೆ ಹಿನ್ನೆಲೆಯಲ್ಲೇ ಎಲ್ ನಿನೋ ಪರಿಣಾಮ ಹೆಚ್ಚು ತೀವ್ರಗೊಳ್ಳುತ್ತಿರುವುದು ತಜ್ಞರ ಗಮನಕ್ಕೆ ಬಂದಿದೆ. ಇದರಿಂದ ತಾಪಮಾನ ಏರಿಕೆ ಮತ್ತು ಮಳೆಯ ವ್ಯತ್ಯಾಸಗಳು ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದೆ.

ಎಲ್ ನಿನೋ ಎಂದರೇನು?

ಫೆಸಿಫಿಕ್ ಮಹಾಸಾಗರದ ಮಧ್ಯ ಮತ್ತು ಪೂರ್ವ ಭಾಗದಲ್ಲಿ ಸಮುದ್ರದ ಮೇಲ್ಮೈ ತಾಪಮಾನ ಏರಿಕೆಯಾಗುವ ಹವಾಮಾನ ಪ್ರಕ್ರಿಯೆಯೇ ಎಲ್ ನಿನೋ ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆ ಜಾಗತಿಕ ಹವಾಮಾನ ಮಾದರಿಗಳಲ್ಲಿ ಬದಲಾವಣೆ ತರಲು ಕಾರಣವಾಗುತ್ತದೆ. ಭಾರತದಲ್ಲಿ, ವಿಶೇಷವಾಗಿ ದಕ್ಷಿಣ-ಪಶ್ಚಿಮ ಮಾನ್ಸೂನ್ ದುರ್ಬಲಗೊಳ್ಳಲು ಇದು ಪ್ರಮುಖ ಕಾರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುವುದು ಮತ್ತು ಉಷ್ಣತೆ ಏರಿಕೆಯಾಗುವುದು ಸಾಮಾನ್ಯವಾಗಿ ಕಂಡುಬರುವ ಪರಿಣಾಮಗಳಾಗಿವೆ.

ಭಾರತಕ್ಕೆ ಸಂಭವನೀಯ ಪರಿಣಾಮ

ಹವಾಮಾನ ತಜ್ಞರು ನೀಡಿರುವ ಮುನ್ಸೂಚನೆ ಪ್ರಕಾರ, 2026ರಲ್ಲಿ ಎಲ್ ನಿನೋ ಪರಿಣಾಮ ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ದೇಶದ ಹಲವೆಡೆಗಳಲ್ಲಿ ಬಿಸಿಲಿನ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದ್ದು, ಹೀಟ್‌ವೇವ್‌ಗಳ ಪ್ರಮಾಣ ಹೆಚ್ಚಬಹುದು. ಅದೇ ಸಮಯದಲ್ಲಿ ಮಾನ್ಸೂನ್ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಈ ಪರಿಸ್ಥಿತಿ ಜಲಾಶಯಗಳ ನೀರಿನ ಮಟ್ಟದ ಮೇಲೆ ಪರಿಣಾಮ ಬೀರಬಹುದು. ಕುಡಿಯುವ ನೀರಿನ ಸಮಸ್ಯೆ ಹಾಗೂ ಕೃಷಿ ಕ್ಷೇತ್ರದಲ್ಲಿ ಅನಿಶ್ಚಿತತೆ ಹೆಚ್ಚಾಗುವ ಭೀತಿ ಇದೆ. ಈಗಾಗಲೇ ಕೆಲವು ಭಾಗಗಳಲ್ಲಿ ಪೂರ್ವ ಮುಂಗಾರು ಮಳೆಯ ಕೊರತೆ ಕಂಡುಬಂದಿರುವುದು ಮುಂದಿನ ಪರಿಸ್ಥಿತಿಗೆ ಸೂಚಕವಾಗಿದೆ.

ಮಾರ್ಗಸೂಚಿ ನೀಡಿದ ಐಎಂಡಿ

ಈ ಬೆನ್ನಲ್ಲೆ ದೇಶದ ಹಲವೆಡೆ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೂಲಂಕುಶವಾಗಿ ಬಿಸಿಗಾಳಿ ಮಾರ್ಗಸೂಚಿಗಳು ಮತ್ತು ಸಲಹೆಗಳನ್ನು ಬಿಡುಗಡೆಗೊಳಿಸಿದೆ. ಐಎಂಡಿ ಬಿಡುಗಡೆಗೊಳಿಸಿದ ಮಾರ್ಗಸೂಚಿಯಲ್ಲಿ ಸೂರ್ಯನ ಕಿರಣಕ್ಕೆ ಹೆಚ್ಚು ಹೊತ್ತು ನಿಲ್ಲದಿರಲು, ಅದರಲ್ಲೂ ಮಧ್ಯಾಹ್ನದ ಸಮಯದಲ್ಲಿ ಹೆಚ್ಚು ಹೊರಗಡೆ ಇರುವುದು, ಆದಷ್ಟು ನೀರು ಕುಡಿಯುವುದು, ಹಗುರವಾದ ಮತ್ತು ಉಸಿರಾಡಲು ಸುಲಭವಾಗುವಂತಹ ಬಟ್ಟೆ ಧರಿಸುವುದು ಮತ್ತು ಅತಿ ಉಷ್ಣಾಂಶದಲ್ಲಿ ಹೊರಗೆ ಹೆಚ್ಚು ಕೆಲಸ ಮಾಡದಿರುವುದು ಇತ್ಯಾದಿ ಸಲಹೆ ನೀಡಿದೆ.



ಕಿರು ಸುದ್ದಿ

ಭಯೋತ್ಪಾದಕರ ದಾಳಿ: ಮಾಲಿ ರಕ್ಷಣಾ ಸಚಿವರ ಹತ್ಯೆ

ಬಮಾಕೊ: ರಾಜಧಾನಿ ಹತ್ತಿರದ ಕಟಿ ಮಿಲಿಟರಿ ನೆಲೆಯ ನಿವಾಸದ ಮೇಲೆ ಅಲ್ ಖೈದಾ ಸಂಯೋಜಿತ ಜೆಎನ್‌ಐಎಂ (ಜೆಎನ್‌ಐಎಂ) ಗುಂಪು ನಡೆಸಿದ ದಾಳಿಯಲ್ಲಿ ಮಾಲಿ ರಕ್ಷಣಾ ಸಚಿವ ಸಡಿಯೊ ಕ್ಯಾಮರಾ ಹತ್ಯೆಯಾಗಿದ್ದಾರೆ. ಜೆಎನ್‌ಐಎಂ ಮತ್ತು ತುವಾರೆಗ್ ಬಂಡುಕೋರರು ಇತ್ತೀಚಿನ ವರ್ಷಗಳಲ್ಲಿ ಅತಿದೊಡ್ಡ ಸಂಘಟಿತ ಕಾರ್ಯಾಚರಣೆ ನಡೆಸಿದ್ದು, ಚಿನ್ನದ ಗಣಿಗಳು ಸೇರಿದಂತೆ ದೇಶದಾದ್ಯಂತ ಹಲವು ಸ್ಥಳಗಳನ್ನು ಗುರಿಯಾಗಿಸಿಕೊಂಡಿದ್ದಾರೆ.

ಖ್ಯಾತ ಛಾಯಾಗ್ರಾಹಕ ರಘು ರಾಯ್ ನಿಧನ

ಹೊಸದಿಲ್ಲಿ: ಸ್ವತಂತ್ರ ಭಾರತದ ಅಗ್ರಗಣ್ಯ ಇತಿಹಾಸಕಾರರಲ್ಲಿ ಒಬ್ಬರೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟ ಅಂತಾರಾಷ್ಟ್ರೀಯ ಖ್ಯಾತಿಯ ಛಾಯಾಗ್ರಾಹಕ ರಘು ರಾಯ್ ತಮ್ಮ 83ನೇ ವಯಸ್ಸಿನಲ್ಲಿ ನಿಧನರಾದರು. ಕಳೆದ ಎರಡು ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ ಇತ್ತೀಚೆಗೆ ವಯೋಸಹಜ ಸಮಸ್ಯೆಗಳೂ ಇದ್ದವು ಎಂದು ಛಾಯಾಗ್ರಾಹಕರಾದ ಮತ್ತು ರಘು ರಾಯ್ ಅವರ ಪುತ್ರ ನಿತಿನ್ ರಾಯ್ ತಿಳಿಸಿದ್ದಾರೆ.

ಬಿಜೆಪಿ ರಾಜ್ಯಗಳಲ್ಲಿ ವಿಶೇಷ ಅಧಿವೇಶನ

ಹೊಸದಿಲ್ಲಿ: ಮಹಿಳೆಯರಿಗೆ ಸಂಸತ್ ಮತ್ತು ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ ತಿದ್ದುಪಡಿ ಮಸೂದೆಗೆ ಬೆಂಬಲ ಒಗ್ಗೂಡಿಸಲು ಭಾರತೀಯ ಜನತಾ ಪಕ್ಷ (ಬಿಜೆಪಿ) ಮಹತ್ವದ ರಾಜಕೀಯ ಹೆಜ್ಜೆ ಇಟ್ಟಿದೆ. ಈ ಹಿನ್ನೆಲೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ವಿಶೇಷ ವಿಧಾನಸಭಾ ಅಧಿವೇಶನ ನಡೆಸಲು ಅದು ತೀರ್ಮಾನಿಸಿದೆ.

ಈ ಅಧಿವೇಶನಗಳಲ್ಲಿ ಮಹಿಳಾ ಮೀಸಲು ಮಸೂದೆಗೆ ಬೆಂಬಲ ವ್ಯಕ್ತಪಡಿಸುವ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ, ರಾಷ್ಟ್ರ ಮಟ್ಟದಲ್ಲಿ ಒತ್ತಡ ನಿರ್ಮಿಸುವುದು ಬಿಜೆಪಿ ಉದ್ದೇಶವಾಗಿದೆ. ಸಂಸತ್ತಿನಲ್ಲಿ ಮಸೂದೆ ಅಂಗೀಕಾರವಾಗದ ಹಿನ್ನೆಲೆ, ರಾಜ್ಯಗಳ ಮೂಲಕ ರಾಜಕೀಯ ಸಂದೇಶ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

> ಮಹಿಳಾ ಮಸೂದೆ ವಿಚಾರದಲ್ಲಿ ಬಿಜೆಪಿ ಕಾರ್ಯತಂತ್ರ

ಯಾವ ರಾಜ್ಯಗಳಲ್ಲಿ ಅಧಿವೇಶನ?: ಬಿಜೆಪಿ ಆಡಳಿತದ ನಾಲ್ಕು ರಾಜ್ಯಗಳಲ್ಲಿ ಈ ವಿಶೇಷ ಅಧಿವೇಶನ ನಡೆಯಲಿದೆ. ಅಂದರೆ, ಮಧ್ಯಪ್ರದೇಶ, ಹರ್ಯಾಣ, ದಿಲ್ಲಿ ಮತ್ತು ಒಡಿಶಾದಲ್ಲಿ ಅಧಿವೇಶನ ನಡೆಯಲಿದೆ. ಜೊತೆಗೆ ತೆಲುಗು ದೇಶಂ ಪಕ್ಷ ಆಡಳಿತದ ಆಂಧ್ರ ಪ್ರದೇಶದಲ್ಲೂ ಮೇ ತಿಂಗಳಲ್ಲಿ ಇದೇ ವಿಷಯದ ಮೇಲೆ ವಿಶೇಷ ಅಧಿವೇಶನ ನಡೆಸುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.

ದೋವಲ್, ಯುಎಇ ಅಧ್ಯಕ್ಷರ ಭೇಟಿ: ಭದ್ರತೆ ಕುರಿತು ಚರ್ಚೆ

ಅಬುಧಾಬಿ: ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋವಲ್ ಶನಿವಾರ ಅಬುಧಾಬಿಯಲ್ಲಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿ ಮಾಡಿ, ಉಭಯ ದೇಶಗಳ ಸಮಗ್ರ ಆಯಕಟ್ಟಿನ ಪಾಲುದಾರಿಕೆ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಚರ್ಚಿಸಿದರು.

ಅಬುಧಾಬಿಯಲ್ಲಿ ನಡೆದ ಈ ಭೇಟಿಯ ಸಂದರ್ಭದಲ್ಲಿ, ದೋವಲ್, ಪ್ರಧಾನಿ ನರೇಂದ್ರ ಮೋದಿ ಅವರ ಶುಭಾಶಯಗಳನ್ನು ಅಧ್ಯಕ್ಷರಿಗೆ ತಲುಪಿಸಿದರು. ಉಭಯ ನಾಯಕರು ದ್ವಿಪಕ್ಷೀಯ ಬಾಂಧವ್ಯವನ್ನು ಗಾಢಗೊಳಿಸುವ ಮತ್ತು ಇಂಧನ ಭದ್ರತೆಗೆ ಸಂಬಂಧಿಸಿದಂತೆ ಸಹಕಾರವನ್ನು ಹೆಚ್ಚಿಸುವತ್ತ ಗಮನ ಹರಿಸಿದರು. ಮಧ್ಯಪ್ರಾಚ್ಯದಲ್ಲಿನ ಬೆಳವಣಿಗೆಗಳು ಹಾಗೂ ಅವು ಅಂತಾರಾಷ್ಟ್ರೀಯ ಸ್ಥಿರತೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚರ್ಚಿಸಲಾಯಿತು. ಅಬುಧಾಬಿ ರಾಜಕುಮಾರ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ರಾಷ್ಟ್ರೀಯ ಭದ್ರತಾ ಸುಪ್ರೀಂ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ಅಲಿ ಬಿನ್ ಹಮ್ಮದ್ ಅಲ್ ಶಮ್ಸಿ , ಸಭೆಯಲ್ಲಿ ಉಪಸ್ಥಿತರಿದ್ದರು.

ರಾಜತಾಂತ್ರಿಕ ಹಿನ್ನೆಲೆ: ಒಂದೇ ತಿಂಗಳ ಅವಧಿಯಲ್ಲಿ ಉಭಯ ದೇಶಗಳ ನಡುವೆ ನಡೆಯುತ್ತಿರುವ ಎರಡನೇ ಉನ್ನತ ಮಟ್ಟದ ಭೇಟಿ ಇದಾಗಿದೆ. ಇತ್ತೀಚೆಗಷ್ಟೇ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ 9ನೇ ಹಿಂದು ಮಹಾಸಾಗರ ಸಮ್ಮೇಳನದ ನಂತರ ಯುಎಇ ಅಧ್ಯಕ್ಷರನ್ನು ಭೇಟಿ ಮಾಡಿದ್ದರು. ಪಾರದರ್ಶಕ ಆಯಕಟ್ಟಿನ ಪಾಲುದಾರಿಕೆ ಕಾಯ್ದುಕೊಳ್ಳುವುದು ಈ ನಿರಂತರ ಸಂವಾದಗಳ ಉದ್ದೇಶ ಎನ್ನಲಾಗಿದೆ.

ದಾಳಿ: ಅಮೆರಿಕದ ಸೇನಾ ನೆಲೆಗಳಿಗೆ ಭಾರೀ ಹಾನಿ

ವಾಷಿಂಗ್ಟನ್: ಫೆಬ್ರವರಿ 28 ರಿಂದ ಗಲ್ಫ್ ಪ್ರದೇಶದಲ್ಲಿನ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಇರಾನ್ ನಡೆಸಿದ ದಾಳಿಗಳು ಟ್ರಂಪ್ ಆಡಳಿತ ಬಹಿರಂಗಪಡಿಸಿದ್ದಕ್ಕಿಂತ ಹೆಚ್ಚಿನ ಹಾನಿಯನ್ನುಂಟುಮಾಡಿವೆ ಎಂದು ಆಂತರಿಕ ಮೌಲ್ಯಮಾಪನ ವರದಿಗಳು ತಿಳಿಸಿವೆ. ಕನಿಷ್ಠ ಏಳು ದೇಶಗಳಲ್ಲಿನ ಮಿಲಿಟರಿ ಸೌಲಭ್ಯಗಳ ಮೇಲೆ ಇರಾನ್ ದಾಳಿ ಮಾಡಿದೆ ಎಂದು ವರದಿ ಹೇಳಿದೆ. ಕಮಾಂಡ್ ಸೆಂಟರ್‌ಗಳು, ವಿಮಾನ ಹ್ಯಾಂಗರ್‌ಗಳು, ಗೋದಾಮುಗಳು ಮತ್ತು ಉಪಗ್ರಹ ಸಂವಹನ ವ್ಯವಸ್ಥೆಗಳು ಸೇರಿವೆ. ರನ್‌ವೇಗಳು, ರಾಡಾರ್ ವ್ಯವಸ್ಥೆಗಳು ಮತ್ತು ಕೆಲವು ವಿಮಾನಗಳಿಗೂ ಹಾನಿಯಾಗಿದೆ. ಈ ನೆಲೆಗಳು ಮತ್ತು ಉಪಕರಣಗಳ ದುರಸ್ತಿ ವೆಚ್ಚ, ಹಲವು ಬಿಲಿಯನ್ ಡಾಲರ್‌ಗಳಾಗಬಹುದು, ಎಂದು ಅಂದಾಜಿಸಲಾಗಿದೆ.

ರಕ್ಷಣಾ ವ್ಯವಸ್ಥೆಯ ಲೋಪಗಳು: ಅಮೆರಿಕ ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳನ್ನು ಹೊಂದಿದ್ದರೂ, ಕೆಲವು ಲೋಪಗಳು ಕಂಡುಬಂದಿವೆ. ಒಂದು ಘಟನೆಯಲ್ಲಿ, ಇರಾನ್‌ನ ಎಫ್-5 ಫೈಟರ್ ಜೆಟ್ ಅಮೆರಿಕದ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ದಾಳಿ ನಡೆಸುವಲ್ಲಿ ಯಶಸ್ವಿಯಾಗಿದೆ ಎನ್ನಲಾಗಿದೆ. ಪೆಂಟಗನ್ ಮತ್ತು ಯುಎಸ್ ಸೆಂಟ್ರಲ್ ಕಮಾಂಡ್ ಹಾನಿಯ ಬಗ್ಗೆ ನಿರ್ದಿಷ್ಟ ವಿವರಗಳನ್ನು ನೀಡಲು ನಿರಾಕರಿಸಿವೆ.

ಆರ್ಥಿಕ ಪರಿಣಾಮಗಳು: ಪೆಂಟಗನ್ ಈಗಾಗಲೇ 200 ಬಿಲಿಯನ್ ಡಾಲರ್ ಹೆಚ್ಚುವರಿ ಬಜೆಟ್ ಕೋರಿದೆ ಎನ್ನಲಾಗಿದೆ. ಯುದ್ಧದ ಮೊದಲ ವಾರದಲ್ಲಿಯೇ ಅಮೆರಿಕ 11 ಬಿಲಿಯನ್ ಡಾಲರ್ ವೆಚ್ಚ ಮಾಡಿದೆ. ಯುದ್ಧ ಪ್ರಾರಂಭವಾಗುವ ಮೊದಲು 1.5 ಟ್ರಿಲಿಯನ್ ಡಾಲರ್ ರಕ್ಷಣಾ ಬಜೆಟ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಪಾಕ್‌ನಲ್ಲಿ ತೀವ್ರ ಹಸಿವಿನ ಸಂಕಷ್ಟ

- ಜಗತ್ತಿನ ಟಾಪ್ 10 ರಾಷ್ಟ್ರಗಳಲ್ಲಿ ಪಾಕಿಸ್ತಾನ
- 2025ರಲ್ಲಿ 1.1 ಕೋಟಿ ಜನರಿಗೆ ಆಹಾರ ಕೊರತೆ

ಇಸ್ಲಾಮಾಬಾದ್: ಜಗತ್ತಿನಲ್ಲಿ ತೀವ್ರ ಆಹಾರ ಅಭಾವ ಎದುರಿಸುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಪಾಕಿಸ್ತಾನವು ಪ್ರಮುಖ 10 ರಾಷ್ಟ್ರಗಳಲ್ಲಿ ಒಂದಾಗಿ ಗುರುತಿಸಲ್ಪಟ್ಟಿದೆ. ವಿಶ್ವಸಂಸ್ಥೆಯ ಬೆಂಬಲದೊಂದಿಗೆ ಪ್ರಕಟವಾದ 2026ರ ಜಾಗತಿಕ ಆಹಾರ ಸಂಕಷ್ಟ ವರದಿ ಈ ಸಂಗತಿಯನ್ನು ಬಹಿರಂಗಪಡಿಸಿದೆ.ಈ ವರದಿ ಪ್ರಕಾರ, ಪಾಕಿಸ್ತಾನವು ಅಫ್ಘಾನಿಸ್ತಾನ, ಬಾಂಗ್ಲಾದೇಶ, ಕಾಂಗೋ, ಮ್ಯಾನ್ಮಾರ್, ನೈಜೀರಿಯಾ, ದಕ್ಷಿಣ ಸುಡಾನ್, ಸುಡಾನ್, ಸಿರಿಯಾ ಮತ್ತು ಯೆಮನ್ ದೇಶಗಳ ಜೊತೆಗೂಡಿ ತೀವ್ರ ಹಸಿವಿನ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದೆ. 2025ರಲ್ಲಿ ಪಾಕಿಸ್ತಾನದಲ್ಲಿ ಸುಮಾರು 1.1 ಕೋಟಿ ಜನರು ತೀವ್ರ ಆಹಾರ ಅಸುರಕ್ಷತೆಗೆ ಒಳಗಾಗಿದ್ದಾರೆ. ಇವರಲ್ಲಿ 93 ಲಕ್ಷ ಜನರು ಗಂಭೀರ ಸಂಕಷ್ಟದ ಹಂತದಲ್ಲಿದ್ದರೆ, 17 ಲಕ್ಷ ಜನರು ಅತ್ಯಂತ ತುರ್ತು ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಬರಗಾಲದ ಸ್ಥಿತಿಗೆ ತಲುಪದಿದ್ದರೂ, ಈ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ವರದಿ ಹೇಳಿದೆ.

ಭಾರತೀಯ ಕಂಪನಿಗಳಿಗೆ ಮಾರುಕಟ್ಟೆಗೆ ತೆರಿಗೆ ಮುಕ್ತ ಪ್ರವೇಶ
ಇಂದು ಭಾರತ-ನ್ಯೂಜಿಲೆಂಡ್ ಎಫ್‌ಟಿಎಗೆ ಸಹಿ

ಹೊಸದಿಲ್ಲಿ: ದ್ವಿಪಕ್ಷೀಯ ವ್ಯಾಪಾರವನ್ನು 5 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಳಿಸುವ ಮತ್ತು ಹೂಡಿಕೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿವೆ.

ಭಾರತದ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ಸಚಿವ ಟಾಡ್ ಮೆಕ್‌ಕ್ಲೇ, ಈ ಐತಿಹಾಸಿಕ ಒಪ್ಪಂದಕ್ಕೆ ಭಾರತ್ ಮಂಟಪದಲ್ಲಿ ಸಹಿ ಹಾಕಲಿದ್ದಾರೆ. ಈ ಒಪ್ಪಂದದಲ್ಲಿ ನ್ಯೂಜಿಲೆಂಡ್ ಮುಂದಿನ 15 ವರ್ಷಗಳಲ್ಲಿ ಭಾರತದ ಉತ್ಪಾದನೆ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ 20 ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಬದ್ಧವಾಗಿದೆ.

ಈ ಒಪ್ಪಂದ, ಭಾರತೀಯ ಕಂಪನಿಗಳಿಗೆ ನ್ಯೂಜಿಲೆಂಡ್ ಮಾರುಕಟ್ಟೆಗೆ ತೆರಿಗೆ ಮುಕ್ತ ಪ್ರವೇಶ ನೀಡುತ್ತದೆ. ಪ್ರತಿಯಾಗಿ, ನ್ಯೂಜಿಲೆಂಡ್ ರಫ್ತು ಮಾಡುವ ಕುರಿ ಮಾಂಸ, ಉಣ್ಣೆ ಮತ್ತು ಕಲ್ಲಿದ್ದಲಿಗೆ ಭಾರತ ತೆರಿಗೆ ಮುಕ್ತ ಪ್ರವೇಶವನ್ನು ನೀಡಲಿದೆ. ಕಿವಿ ಹಣ್ಣು ಮತ್ತು ಸೇಬು ಸೇರಿದಂತೆ ನ್ಯೂಜಿಲೆಂಡ್‌ನ ಶೇ.95ರಷ್ಟು ರಫ್ತು ವಸ್ತುಗಳ ಮೇಲಿನ ಸುಂಕವನ್ನು ಕಡಿಮೆ



ಮಾಡಲಾಗುತ್ತದೆ ಅಥವಾ ರದ್ದುಗೊಳಿಸಲಾಗುತ್ತದೆ.

ಸಂರಕ್ಷಿತ ಕ್ಷೇತ್ರಗಳು: ಸ್ಥಳೀಯ ರೈತರ ಹಿತಾಸಕ್ತಿ ಕಾಪಾಡಲು ಡೈರಿ ಉತ್ಪನ್ನಗಳು, ಈರುಳ್ಳಿ, ಸಕ್ಕರೆ ಮತ್ತು ಧಾನ್ಯಗಳನ್ನು ಭಾರತ ಈ ಒಪ್ಪಂದದಿಂದ ಹೊರಗಿಟ್ಟಿದೆ. ಸೇವಾ ಕ್ಷೇತ್ರದಲ್ಲಿ, ನ್ಯೂಜಿಲೆಂಡ್ ಪ್ರತಿ ವರ್ಷ ಐಟಿ, ಆರೋಗ್ಯ ಮತ್ತು ಯೋಗ ಶಿಕ್ಷಕರು ಸೇರಿದಂತೆ ವಿವಿಧ ವೃತ್ತಿಪರರಿಗೆ 5,000 ತಾತ್ಕಾಲಿಕ ಉದ್ಯೋಗ ವೀಸಾಗಳನ್ನು ನೀಡಲಿದೆ. ಅಲ್ಲದೆ, ಜಾಗತಿಕ ಗುಣಮಟ್ಟದ ತಪಾಸಣಾ ವರದಿಗಳನ್ನು ಪರಸ್ಪರ ಅಂಗೀಕರಿಸುವ ಮೂಲಕ ಔಷಧೀಯ ವಲಯದ ರಫ್ತಿಗೂ ವೇಗ ನೀಡಲಾಗುವುದು.

ಆಗ್ರಾದ ಚರ್ಮೋದ್ಯಮಕ್ಕೆ ಭಾರೀ ಅವಕಾಶ: ಗೋಯಲ್

ಭಾರತ- ನ್ಯೂಜಿಲೆಂಡ್ ವ್ಯಾಪಾರ ಒಪ್ಪಂದ, ಆಗ್ರಾದ ಚರ್ಮೋದ್ಯಮಕ್ಕೆ ದೊಡ್ಡ ಮಾರುಕಟ್ಟೆಯನ್ನು ಒದಗಿಸಲಿದೆ ಎಂದು ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಭಾನುವಾರ ಟಾಡ್ ಮೆಕ್‌ಕ್ಲೇ ಅವರೊಂದಿಗೆ ತಾಜ್ ಮಹಲ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ತೆರಿಗೆ ಮುಕ್ತ ಪ್ರವೇಶದಿಂದಾಗಿ ಆಗ್ರಾದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೆಚ್ಚಿನ ಲಾಭವಾಗಲಿದ್ದು, ಈ ಭಾಗದಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ, ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ
736 ಸ್ಥಾನಗಳಲ್ಲಿ ಬಿಜೆಪಿ ಅವಿರೋಧ ಆಯ್ಕೆ

ಗಾಂಧಿನಗರ: ಗುಜರಾತ್ ರಾಜ್ಯದ ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ 736 ಸ್ಥಾನಗಳನ್ನು ಅವಿರೋಧವಾಗಿ ಗೆದ್ದಿದೆ. 2021ರ ಸ್ಥಳೀಯಾಡಳಿತ ಚುನಾವಣೆಯಲ್ಲಿ ಬಿಜೆಪಿ ಗಳಿಸಿದ್ದ ಸ್ಥಾನ 220 ಮತ್ತು 2015ರಲ್ಲಿ 37 ಸ್ಥಾನ ಪಡೆದಿತ್ತು. ಏ.15ರಂದು ವಡೋದರ, ಸೂರತ್, ಮೆಹ್ಸಾನಾ ಮತ್ತು ಬನಸ್ಕಾಂತಗಳ 400ಕ್ಕೂ ಅಧಿಕ ವಿಪಕ್ಷೀಯ ಅಭ್ಯರ್ಥಿಗಳು ಗಂಟೆಗಳೊಳಗೆ ತಮ್ಮ ನಾಮಪತ್ರ ಹಿಂಪಡೆದಿದ್ದರು. ಇದು ಸಹಜವಾಗೇ ಬಿಜೆಪಿಗೆ ಪ್ಲಸ್ ಪಾಯಿಂಟ್ ಆಯಿತು.ಇನ್ನಷ್ಟು ಮಹಾನಗರಪಾಲಿಕೆಗಳು, ಪುರಸಭೆಗಳು, ಜಿಪಂ-ತಾಪಂಗಳು ಮುಂದಿನ ದಿನಗಳಲ್ಲಿ ಚುನಾವಣೆ ಎದುರಿಸಲಿವೆ.



ರಾಜ್ಯದ 15 ಮಹಾನಗರಪಾಲಿಕೆಗಳು, 84 ಪುರಸಭೆಗಳು, 34 ಜಿಲ್ಲಾ ಪಂಚಾಯತ್‌ಗಳು , 260 ತಾಲೂಕು ಪಂಚಾಯತ್‌ಗಳು ಚುನಾವಣೆ ಎದುರಿಸುತ್ತಿವೆ. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ನಂತರದಲ್ಲಿ ರಾಜ್ಯದಲ್ಲಿ ನಡೆದ ಪ್ರಥಮ ಚುನಾವಣೆ ಇದಾಗಿದೆ. ಈ ಬಾರಿಯ ಸ್ಥಳೀಯಾಡಳಿತ ಚುನಾವಣೆಯಲ್ಲಿ 4.1ಕೋಟಿ ಮತದಾರರು ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ ಮತ್ತು 25,537 ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ. ಹೊಸತಾಗಿ ರೂಪುಗೊಂಡ 9 ಮಹಾನಗರಪಾಲಿಕೆಗಳು ಪ್ರಥಮ ಬಾರಿ ಚುನಾವಣೆ ಎದುರಿಸುತ್ತಿವೆ. 1995ರಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ರಾಜ್ಯದಲ್ಲಿ 2027ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ವಿಧಾನಸಭಾ ಚುನಾವಣೆಗೆ ಒಂದು ವರ್ಷ ಮುನ್ನ ಸ್ಥಳೀಯಾಡಳಿತ ಚುನಾವಣೆಗಳು ನಡೆದಿವೆ. 2015ರ ಸ್ಥಳೀಯಾಡಳಿತ ಚುನಾವಣೆಯಲ್ಲಿ ಕಾಂಗ್ರೆಸ್ ಪಾರಮ್ಯ ಸಾಧಿಸಿತ್ತು. ಇದು ನಂತರ 2017ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪೂರಕವಾಗಿ ಪರಿಣಮಿಸಿತ್ತು . ಚುನಾವಣೆಯಲ್ಲಿ 182ಸದಸ್ಯ ಬಲದ ವಿಧಾನಸಭೆಯಲ್ಲಿ 77 ಸ್ಥಾನ ಹೊಂದಲು ಕಾಂಗ್ರೆಸ್‌ಗೆ ಶಕ್ಯವಾಗಿತ್ತು. ಬಿಜೆಪಿ ಸ್ಥಾನಬಲ ಆಗ 99ರಷ್ಟಿತ್ತು. ಕಳೆದ ಸ್ಥಳೀಯಾಡಳಿತ ಚುನಾವಣೆಯಲ್ಲಿ ರಾಜ್ಯದ ಬಹುತೇಕ ಎಲ್ಲಾ ಪ್ರಮುಖ ಮಹಾನಗರಪಾಲಿಕೆಗಳನ್ನು ಬಿಜೆಪಿ ಮತ್ತೆ ತನ್ನಲ್ಲೇ ಉಳಿಸಿಕೊಳ್ಳಲು ಯಶಸ್ವಿಯಾಗಿತ್ತು. ಕಾಂಗ್ರೆಸ್‌ನ್ನು ಬದಿಗೊತ್ತಿ ಆಮ್ ಆದ್ಮಿ ಪಕ್ಷ ದ್ವಿತೀಯ ಬೃಹತ್ ಪಕ್ಷವಾಗಿ ಮೂಡಿತ್ತು.

ಪ್ರಮುಖ ಪಾತ್ರ ವಹಿಸಲಿದೆ ಮೀಸಲಾತಿ: ಇತರ ಹಿಂದುಳಿದ ಜಾತಿಗಳಿಗೆ (ಒಬಿಸಿ)ಶೇ.27ಮೀಸಲಾತಿ, ಮಹಿಳೆಯರಿಗೆ ಶೇ. 50 ಸ್ಥಾನ ಮೀಸಲು ಮತ್ತು ಹಲವಾರು ಹುದ್ದೆಗಳಲ್ಲಿ ಪ.ಪಂಗಡಗಳು ಮತ್ತು ಜಾತಿ ಸ್ಥಾನಗಳ ಆವರ್ತನ ಅನುಷ್ಠಾನಗೊಂಡ ನಂತರ ನಡೆಯುತ್ತಿರುವ ಪ್ರಥಮ ಚುನಾವಣೆ ಇದಾಗಿದೆ. ಪ್ರಥಮ ಬಾರಿ ಒಬಿಸಿ ಅಭ್ಯರ್ಥಿಗಳಿಗೆ 7 ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷ ಸ್ಥಾನಗಳನ್ನು ಮೀಸಲಿಡಲಾಗಿದೆ. ಸುಮಾರು 5ಸಾವಿರ ಸೀಟುಗಳಿಗೆ ಆಪ್ ಅಭ್ಯರ್ಥಿಗಳು ಸ್ಪರ್ಧಾಕಣದಲ್ಲಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	7	5	2	0	10	+1.101
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	7	3	4	0	6	-0.184
ಮುಂಬೈ	7	2	5	0	4	-0.736
ಲಖನೌ	7	2	5	0	4	-1.277
ಕೆಕೆಆರ್	7	1	5	1	3	-0.879

ದಿಲ್ಲಿ ತವರಿನಲ್ಲಿ ಪಾಟಿದಾರ್ ಪಡೆಗೆ ಗೆಲುವಿನ ವಿಶ್ವಾಸ | ಜೇಕಬ್ ಬೆಥೆಲ್, ವೆಂಕಟೇಶ್‌ಗೆ ಆಡುವ ಸಾಧ್ಯತೆ

ಕ್ಯಾಪಿಟಲ್ ಸೇಡಿಗಾಗಿ ಆರ್‌ಸಿಬಿ ಸಮರ!

ಹೊಸದಿಲ್ಲಿ: ಏ.18ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿದ್ದ ದಿಲ್ಲಿ ಕ್ಯಾಪಿಟಲ್ಸ್ ತಂಡ, ಪಂಜಾಬ್ ವಿರುದ್ಧ 264 ರನ್ ಕಲೆಹಾಕಿದರೂ ಅದೇ 6 ವಿಕೆಟ್ ಅಂತರದಲ್ಲಿ ಸೋಲುಂಡಿದೆ. ಇದೀಗ ಪಂಜಾಬ್ ಕಿಂಗ್ಸ್ ಎದುರಿನ ಸೋಲಿನ ಆಘಾತದಲ್ಲಿ ಇರುವ ದಿಲ್ಲಿ ತಂಡದ ಕ್ಯಾಪಿಟಲ್‌ಗೆ ಬಂದಿಳಿದ ಆರ್‌ಸಿಬಿ ಸೇಡು ತೀರಿಸಲು ಹಾತೊರೆಯುತ್ತಿದೆ.

ಪಂಜಾಬ್ ವಿರುದ್ಧದ 6 ವಿಕೆಟ್ ಸೋಲಿನಿಂದ ದಿಲ್ಲಿ ಕ್ಯಾಪಿಟಲ್ಸ್ ಬೌಲಿಂಗ್ ಸಾಮರ್ಥ್ಯ ಪ್ರಶ್ನೆಗೆ ಗುರಿಯಾಗಿದೆ. ಕ್ಯಾಪಿಟಲ್ಸ್ ಬೌಲರ್‌ಗಳ ಮೇಲೆ ಕಿಂಗ್ಸ್ ಬ್ಯಾಟರ್‌ಗಳು ಸ್ಪಷ್ಟವಾದ ಮೇಲುಗೈ ಸಾಧಿಸಿದ್ದರು. ಬೌಲಿಂಗ್‌ನಲ್ಲಿ ಸಮಸ್ಯೆ ಎದುರಿಸಿದರೆ ಇನ್ನೊಂದೆಡೆ ಪ್ಲೇಆಫ್ ಹಂತ ಪ್ರವೇಶಿಸಬೇಕಾದ ಒತ್ತಡವೂ ಕ್ಯಾಪಿಟಲ್ಸ್ ಮೇಲಿದೆ. ಕಳೆದ 7 ಪಂದ್ಯಗಳನ್ನು ಕ್ಯಾಪಿಟಲ್ಸ್ 3 ಪಂದ್ಯಗಳನ್ನಷ್ಟೇ ಗೆದ್ದುಕೊಂಡಿದೆ. ಹೀಗಾಗಿ ಇನ್ನೊಮ್ಮೆ ಆರ್‌ಸಿಬಿ ವಿರುದ್ಧ ಬಹಳ ಮಹತ್ವದ ಪಂದ್ಯವನ್ನಾಡಲಿದೆ.

ಕ್ಯಾಪಿಟಲ್ಸ್ ತವರಿನಲ್ಲಿ ಗೆಲ್ಲುವುದು ಕೇವಲ 2 ಅಂಕ ಸಂಪಾದಿಸುವುದಲ್ಲದೆ, ತಾನು ಯಾಕಾಗಿ ಹಾಲಿ ಚಾಂಪಿಯನ್ ಎಂಬುದನ್ನು ಆರ್‌ಸಿಬಿ ಪ್ರದರ್ಶಿಸಿ ಪ್ರಾಬಲ್ಯ ಮೆರೆಯುವ ಅಗತ್ಯವಿದೆ. ಅದೇ ರೀತಿ ಕ್ಯಾಪಿಟಲ್ಸ್ ಬೌಲರ್‌ಗಳು ತಮ್ಮ ಪ್ರದರ್ಶನ ಸುಧಾರಿಸುವ ಮೂಲಕ ಬ್ಯಾಟರ್‌ಗಳ ಪ್ರಯತ್ನ ವ್ಯರ್ಥ ಆಗದಿರುವಂತೆ ನೋಡಿಕೊಳ್ಳಬೇಕಿದೆ. ಉಳಿದಂತೆ ಪಾಟಿದಾರ್ ನಾಯಕತ್ವ, ವಿರಾಟ್ ಕೊಹ್ಲಿ ಬ್ಯಾಟಿಂಗ್ ಬಲ ಆರ್‌ಸಿಬಿಗಿದ್ದು, ಜೇಕಬ್ ಬೆಥೆಲ್ ಅವರಿಗೆ ಮತ್ತೊಂದು ಅವಕಾಶ ನೀಡುವ ಸಾಧ್ಯತೆಯಿದೆ.



ಆರ್‌ಸಿಬಿ ಸಮತೋಲನದ ಆಟ

ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವುದರೊಂದಿಗೆ ಪಂದ್ಯ ಗೆದ್ದುಕೊಟ್ಟಿದ್ದಾರೆ. ಒತ್ತಡದ ಪರಿಸ್ಥಿತಿಯಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ಈ ಬಾರಿ ಯಶಸ್ವಿಯಾಗಿದ್ದು ವಿಶೇಷ. ಟೈಟಾನ್ಸ್ 200+ ಸ್ಕೋರ್ ಮಾಡಿದ್ದರೂ, ಸುಯಶ್, ಭುವನೇಶ್ವರ್ ಕುಮಾರ್ ಮತ್ತು



ಹ್ಯಾಜೆಲ್‌ವುಡ್ ಜತೆಗೂಡಿ ಡೆತ್ ಓವರ್‌ಗಳಲ್ಲಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಟೈಟಾನ್ಸ್ ಇನ್ನೂ ದೊಡ್ಡ ಸ್ಕೋರ್ ಮಾಡದಂತೆ ನೋಡಿಕೊಂಡರು. ಈ ಆವೃತ್ತಿಯಲ್ಲಿ ಆರ್‌ಸಿಬಿ, ಪಂಜಾಬ್ ಎರಡು ತಂಡಗಳು ಮಾತ್ರ ಬಲಾಢ್ಯ ಬ್ಯಾಟರ್‌ಗಳಿಂದ ತುಂಬಿವೆ ಎಂಬ ಮಾತಿನ ಮಧ್ಯೆ ಆರ್‌ಸಿಬಿ ಬೌಲಿಂಗ್‌ನಲ್ಲೂ ಉತ್ತಮ ಪ್ರದರ್ಶನ ನೀಡಿ ಗಮನಸೆಳೆದಿದೆ. ಯಾವ ವಿಭಾಗದಲ್ಲಿ ಕ್ಯಾಪಿಟಲ್ಸ್ ತಲೆನೋವಿಗೆ ಕಾರಣವೋ ಅದೇ ವಿಭಾಗದಲ್ಲಿ ಆರ್‌ಸಿಬಿ ಮೇಲುಗೈ ಹೊಂದಿದೆ.

ದಿಲ್ಲಿ-ಬೆಂಗಳೂರು, ದಿಲ್ಲಿ, ರಾತ್ರಿ 7.30ರಿಂದ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್.

ಅಪಾಯಕಾರಿ ರಾಹುಲ್!

ಎರಡೂ ಪಂದ್ಯಗಳಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಮಿಂಚಿದ್ದರು ಎಂಬುದು ಇನ್ನೊಂದು ಹೈಲೆಟ್. ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಮತ್ತು ಕಿಂಗ್ಸ್ ಎರಡೂ ತಂಡಗಳು ಬಲಾಢ್ಯ ತಂಡಗಳೆಂದು ಜನಪ್ರಿಯತೆ ಪಡೆದುಕೊಂಡಿವೆ. ಇಂತಹ ಬಲಾಢ್ಯ ತಂಡಗಳೆದುರು ರಾಹುಲ್ ಯಾವುದೇ ಒತ್ತಡವಿಲ್ಲದೆ ಬ್ಯಾಟ್ ಬೀಸಿ ಗಮನಸೆಳೆದಿದ್ದಾರೆ. ಅದರಲ್ಲೂ ಪಂಜಾಬ್ ವಿರುದ್ಧ ಭರ್ಜರಿ 152 ರನ್ ಹೊಡೆದು ಔಟಾಗದೆ ಉಳಿದ ರಾಹುಲ್, ತಮ್ಮ ಪ್ರಚಂಡ ಲಯ ಪ್ರದರ್ಶಿಸಿದ್ದಾರೆ. ಇದು ಕ್ಯಾಪಿಟಲ್ಸ್ ತವರಿನಲ್ಲಿ ಆರ್‌ಸಿಬಿಗೊಂದು ಸವಾಲಿನ ವಿಚಾರವಾಗಿರಲಿದೆ.

ಮುಖಾಮುಖಿ: 33, ಆರ್‌ಸಿಬಿ: 20, ದಿಲ್ಲಿ: 12, ಫಲಿತಾಂಶವಿಲ್ಲ: 1

ನೆಟ್ ಅಭ್ಯಾಸ ನಡೆಸಿದ ವೆಂಕಟೇಶ್ ಅಯ್ಯರ್

ಕಿರುಸುದ್ದಿ

ರಿಂಕು ಪರಾಕ್ರಮದಿಂದಾಗಿ ಕೆಕೆಆರ್ ಸಾಧಾರಣ ಮೊತ್ತ



ಲಖನೌ: ವೇಗಿ ಮೊಹ್ಸಿನ್ ಖಾನ್ ಕರಾರುವಾಕ್ ಬೌಲಿಂಗ್‌ನಿಂದಾಗಿ ಬ್ಯಾಟಿಂಗ್ ಕ್ರಮಾಂಕದಲ್ಲಿ ಭಾರೀ ಕುಸಿತ ಕಂಡಿದ್ದ ಕೆಕೆಆರ್ ತಂಡವನ್ನು ತಮ್ಮ ಸ್ಫೋಟಕ ಬ್ಯಾಟಿಂಗ್‌ನಿಂದ ರಿಂಕು ಸಿಂಗ್ (ಅಜೇಯ 83 ರನ್) ಮೇಲೆತ್ತಿದರು. ಕೇವಲ 23 ರನ್ ಬಿಟ್ಟುಕೊಟ್ಟು 5 ವಿಕೆಟ್ ಕಬಳಿಸುವ ಮೂಲಕ ಮೊಹ್ಸಿನ್ ಕೆಕೆಆರ್ ಬ್ಯಾಟಿಂಗ್ ಬೆನ್ನೆಲುಬು ಮುರಿದಿದ್ದರು. 34 ರನ್ ಹೊಡೆದ ಕ್ಯಾಮರೂನ್ ಗ್ರೀನ್ ವಿಕೆಟನ್ನೂ ಮೊಹ್ಸಿನ್ ಅವರೇ ಕಬಳಿಸಿದ್ದರು. ರಿಂಕು ಸ್ಫೋಟಕ ಇನ್ನಿಂಗ್ಸ್‌ನಲ್ಲಿ 7 ಬೌಂಡರಿ ಮತ್ತು 5 ಸಿಕ್ಸರ್ ಒಳಗೊಂಡಿದ್ದವು. ಒಂದು ಹಂತದಲ್ಲಿ 93 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದ ಕೆಕೆಆರ್, 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್ ಪೇರಿಸಿದ್ದು ನಂಬಲಸಾಧ್ಯ ಸ್ಕೋರ್.

ಧೋನಿ ಸ್ನಾಯು ಸೆಳೆತ ಉಲ್ಬಣಿಸಿದೆ: ಫ್ಲೆಮಿಂಗ್

ಚೆನ್ನೈ: ಮೀನಖಂಡದ ಸ್ನಾಯು ಸೆಳೆತವು ಇನ್ನಷ್ಟು ಉಲ್ಬಣಿಸಿದ ಕಾರಣ ಮಹೇಂದ್ರ ಸಿಂಗ್ ಧೋನಿ ಆಡುವ ಬಳಗಕ್ಕೆ ಮರಳುವುದು ಇನ್ನಷ್ಟು ತಡವಾಗಲಿದೆ ಎಂದು ಸಿಎಸ್‌ಕೆ ಮುಖ್ಯ ತರಬೇತುದಾರ ಸ್ಟೀಫನ್ ಫ್ಲೆಮಿಂಗ್ ಬಹಿರಂಗಗೊಳಿಸಿದ್ದಾರೆ. ತಂಡದ ಜತೆ ನೆಟ್ ಅಭ್ಯಾಸದಲ್ಲಿ ಪಾಲ್ಗೊಂಡಿದ್ದರಿಂದ ಧೋನಿ ಗಾಯ ಇನ್ನಷ್ಟು ಉಲ್ಬಣಿಸಿದೆ ಎಂಬ ಮಾಹಿತಿಯನ್ನು ಫ್ಲೆಮಿಂಗ್ ನೀಡಿದ್ದಾರೆ. ಇದರಿಂದ ಸದ್ಯ ಧೋನಿ ಐಪಿಎಲ್ ಭವಿಷ್ಯ ತೂಗುಯ್ಯಾಲೆಯಲ್ಲಿದೆ.

ಊಬರ್ ಕಪ್ ಬ್ಯಾಡ್ಮಿಂಟನ್: ಉಕ್ರೇನ್ ವಿರುದ್ಧ ಗೆದ್ದ ಭಾರತ


ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ನಡೆದ ಊಬರ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಗುಂಪು ಹಂತದಲ್ಲಿ ತನ್ವಿ ಶರ್ಮಾ, ಉನ್ನತಿ ಹುಡಾ ಮತ್ತು ದೇವಿಕಾ ಸಿಹಾಗ್ ಅವರನ್ನೊಳಗೊಂಡ ಭಾರತ ತಂಡ ಉಕ್ರೇನ್ ವಿರುದ್ಧ 4-1 ಅಂತರದಿಂದ ಗೆಲುವು ಸಾಧಿಸಿದೆ.

ಚೆಪಾಕ್‌ನಲ್ಲಿ ಸೋಲುಂಡ ಚೆನ್ನೈ

ಚೆನ್ನೈ: ನಾಯಕ ಋತುರಾಜ್ ಗಾಯಕ್ವಾಡ್ ಬ್ಯಾಟಿಂಗ್ ಪ್ರದರ್ಶನದ ಹೊರತಾಗಿಯೂ ಚೆನ್ನೈ ಸೂಪರ್ ಕಿಂಗ್ಸ್ ಸೋಲುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಸಿಎಸ್‌ಕೆ ನೀಡಿದ 159 ರನ್ ಸವಾಲು ಬೆನ್ನತ್ತಿದ ಟೈಟಾನ್ಸ್ ಪರ ಆರಂಭಿಕ ಸುದರ್ಶನ್ ಬಿರುಸಿನ ಆರಂಭ ನೀಡಿದ್ದು, 2 ವಿಕೆಟ್ ಕಳೆದುಕೊಂಡು ಗುಜರಾತ್ ಗೆಲುವಿನ ದಡ ಸೇರಿತು. ಸಂಜು ಸ್ಯಾಮ್ಸನ್ ವಿಕೆಟ್ ಸಹಿತ 25ಕ್ಕೆ 3 ವಿಕೆಟ್ ಕಬಳಿಸಿ ಗೆಲುವಿನ ರೂವಾರಿಯಾದ ಕಗಿಸೋ ರಬಾಡ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬ್ಯಾಟರ್‌ಗಳು ನೀಡಿದ ಕೆಟ್ಟ ಆರಂಭದಿಂದಾಗಿ ಸಿಎಸ್‌ಕೆ ದೊಡ್ಡ ಮೊತ್ತ ಪೇರಿಸಲು ಸಾಧ್ಯವಾಗಿಲ್ಲ. ಆದರೂ ನಾಯಕನಾಟ ಆಡಿದ ಗಾಯಕ್ವಾಡ್ ಸಿಎಸ್‌ಕೆ ಗೌರವದ ಮೊತ್ತ ಕಲೆಹಾಕಲು ನೆರವಾದರು. ವೇಗಿ ರಬಾಡ ಚೆನ್ನೈ ಬ್ಯಾಟಿಂಗ್ ಕ್ರಮಾಂಕದಲ್ಲಿ ನಡುಕ ಹುಟ್ಟಿಸಿದರು. ರಬಾಡ ಮತ್ತು ಸಿರಾಜ್ ದಾಳಿಗೆ ನಲುಗಿದ ಚೆನ್ನೈ ಪವರ್‌ಪ್ಲೇ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 28 ರನ್ ಗಳಿಸಿತ್ತು. ಇಂಪ್ಯಾಕ್ಟ್ ಪ್ಲೇಯರ್ ಸರ್ಫರಾಜ್ ಖಾನ್ ವೈಫಲ್ಯವೂ ಚೆನ್ನೈ ತಂಡವನ್ನು ಬಹಳ ಕಾಡಿತು.

ಸಂಕ್ಷಿಪ್ತ ಸ್ಕೋರ್

ಚೆನ್ನೈ 158/7(20): ಗಾಯಕ್ವಾಡ್ 74★ (ರಬಾಡ 25ಕ್ಕೆ 3).
ಗುಜರಾತ್ 162/2 (20): ಸುದರ್ಶನ್ 87, ಬಟ್ಲರ್ 39★ (ನೂರ್ 29ಕ್ಕೆ 1).



ಗಾಯಕ್ವಾಡ್ ಅರ್ಧ ಶತಕ!

ನಿರಂತರ ಟೀಕೆಗಳಿಗೆ ಆಹಾರವಾದ ಚೆನ್ನೈ ನಾಯಕ ಗಾಯಕ್ವಾಡ್ ಅರ್ಧ ಶತಕ ದಾಖಲಿಸಿದ್ದು, ಸಿಎಸ್‌ಕೆ ಪಾಲಿಗೆ ಆಧಾರಸ್ತಂಭವಾದರು. ಎರಡು ಬೌಂಡರಿಗಳ ಮೂಲಕ ತಮ್ಮ ಬ್ಯಾಟಿಂಗ್ ಆರಂಭಿಸಿದ್ದ ಋತುರಾಜ್ ತಮ್ಮ ಇನ್ನೊಂದು ಬದಿ ವಿಕೆಟ್‌ಗಳು ಉದುರುವುದನ್ನು ನೋಡುತ್ತಲೇ ಇದ್ದರು. ಆದರೂ 60 ಎಸೆತಗಳಿಂದ ಅಜೇಯ 74 ರನ್ ಗಳಿಸುವ ಮೂಲಕ ತಂಡದ ಮೊತ್ತ 158 ರನ್ ತಲುಪುವಲ್ಲಿ ನೆರವಾದರು. ಋತುರಾಜ್ ಇನ್ನಿಂಗ್ಸ್‌ನಲ್ಲಿ 6 ಬೌಂಡರಿಗಳು ಮತ್ತು 4 ಸಿಕ್ಸರ್‌ಗಳಿದ್ದವು.

5000 ರನ್ ಮೈಲಿಗಲ್ಲು ದಾಟಿದ ಸಂಜು

ಚೆನ್ನೈ: ಸಿಎಸ್‌ಕೆ-ಜಿಟಿ ನಡುವಿನ ಪಂದ್ಯದ ಎರಡನೇ ಓವರ್‌ನಲ್ಲಿ ವೇಗಿ ಕಗಿಸೋ ರಬಾಡ ಎಸೆತವನ್ನು ಸಿಕ್ಸರ್‌ಗಟ್ಟುವ ಮೂಲಕ ಚೆನ್ನೈ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಐಪಿಎಲ್‌ನಲ್ಲಿ 5000 ರನ್ ಮೈಲಿಗಲ್ಲು ದಾಟಿದರು. ಆದರೆ ನಂತರ 15 ಎಸೆತಗಳಲ್ಲಿ 11 ರನ್ ಗಳಿಸಿದ ಸಂಜು ರಬಾಡಗೆ ವಿಕೆಟ್ ಒಪ್ಪಿಸಿದರು. 31 ವರ್ಷದ ಸ್ಯಾಮ್ಸನ್ ರಾಜಸ್ಥಾನ್, ದಿಲ್ಲಿ ಮತ್ತು ಚೆನ್ನೈ ಫ್ರಾಂಚೈಸಿಗಳ ಪರ 185 ಪಂದ್ಯಗಳನ್ನು ಆಡಿದ್ದಾರೆ. ಐದು ಶತಕಗಳನ್ನೂ ದಾಖಲಿಸಿದ್ದಾರೆ. ಎಸೆತಗಳ ಆಧಾರದಲ್ಲಿ ಅತಿ ವೇಗದ 5,000 ರನ್ ಪೂರೈಸಿದವರ ಪಟ್ಟಿಯಲ್ಲಿ ಸಂಜು ಮೂರನೇ ಸ್ಥಾನ ಪಡೆದಿದ್ದು, ತಮ್ಮದೇ ತಂಡದ ಅನುಭವಿ ಬ್ಯಾಟರ್ ಎಂ.ಎಸ್. ಧೋನಿ (3691) ದಾಖಲೆ ಮುರಿದಿದ್ದಲ್ಲದೆ, ಹಲವರನ್ನು ಹಿಂದಿಕ್ಕಿದ್ದಾರೆ.



ಐಪಿಎಲ್‌ನಲ್ಲಿ ವೇಗದ 5,000 ರನ್ (ಬಾಲ್ಸ್)

- ಎಬಿ ಡಿ ವಿಲಿಯರ್ಸ್ - 3288
- ಡೇವಿಡ್ ವಾರ್ನರ್ - 3554
- ಸಂಜು ಸ್ಯಾಮ್ಸನ್ - 3555
- ಸುರೇಶ್ ರೈನಾ - 3620
- ಕೆಎಲ್ ರಾಹುಲ್ - 3688

ಕಡಿಮೆ ಎಸೆತಗಳಲ್ಲಿ ಈ ಸಾಧನೆಗೈದ 3ನೇ ಬ್ಯಾಟರ್

5,000 ರನ್ ಪೂರೈಸಿದ ಬ್ಯಾಟರ್ಸ್

- ವಿರಾಟ್ ಕೊಹ್ಲಿ - 8,989 ರನ್
- ರೋಹಿತ್ ಶರ್ಮಾ - 7,183 ರನ್
- ಶಿಖರ್ ಧವನ್ - 6,769 ರನ್
- ಡೇವಿಡ್ ವಾರ್ನರ್ - 6,565 ರನ್
- ಕೆ.ಎಲ್. ರಾಹುಲ್ - 5,579 ರನ್
- ಸುರೇಶ್ ರೈನಾ - 5,528 ರನ್
- ಎಂ.ಎಸ್.ಧೋನಿ - 5,439 ರನ್
- ಅಜಿಂಕ್ಯಾ ರಹಾನೆ - 5,184 ರನ್
- ಎಬಿ ಡಿ ವಿಲಿಯರ್ಸ್ - 5,162 ರನ್
- ಸಂಜು ಸ್ಯಾಮ್ಸನ್ - 5,008 ರನ್

ಅತಿ ವೇಗದ 5,000 ರನ್ (ಇನ್ನಿಂಗ್ಸ್)

- ಕೆ.ಎಲ್. ರಾಹುಲ್ - 130
- ಡೇವಿಡ್ ವಾರ್ನರ್ - 135
- ವಿರಾಟ್ ಕೊಹ್ಲಿ - 157
- ಎಬಿ ಡಿ ವಿಲಿಯರ್ಸ್ - 161
- ಶಿಖರ್ ಧವನ್ - 168

ವಿಶ್ವ 10ಕೆ: ಓಮರ್ ಅಬ್ದುಲ್ಲಾ ಭಾಗಿ


ಬೆಂಗಳೂರು: ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್‌ಗೆ ಸುಮಾರು 32 ಸಾವಿರ ಜನ ಭಾಗಿಯಾಗಿದ್ದು, ಅದರಲ್ಲಿ ಶೇ.26 ರಷ್ಟು ಮಹಿಳೆಯರು ಭಾಗವಹಿಸಿದ್ದರು. ಬೆಂಗಳೂರಿಗರು ಮಾತ್ರವಲ್ಲದೆ ವಿದೇಶದಿಂದಲೂ ಜನರು ಆಗಮಿಸಿದ್ದು, ಓಮರ್ ಅಬ್ದುಲ್ಲಾ ಕೂಡ ಈ ಮ್ಯಾರಥಾನ್‌ನಲ್ಲಿ ಭಾಗಿಯಾಗಿದ್ದರು. ಈ ರೀತಿ ಕ್ರೀಡಾ ಹಾಗೂ ಪ್ರವಾಸೋದ್ಯಮ ಕಾರ್ಯಕ್ರಮಗಳನ್ನು ಮಾಡುವುದರಿಂದ ಬೆಂಗಳೂರಿಗೆ ತುಂಬಾ ಅನುಕೂಲವಾಗಲಿದೆ. ಟಿಸಿಎಸ್ ಅವರಿಗೆ ಅಭಿನಂದನೆಗಳು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ಮ್ಯಾರಥಾನ್‌ಗೆ ಚಾಲನೆ ನೀಡಿದ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸುಮಾರು 5 ರಿಂದ 6 ದಿನಗಳ ಕಾಲ ಪರಿಶೀಲನೆ ಕೂಡ ನಡೆದಿತ್ತು. ಟ್ರ್ಯಾಕ್ ಈ ಬಾರಿ ತುಂಬಾ ಚೆನ್ನಾಗಿತ್ತು ಎಂಬ ಅಭಿಪ್ರಾಯ ಓಟಗಾರರಿಂದ ಕೇಳಿಬಂದಿದೆ. ಈ ಬಾರಿ ತುಂಬಾ ಚೆನ್ನಾಗಿ ಆಯೋಜಿಸಲಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಕೂಡ ಅಭಿನಂದಿಸಿದ್ದಾರೆ. ಆದರೆ, ಅವರಿಂದ ಹೊಗಳಿಕೆ ನಿರೀಕ್ಷಿಸುವವರು ಮೂರ್ಖರು ಎಂದರು. ತೇಜಸ್ವಿ ಸೂರ್ಯ ಅವರು, ಇರುವುದೇ ಟೀಕೆ ಮಾಡುವುದಕ್ಕೆ. ಅವರ ಕೈಯಿಂದ ಇನ್ನೇನು ಮಾಡಲು ಆಗುವುದಿಲ್ಲ. ಟೀಕೆ ಮಾಡದೇ ಅವರೇನು ಹೊಗಳುತ್ತಾರಾ?, ಅವರು ಹೊಗಳುತ್ತಾರೆಂದು ನಾವು ಭಾವಿಸಿದರೆ ನಾವು ಮೂರ್ಖರು ಎಂದು ತಿರುಗೇಟು ನೀಡಿದರು.



ಪದಬಂಧ

ರಾಜಾ ಸಂಗಮೇಶ ಹಿರೇಮಠ

5966



ಎಡದಿಂದ ಬಲಕ್ಕೆ
1.ಇದು ಮಂಗಳಕರವಾದ ಗುರುತು (5)
3.ಉಣ್ಣೆಯಿಂದ ಮಾಡಿದ ದಪ್ಪನೆಯ ಹೊದಿಕೆ (3)
4.ನೂಲು ಮೊದಲಿರುವ ಬಾಗಿಲ ಚೌಕಟ್ಟು (3)
5.ಭೂಮಿಯ ಮೇಲಿನ ಕಡಿದಾದ ಜಾಗ ತಿರುಗಿದೆ (3)
7.ನಿದ್ದೆಯಲ್ಲಿ ಕಾಣುವ ಸ್ವಪ್ನ (3)
9.ಆನೆಯೂ ಹೌದು-ಬೇಡನೂ ಹೌದು (3)
10.ಚಿಗುರನ್ನು ತಿನ್ನುತ್ತಿರುವ ಜಿಂಕೆ (3)
12.ವಿಡಂಬನೆ-ಅಪಹಾಸ್ಯದ ಸಮಾನಪದ (3)
14.ತಾವರೆಯ ಒಂದು ಹೆಸರು (3)
16.ರಸವನ್ನು ಗ್ರಹಿಸುವ ಅಂಗ (3)
17.ಬತ್ತಿಯನ್ನು ಹೊಸೆದದ್ದು ಹೀಗೆ 32 ಬಾರಿ (3)
18. ಕೆಡುಕನ್ನು ಬಗೆ ಎಂಬರ್ಥದ ನುಡಿಗಟ್ಟು (5)

ಮೇಲಿನಿಂದ ಕೆಳಕ್ಕೆ
1.ಸಮುದ್ರ-ನದಿಗಳ ಏರಿಳಿತಗಳು (3)
2.ತಾತ್ಕಾಲಿಕ ವಸತಿ ತಲೆಕೆಳಗಾಗಿದೆ (4)
3.ಕೋಟೆ ಸುತ್ತಲಿನ ತಗ್ಗು (3)
6.ಗ್ರಹ ನಡುವೆ ಇಟ್ಟುಕೊಂಡು ಮದುವೆಯಾಗು (5)
8.ಸರಹದ್ದಿನಾಚೆ ಹೋಗದಂತೆ ಲಕ್ಷ್ಯದಲ್ಲಿಡುವ ಬಂಧನ (5)
11.ವಿನಾಯಕನ ಒಂದು ಹೆಸರು (4)
13.ವ್ಯಾಪಾರದ ಮೂಲವಸ್ತು ತಲೆಕೆಳಗಾಗಿದೆ (3)
15.ಮಾಡಿದ ಕೆಲಸಕ್ಕೆ ಪ್ರತಿಯಾಗಿ ಕೊಡುವ ಹಣ (3)

5965 ಉತ್ತರ

ಎಡದಿಂದ ಬಲಕ್ಕೆ:
1.ಬೇಸಾಯಗಾರ
3.ಮೂಜಗ 5.ನೆಗೆ
7.ತಹತಹಿಸು
9.ಬಿಂಬಸಾರ 11.ನಾಗರತ್ನ
13.ಸಂತಸಮಯ
15.ನಗ 17.ಲೆಕ್ಕಿಗ
18.ತಲೆಯೋಡಿಸು

ಮೇಲಿನಿಂದ ಕೆಳಕ್ಕೆ :
1.ಬೇಸಿಗೆ 2.ರಜತ
4.ಗಡಸು 6.ಬದನೆ
8.ಹವನಾ 10.ಮತ್ಸರ
12.ರಶನ 13.ಸಂಕೋಲೆ
14.ತನಯ 16.ಗಳಿಸು


ದಾಖಲೆ ಮುರಿದ ಕ್ವಿಜೆರಾ, ಫ್ಲೋರೆನ್ಸ್ ಚಾಂಪಿಯನ್

ಟಿಸಿಎಸ್ ವಿಶ್ವ 10ಕೆ ಬೆಂಗಳೂರು | ಮಿಂಚಿದ ಭಾರತದ ಸಂಜೀವಿನಿ ಜಾಧವ್, ಹರ್ಮನ್‌ಜೋತ್

ಬೆಂಗಳೂರು: ನಗರದಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ 10ಕೆ ಬೆಂಗಳೂರು 2026ರಲ್ಲಿ ಬುರುಂಡಿಯ ರೋಡ್ರಿಗ್ ಕ್ವಿಜೆರಾ ಹೊಸ ಕೂಟ ದಾಖಲೆ (00:27:31) ನಿರ್ಮಿಸಿದರೆ, ಮಹಿಳಾ ವಿಭಾಗದಲ್ಲಿ ರುವಾಂಡಾದ ಫ್ಲೋರೆನ್ಸ್ ನಿಯೋಂಕುರು 00:30:45 ಸಮಯದಲ್ಲಿ ವಿಜೇತರಾದರು. ಭಾರತೀಯರಲ್ಲಿ ಸಂಜೀವಿನಿ ಜಾಧವ್ 35:01 ಸಮಯದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದು, 2.75 ಲಕ್ಷ ರೂ. ಬಹುಮಾನ ಗೆದ್ದರು. ಪುರುಷರ ವಿಭಾಗದಲ್ಲಿ ಅತಿವೇಗದಲ್ಲಿ (29:13) ಓಟ ಮುಗಿಸಿದ ಹರ್ಮನ್‌ಜೋತ್ ಸಿಂಗ್ 3 ಲಕ್ಷ ರೂ. ಬಹುಮಾನ ಗೆದ್ದರು.



ಓಟದಲ್ಲಿ ಪಾಲ್ಗೊಂಡ ಯಕ್ಷಗಾನ ವೇಷಧಾರಿಗಳು



ಬುರುಂಡಿಯ ರೋಡ್ರಿಗ್ ಕ್ವಿಜೆರಾ ಓಟದ ನೋಟ.



ಪ್ರಶಸ್ತಿ ಗೆದ್ದ ರುವಾಂಡಾದ ಫ್ಲೋರೆನ್ಸ್ ನಿಯೋಂಕುರು.



ಅತಿ ವೇಗದ ಭಾರತೀಯ ಹರ್ಮನ್‌ಜೋತ್ ಸಿಂಗ್



ಸಂಜೀವಿನಿ ಜಾಧವ್ ಗೆಲುವಿನ ಹ್ಯಾಟ್ರಿಕ್.

ರಾಜಸ್ಥಾನದಲ್ಲಿ ಸನ್‌ರೈಸ್

ಜೈಪುರ: ದಾಖಲೆಗಳ ಮೇಲೆ ದಾಖಲೆ ಬರೆಯುತ್ತಿರುವ ಹದಿನೈದರ ಪೋರ ವೈಭವ್ ಸೂರ್ಯವಂಶಿ(103) ವೇಗದ ಶತಕ ವ್ಯರ್ಥವಾಗಿದ್ದು, ಅಭಿಷೇಕ್ ಶರ್ಮಾ(57) ಮತ್ತು ನಾಯಕ ಇಶಾನ್ ಕಿಶನ್(74) ಅರ್ಧ ಶತಕಗಳ ನೆರವಿನಿಂದ ಹೈದರಾಬಾದ್, ರಾಜಸ್ಥಾನ್ ನೀಡಿದ 229 ರನ್ ಸವಾಲನ್ನು ಸುಲಭವಾಗಿ ಬೆನ್ನತ್ತಿದೆ. ರಾಯಲ್ಸ್ ವಿರುದ್ಧ 5 ವಿಕೆಟ್ ಜಯ ಸಾಧಿಸಿದ ಸನ್‌ರೈಸರ್ಸ್ 3ನೇ ಸ್ಥಾನಕ್ಕೇರಿದೆ.

18.5 ಓವರ್‌ಗಳಲ್ಲೇ 265 ರನ್‌ಗಳನ್ನು ಬೆನ್ನತ್ತಿ ಪಂಜಾಬ್ ಕಿಂಗ್ಸ್ ಗೆದ್ದ ಬಳಿಕ ಐಪಿಎಲ್‌ನಲ್ಲಿ 200+ ರನ್ ಹೊಡೆದರೂ ಅದು ಪಂದ್ಯ ಗೆಲ್ಲಲು ಸಾಕಾಗಬಹುದೇ ಎಂಬ ಪ್ರಶ್ನೆ ಉದ್ಭವವಾಗಿದೆ. ಈ ಹಿನ್ನೆಲೆ ರಾಯಲ್ಸ್ 6 ವಿಕೆಟ್ ಕಳೆದುಕೊಂಡು 228 ರನ್ ಹೊಡೆದರೂ, ಸನ್‌ರೈಸರ್ಸ್ ಇದನ್ನು ಬೆನ್ನತ್ತುವ ನಿರೀಕ್ಷೆಯಿತ್ತು. ಮೊದಲ ಓವರ್‌ನಲ್ಲೇ ವೇಗಿ ಜೊಫ್ರಾ ಆರ್ಚರ್, ಆರಂಭಿಕ ಟ್ರಾವಿಸ್ ಹೆಡ್‌ರನ್ನು ಪೆವಿಲಿಯನ್ ಕಳುಹಿಸಿದ್ದರು. ಇದಾದ ಬಳಿಕ ಜತೆಗೂಡಿದ ಅಭಿಷೇಕ್ ಮತ್ತು ಕಿಶನ್ ಹೊಡೆಬಡಿ ಆಟವಾಡುತ್ತ ತಮ್ಮ ಅದೃಷ್ಟ ಪರೀಕ್ಷೆ ನಡೆಸಿದರು. ಇಬ್ಬರೂ ಸೇರಿ ದ್ವಿತೀಯ ವಿಕೆಟ್‌ಗೆ 55 ಎಸೆತಗಳಲ್ಲಿ 132 ರನ್ ಕಲೆಹಾಕಿದರು. ವೈಯಕ್ತಿಕವಾಗಿ ಸೂರ್ಯವಂಶಿ ಸ್ಟ್ರೈಕ್‌ರೇಟ್ ಸರಿಗಟ್ಟದಿದ್ದರೂ, ವೈಭವ್ ಮತ್ತು ಜ್ಯುರೆಲ್ ಅವರ 62 ಎಸೆತಗಳಲ್ಲಿನ 112 ರನ್ ಜತೆಯಾಟವನ್ನು ಹಿಂದಿಕ್ಕಿದರು. ಡೋನೊವನ್ ಫೆರೇರ ಇವರ ಜತೆಯಾಟವನ್ನು ಮುರಿದರು.

ಅಷ್ಟರಲ್ಲಿ ಸನ್‌ರೈಸರ್ಸ್ ಜಯಕ್ಕೆ ಕೊನೆಯ 10 ಓವರ್‌ಗಳಲ್ಲಿ ಓವರ್‌ಗೆ 9 ರನ್‌ಗಳ ಅಗತ್ಯವಿತ್ತು. ಅಭಿಷೇಕ್ ಮತ್ತೊಮ್ಮೆ ಅಬ್ಬರಿಸಿ 29 ಎಸೆತಗಳಲ್ಲಿ 11 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡಿದ್ದ 57 ರನ್ ಹೊಡೆದರು. ಕಿಶನ್ 238.7 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ್ದು, 31 ಎಸೆತಗಳಲ್ಲಿ 11 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಿದ್ದ 74 ರನ್ ಹೊಡೆದಿದ್ದರು. ಉಳಿದಂತೆ ಕ್ಲಾಸನ್ 29, ನಿತೀಶ್ ಕುಮಾರ್ ರೆಡ್ಡಿ ಅಬ್ಬರದ 3 ಸಿಕ್ಸರ್ ಒಳಗೊಂಡಿದ್ದ 18 ಎಸೆತಗಳ 36 ರನ್ ಕೊಡುಗೆ ನೀಡಿ ಗೆಲುವಿನ ದಡ ಸೇರಿಸಿದ್ದರು. ಆರ್ಚರ್, ಬ್ರಿಜೇಶ್ ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ್ 228/6(20): ಸೂರ್ಯವಂಶಿ 103, ಜ್ಯುರೆಲ್ 51, ಫೆರೇರ 33 (ಮಾಲಿಂಗ 38ಕ್ಕೆ 2).
ಹೈದರಾಬಾದ್ 229/5: ಕಿಶನ್ 74, ಅಭಿಷೇಕ್ 57, ರೆಡ್ಡಿ 36 (ಆರ್ಚರ್ 34ಕ್ಕೆ 2, ಬ್ರಿಜೇಶ್ 44ಕ್ಕೆ 2).

ವೈಭವ್ ಶೂನ್ಯ, ಶತಕ: ಎರಡರಲ್ಲೂ ಗೆದ್ದ ಸನ್

ಹದಿಮೂರು ದಿನಗಳ ಹಿಂದೆ ತವರಿನ ಪಂದ್ಯದಲ್ಲಿ ಬ್ಯಾಟರ್ ಸೂರ್ಯವಂಶಿ ಅವರನ್ನು ಖಾತೆ ತೆರೆಯುವ ಮುನ್ನವೇ ಪೆವಿಲಿಯನ್ ಕಳುಹಿಸಿ ಗೆದ್ದಿದ್ದ ಸನ್‌ರೈಸರ್ಸ್, ಜೈಪುರದಲ್ಲಿ ವೈಭವ್ ಶತಕ ದಾಖಲಿಸಿದರೂ ಪಂದ್ಯವನ್ನು ಗೆದ್ದಿತು.


ಕಿರುಸುದ್ದಿ

ಭಾವೈಕ್ಯ ಧರ್ಮ ಸಮ್ಮೇಳನ ನಾಳೆ



ಬೀಳಗಿ: ತಾಲೂಕಿನ ಗಿರಿಸಾಗರದ ಕಲ್ಯಾಣ ಹಿರೇಮಠದಲ್ಲಿ ಮಹಾತಪಸ್ವಿ ಸಂಗನಬಸವ ಶಿವಾಚಾರ್ಯ ಸ್ವಾಮಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಮಠದ ಪೀಠಾಧಿಕಾರಿ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಏ. 28ರಂದು ಬೆಳಗ್ಗೆ 6 ಗಂಟೆಗೆ ಜಂಗಮವಟುಗಳ ಅಯ್ಯಾಚಾರ, ಶಿವದೀಕ್ಷಾ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 8 ಗಂಟೆಗೆ ನಾನಾಸಾಹೇಬ ದೇಸಾಯಿ ಧರ್ಮ ಧ್ವಜಾರೋಹಣ, ಪ್ರವೀಣಗೌಡ ಪಾಟೀಲ ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಬೆಳಿಗ್ಗೆ 9 ಗಂಟೆಗೆ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಅದ್ದೂರಿ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿಲಿದೆ. ಮಧ್ಯಾಹ್ನ 12.38ಕ್ಕೆ ಜರುಗುವ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಭಾವೈಕ್ಯ ಧರ್ಮ ಸಮ್ಮೇಳನದಲ್ಲಿ ಮುಕ್ತಿಮಂದಿರದ ವಿಮಲರೇಣುಕ ಶಿವಾಚಾರ್ಯ ಶ್ರೀಗಳು, ನಿಡಗುಂದಿಯ ರುದ್ರಮುನಿ ಶಿವಾಚಾರ್ಯ ಶ್ರೀಗಳು, ಬಿಲ್‌ಕೆರೂರದ ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳು, ಮುತ್ತತ್ತಿಯ ಗುರುಲಿಂಗ ಶಿವಾಚಾರ್ಯ ಶ್ರೀಗಳು, ಕೊಣ್ಣೂರದ ಡಾ. ವಿಶ್ವಪ್ರಭುದೇವ ಶಿವಾಚಾರ್ಯ ಶ್ರೀಗಳು, ಚಿಮ್ಮಲಗಿಯ ಸಿದ್ಧರೇಣುಕ ಶಿವಾಚಾರ್ಯ ಶ್ರೀಗಳು, ಮಸೂತಿಯ ಪ್ರಭುಕುಮಾರ ಶಿವಾಚಾರ್ಯ ಶ್ರೀಗಳು, ಆಮಲಟ್ಟಿಯ ಡಾ. ರುದ್ರಮುನಿ ದೇವರು, ನಾಗರಾಳದ ಶೇಷಪ್ಪಯ್ಯ ಸ್ವಾಮಿಗಳು, ಡಾ. ಪ್ರಭುಸಾರಂಗದೇವ ಶಿವಾಚಾರ್ಯ ಶ್ರೀಗಳು, ವಾಮದೇವ ಶಿವಾಚಾರ್ಯ ಶ್ರೀಗಳು, ಗುರುಪಾದ ಶಿವಾಚಾರ್ಯ ಶ್ರೀಗಳು, ವೀರಸಂಗಮೇಶ್ವರ ಶಿವಾಚಾರ್ಯ ಶ್ರೀಗಳು, ಗಂಗಾಧರ ಶಿವಾಚಾರ್ಯ ಶ್ರೀಗಳು, ಚನ್ನಬಸವ ಸ್ವಾಮಿಗಳು, ಶಿವಾನಂದ ದೇವರು, ನಿರ್ವಾಣ ಸ್ವಾಮಿಗಳು, ವೀರತಯ್ಯ ಸ್ವಾಮಿಗಳು, ಬಸಮ್ಮ ತಾಯಿ ಆಗಮಿಸುವರು. ಸಂಜೆ 4 ಗಂಟೆಗೆ ಸುಪ್ರಸಿದ್ಧ ಜಂಗೀ ಕುಸ್ತಿ ಪಂದ್ಯಾವಳಿಗಳು ನಡೆಯಲಿವೆ. ಅಂದು ರಾತ್ರಿ 10.30ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸಾಂಸ್ಕೃತಿಕ ನಾಟಕ ಪ್ರದರ್ಶನ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಎಲ್‌ಇಡಿ ಆಸ್ಪತ್ರೆಗೆ ದೇಹದಾನ



ವಿಜಯಪುರ: ಜಿಲ್ಲೆಯಲ್ಲಿ ದೇಹದಾನದ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಹೆಚ್ಚಾಗುತ್ತಿದ್ದು, ಸಿಂದಗಿ ತಾಲೂಕಿನ ಹಂದಿಗನೂರು ಗ್ರಾಮದ ಮಹಾದೇವಪ್ಪ ಗುರುಬಸಪ್ಪ ಮುಳವಾಡ (82) ಅವರ ಮೃತದೇಹವನ್ನು ಕುಟುಂಬಸ್ಥರು ಬಿಎಲ್‌ಡಿಇ ಆಸ್ಪತ್ರೆಗೆ ದಾನ ಮಾಡಿದ್ದಾರೆ. 82 ವರ್ಷದ ಮಹಾದೇವಪ್ಪ ಗುರುಬಸಪ್ಪ ಮುಳವಾಡ ಅವರು ಏ. 24 ರಂದು ನಿಧನರಾಗಿದ್ದು, ಮೃತರ ಇಚ್ಛೆಯಂತೆ ಕುಟುಂಬಸ್ಥರು ದೇಹದಾನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಆಸ್ಪತ್ರೆಯ ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್.ಎಸ್. ಬುಲಗೌಡ ಅವರು ಪಾರ್ಥಿವ ಶರೀರ ಸ್ವೀಕರಿಸಿ ಕುಟುಂಬಸ್ಥರಿಗೆ ಕೃತಜ್ಞತೆ ಸಲ್ಲಿಸಿದರು.

ಸಿಇಟಿ ಪರೀಕ್ಷೆ: ವಿದ್ಯಾರ್ಥಿಗಳ ಜನಿವಾರ ತೆಗೆಸಿದ್ದು ಆಕ್ಷೇಪ

ವಿಜಯನಗರ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತವಾಗಿ ತೆಗೆಸಿದ ಕ್ರಮವನ್ನು ಎಐಡಿಎಸ್‌ಒ ಜಿಲ್ಲಾ ಸಮಿತಿ ಖಂಡಿಸಿದೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ, ಕೆಇಎ ಮಾರ್ಗಸೂಚಿಗಳಿದ್ದರೂ ವಿದ್ಯಾರ್ಥಿಗಳ ವೈಯಕ್ತಿಕ ನಂಬಿಕೆಗಳಿಗೆ ಧಕ್ಕೆ ತರುತ್ತಿರುವುದು ಸರಿಯಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಘಟನೆಗಳು ವಿದ್ಯಾರ್ಥಿಗಳ ಮೇಲೆ ಮಾನಸಿಕ ಪರಿಣಾಮ ಬೀರುತ್ತಿವೆ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಜವಾಬ್ದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನೈಜ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದ್ದಾರೆ.

25 ಸಾವಿರ ರೂ. ದಂಡ

ಭಟ್ಕಳ: ಮುರುಡೇಶ್ವರದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕನಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಅವಕಾಶ ಕೊಟ್ಟ ಬಾಲಕನ ತಂದೆಗೆ ಭಟ್ಕಳ ಜೆಎಂಎಫ್‌ಸಿ ನ್ಯಾಯಾಲಯ 25 ಸಾವಿರ ರೂಪಾಯಿ ದಂಡ ವಿಧಿಸಿ ಆದೇಶಿಸಿದೆ. ಮುರುಡೇಶ್ವರದ ಬಸ್ತಿ ಕಾಯ್ಕಿಣಿ ನಿವಾಸಿ ರಾಜೇಶ ನಾಗಪ್ಪ ನಾಯ್ಕ ಅವರು ಅವರ ಅಪ್ರಾಪ್ತ ಮಗನಿಗೆ ಬೈಕ್ ಚಾಲನೆ ಮಾಡಲು ಅವಕಾಶ ನೀಡಿದ್ದರು. ಬೈಕ್ ತಪಾಸಣೆ ವೇಳೆ ಇದನ್ನು ಪತ್ತೆ ಹಚ್ಚಿದ ಮುರುಡೇಶ್ವರ ಪೊಲೀಸ್ ಠಾಣೆಯ ಪಿಎಸ್‌ಐ ಹನುಮಂತ ಬಿರಾದಾರ ನ್ಯಾಯಾಲಯಕ್ಕೆ ವಾಹನದ ಮಾಲೀಕರ ಮೇಲೆ ದೋಷಾರೋಪನೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು 25 ಸಾವಿರ ದಂಡ ವಿಧಿಸಿದ್ದಾರೆ.

ಬಸವಕಾವ್ಯ ಸಮ್ಮೇಳನ | ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಕಾಯಕವನ್ನು ಪೂಜ್ಯಭಾವನೆಯಿಂದ ಕಾಣಿ



ಬಾದಾಮಿ: ಬಸವಣ್ಣನವರು ಸಾರಿದ 'ಕಾಯಕವೇ ಕೈಲಾಸ' ಎಂಬ ತತ್ವವು ಶ್ರಮದ ಮಹತ್ವವನ್ನು ಎತ್ತಿಹಿಡಿಯುತ್ತದೆ. ನಾವು ಮಾಡುವ ಪ್ರತಿಯೊಂದು ಕಾರ್ಯವನ್ನೂ ಪೂಜೆಯಂತೆ ಕಾಣುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಾಹಾಂತೇಶ ಮಮದಾಪೂರ ಹೇಳಿದರು.

ನಗರದ ಎಸ್.ಎಸ್.ಬಿ.ಎಂ.ಕಾಲೇಜಿನ ಸ್ಪರ್ಧಾ ಶಕ್ತಿ ಕೇಂದ್ರದಲ್ಲಿ ಬಸವ ಜಯಂತಿ ಅಂಗವಾಗಿ ಹೊಳೆಆಲೂರಿನ ಎಸ್.ಎಸ್. ಆಡಿನ ಜನಸೇವಾ ಸಂಸ್ಥೆಯ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬಸವ ಕಾವ್ಯ ಸಮ್ಮೇಳನ ಹಾಗೂ ಕಾಯಕಜೀವಿ ಆದರ್ಶ ದಂಪತಿ, ಬಸವರತ್ನ ಮತ್ತು ಬಸವ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಬಸವ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ ನಾವು ಒಂದಾಗಿ ಸೇರಿರುವುದು ಸಂತೋಷದ ಸಂಗತಿ. ಇಂದು ಈ ವೇದಿಕೆಯಲ್ಲಿ ಕಾಯಕಜೀವಿ ಆದರ್ಶ ದಂಪತಿ, ಬಸವರತ್ನ ಹಾಗೂ ಬಸವ ಮಹಿಳಾ ರತ್ನ ಪ್ರಶಸ್ತಿಗಳ ಮೂಲಕ ಸಮಾಜ ಸೇವಕರನ್ನು ಗೌರವಿಸಲಾಗುತ್ತಿದೆ. ಇದು ಇತರರಿಗೆ ಪ್ರೇರಣೆಯಾಗುತ್ತದೆ. ಹಾಗೆಯೇ ಬಸವ ಕಾವ್ಯ ಸಮ್ಮೇಳನದ ಮೂಲಕ ಸಾಹಿತ್ಯದ ಮೂಲಕ ಬಸವ ತತ್ವಗಳನ್ನು ಹರಡುವ ಪ್ರಯತ್ನವೂ ಅತ್ಯಂತ ಮಹತ್ವದ್ದಾಗಿದೆ. ಈ ಸಾರ್ಥಕ ಕಾರ್ಯಕ್ರಮವನ್ನು ಆಯೋಜಿಸಿರುವ ಎಸ್.ಎಸ್. ಆಡಿನ ಜನಸೇವಾ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನವಗ್ರಹ ಹಿರೇಮಠ, ಬಾದಾಮಿಯ ಪೂಜ್ಯ ಶ್ರೀ ಷ.ಬ್ರ. ಶಿವಪೂಜಾ ಶಿವಸಚ್ಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬಸವ ಕಾವ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಶರಣಮ್ಮ ಗದ್ದಗಿಮಠ ಮಾತನಾಡಿ, ಬಸವ ಕಾವ್ಯ ಸಮ್ಮೇಳನವೆಂಬುದು ಕೇವಲಸಾಹಿತ್ಯ ಕಾರ್ಯಕ್ರಮವಲ್ಲ; ಅದು ಚಿಂತನೆಯ ಹಬ್ಬವಾಗಿದೆ. ಬಸವಣ್ಣನವರ ವಚನಗಳು ಸಮಾಜ ಪರಿವರ್ತನೆಗೆ ದಾರಿ ತೋರಿಸುವ ಅಮೂಲ್ಯ ಮಾರ್ಗದರ್ಶಕಗಳು. ಸಾಹಿತ್ಯವು ಸಮಾಜದ ಕನ್ನಡಿ; ಕಾವ್ಯಗಳ ಮೂಲಕ ನಾವು ಸಮಾನತೆ, ಸತ್ಯ, ಶ್ರಮ ಹಾಗೂ ಮಾನವೀಯತೆಯ ಮೌಲ್ಯಗಳನ್ನು ಜನರಿಗೆ ತಲುಪಿಸಬಹುದು. ಇಂದು ಈ ವೇದಿಕೆಯಲ್ಲಿ ಒಂದಾಗಿರುವ ಕವಿಗಳು ತಮ್ಮ ಕಾವ್ಯಗಳ ಮೂಲಕ ಬಸವ ತತ್ವಗಳನ್ನು ಜೀವಂತಗೊಳಿಸುತ್ತಿದ್ದಾರೆ. ಇಂತಹ ಸಮ್ಮೇಳನಗಳು ಯುವ ಪೀಳಿಗೆಗೆ ಪ್ರೇರಣೆಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷೆ ಶೋಭಾ ಎಸ್. ಆಡಿನ ವಹಿಸಿದ್ದರು. ಎಸ್.ಎಸ್.ಬಿ.ಎಂ. ಕಾಲೇಜಿನ ಮೇಲ್ವಿಚಾರಣಾ ಸಮಿತಿ ನಿರ್ದೇಶಕಿ ಶಾರದಾ ಹೆಚ್. ಮೇಟಿ ಅವರು ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮುಖ್ಯ ಅತಿಥಿಗಳಾಗಿ ಚಿನ್ನು ಬ್ಯಾಂಕಿನ ಅಧ್ಯಕ್ಷ ಶೇಖರಗೌಡ ಪಾಟೀಲ, ಪ್ರಾಚಾರ್ಯ ಡಾ.ಎ.ಎ.ತೋಪಕಟ್ಟಿ, ರೋಣ ಸಿಪಿಐಯ ವಿಜಯಕುಮಾರ ನಾಯಕ, ನಿಂಗಪ್ಪ ನವಲಗುಂದ, ಭೀಮರಡ್ಡೆಪ್ಪ ರಡ್ಡೇರ, ಬಸವರಾಜ ತಳವಾರ, ಪ್ರೊ. ಎಸ್.ಎಸ್. ಮೂಲಿಮನಿ ಹಾಗೂ ಶಾಂತಾ ಹಿರೇಮಠ ಉಪಸ್ಥಿತರಿದ್ದರು. ಎಸ್.ಕೆ. ಆಡಿನ ಸ್ವಾಗತಿಸಿದರು. ಡಾ.ಎಸ್.ಎಸ್.ತಿಪ್ಪಶೆಟ್ಟಿ, ವೀರಣ್ಣ ಕಮ್ಮಾರ, ಎಸ್.ಎನ್. ಯಲಿಗಾರ, ರಮೇಶ ವಕ್ಕರ, ಭೀಮಪ್ಪ ಮಾದರ, ಭೀಮಪ್ಪ ಕದರಳ್ಳಿ, ಡಾ.ಜಯಂತ್ ಕುಮಾರ, ಗವಿಸಿದ್ದಯ್ಯ ಹಳ್ಳಿಕೇರಿಮಠ ಸೇರಿದಂತೆ ಅನೇಕ ಗಣ್ಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಭಾವಕ್ಕೆ ತಕ್ಕಂತೆ ಶಿವ: ಅದೃಶ್ಯ ಶ್ರೀ

ಹುಬ್ಬಳ್ಳಿ: ಯಾರು ಪ್ರಾರ್ಥಿಸುತ್ತಾರೋ, ಪೂಜಿಸುತ್ತಾರೋ, ಆರಾಧಿಸುತ್ತಾರೋ ಅವರಿಗೆ ಅದೇ ರೂಪದಲ್ಲಿ ದೇವರು ದರ್ಶನಾಶೀರ್ವಾದ ಮಾಡುತ್ತಾರೆ. ಅವರವರ ಭಾವಕ್ಕೆ ತಕ್ಕಂತೆ ಶಿವನಿದ್ದಾನೆ. ಭಜಿಸಿದಂತೆ ಫಲ ಕೊಡುತ್ತಾನೆ ಎಂದು ಕನ್ನೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಶ್ರೀ ಅಯ್ಯಪ್ಪ ಭಕ್ತ ವೃಂದ ಟ್ರಸ್ಟ್ ವತಿಯಿಂದ ಇಲ್ಲಿಯ ಶಿರೂರ ಪಾರ್ಕ್ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸಿರುವ ಅಯ್ಯಪ್ಪ ಸ್ವಾಮಿ ಪರಿವಾರ ದೇವರ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ಶ್ರೀ ಅಯ್ಯಪ್ಪ ಭಕ್ತ ವೃಂದ ಟ್ರಸ್ಟ್ ಡಾ.ವಿ.ಎಸ್.ವಿ. ಪ್ರಸಾದ, ಆನಂದ ಗುರುಸ್ವಾಮಿ ಅವರು ಹುಬ್ಬಳ್ಳಿಯಲ್ಲಿ ತದ್ರೂಪ ಅಯ್ಯಪ್ಪ ಸ್ವಾಮಿ ದೇವಸ್ಥಾನ ನಿರ್ಮಿಸುವ ಕನಸು ಕಂಡು ನನಸು ಮಾಡಿದರು. ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿದೇಶಕರಾದ ಡಾ. ಆನಂದ ಸಂಕೇಶ್ವರ ಅವರ ಮಾರ್ಗದರ್ಶನದಲ್ಲಿ ದೇವಸ್ಥಾನ ನಿರ್ಮಿಸಲಾಗಿದೆ. ಟ್ರಸ್ಟ್ ಸದಸ್ಯರು, ಭಕ್ತರು ಜತೆಗೂಡಿ ಮಾಡಿದ ಕೆಲಸದಿಂದ ಇಂದು ಭಕ್ತರ ದೇವಸ್ಥಾನವೆಂದು ಪ್ರಸಿದ್ಧಿ ಪಡೆದಿದೆ. ಕರ್ನಾಟಕಕ್ಕೆ ಮಾದರಿಯಾಗಿದೆ ಎಂದರು.

ದೇವಸ್ಥಾನದ ಧರ್ಮಾಧಿಕಾರಿ ಆನಂದ ಗುರುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಲಬುರ್ಗಿಯ ಸವಿತಾನಂದ ಸ್ವಾಮೀಜಿ, ಶ್ರೀ ಅಯ್ಯಪ್ಪ ಭಕ್ತ ವೃಂದ ಟ್ರಸ್ಟ್ ಅಧ್ಯಕ್ಷ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ ಸಂಕೇಶ್ವರ, ಶಬರಿಮಲೈ ಅಯ್ಯಪ್ಪಸೇವಾ ಸಮಾಜದ ಅಖಿಲ ಭಾರತ ಅಧ್ಯಕ್ಷ ಟಿ.ಬಿ. ಶೇಖರ, ಟ್ರಸ್ಟ್ ಕಾರ್ಯದರ್ಶಿ ಜಯರಾಮ ಶೆಟ್ಟಿ ಇದ್ದರು.



ಉತ್ತಮ ಆರೋಗ್ಯಕ್ಕಾಗಿ ಸೈಕ್ಲೋಥಾನ್



ರಾಯಬಾಗ: ಸೈಕಲ್ ಸವಾರಿಯಿಂದ ಉತ್ತಮ ಆರೋಗ್ಯ ಪಡೆದುಕೊಳ್ಳಲು ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದು ಬೆಳಗಾವಿ ಕೆಎಂಎಫ್ ನಿರ್ದೇಶಕ, ವಿಧಾನ ಪರಿಷತ್ ಮಾಜಿ ಸದಸ್ಯ ವಿವೇಕರಾವ ಪಾಟೀಲ ಹೇಳಿದರು.

ತಾಲೂಕಿನ ಬೆಕ್ಕೇರಿ ಗ್ರಾಮದಲ್ಲಿ ಲಕ್ಕವ್ವದೇವಿ ಜಾತ್ರಾಮಹೋತ್ಸವ ಅಂಗವಾಗಿ ರಾಯಬಾಗ ಸೈಕ್ಲಿಂಗ್ ಕ್ಲಬ್ ಹಾಗೂ ಬಾಗಿ ಸೋಷಿಯಲ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ ಸೈಕ್ಲೋಥಾನ್ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ನಿತ್ಯದ ಕಾರ್ಯ ಚಟುವಟಿಕೆಯಲ್ಲಿ ಸೈಕಲ್ ಬಳಕೆ ಮಾಡುವುದ ಉತ್ತಮ. ಇಂದಿನ ಯುವ ಜನಾಂಗ ಮತ್ತೆ ಸೈಕ್ಲಿಂಗ್ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸೈಕ್ಲೋಥಾನನಲ್ಲಿ 50 ಕ್ಕೂ ಹೆಚ್ಚು ಸೈಕಲ್ ಪಟುಗಳು ಭಾಗವಸಿದ್ದರು. ಈ ಸೈಕ್ಲೋಥಾನವು ಬೆಕ್ಕೇರಿ ಗ್ರಾಮದ ಲಕ್ಕವ್ವದೇವಿ ದೇವಸ್ಥಾನದ ಮೂಲಕ ಪ್ರಾರಂಭವಾಗಿ ರಾಯಬಾಗ ಪಟ್ಟಣದಾದ್ಯಂತ ಸಂಚರಿಸಿ ಮತ್ತೆ ಬೆಕ್ಕೇರಿ ಗ್ರಾಮದ ಲಕ್ಕವ್ವದೇವಿಯ ದೇವಸ್ಥಾನದಕ್ಕೆ ಬಂದು ತಲುಪಿತು. ಸೈಕ್ಲೋಥಾನದಲ್ಲಿ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ವೃದ್ಧರು ಅತ್ಯಂತ ಉತ್ಸಾಹದಿಂದ ಭಾಗಿಯಾಗಿದ್ದರು.

ಸೈಕ್ಲೋಥಾನಲ್ಲಿ ಭಾಗವಹಿಸಿದವರಿಗೆ ಮೆಡಲ್ ಹಾಗೂ ಪ್ರಮಾಣ ಪತ್ರನೀಡಲಾಯಿತು.

ಸೋಷಿಯಲ್ ಕ್ಲಬ್ ಅಧ್ಯಕ್ಷ ರಾಜು ಅಳಾಜ, ವಿಶ್ವನಾಥ ಅಳಾಜ, ಹನುಮಂತ ಟಕ್ಕನವರ, ಜಿತೇಂದ್ರ ಶೆಟ್ಟಿ, ಬಸಪ್ಪ ನಾಗೌಡರ, ಬಸು ನನದಿ, ಮನೋಹರ ನಾನಾಪಗೋಳ, ಭೀಮು ನಾನಾಪಗೋಳ, ರಮೇಶ ಕುಲಕರ್ಣಿ ಹಾಗೂ ಜಿಲ್ಲೆಯ ಸಯಕಲ್ ಪಟುಗಳು ಭಾಗವಹಿಸಿದ್ದರು.

ಕುಸ್ತಿಯಿಂದ ಧೈರ್ಯ, ಆತ್ಮವಿಶ್ವಾಸ ವೃದ್ಧಿ



ನವಲಗುಂದ: ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಶೌರ್ಯದ ಪ್ರತೀಕವಾಗಿರುವ ಕುಸ್ತಿ ಕೇವಲ ಕ್ರೀಡೆಯಲ್ಲ ಅದು ಶಿಸ್ತು, ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ ಮಹತ್ವದ ಪರಂಪರೆ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ತಾಲೂಕಿನ ಮೊರಬ ಗ್ರಾಮದಲ್ಲಿ ಅಡವಿಸ್ವಾಮಿ ಮಠದ ಸಮೀಪ ಮಾಳಿಂಗರಾಯರ ಜಾತ್ರಾ ಮಹೋತ್ಸವದ ಅಂಗವಾಗಿಹಮ್ಮಿಕೊಂಡಿದ್ದರಾಜ್ಯಮಟ್ಟದಜಂಗಿ ನಿಕಾಲಿ ಕುಸ್ತಿ ಸ್ಪರ್ಧೆಯನ್ನು ಗ್ರಾಮಸ್ಥರೊಂದಿಗೆ ಉದ್ಘಾಟಿಸಿ ಮಾತನಾಡಿದರು.

ಇಂತಹ ರಾಜ್ಯ ಮಟ್ಟದ ಸ್ಪರ್ಧೆಗಳು ಯುವಕರಲ್ಲಿ ಕ್ರೀಡಾಸಕ್ತಿ ಹೆಚ್ಚಿಸಿ, ನಮ್ಮ ಗ್ರಾಮೀಣ ಸಂಸ್ಕೃತಿಗೆ ಮತ್ತಷ್ಟು ಮೆರಗು ತರುತ್ತವೆ ಎಂದರು.

ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ಮುರಘಯ್ಯಜ್ಜ ವಿರಕ್ತಮಠ ವಹಿಸಿದ್ದರು. ಬಸವಣ್ಣೆಪ್ಪ ಮಾನಶೆಟ್ಟಿ, ಮಾಲತೇಶ ಹಂಚಿನಾಳ, ಎಂ.ಎಂ. ಮುಲ್ಲಾ, ಬಸವರಾಜ ಬ್ಯಾಹಟ್ಟಿ, ಶಿವಾನಂದ ಕುರಲಗೇರಿ, ಕಲ್ಲನಗೌಡ್ರ ರಾಯನಗೌಡ್ರ, ಅರ್ಜುನ್ ಅಕ್ಕಿ, ರವಿ ಕಾಗದಾಳ, ಈರಣ್ಣ ಗೋಡಿಕಟ್ಟಿ, ಶಿವಪುತ್ರಪ್ಪ ಯಡ್ರಾವಿ, ಮಲ್ಲಪ್ಪ ಸರ್ಕಾರ, ಷಣ್ಮುಖ ಸೇರಿದಂತೆ ಮುಂತಾದ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೇಡಿಕೆ ಈಡೇರುವವರೆಗೂ ಜಾಗಬಿಟ್ಟು ಕದಲುವುದಿಲ್ಲ



ಸಿಂಧನೂರು: ನಮ್ಮ ಡಬ್ಬಾ ಅಂಗಡಿಗಳನ್ನು ಕಳೆದ ವರ್ಷ ಏಕಾಏಕಿ ಕಿತ್ತಿಹಾಕಿ ಬದುಕುವ ಹಕ್ಕನ್ನು ಕಿತ್ತಿಕೊಳ್ಳಲಾಗಿದೆ. ಕಾನೂನಿನ ಹೆಸರಿನಲ್ಲಿ ಜಿಲ್ಲಾ ಮತ್ತು ತಾಲೂಕು ಆಡಳಿತಗಳು ದಬ್ಬಾಳಿಕೆ ನಡೆಸುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಸಕರು ಮೌಖಿಕವಾಗಿ ಸೂಚಿಸಿದರೂ ಸಹ ಅಧಿಕಾರಿಗಳು ಜೀವನೋಪಾಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಹಾಗಾಗಿ ನಮಗೆ ತೋಟಗಾರಿಕೆ ಇಲಾಖೆಯ ಮುಂದಿನ ಪ್ರದೇಶದಲ್ಲಿ ಜಾಗೆ ಗುರುತಿಸಿ ಕೊಡುವವರೆಗೂ ಧರಣಿ ಹೋರಾಟದ ಜಾಗಬಿಟ್ಟು ಕದಲುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತುಕೊಂಡರು, ಆಗ ಅಧಿಕಾರಿಗಳು ಮತ್ತು ಬೀದಿ ಬದಿ ವ್ಯಾಪಾರಸ್ಥರ ನಡುವೆ ಪರಸ್ಪರ ವಾಗ್ವಾದ ನಡೆಯಿತು.

ಇನ್ನೂ ಇಲಾಖೆಯವರು ಯಾವುದೇ ನೋಟೀಸ್ ನೀಡಿಲ್ಲ. ಆದರೆ, ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಕುಟುಂಬ ನಡೆಸುವ ಬಡ ವ್ಯಾಪಾರಿಗಳ ಮೇಲೆ ಕಾನೂನಿನ ಹೆಸರಿನಲ್ಲಿ ದಬ್ಬಾಳಿಕೆ ನಡೆಸುವ ಮೂಲಕ ಬದುಕುವ ಹಕ್ಕನ್ನೇ ಜಿಲ್ಲಾ ಹಾಗೂ ತಾಲ್ಲೂಕು ಆಡಳಿತ ಕಸಿದುಕೊಳ್ಳಲು ಮುಂದಾಗಿವೆ. ಇದು ದುರ್ಬಲರಿಗೊಂದು ನ್ಯಾಯ, ಪ್ರಬಲರಿಗೊಂದು ನ್ಯಾಯ ಎನ್ನುವಂತಾಗಿದೆ. ಹಾಗಾಗಿ ಬೀದಿ ಬದಿ ವ್ಯಾಪಾರಸ್ಥರಿಗೆ ಡಬ್ಬಾ ಅಂಗಡಿಗಳನ್ನಿಟ್ಟುಕೊಳ್ಳಲು ಅವಕಾಶ ಮಾಡಿಕೊಡಲೇಬೇಕೆಂದು ಹೋರಾಟ ಸಮಿತಿಯ ಸಂಚಾಲಕ ರಮೇಶ ಪಾಟೀಲ್ ಬೇರಿಗಿ, ಡಿ.ಎಚ್.ಪೂಜಾರ್, ಚಂದ್ರಶೇಖರ ಗೊರಬಾಳ ಒತ್ತಾಯಿಸಿದರು.

ಬೀದಿ ಬದಿ ವ್ಯಾಪಾರಸ್ಥರ ನೆರವಿಗೆ ಬಾರದೆ ಸರ್ಕಾರ,ಜಿಲ್ಲಾ ಮತ್ತು ತಾಲೂಕು ಆಡಳಿತಗಳು ಅವರ ಮೇಲೆ ದಬ್ಬಾಳಿಕೆ ಮಾಡುವುದು ಅಪ್ರಜಾತಾಂತ್ರಿಕ ನಡೆಯಾಗಿದೆ. ಈ ಕೂಡಲೇ ಶಾಸಕರು ಹಾಗೂ ಜಿಲ್ಲಾಡಳಿತ ಮಧ್ಯಪ್ರವೇಶಿಸಿ ಬೀದಿ ಬದಿ ವ್ಯಾಪಾರಸ್ಥರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಬಿ.ಎನ್.ಯರದಿಹಾಳ, ಬೀದಿ ಬದಿ ವ್ಯಾಪಾರಸ್ಥರಾದ ಅಸ್ಲಾಂ, ರಹೀಮ್, ಜಾಗೀರಸಾಬ್, ಹುಸೇನ್‌ಸಾಬ್, ರಸೂಲ್‌ಸಾಬ್, ಅಜ್ಜು ಸೇರಿದಂತೆ ಇತರರಿದ್ದರು.

ಸೇಡಂನಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ

2 ಸಾವಿರ ಜನರಿಂದ ಸಾಮೂಹಿಕ ಇಷ್ಟಲಿಂಗ ಪೂಜೆ



ಕಲಬುರಗಿ: ಪ್ರತಿಯೊಬ್ಬರೂ ಧರ್ಮದ ಇತಿಹಾಸ ಅರಿತುಕೊಳ್ಳುವುದು ಅವಶ್ಯವಾಗಿದ್ದು, ನಮ್ಮ ಸಂಸ್ಕೃತಿ ಅರಿತಾಗ ಮಾತ್ರ ಯಶಸ್ವಿ ಜೀವನ ಕಟ್ಟಿಕೊಳ್ಳಲು ಸಾಧ್ಯ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದಮಾತೃಛಾಯ ಕಾಲೇಜು ಮೈದಾನದಲ್ಲಿ ಶನಿವಾರ ರಾತ್ರಿ ವೀರಶೈವ-ಲಿಂಗಾಯತ ಮಹಾಸಭಾ ಹಾಗೂ ಬಸವ ಜಯಂತ್ಯುತ್ಸವ ಸಮಿತಿ ಜಂಟಿಯಾಗಿ ಆಯೋಜಿಸಿದ ಬಸವ ಜಯಂತಿ ನಿಮಿತ್ತ ಸಾಮೂಹಿಕ ಲಿಂಗಪೂಜೆ ಹಾಗೂ ಧರ್ಮಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹಿಂದೆ ಸಮಾಜದಲ್ಲಿ ಅಂಧಕಾರ, ಮೌಢ್ಯತೆ, ಅಸ್ಪೃಶತೆ ಇತ್ತು. ಅದನ್ನು ಹೊಡೆದು ಹಾಕುವ ನಿಟ್ಟಿನಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ಅವಿರತವಾಗಿ ಶ್ರಮಿಸಿದರು ಎಂದರು.

2 ಸಾವಿರಕ್ಕು ಅಧಿಕ ಜನ ಸಾಮೂಹಿಕ ಇಷ್ಟಲಿಂಗ ಪೂಜಾ ಕಾರ್ಯದಲ್ಲಿ ಭಾಗವಹಿಸಿದ್ದರು. ತೊಟ್ನಳ್ಳಿಯ ಶ್ರೀ ಡಾ.ತ್ರಿಮೂರ್ತಿ ಶಿವಾಚಾರ್ಯರು ಪೂಜಾ ವಿಧಿ ವಿಧಾನ ನಡೆಸಿಕೊಟ್ಟರು.

ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ ಮಾತನಾಡಿದರು. ಶಿವಶಂಕರ ಶಿವಾಚಾರ್ಯರು, ಸಿದ್ದವೀರ ಶಿಚಾರ್ಯರು, ಪಂಚಾಕ್ಷರ ಸ್ವಾಮೀಜಿ, ತೊಟ್ನಳ್ಳಿಯ ಡಾ.ತ್ರಿಮೂರ್ತಿ ಶಿವಾಚಾರ್ಯರು, ಸದಾಶಿವ ಸ್ವಾಮೀಜಿ, ಕರುಣೇಶ್ವರ ಶಿವಾಚಾರ್ಯರು, ಡಾ.ಶಾಂತಸೋಮನಾಥ ಶಿವಾಚಾರ್ಯರು, ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯರು, ಅಭಿನವ ಗವಿಸಿದ್ದಲಿಂಗೇಶ್ವರ ಶಿವಾಚಾರ್ಯರು, ಶಿವಸಿದ್ದ ಸೋಮೇಶ್ವರ ಶಿವಾಚಾರ್ಯರು, ಶಂಭುಲಿಂಗೇಶ್ವರ ಸ್ವಾಮೀಜಿ, ಚಿಕ್ಕಶಿವಲಿಂಗೇಶ್ವರ ದೇವರು, ಕೇದಾರಲಿಂಗ ದೇವರು ಸಾನ್ನಿಧ್ಯ ವಹಿಸಿದ್ದರು.

> **ಜಾತಿಯ ಭೇದವಿಲ್ಲದೆ ಮನುಷ್ಯನಿಗೆ ಇಷ್ಟಲಿಂಗ ಪೂಜೆಯ ಅವಶ್ಯಕತೆ ಇದೆ. 12ನೇ ಶತಮಾನದಲ್ಲಿನ ವೈಚಾರಿಕ ಕ್ರಾಂತಿ ಸಾಮಾನ್ಯವಾದುದಲ್ಲ, ನುಡಿದಂತೆ ನಡೆದ ಸತ್ಯದ ಶರಣರು ಅನುಭವ ಮಂಟಪದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದರು.**
> ■ ಡಾ.ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಮಾಜಿ ಉಪಸಭಾಪತಿ ಚಂದ್ರಶೇಖರ ರೆಡ್ಡಿ ದೇಶಮುಖ, ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ, ಮಹಾಸಭಾದ ಜಿಲ್ಲಾಧ್ಯಕ್ಷ ಶರಣಕುಮಾರ ಮೋದಿ, ಶಿವಯ್ಯಸ್ವಾಮಿ ಬಿಬ್ಬಳ್ಳಿ, ಶಿವಕುಮಾರ ಪಾಟೀಲ್ ತೆಲ್ಕೂರ, ಚನ್ನಮ್ಮ ಪಾಟೀಲ್, ಉತ್ಸವ ಸಮಿತಿ ಅಧ್ಯಕ್ಷ ಸಿದ್ದಣ್ಣಗೌಡ ಶೆಟ್ಟಿ, ಡಾ.ಭಾಗ್ಯಶ್ರೀ ಪಾಟೀಲ್, ಸಂತೋಷಿರಾಣಿ ಪಾಟೀಲ್ ತೆಲ್ಕೂರ, ಶಿವಕುಮಾರ್ ಬೊಳಶೆಟ್ಟಿ ಭಾಗವಹಿಸಿದ್ದರು.

ಮಹಾಸಭಾದ ತಾಲೂಕು ಅಧ್ಯಕ್ಷ ರಾಜಶೇಖರ ನೀಲಂಗಿ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ನಂತರ ಪ್ರಥಮ ಬಾರಿಗೆ ಆಗಮಿಸಿದ ಈಶ್ವರ ಖಂಡ್ರೆ ಅವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು. ಸಂಗಣ್ಣ ಅಲ್ದಿ ಸ್ವಾಗತಿಸಿದರು. ವೀರೇಶ ಹೂಗಾರ ನಿರೂಪಣೆ ಮಾಡಿ ವಂದಿಸಿದರು.

ಮಹಿಳಾ ಮಸೂದೆಗೆ ವಿರೋಧ ಸಲ್ಲ



ಧಾರವಾಡ: ಮಹಿಳೆಯರಿಗೆ ಶೇ.33ರಷ್ಟು ರಾಜಕೀಯ ಮೀಸಲಾತಿಯ ಕೇಂದ್ರ ಸರ್ಕಾರದ ವಿಧೇಯಕ ವಿರೋಧಿಸಿದ ಕಾಂಗ್ರೆಸ್ ನಿಲುವು ಸರಿಯಲ್ಲ ಎಂದು ಜೆಡಿಎಸ್ ಗ್ರಾಮೀಣ ಘಟಕ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು.

ಎಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಆಗಿದ್ದಾಗ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಿದ್ದರು. ಪ್ರಧಾನಿ ಆಗಿದ್ದಾಗಲೂ ಮೊದಲ ಸಲ ಶೇ.33ರಷ್ಟು ವಿಧೇಯಕ ಮಂಡಿಸಿದ್ದರು. ಅಂದೂ ಸಹ ವಿಧೇಯಕ ಅಂಗೀಕರಗೊಳ್ಳಲಿಲ್ಲ ಎಂದರು.

ಮೊದಲಿನಿಂದಲೂ ಮಹಿಳಾ ಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ವಿರೋಧಿಸುತ್ತಾ ಬಂದಿದೆ. ಮಹಿಳಾ ಮೀಸಲಾತಿ ವಿಧೇಯಕ ಪಾಸಾಗಲು ಸಹಕಾರ ನೀಡಬೇಕು. ಇಲ್ಲವಾದರೆ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುವುದಾಗಿಯೂ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಕೆ.ಎನ್. ಗಡ್ಡಿ, ವೀರಭದ್ರಪ್ಪ ಹಾಲರವಿ, ಡಾ. ಇಸ್ಮಾಯಿಲ್ ಬನ್ನಿಗೋಳ, ನವೀನಕುಮಾರ್ ಮಡಿವಾಳರ, ರೇಖಾ ನಾಯ್ಕರ, ಮಂಜುನಾಥ ಹಗೇದಾರ, ಜಿ.ಎನ್.ತೋಟದ, ಚಿದಂಬರ ನಾಡಗೌಡ ಅನೇಕರು ಇದ್ದರು.

ಕಿರುಸುದ್ದಿ

ಜನಿವಾರ ತೆಗೆಸಿದ ಘಟನೆಗೆ ಹೆಬ್ಬಾರ ಖಂಡನೆ



ಯಲ್ಲಾಪುರ: ಬೆಂಗಳೂರು ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಕೆಲವು ಬ್ರಾಹ್ಮಣ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ ಘಟನೆಗೆ ನಾನು ತೀವ್ರವಾಗಿ ಖಂಡನೆ ವ್ಯಕ್ತಪಡಿಸುತ್ತೇನೆ ಎಂದು ಶಾಸಕ ಶಿವರಾಮ ಹೆಬ್ಬಾರ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟನೆ ಮೂಲಕ ತಿಳಿಸಿದ ಅವರು, ನಮ್ಮ ದೇಶದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ತನ್ನ ಧಾರ್ಮಿಕ ಆಚರಣೆಗಳನ್ನು ಪಾಲಿಸುವ ಹಕ್ಕನ್ನು ನೀಡಿದೆ. ಪರೀಕ್ಷಾ ನಿಯಮಗಳ ಹೆಸರಿನಲ್ಲಿ ಯಾವುದೇ ವಿದ್ಯಾರ್ಥಿಯ ಧಾರ್ಮಿಕ ಗುರುತಿಗೆ ಧಕ್ಕೆ ತರುವುದು ಖಂಡನೀಯ.

ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಭದ್ರತೆ ಮುಖ್ಯವಾದರೂ, ಅದು ವಿದ್ಯಾರ್ಥಿಗಳ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಂಸ್ಕೃತಿಗೆ ಧಕ್ಕೆಯಾಗಬಾರದು. ಈ ಘಟನೆ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಾನು ಆಗ್ರಹಿಸುತ್ತೇನೆ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಿ, ಎಲ್ಲ ವಿದ್ಯಾರ್ಥಿಗಳಿಗೂ ಸಮಾನ ಗೌರವ ಮತ್ತು ನ್ಯಾಯ ದೊರಕುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು. ವಿದ್ಯಾರ್ಥಿಗಳ ಮನೋಭಾವನೆಗಳಿಗೆ ಧಕ್ಕೆ ಆಗದ ರೀತಿಯಲ್ಲಿ ಪರೀಕ್ಷಾ ವ್ಯವಸ್ಥೆಯನ್ನು ನಡೆಸುವುದು ಅತ್ಯಾವಶ್ಯಕ ಎಮದು ತಿಳಿಸಿದ್ದಾರೆ.

ಬೈಕ್ ಸವಾರ ಸಾವು

ಕೊಲ್ಹಾರ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಬಸ್ಸಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಪಟ್ಟಣ ಹೊರವಲಯದ ರಾಷ್ಟ್ರೀಯ ಹೆದ್ದಾರಿ 218ರ ಗಾಣದೇವಿ ಸರ್ಕಲ್ ಹತ್ತಿರ ನಡೆದಿದೆ.

ಮೃತ ಯುವಕ ವಿಜಯಪುರದ ಆಕಾಶ ಭೀಮಪ್ಪ ಬಬಲೇಶ್ವರ(ಬಂಡಿವಡ್ಡರ) (26) ಎಂದು ಗುರುತಿಸಲಾಗಿದೆ. ವಿಜಯಪುರದಿಂದ ಬೀಳಗಿ ಕಡೆ ಹೊರಟ ಬೀಳಗಿ ಘಟಕದ ಸಾರಿಗೆ ಬಸ್ಸಿಗೆ ಹಿಂಬದಿ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಕೊಲ್ಹಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸಮುದ್ರದಲ್ಲಿ ಈಜಲು ಹೋದ ವ್ಯಕ್ತಿ ಸಾವು

ಗೋಕರ್ಣ: ಸಮುದ್ರದಲ್ಲಿ ಈಜಾಡಲು ತೆರಳಿ ಮರಳಿ ದಡಕ್ಕೆ ಬಂದ ವ್ಯಕ್ತಿ ಅಸ್ವಸ್ಥಗೊಂಡು ಮೃತಪಟ್ಟ ಘಟನೆ ಇಲ್ಲಿನ ಮಿಡ್ಲ ಬೀಚ್‌ನಲ್ಲಿ ಭಾನುವಾರ ನಡೆದಿದೆ.

ಇದೇ ಕಡಲತೀರದ ಹತ್ತಿರದ ನಿವಾಸಿ ಸುರೇಶ ಗೌಡ(54) ಮೃತಪಟ್ಟವರಾಗಿದ್ದು, ಬಿಸಿಲಿನ ತಾಪಕ್ಕೆ ನೀರಿನಲ್ಲಿ ಈಜಾಡಲು ದಿನ ತೆರಳುತ್ತಿದ್ದರು ಎನ್ನಲಾಗಿದ್ದು, ಇದರಂತೆ ಭಾನುವಾರ ಮಧ್ಯಾಹ್ನ ಸಹ ತೆರಳಿದ್ದಾರೆ. ಕಡಲ ತಟಕ್ಕೆ ಬಂದವರು ಏಕಾಏಕಿ ಅಸ್ವಸ್ಥರಾದರು ಎಂದು ತಿಳಿದಿದು ಬಂದಿದ್ದು, ತಕ್ಷಣ ಖಾಸಗಿ ಅಂಬ್ಯುಲೆನ್ಸ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆ ತಂದಿದ್ದಾರೆ. ಆದರೆ, ಆಸ್ಪತ್ರೆ ಬರುವಷ್ಟರಲ್ಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಯಾದ ಡಾ.ಜಗದೀಶ ನಾಯ್ಕ, ಸಂತೆಗಳಿ ಆರೋಗ್ಯ ಕೇಂದ್ರದ ಡಾ. ಶಿವಾ ನಾಯ್ಕ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಪೊಲೀಸರು ಭೇಟಿ ನೀಡಿ ಮಾಹಿತಿ ಪಡೆದು ಮುಂದಿನ ಕ್ರಮಕೈಗೊಂಡಿದ್ದಾರೆ.

ಗಾಂಜಾ ಸೇವನೆ: ಆರೋಪಿ ಬಂಧನ

ಅಂಕೋಲಾ: ಪಟ್ಟಣದ ಹುಲಿದೇವರವಾಡದ ಎ.ಪಿ.ಎಂ.ಸಿ ಮೈದಾನದ ಬಳಿ ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವನೆ ಮಾಡಿದಂತೆ ಕಂಡು ಬಂದ ವ್ಯಕ್ತಿಯೊಬ್ಬನನ್ನು ಅಂಕೋಲಾ ಪೊಲೀಸರು ವಶಕ್ಕೆ ಪಡೆದು ಪರೀಕ್ಷೆ ನಡೆಸಿದ್ದು ಆತ ಮಾದಕ ವಸ್ತು ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ.

ಶೆಡಗೇರಿ ಹುಲಿದೇವರವಾಡದ ನಿವಾಸಿ ಸೈಫ್ ಅಲಿ ಮಹಮ್ಮದ್ ಹನೀಫ್ ಶೇಖ್(31)ಬಂಧಿತ ಆರೋಪಿಯಾಗಿದ್ದು, ಈತ ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಎ.ಪಿ.ಎಂ.ಸಿ ಮೈದಾನದ ಮಹಾದ್ವಾರದ ಬಳಿ ಮಾದಕ ವಸ್ತು ಸೇವಿಸಿದ ರೀತಿ ವರ್ತಿಸುತ್ತಿದ್ದು ಬಾಯಿಂದ ಘಾಟು ವಾಸನೆ ಬರುತ್ತಿರುವ ಕಾರಣ ಪಿಎಸ್‌ಐ ಲಲಿತಾ ರಜಪೂತ್ ವಿಚಾರಣೆ ನಡೆಸಿದಾಗ ಆತ ಗಾಂಜಾ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಅಂಕೋಲಾ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಿದ ವೈದ್ಯಾಧಿಕಾರಿಗಳು ಆಪಾದಿತ ಗಾಂಜಾ ಸೇವನೆ ಮಾಡಿರುವುದಾಗಿ ದೃಢೀಕರಿಸಿದ್ದಾರೆ. ಪಿ.ಎಸ್.ಐ ಅವರ ದೂರಿನಂತೆ ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿಕೆ

ನೆಲ, ಜಲ, ಭಾಷೆಗೆ ಧ್ವನಿ ಎತ್ತಿದ ಕೆಸಿಸಿಐ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗಕ್ಕೆ ಏನು ಆಗಬೇಕು ಎಂಬ ಉದ್ದೇಶದಿಂದ ವಾಣಿಜ್ಯೋದ್ಯಮ ಸಂಸ್ಥೆ ಪ್ರಯತ್ನಿಸುತ್ತಿದೆ. ಈ ಸಂಸ್ಥೆ ವ್ಯಾಪಾರ, ಕೈಗಾರಿಕೆಗೆ ಮಾತ್ರ ಸೀಮಿತಗೊಳಿಸಿ ಕೆಲಸ ಮಾಡಿದ ಸಂಸ್ಥೆಯಲ್ಲ. ನೆಲ, ಜಲ, ಭಾಷೆ ವಿಷಯದಲ್ಲಿ ಅನ್ಯಾಯವಾದಾಗಲೂ ಸಂಸ್ಥೆ ಧ್ವನಿ ಎತ್ತಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿದರು.



ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ಎಪಿಎಂಸಿ ಯಾರ್ಡ್ ಹುಬ್ಬಳ್ಳಿ-ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿರುವ ಕೈಗಾರಿಕೆ ಮತ್ತು ವಾಣಿಜ್ಯ ಪ್ರದರ್ಶನ, ವಿಚಾರ ಸಂಕಿರಣ ಮತ್ತು ಮಾರಾಟ ಅಭಿವೃದ್ಧಿ ಕಾರ್ಯಕ್ರಮವಾದ ಇನ್‌ಕಾಮೆಕ್ಸ್-2026 ಕಾರ್ಯಕ್ರಮದಲ್ಲಿ ಭಾನುವಾರ ಪಾಲ್ಗೊಂಡು ಅವರು ಮಾತನಾಡಿದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಉತ್ತರ ಕರ್ನಾಟಕದ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಆದ ಅನ್ಯಾಯವನ್ನು ಖಂಡಿಸಿದೆ. ವಾಣಿಜ್ಯ ಮತ್ತು ಕೈಗಾರಿಕೆ ಅಭಿವೃದ್ಧಿ ವಿಷಯದಲ್ಲಿ ಉತ್ತರ ಕರ್ನಾಟಕಕ್ಕೆ ದೊರೆಯಬೇಕಾದ ಮಾನ್ಯತೆ ದೊರೆತಿಲ್ಲ. ಈ ಬಗ್ಗೆ ನನಗೆ ಅಸಮಾಧಾನವಿದೆ ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ಕೆಲ ದೊಡ್ಡ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಕೆಲ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಯಶಸ್ಸಿನ ಹಾದಿಯತ್ತ ಸಾಗುತ್ತಿವೆ. ಆದರೂ ಇಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ನನಗೆ ಅಸಮಾಧಾನವಿದೆ. ಇನ್ನೂ ಹತ್ತು ವರ್ಷ ಕಳೆದರೆ ಉತ್ತರ ಕರ್ನಾಟಕದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಬೆಂಗಳೂರಿಗರು ಬಂದು ಸ್ಪರ್ಧಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಬೆಂಗಳೂರಿನ ಆರ್ಥಿಕ ಬೆಳವಣಿಗೆಯನ್ನು ಉತ್ತರ ಕರ್ನಾಟಕದ ಆರ್ಥಿಕ ಬೆಳವಣಿಗೆಯನ್ನು ನಾವು ತುಲನೆ ಮಾಡಿಕೊಂಡು, ಈ ಭಾಗಕ್ಕೆ ಏನು ಅವಶ್ಯವಿದೆ ಎಂಬುದನ್ನು ಚಿಂತಿಸಬೇಕಿದೆ ಎಂದು ಹೇಳಿದರು.

ಬೆಂಗಳೂರಿನ ಕೈಗಾರಿಕಾ ಪ್ರದೇಶ ತೂಮಕೂರಿನವರೆಗೂ ವಿಸ್ತರಿಸಿದೆ. ನಮ್ಮ ಹುಬ್ಬಳ್ಳಿಯಲ್ಲಿ ಅದೇ ತಾರಿಹಾಳ, ರಾಯಾಪುರ ಕೈಗಾರಿಕಾ ಪ್ರದೇಶಗಳಿವೆ. ಈ ಭಾಗದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಏಕೆ ಮುಚ್ಚಿದವು ಎಂಬುದನ್ನು ನಾವೆಲ್ಲರೂ ಚಿಂತಿಸಿ ಉತ್ತರ ಹುಡುಕಬೇಕು. ಉತ್ತರ ಕರ್ನಾಟಕದಲ್ಲಿ ಪ್ರವಾಸಿ ತಾಣಗಳು ಹೆಚ್ಚಾಗಿದ್ದು, ಪ್ರವಾಸೋದ್ಯಮ ಕ್ಷೇತ್ರವನ್ನು ಉದ್ಯಮಕ್ಕೆ ಆಯ್ಕೆ ಮಾಡಿಕೊಂಡಲ್ಲಿ ವಿಫುಲ ಅವಕಾಶಗಳಿವೆ. ಈ ಭಾಗದಲ್ಲಿ ಪ್ರವಾಸೋದ್ಯಮ ಬೆಳೆಸಲು ಅನುಕೂಲಕರ ವಾತಾವರಣಗಳಿವೆ ಎಂದರು.

ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ ಮಾತನಾಡಿ, ಹುಬ್ಬಳ್ಳಿಯನ್ನು ಶಿವಾಜಿ ಮಹಾರಾಜ, ಟಿಪ್ಪು ಸುಲ್ತಾನ್ ಹಾಗೂ ಬ್ರಿಟೀಷರು ಆಯಕಟ್ಟಿನ ಸ್ಥಳವೆಂದು ಹೇಳಿ ಇಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರು. ಆದರೆ, ಸರ್ಕಾರಗಳು ಮಾತ್ರ ಹುಬ್ಬಳ್ಳಿಯನ್ನು ಆಯಕಟ್ಟಿನ ಸ್ಥಳ ಎಂದು ಗುರುತಿಸಿಲ್ಲ. ಹುಬ್ಬಳ್ಳಿ ಸುತ್ತಮುತ್ತ ಕೆಐಎಡಿಬಿ ಲ್ಯಾಂಡ್ ಬೆಳೆಸುವ ಅಗತ್ಯತೆ ಇದೆ ಎಂದು ಹೇಳಿದರು.

ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಇನ್ ಕಾಮೆಕ್ಸ್ ಅಧ್ಯಕ್ಷ ಮಹದೇವ ಕರಮರಿ, ಪ್ರವೀಣ ಅಗಡಿ, ಪ್ರಕಾಶ ಶೃಂಗೇರಿ, ಶಂಕರಣ್ಣ ಮುನವಳ್ಳಿ, ಸಿದ್ದೇಶ್ವರ ಕಮ್ಮಾರ, ಉದಯ ರೇವಣಕರ ಇತರರು ಇದ್ದರು.

ಸೋಮನಾಥ ಜ್ಯೋತಿರ್ಲಿಂಗ ದರ್ಶನ

ಗದಗ: ಭಾರತದ ಪ್ರಪ್ರಥಮ, ಸೌರಾಷ್ಟ್ರದ ಜ್ಯೋತಿರ್ಲಿಂಗ ಖ್ಯಾತಿಯ ಸೋಮನಾಥ ಜ್ಯೋತಿರ್ಲಿಂಗ ದರ್ಶನಕ್ಕೆ ಇಲ್ಲಿನ ಐತಿಹಾಸಿಕ ಭೀಷ್ಮ ಕೆರೆಯ ಅವರಣದಲ್ಲಿ ಇರುವ ಬಸವೇಶ್ವರ ಪ್ರತಿಮೆ ಬಳಿ ಅವಕಾಶ ಕಲ್ಪಿಸಲಾಗಿತ್ತು.

ಸ್ವಾಮಿ ಶರಣಾನಂದರ ನೇತೃತ್ವದಲ್ಲಿ ರುದ್ರಪೂಜೆ ನಡೆಯಿತು. ಬಳಿಕ ಸತ್ಸಂಗ ನಡೆಯಿತು. ಭಾರತದ ಪ್ರಪ್ರಥಮ, ಸೌರಾಷ್ಟ್ರದ ಜ್ಯೋತಿರ್ಲಿಂಗ ಖ್ಯಾತಿಯ ಸೋಮನಾಥ ಜ್ಯೋತಿರ್ಲಿಂಗ ದರ್ಶನಕ್ಕೆ ಆಗಮಿಸಿದ್ದ ಎಲ್ಲ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಆರ್ಟ್ ಆಫ್ ಲಿವಿಂಗ್‌ನ ಹಿರಿಯ ಶಿಕ್ಷಕಿ ಕೋಮಲಾ ಸುಬ್ಬರಾಜ, ಡಾ.ಗೋವಿಂದಪ್ಪನವರ, ಸಿದ್ದೇಶ್ವರ ನಾಡಗೌಡ್ರ, ಬಲರಾಮ ಬಸವಾ, ಆರ್ಟ್ ಆಫ್ ಲಿವಿಂಗ್ ಟೀಚರ್ ಲೋಹಿತಕುಮಾರ ಕಾಸರ, ಎ.ಎನ್. ನಾಗರಳ್ಳಿ, ಜೆ. ಕೆ. ಜಮಾದಾರ ಸೇರಿ ಹಲವರಿದ್ದರು. ಬಿಜೆಪಿ ಮುಖಂಡರಾದ ವಿಜಯಕುಮಾರ ಗಡ್ಡಿ, ಬಸವರಾಜ ದೇಸಾಯಿ ಸೇರಿ ಹಲವು ಪ್ರಮುಖರು ದರ್ಶನ ಪಡೆದರು. ಭಕ್ತರಿಗೆ ರವಿ ಶಂಕರ ಗುರೂಜಿ ಭಾವಚಿತ್ರ ಹಾಗೂ ರುದ್ರಾಕ್ಷಿ ಒಳಗೊಂಡ ಪ್ರಸಾದ ನೀಡಿದರು.



ಪಂ.ಮಾಧವ ಗುಡಿಗೆ ಸಂಗೀತವೇ ಜೀವನ



ಧಾರವಾಡ: ಗುರು-ಶಿಷ್ಯರಿಗೆ ಪಂ.ಭೀಮಸೇನ ಜೋಶಿ ಹಾಗೂ ಪಂ. ಮಾಧವ ಗುಡಿ ಮಾದರಿ. ಪಂ.ಮಾಧವ ಗುಡಿ ಅವರಿಗೆ ಲೌಕಿಕ ಬದುಕಿಗಿಂತ ಸಂಗೀತವೇ ಜೀವನವಾಗಿದ್ದಿತು ಎಂದು ಹೈಕೋರ್ಟ್ ನ್ಯಾಯವಾದಿ ಡಾ.ಉದಯ ದೇಸಾಯಿ ಹೇಳಿದರು.

ಕಿರಣಾ ಸಂಗೀತ ಅಕಾಡೆಮಿ ಹಾಗೂ ಪದ್ಮಶ್ರೀಸಂಗೀತಪ್ರತಿಷ್ಠಾನನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಿದ್ದ ಪಂ.ಭೀಮಸೇನ ಮಾಧವ ಸಂಗೀತೋತ್ಸವ ಸಮಾರೋಪ ಸಮಾರಂಭ ಪಾಲ್ಗೊಂಡು ಅವರು ಮಾತನಾಡಿದರು.

ಪಂ.ಮಾಧವ ಗುಡಿ ಶ್ರೇಷ್ಠ ಗಾಯಕರು. ಅವರು ಧಾರವಾಡಿಗರು ಎಂಬುದೇ ಹೆಮ್ಮೆಯ ಸಂಗತಿ. ಪಂ.ಭೀಮಸೇನ ಜೋಶಿ ಅವರ ನೆಚ್ಚಿನ ಶಿಷ್ಯರಾಗಿ ಪಂ. ಮಾಧವ ಗುಡಿ ಕಿರಣಾ ಘರಾಣೆಯ ಗಾಯನ ಜಗತ್ಪ್ರಸಿದ್ಧಗೊಳಿಸಿದರು ಎಂದರು.

ಸ್ತ್ರೀರೋಗ ತಜ್ಞೆ ಡಾ.ಸೌಭಾಗ್ಯ ಕುಲಕರ್ಣಿ ಮಾತನಾಡಿ, ಪಂ.ಮಾಧವ ಗುಡಿ ಅವರು 27 ವರ್ಷಗಳು ಪಂ.ಭೀಮಸೇನ ಜೋಶಿ ಅವರ ಜೊತೆಗಿದ್ದು, ಸಂಗೀತ ಸಿದ್ಧಿಸಿಕೊಳ್ಳುವ ಜತೆ ಶ್ರೇಷ್ಠ ಪರಂಪರೆ ಮುಂದುವರೆಸಿದಕ್ಕೆ ಅಭಿಮಾನ ವ್ಯಕ್ತಪಡಿಸಿದರು.

ಕುಮಾರೇಶ್ವರ ಕಲ್ಚರಲ್ ಸೊಸೈಟಿ ಸಂಯೋಜಕ ಪ್ರಕಾಶ ಬಾಳಿಕಾಯಿ, ಪಂ. ಮಾಧವ ಗುಡಿ ಅವರು ಹಿಂದೂಸ್ಥಾನಿ ಸಂಗೀತಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದು, ಅವರ ಸ್ಮರಣೆಗೆ 15 ವರ್ಷಗಳಿಂದ ಸಂಗೀತೋತ್ಸವ ಏರ್ಪಡಿಸುತ್ತಿರುವುದು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ರೂ.10 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಸ್ವರನಿಧಿ ರಾಷ್ಟ್ರೀಯ ಪ್ರಶಸ್ತಿಯನ್ನು ಗದಗಿನ ಹಿಂದೂಸ್ಥಾನಿ ಗಾಯಕ ಪಂ.ಅರವಿಂದ ಹುಯಿಲಗೋಳ ಅವರಿಗೆ ಪ್ರದಾನ ಮಾಡಲಾಯಿತು. ಅಧ್ಯಕ್ಷತೆ ವಹಿಸಿದ್ದ ಪಂ.ರಾಘವೇಂದ್ರ ಗುಡಿ ಮಾತನಾಡಿದರು. ಹಂಚಿನಮನಿ ಪಿ.ಯು. ಕಾಲೇಜಿನ ಮುಖ್ಯಸ್ಥೆ ವರ್ಷಾ ಹಂಚಿನಮನಿ, ವಿದೂಷಿ ಭಾರ್ಗವಿ ಕುಲಕರ್ಣಿ, ಬೆಂಗಳೂರಿನ ಕೃಷ್ಣ ಪುರೋಹಿತ ಇದ್ದರು. ರವಿ ಕುಲಕರ್ಣಿ ನಿರೂಪಿಸಿದರು. ವಿದೂಷಿ ಅನುಪಮಾ ಮಂಗಳವೇಡೆ ಸ್ವಾಗತಿಸಿದರು. ವಿಜಯೇಂದ್ರ ಅರ್ಚಕ ವಂದಿಸಿದರು.

ಪ್ರೊ. ಶಿಲಾಧರ ಮುಗಳಿಗೆ ಶೇಖ್ ಅಲಿ ಪ್ರಶಸ್ತಿ

ಧಾರವಾಡ: ಬೆಂಗಳೂರಿನ ಮನಮೋಹನಸಿಂಗ್ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಇತಿಹಾಸ ಪರಿಷತ್ ಕೊಡುವ 2026ನೇ ಸಾಲಿನ ಪ್ರೊ. ಬಿ.ಶೇಖ್ ಅಲಿ ಪ್ರಶಸ್ತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕ ಪ್ರೊ. ಶಿಲಾಧರ ಮುಗಳಿ ಅವರಿಗೆ ಪ್ರದಾನ ಮಾಡಲಾಯಿತು.



ಈ ಸಂದರ್ಭದಲ್ಲಿ ಶಾಸಕರಾದ ಪುಟ್ಟಣ್ಣ, ರಾಮೋಜಿ ಗೌಡ, ಡಿ.ಟಿ. ಶ್ರೀನಿವಾಸ, ಬೆಂಗಳೂರು ವಿವಿ ಕುಲಪತಿಗಳಾದ ಪ್ರೊ. ಬಿ.ರಮೇಶ ಮತ್ತು ಪ್ರೊ. ಎಸ್.ಎಂ. ಜಯಕರ, ಕೆಜಿಪಿ ಅಧ್ಯಕ್ಷ ಪ್ರೊ. ಮಂಜುನಾಥ ಟಿ.ಎಂ., ಪ್ರೊ. ಜಾನಕ ನಾಯ್ಕರ, ಪ್ರೊ. ಶೇಖ್ ಮುಸ್ತಾನ್ ಸೇರಿದಂತೆ ಅನೇಕರು ಇದ್ದರು.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಪದಚ್ಯುತಿ

ವಿಜಯನಗರ: ಪಕ್ಷದ ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದಿರುವುದರಿಂದ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಬಿ.ನಾಯ್ಕ್ ಅವರನ್ನು ಪಕ್ಷದ ಜವಾಬ್ದಾರಿಗಳಿಂದ ತಕ್ಷಣವೇ ಜಾರಿಗೆ ಬರುವಂತೆ ಮುಕ್ತಗೊಳಿಸಿ ಭಾರತೀಯ ಯುವ ಕಾಂಗ್ರೆಸ್ ಆದೇಶಿಸಿದೆ.

ಪಕ್ಷದ ಪ್ರಮುಖ ಸಭೆಗಳಿಗೆ ಗೈರುಹಾಜರಿ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನೀಡಿದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದರಿಂದ ಈ ಕ್ರಮ ಜರುಗಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಿದೆ.

ಮಕ್ಕಳ ಸಾಹಿತ್ಯ ಅಕಾಡೆಮಿ ಸ್ಥಾಪಿಸಲು ಒತ್ತಾಯ

ಧಾರವಾಡ: ಮಕ್ಕಳ ಮಾನಸಿಕ ವಿಕಾಸಕ್ಕೆ ಪೂರಕ ಸಾಹಿತ್ಯ ಪ್ರೋತ್ಸಾಹಕ್ಕೆ ಸೂಕ್ತ ವೇದಿಕೆ ಕಲ್ಪಿಸಲು ಕರ್ನಾಟಕ ಸರ್ಕಾರವು ತಕ್ಷಣವೇ ರಾಜ್ಯದಲ್ಲಿ ಮಕ್ಕಳ ಅಕಾಡೆಮಿ ಸ್ಥಾಪಿಸಬೇಕು ಎಂದು ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ ಘಂಟಿ ಒತ್ತಾಯಿಸಿದರು.



ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಕಲಾ ಶಿಕ್ಷಣ-ಸಂಸ್ಕೃತಿ ಪ್ರತಿಷ್ಠಾನ ಮತ್ತು ಚಿಲಿಪಿಲಿ ಸಂಸ್ಥೆ ಹಮ್ಮಿಕೊಂಡ ನಿಂಗ ಸೊಲಗಿ ಮಕ್ಕಳ ಸಾಹಿತ್ಯ ಗೌರವ ಮತ್ತು ಮಕ್ಕಳ ಸಾಹಿತ್ಯ ಪುಸ್ತಕ ಪ್ರಶಸ್ತಿ ಪ್ರದಾನಿಸಿ ಮಾತನಾಡಿದರು.

ಮಕ್ಕಳ ಸಾಹಿತ್ಯಕ್ಕೆ ವಿಜಯಪುರ ಜಿಲ್ಲೆಯ ಕೊಡುಗೆ ಅನನ್ಯ. 2010ರಲ್ಲಿಯೇ ಮಕ್ಕಳ ಅಕಾಡೆಮಿ ಸ್ಥಾಪನೆಗೆ ಸರ್ಕಾರಕ್ಕೆ ಮನವಿ ಮಾಡಿದ್ದಾಗಿ ತಿಳಿಸಿದ ಡಾ.ಮಲ್ಲಿಕಾ ಘಂಟಿ, ಇಂದಿಗೂ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಸ್ತುತ ಮಕ್ಕಳ ಉತ್ಕೃಷ್ಟ ಸಾಹಿತ್ಯ ಪ್ರಕಟವಾದರೂ ವಿಮರ್ಶಕರಿಂದಲೇ ತಾತ್ಸಾರಕ್ಕೆ ಒಳಗಾಗುತ್ತಿದೆ. ಸರ್ಕಾರದ ಮಟ್ಟದಲ್ಲೂ ಸಿಗಬೇಕಾದ ಮನ್ನಣೆ ದೊರೆಯುತ್ತಿಲ್ಲ ಎಂದರಲ್ಲದೇ ವಿಜಯಪುರ ಜಿಲ್ಲೆಯಲ್ಲಿ ಮಕ್ಕಳ ಅಕಾಡೆಮಿ ಸ್ಥಾಪಿಸುವುದು ಸೂಕ್ತ ಎಂದರು.

ಮಕ್ಕಳ ಮಾನಸಿಕ ವಿಕಾಸದ ಸಾಹಿತ್ಯ ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಸಂಘ-ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವೂ ಕೂಡ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದರು. ತಾಂತ್ರಿಕ ಯುಗದಲ್ಲಿ ಭೌತಿಕ ವಸ್ತುಗಳ ವ್ಯಾಮೋಹದಿಂದ ಮನಸ್ಸುಗಳು ದೂರ ಸರಿಯುತ್ತಿವೆ. ಮಕ್ಕಳನ್ನು ಭಾವನಾತ್ಮಕ ಮತ್ತು ಸೃಜನಶೀಲವಾಗಿ ಬೆಳೆಸುವಲ್ಲಿ ಸಾಹಿತ್ಯದ ಪಾತ್ರ ದೊಡ್ಡದಿದೆ. ಶಾಲೆಗಳಲ್ಲಿ ಮಕ್ಕಳ ಸಾಹಿತ್ಯ ಪುಸ್ತಕ ಲಭಿಸಬೇಕು ಎಂದರು. ಸಮಾರಂಭದಲ್ಲಿ ಜಂಬುನಾಥ ಕಲ್ಯಾಣಿ ಅವರಿಗೆ 2025ನೇ ಸಾಲಿನ ಮಕ್ಕಳ ಸಾಹಿತ್ಯ ಗೌರವ ಪ್ರಶಸ್ತಿ ಹಾಗೂ ಗುಂಡೂರಾವ್ ದೇಸಾಯಿ ಅವರಿಗೆ ಮಕ್ಕಳ ಸಾಹಿತ್ಯ ಪುಸ್ತಕ ಪ್ರಶಸ್ತಿಯನ್ನು ಪ್ರದಾನ ಮಾಡುವುದರ ಮೂಲಕ ಸನ್ಮಾನಿಸಲಾಯಿತು.

ಶರಣಬಸವ ಚೋಳಿನ ಹಾಗೂ ಡಾ.ವಿನಾಯಕ ಕಮತರ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಕೃತಿ ಪರಿಚಯಿಸಿದರು. ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ಆನಂದ ಪಾಟೀಲ, ನಿಂಗಣ್ಣ ಕುಂಟಿ, ಮಲ್ಲಿಕಾರ್ಜುನ ಸೊಲಗಿ ಸೇರಿ ಅನೇಕರಿದ್ದರು.

130 ಕುಟುಂಬಗಳಿಗೆ ಅಧಿಕೃತ ಹಕ್ಕುಪತ್ರ ವಿತರಣೆ

ಕುಕನೂರು: ಸ್ವಂತ ಮನೆಯಿದ್ದರೂ ದಾಖಲೆಗಳಿಲ್ಲದ ಕಾರಣ ನಾವಿಷ್ಟು ದಿನ ನಮ್ಮದೇ ಮನೆಯಲ್ಲಿ ಬಾಡಿಗೆದಾರರಂತೆ ಬದುಕುತ್ತಿದ್ದವು. ಇಂದು ನಮ್ಮ ಕೈಸೇರಿರುವ ಈ ಹಕ್ಕುಪತ್ರ ಕೇವಲ ಕಾಗದವಲ್ಲ, ಅದು ನಮ್ಮ ಬದುಕಿನ ಭದ್ರತೆ ಎಂದು ಗ್ರಾಪಂ ಸದಸ್ಯ ಯಮನೂರಪ್ಪ ಕಟ್ಟಿಮನಿ ಸಂತಸ ವ್ಯಕ್ತಪಡಿಸಿದರು.



ತಾಲೂಕಿನ ಕಕ್ಕಿಹಳ್ಳಿ ಗ್ರಾಮದಲ್ಲಿ ನಡೆದ 'ಹಕ್ಕುಪತ್ರ ವಿತರಣಾ ಕಾರ್ಯಕ್ರಮ'ದಲ್ಲಿ ಮಾತನಾಡಿ, ಕಳೆದ ಹಲವು ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಗ್ರಾಮದ ನಿವಾಸಿಗಳ ಹಕ್ಕು ಪತ್ರದ ಬೇಡಿಕೆ ಕೊನೆಗೂ ಈಡೇರಿದೆ. ತಾಲ್ಲೂಕು ಆಡಳಿತ ಹಾಗೂ ಗ್ರಾಪಂ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಕಾರ್ಯಕ್ರಮದಲ್ಲಿ 130 ಕುಟುಂಬಗಳಿಗೆ ಅಧಿಕೃತ ವಾಸದ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ದಶಕಗಳ ಆತಂಕಕ್ಕೆ ತೆರೆ ಎಳೆಯಲಾಯಿತು. ಈ ಗ್ರಾಮದ ನಿವಾಸಿಗಳು ತಲೆತಲಾಂತರಗಳಿಂದ ಇಲ್ಲಿ ವಾಸಿಸುತ್ತಿದ್ದರೂ, ತಾಂತ್ರಿಕ ಕಾರಣಗಳಿಂದಾಗಿ ಹಾಗೂ ಭೂದಾಖಲೆಗಳ ಲೋಪದೋಷಗಳಿಂದಾಗಿ ಮನೆಗಳ ಹಕ್ಕು ಪತ್ರ ಸಿಕ್ಕಿರಲಿಲ್ಲ, ಇದರಿಂದಾಗಿ ಬ್ಯಾಂಕ್ ಸಾಲ ಪಡೆಯಲು, ಮನೆಯ ನವೀಕರಣಕ್ಕೆ ಅಥವಾ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಗ್ರಾಮಸ್ಥರು ಹರಸಾಹಸ ಪಡಬೇಕಾಗಿತ್ತು.

ಈ ಕುರಿತು ಗ್ರಾಮಸ್ಥರು ಹತ್ತಾರು ಬಾರಿ ಪ್ರತಿಭಟನೆ ಹಾಗೂ ಮನವಿಗಳನ್ನು ಸಲ್ಲಿಸಿದ್ದರು. ಸರ್ಕಾರದ ಇತ್ತೀಚಿನ ವಿಶೇಷ ಅಭಿಯಾನದ ಅಡಿಯಲ್ಲಿ ಸರ್ವೆ ಕಾರ್ಯ ನಡೆಸಿ, ಈಗ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಗ್ರಾಮಸ್ಥರ ಮನೆ ಬಾಗಿಲಿಗೆ ಹಕ್ಕುಪತ್ರಗಳನ್ನು ತಲುಪಿಸಿದು ವಿಶೇಷವಾಗಿತ್ತು.

ದಶಕಗಳ ಕಾಲದ ಕಾನೂನು ಹೋರಾಟ ಮತ್ತು ಕಾಯುವಿಕೆಗೆ ಇಂದು ತಾರ್ಕಿಕ ಅಂತ್ಯ ಸಿಕ್ಕಿದೆ. ಆಡಳಿತ ಯಂತ್ರ ಮನಸ್ಸು ಮಾಡಿದರೆ ಜನಸಾಮಾನ್ಯರ ಬದುಕಿನಲ್ಲಿ ಎಂತಹ ದೊಡ್ಡ ಬದಲಾವಣೆ ತರಬಹುದು ಎಂಬುದಕ್ಕೆ ಇದೇ ಸಾಕ್ಷಿ ಎಂದು ಮೇಘರಾಜ್ ಬಳಿಗೇರಿ ಹೇಳಿದರು. ಇಂದಿನಿಂದ ನೀವು ನಿಮ್ಮ ಮನೆಯ ಕಾನೂನುಬದ್ಧ ಮಾಲೀಕರು. ಯಾವುದೇ ಆತಂಕವಿಲ್ಲದೆ ನೀವು ನಿಮ್ಮ ಆಸ್ತಿಯನ್ನು ಅಭಿವೃದ್ಧಿಪಡಿಸಬಹುದು ಎಂದು ತಹಶೀಲ್ದಾರರು ಬಸವರಾಜ್ ಬಣ್ಣಿಶಿರೂರು ಫಲಾನುಭವಿಗಳಿಗೆ ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷೆ ಗೌರಮ್ಮ ವಿ.ಕುರ್ತಕೋಟಿ ಕಂದಾಯ ಇಲಾಖೆಯ ಸುರೇಶ್ ಬಾಳೆಹೊಸುರು, ಪಿಡಿಒ ಮಹೇಶಗೌಡ, ಸುರೇಶ್ ಮಂಪಿ ಹಾಗೂ ಸಿಬ್ಬಂದಿ ಮುಖಂಡರಾದ ರಾಜ ಬಳಗೇರಿ, ಹಂಪಣ್ಣ ಕಟ್ಟಿಮನಿ, ವಿರುಪಾಕ್ಷಯ್ಯ ಕುರ್ತಕೋಟಿ, ವಾಲೇಪ್ಪ ತಲ್ಲೂರ ಇತರರಿದ್ದರು.

ಗುಡ್ಡಗಾಡು ಪ್ರದೇಶದ ಸಿದ್ದಿ ಬುಡಕಟ್ಟು ಸಮುದಾಯದ ವಿದ್ಯಾರ್ಥಿನಿ

ನಾಗಶ್ರೀ ಸಿದ್ದಿ ಎಸ್ಸೆಸ್ಸೆಲ್ಸಿಯಲ್ಲಿ ಶೇ.94.24 ಸಾಧನೆ

ಅಂಕೋಲಾ: ತಾಲೂಕಿನ ಕಲ್ಲೇಶ್ವರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ತಾಲೂಕಿನ ಡೋಂಗ್ರಿ ಗ್ರಾಪಂದ ಗುಡ್ಡ ಗಾಡು ಪ್ರದೇಶದ ಹಳವಳ್ಳಿಯ ಸಿದ್ದಿ ಬುಡಕಟ್ಟು ಸಮುದಾಯದ ವಿದ್ಯಾರ್ಥಿನಿ ನಾಗಶ್ರೀ ಜಗದೀಶ ಸಿದ್ದಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.94.24% ಗಳಿಸುವ ಮೂಲಕ ಅದ್ವಿತೀಯ ಸಾಧನೆಯನ್ನು ಮಾಡಿದ್ದಾಳೆ.



ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಸಿದ್ದಿ ಸಮುದಾಯದ ಗ್ರಾಮೀಣ ವಿದ್ಯಾರ್ಥಿನಿಯೋರ್ವಳು 10 ನೇ ತರಗತಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದುಸಾಧನೆಮಾಡಿರುವುದುವಿಶೇಷ. ನಾಗಶ್ರೀ ಸಿದ್ದಿ ಕನ್ನಡ ವಿಷಯಕ್ಕೆ 125ಕ್ಕೆ 125, ಹಾಗೂ ಹಿಂದಿ ವಿಷಯಕ್ಕೆ ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ. ಜಗದೀಶ ಸಿದ್ದಿ ಹಾಗೂ ಸರೋಜಾ ಸಿದ್ದಿಯ ಪುತ್ರಿಯಾಗಿರುವ ನಾಗಶ್ರೀ ಸಿದ್ದಿ ಬಡತನದಲ್ಲಿ ಬೆಳೆದು ಬಂದಿರುವ ಪ್ರತಿಭೆ. ಅತಿ ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿರುವ ಸಿದ್ದಿ ಬುಡಕಟ್ಟು ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಯ ಸಾಧನೆಗೆ ಪಾಲಕರು, ಕಲ್ಲೇಶ್ವರ ಪ್ರೌಢಶಾಲಾ ಶಿಕ್ಷಕರು, ಸುತ್ತಮುತ್ತಲಿನ ಗ್ರಾಮಸ್ಥರು ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಾಜ್ಯಕ್ಕೆ 5 ಮತ್ತು 10ನೇ ರ್‍ಯಾಂಕ್

ಗ್ರಾಮೀಣ ಮಕ್ಕಳ ಅಕ್ಷರ ದೇಗುಲ ಅಥರ್ವ ಮಹಾವಿದ್ಯಾಲಯ

ಮೂಡಲಗಿ: ತಾಲೂಕಿನ ನಾಗನೂರ ಪಟ್ಟಣದ ಅಥರ್ವ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಕೇವಲ ಆರು ವರ್ಷಗಳ ಕಿರು ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಅಕ್ಷರ ಕ್ರಾಂತಿ ಮಾಡಿದೆ.

ಇಂಟಿಗ್ರೆಟೆಡ್ ಪಿಯು ಕಲಿಕೆಗೆ ಸುವರ್ಣಾವಕಾಶ

ಪ್ರತಿ ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಸೂಕ್ತ ವೇದಿಕೆ ನಿರ್ಮಿಸಿಕೊಡುವ ಜೊತೆಗೆ ಅವರಲ್ಲಿಯ ಸಾಮರ್ಥ್ಯ ಅರಿತು ಆತ್ಮಸ್ಥೈರ್ಯ ತುಂಬಿ ಭವಿಷ್ಯ ನಿರ್ಮಿಸಿ ಕೊಡುವ ಜವಾಬ್ದಾರಿಯನ್ನು ಅಥರ್ವ ಕಾಲೇಜು ತುಂಬ ಶ್ರದ್ಧೆಯಿಂದ ಮಾಡುತ್ತಿದೆ.





2020-21ನೇ ಸಾಲಿನಲ್ಲಿ ಕೇವಲ 12 ಮಕ್ಕಳೊಂದಿಗೆ ಪ್ರಾರಂಭವಾದ ವಿದ್ಯಾಸಂಸ್ಥೆ ಪ್ರಸಕ್ತ 2025-26ನೇ ಸಾಲಿನಲ್ಲಿ 850 ವಿದ್ಯಾರ್ಥಿಗಳ ಕಲಿಕೆಗೆ ಅವಕಾಶ ಮಾಡಿಕೊಡುವ ಮೂಲಕ ಅತ್ಯಲ್ಪ ಅವಧಿಯಲ್ಲಿ ಗ್ರಾಮೀಣ ಭಾಗದಲ್ಲಿ ಬಹುದೊಡ್ಡ ಹೆಸರು ಮಾಡಿದೆ.

ಸಾಂಪ್ರದಾಯಿಕ ಪಿಯು ಕಲಿಕೆಯೊಂದಿಗೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುವ ಜೆಇಇ, ನೀಟ್ ಹಾಗೂ ಕೆಸಿಇಟಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಯನ್ನು ಪ್ರಥಮ ವರ್ಷದ ಪ್ರಾರಂಭದಿಂದಲೇ ನೀಡಲಾಗುತ್ತದೆ. ಸರ್ವ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದ ಈ ಕಾಲೇಜಿನಲ್ಲಿ ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸುಸಜ್ಜಿತ ಭೋಜನಾಲಯ ಹಾಗೂ ಶಾಲಾಬಸ್ ಸೌಕರ್ಯವಿದೆ. ನುರಿತ ಉಪನ್ಯಾಸಕ ಬಳಗದ ಜೊತೆಗೆ ಉಪನ್ಯಾಸಕರೇ ಸೇರಿ ನಿರ್ಮಿಸಿದ ಕಾಲೇಜು ಇದಾಗಿರುವುದರಿಂದ ಕಲಿಕಾ ಗುಣಮಟ್ಟ ಅತ್ಯುತ್ತಮವಾಗಿದೆ.

2025-26ನೇ ಸಾಲಿನ ಪಿಯು ಫಲಿತಾಂಶ: ಈ ವರ್ಷ ಕಾಲೇಜು ಅಮೋಘ ಫಲಿತಾಂಶ ಪಡೆದಿದ್ದು, ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯಾದ ಸೌಂದರ್ಯ ಪಂಡ್ರೋಳಿ (99.33%) 596 ಅಂಕ ಪಡೆಯುವ ರಾಜ್ಯಕ್ಕೆ 5ನೇ ಹಾಗೂ ವಿಜ್ಞಾನ ವಿಭಾಗದ ಐಶ್ವರ್ಯ ತಿಮ್ಮಾಪೂರ (98.33%) 590 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದಿದ್ದಾರೆ. ಒಟ್ಟು 349 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಬರೆದಿದ್ದು, 14 ವಿದ್ಯಾರ್ಥಿಗಳು ಶೇ.95ಕ್ಕಿಂತ ಅಧಿಕ, 54 ವಿದ್ಯಾರ್ಥಿಗಳು ಶೇ. 90ಕ್ಕಿಂತ ಅಧಿಕ, 102 ವಿದ್ಯಾರ್ಥಿಗಳು ಶೇ.85ಕ್ಕಿಂತ ಅಧಿಕ, 151 ವಿದ್ಯಾರ್ಥಿಗಳು ಶೇ. 80ಕ್ಕಿಂತ ಹಾಗೂ 209ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಹಾಗೂ ಸೃಜನಶೀಲ ಶಿಕ್ಷಣ ನೀಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ವರ್ಷದಿಂದ ವರ್ಷಕ್ಕೆ ವಿಶಿಷ್ಟ ಛಾಪು ಮೂಡಿಸುತ್ತಿರುವ ಅಥರ್ವ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಯಾನ ಹೀಗೆ ಮುದುವರಿಯಲಿ ಎಂಬುದು ವಿದ್ಯಾರ್ಥಿಗಳು, ಪಾಲಕರು ಹಾಗೂ ಹಿತೈಷಿಗಳ ಅಭಿಲಾಷೆಯಾಗಿದೆ.

ಹೃದಯಾಘಾತದಿಂದ ಯೋಧ ಸಾವು

ಬಾದಾಮಿ: ರಜೆಗೆ ಸ್ವಗ್ರಾಮಕ್ಕೆ ಬಂದಿದ್ದ ಯೋಧನೋರ್ವ ಹೃದಯಾಘಾತದಿಂದ ಮೃತಪಟ್ಟ ಘಟನೆ ತಾಲೂಕಿನ ಹಿರೇಮುಚ್ಚಳಗುಡ್ಡ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಯೋಧ ಮಾರುತಿ ಯಮನಪ್ಪ ದಳವಾಯಿ(38) ಮೃತಪಟ್ಟ ದುರ್ದೈವಿ. ಈತ ಆರ್ಮಿಯಲ್ಲಿ ಸೇವೆ ಸಲ್ಲಿಸುತ್ತಿದ್ದು ಸದರಿ ವ್ಯಕ್ತಿಯು ಮಿಲಿಟರಿ / ರ್‍ಯಾನ್ಸ / ಯುಪಿ / ಹವಾಲ್ದಾರ್ ಮೆಕ್ಯಾನಿಕಲ್ ಪುನಾ ರೆಜಿಮೆಂಟ್‌ದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಮೃತ ಯೋಧ ಸುಮಾರು ಹತ್ತು ದಿನದ ಹಿಂದೆ ರಜೆ ಮೇಲೆ ಗ್ರಾಮಕ್ಕೆ ಆಗಮಿಸಿದ್ದರು. ಶನಿವಾರ ರಾತ್ರಿ 11.45 ಗಂಟೆಗೆ ಮನೆಯಲ್ಲಿ ಮಲಗಿಕೊಂಡಾಗ ಆ ಸಮಯದಲ್ಲಿ ಹೃದಯಘಾತದಿಂದ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಭಾನುವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಶಾಸಕರ ತಾಯಿ ರತ್ನಾಬಾಯಿ ಚಿಮ್ಮನಕಟ್ಟಿ ಯೋಧನಿಗೆ ಅಂತಿಮ ನಮನ ಸಲ್ಲಿಸಿದರು.



ಕಿರುಸುದ್ದಿ

ಬೇಸಿಗೆ ಶಿಬಿರ ಉದ್ಘಾಟನೆ

ಗದಗ: ಮಕ್ಕಳು ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಅವರಲ್ಲಿ ಮಾನಸಿಕ ಕಾಯಿಲೆಗಳು ಹೆಚ್ಚಾಗುತ್ತಿವೆ ಎಂದು ದಿವಾಣಿ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್.ಶಿವನಗೌಡ್ರ ಹೇಳಿದರು. ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.10ರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಸಹಯೋಗದಲ್ಲಿ ಜರುಗಿದ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರ ಮಾತನಾಡಿ, ಮಕ್ಕಳಲ್ಲಿ ಪಠ್ಯದೊಂದಿಗೆ ಕಲಾಸಕ್ತಿ ಮೂಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಾಗೂ ಜಿಲ್ಲಾ ಬಾಲಭವನ ಸಮಿತಿಯಿಂದ ಈ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ವಿಶೇಷವಾಗಿ ರೈನ್ ಡ್ಯಾನ್ಸ್, ದೇಸಿ ಆಟಗಳು, ಮಣ್ಣಿನ ಆಟಗಳು, ತಾರಾಲಯ ವೀಕ್ಷಣೆ ಸೇರಿದಂತೆ ಹಲವಾರು ಆಸಕ್ತಿದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಜಯಶ್ರೀ ಆರ್. ಮಾತನಾಡಿ, 15 ದಿನಗಳವರೆಗೆ ನಡೆಯುವ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ವಿವಿಧ ಚಟುವಟಿಕೆಗಳ ಗಳೊಂದಿಗೆ ಮನೋವಿಕಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಲ್ಲಿರುವ ಸೂಕ್ತ ಪ್ರತಿಭೆಯನ್ನು ಗುರುತಿಸುವ ಕೆಲಸ ಈ ಶಿಬಿರ ಮಾಡುತ್ತಿದೆ ಎಂದರು. ಪ್ರಭಾರ ಬಿಇಒ ಎಸ್.ಪಿ.ಪ್ರಭಯ್ಯನಮಠ, ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ರಾಜೇಂದ್ರ ಗಡಾದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕಿ ಲಕ್ಷ್ಮೀ ಜಿಂಗಿ ಮಾತನಾಡಿದರು. ದೇವೇಂದ್ರಕುಮಾರ ಹೊಸಕೇರಿ ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ, ರವಿ ಉಮಚಗಿ ಯೋಗ, ಅಶ್ವಿನಿ ಚವಡಿ ಕರಾಟೆ, ಚೇತನಾ ಶಿದ್ಲಿಂಗ ಜ್ಯುವೆಲ್ಲರಿ ಮತ್ತು ಮೆಹಂದಿ, ವಂದನಾ ನಾಗನೂರ ಚಿತ್ರಕಲೆ ಮತ್ತು ಕರಕುಶಲ ಕಲೆ, ವರ್ಷ ಕಲಕಂಬಿ ಶಾಸ್ತ್ರೀಯ ಸಂಗೀತ ಮಕ್ಕಳಿಗೆ ಹೇಳಿಕೊಡಲಿದ್ದಾರೆ. ರವಿ ಉಮಚಗಿ ನಿರೂಪಿಸಿದರು.

ಇಂದಿನಿಂದ ಶಿವಾನುಭವ

ಮುಂಡರಗಿ: ಇಲ್ಲಿಯ ಜಗದ್ಗುರು ತೋಂಟದಾರ್ಯ ಶಾಖಾಮಠದಲ್ಲಿ ಏ.27ರಂದು ಸಂಜೆ 7 ಕ್ಕೆ 62 ನೇ ತ್ರೈಮಾಸಿಕ ಶಿವಾನುಭವ ಕಾರ್ಯಕ್ರಮವು ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರಗಲಿದೆ. ವಿಶ್ರಾಂತ ಪ್ರಧ್ಯಾಪಕ ಪ್ರಭು ಸೊಪ್ಪಿನ ಅವರು ಅನುಭಾವದ ನಿಧಿ ಅಣ್ಣ ಬಸವಣ್ಣನವರು ಕುರಿತು ಉಪನ್ಯಾಸ ನೀಡುವರು. ಈ ವೇಳೆ ಸಹಕಾರ ಶಿರೋಮಣಿ ಪ್ರಶಸ್ತಿ ಪುರಸ್ಕೃತ ಲಿಂಗರಾಜಗೌಡ ಪಾಟೀಲ, ಮುಖ್ಯಮಂತ್ರಿ ಪದಕ ಪಡೆದ ಜಾಫರ್ ಬಚ್ಚೇರಿ, ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವಿಶೇಷ ಸಾಧನೆ ಮಾಡಿದ ಮಂಜುಳಾ ಹುಳಕಣ್ಣವರ, ಪದ್ಮಪ್ರಿಯಾ ಶೆಟ್ಟರ,ಪೂಜಾ ಕುಂಬಾರ, ಸಂಧ್ಯಾ ಲಮಾಣಿ,ರೇವಂತರಡ್ಡಿ ಮುಂಡರಗಿ, ಶಾಂತಮ್ಮ ಸಜ್ಜನರ ಇವರುಗಳಿಗೆ ಗೌರವ ಸತ್ಕಾರ ಜರುಗುವುದು. ಸಂಗೀತ ಸೇವೆಯನ್ನು ಜಯಶ್ರೀ ಅಳವಂಡಿ ನೀಡುವರು. ಧರ್ಮ ಗ್ರಂಥ ಪಠಣವನ್ನು ಸುಧಾ ಗುಡಿ ಮಾಡುವರು, ವಚನ ಚಿಂಥನೆಯನ್ನು ನಂದಿತಾ ದಂಡಿನ ನಡೆಸಿಕೊಡುವರು. ಭಕ್ತಿ ಸೇವೆಯನ್ನು ಲಿಂ ಕಲಾವತಿ ಸೊಲಗಿ ಅವರ ಸ್ಮರಣಾರ್ಥ ಡಾ.ನಿಂಗು ಸೊಲಗಿ ಹಾಗೂ ಕುಟುಂಬದವರು ವಹಿಸಿಕೊಂಡಿದ್ದಾರೆ.

ಶೇ.95.48ರಷ್ಟು ಫಲಿತಾಂಶ

ನರಗುಂದ: 2025-26ನೇ ಸಾಲಿನ ಎಸ್‌ಎಸ್‌ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿನ 07 ಸಕಾರಿ ಶಾಲೆಗಳಲ್ಲಿ ಶೇ.94.94, 2 ಅನುದಾನಿತ ಪ್ರೌಢಶಾಲೆಗಳಲ್ಲಿ ಶೇ.93.46, 2 ಅನುದಾನರಹಿತ ಪ್ರೌಢಶಾಲೆಗಳಲ್ಲಿ ಶೇ.97.52ರಷ್ಟು ವಿದ್ಯಾರ್ಥಿಗಳು ಪ್ರತಿಶತ ನೂರರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ತಾಲೂಕಿನಲ್ಲಿ ಒಟ್ಟು 1416 ವಿದ್ಯಾರ್ಥಿಗಳಲ್ಲಿ 1352 ವಿದ್ಯಾರ್ಥಿಗಳು ಪರೀಕ್ಷೆ ಬರೆದು ಶೇ.95.48ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಆಗಿದ್ದಾರೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ವಿಡಿಯೋ ಕಳುಹಿಸಲು ಅವಕಾಶ

ನರಗುಂದ: ಮಕ್ಕಳಲ್ಲಿ ವಚನ ಜಾಗೃತಿಗಾಗಿ ವಚನ ವಾಚನವನ್ನು ಏರ್ಪಡಿಸಲಾಗಿದೆ. 12 ವರ್ಷದ ಮಕ್ಕಳು ವಚನ ವಾಚನದ ವಿಡಿಯೋವನ್ನು ದೂರವಾಣಿ ಸಂಖ್ಯೆ: 9945256998 ವಾಟ್ಸ್ಆ್ಯಪ್‌ಗೆ ಕಳುಹಿಸಬೇಕು ಎಂದು ವಕೀಲ ಎಸ್.ಆರ್. ಪಾಟೀಲ ತಿಳಿಸಿದ್ದಾರೆ. ವಚನ ವಾಚನದಲ್ಲಿ ಭಾಗವಹಿಸುವ ಮಗು ಹನ್ನೆರೆಡು ವರ್ಷದೊಳಗಿರಬೇಕು ಮತ್ತು ಮಗು ವಚನ ವಾಚನ ಮಾಡುವ ಮೊದಲು ತನ್ನ ಹೆಸರು, ಶಾಲೆಯ ಹೆಸರು, ತಾನು ಕಲಿಯುತ್ತಿರುವ ತರಗತಿ ಕುರಿತು ಹೇಳಬೇಕೆಂದು ತಿಳಿಸಿದ್ದಾರೆ.

ಬಿರುಗಾಳಿ ಸಹಿತ ಮಳೆ

ನರೇಗಲ್ಲ: ಸಮೀಪದ ಬೂದಿಹಾಳ ಗ್ರಾಮದಲ್ಲಿ ಭಾನುವಾರ ಸಂಜೆ ಬೀಸಿದ ಬಿರುಗಾಳಿಗೆ ಭಾರೀ ಅನಾಹುತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ. ಸಂಜೆ 5 ಗಂಟೆಯ ಸುಮಾರಿಗೆ ಗಾಳಿಯ ವೇಗಕ್ಕೆ ಹಾರಿಬಂದ ತಗಡಿನ ಶೀಟ್ ಒಂದು ನೇರವಾಗಿ ವಿದ್ಯುತ್ ಪರಿವರ್ತಕಕ್ಕೆ (ಟ್ರಾನ್ಸ್‌ಫಾರ್ಮರ್) ಗೆ ಅಪ್ಪಳಿಸಿದೆ.



ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.



ಗದಗ: ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.10ರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಸಹಯೋಗದಲ್ಲಿ ಜರುಗಿದ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವನ್ನು ದಿವಾಣಿ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎಸ್.ಶಿವನಗೌಡ್ರ ಉದ್ಘಾಟಿಸಿದರು.

ಅಂಬೇಡ್ಕರ್ ಚಿಂತನೆ ವಿಶ್ವಕ್ಕೆ ಮಾದರಿ: ಸುಜಾತಾ

ಶಿರಹಟ್ಟಿ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರವರ ಚಿಂತನೆ ಹಾಗೂ ವಿಚಾರಧಾರೆಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ವಿಶ್ವಕ್ಕೆ ಮಾದರಿಯಾಗಿವೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಹೇಳಿದರು.

ಸ್ಥಳೀಯ ಡಾ. ಬಿ.ಆರ್. ಅಂಬೇಡ್ಕರ್ ನಗರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತ್ಯುತ್ಸವ ಹಾಗೂ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾವ್ ಅವರ 119ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಂಬೇಡ್ಕರ್ ಅವರು ದೇಶದ ಭವಿಷ್ಯದ ಬಗ್ಗೆ ವಿಶಾಲ ದೃಷ್ಟಿಕೋನ ಹೊಂದಿದ್ದರು. ಜಾತಿ ತಾರತಮ್ಯ ನಿರ್ಮೂಲನೆ, ಮಹಿಳಾ ಸಬಲೀಕರಣ, ಪ್ರಜಾಪ್ರಭುತ್ವದ ಬಲವರ್ಧನೆ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ, ಶಿಕ್ಷಣ, ಮೀಸಲಾತಿಯಲ್ಲಿ ಹಕ್ಕುಗಳನ್ನು ನೀಡುವುದರ ಮೂಲಕ ಸರ್ವ ಧರ್ಮದವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ, ಬಡವರ ಬದುಕಿಗೆ ದಾರಿದೀಪವಾಗಿದ್ದಾರೆ ಎಂದರು. ನಾಗರಾಜ ಲಕ್ಕುಂಡಿ, ಗುರುನಾಥ ದಾನಪ್ಪನವರ, ದೇವಕ್ಕ ಗುಡಿಮನಿ, ಎಚ್.ಎನ್. ಬಳ್ಳಾರಿ, ಫಕೀರೇಶ ಮ್ಯಾಟಣ್ಣವರ, ರವಿ ಗುಡಿಮನಿ, ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್‌ಐ ಈರಪ್ಪ ರಿತ್ತಿ, ಮುಂಡರಗಿ ಪಿಎಸ್‌ಐ ಚನ್ನಯ್ಯ ದೇವೂರು, ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಹೊನ್ನಪ್ಪ ಶಿರಹಟ್ಟಿ, ಅಜ್ಜನಗೌಡ ಪಾಟೀಲ್, ಪರಮೇಶ ಪರಬ, ಮುತ್ತು ಬಾವಿಮನಿ, ಪ್ರಕಾಶ ಬಡಣ್ಣವರ ಸೇರಿದಂತೆ ದಲಿತಪರ ಸಂಘಟನೆಗಳ ಪದಾಧಿಕಾರಿಗಳು ಇದ್ದರು.



ಶಿರಹಟ್ಟಿ: ಸ್ಥಳೀಯ ಡಾ. ಬಿ.ಆರ್. ಅಂಬೇಡ್ಕರ್ ನಗರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತ್ಯುತ್ಸವ ಹಾಗೂ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾವ್ ಅವರ 119ನೇ ಜಯಂತಿ ಕಾರ್ಯಕ್ರಮವನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಉದ್ಘಾಟಿಸಿದರು.

ಸಾಯಿಬಾಬ ಮಂದಿರ ಶೀಘ್ರ ನಿರ್ಮಾಣ: ಶಾಸಕ ಜಿ.ಎಸ್. ಪಾಟೀಲ

ಸ್ವಚ್ಛತೆ ನಮ್ಮ ಕರ್ತವ್ಯವಾಗಲಿ



ರೋಣ: ಪಟ್ಟಣದ 23ನೇ ವಾರ್ಡಿನ ಶ್ರೀ ಸಾಯಿ ನಗರದ ಸೌಂದರ್ಯ ವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಭಾನುವಾರ ಪಟ್ಟಣದ ಶ್ರೀ ಸಾಯಿ ನಗರದಲ್ಲಿ ಶಾಸಕರ ಅನುದಾನಡಿಯಲ್ಲಿ 4 ಕೋಟಿ 89 ಲಕ್ಷ ರೂ.ಗಳ ವೆಚ್ಚದಲ್ಲಿ ಸಿಸಿ ಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಸಾಯಿನಗರದ ಜನರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ರಸ್ತೆ ಬದಿಗಳಲ್ಲಿ ಕಸ ಚೆಲ್ಲುವ ಬದಲು ಮನೆಗಳ ಮುಂದೆ ಕಸದ ವಾಹನಗಳು ಬರುತ್ತವೆ, ವಾಹನದ ಸೌಲಭ್ಯಗಳು ಇದ್ದರು ಕೂಡಾ ರಸ್ತೆ ಬದಿ ಕಸ ಎಸೆಯುವುದು ಸರಿಯಲ್ಲ, ನಮ್ಮ ಮನಸಿನ ಭಾವನೆಗಳು ಬದಲಾಗಬೇಕು ಹಾಗೂ ಸ್ವಚ್ಛತೆ ಕಾಪಾಡುವುದು ನಮ್ಮ ಕರ್ತವ್ಯವಾಗಬೇಕು ಎಂದರು.

ಸಂಗಪ್ಪ ಕುಷ್ಟಗಿ, ವೀರಪ್ಪ ಬೊಳ್ಳಳ್ಳಿ, ರಾಘವೇಂದ್ರ ಧಲಭಂಜನ, ಕೆ.ಎಸ್.ಹಿರೇಮಠ, ಬಾಬುಗೌಡ ಪಾಟೀಲ,ಯೂಸುಫ್ ಇಟಗಿ, ಬಾವಾಸಾಬ ಬೆಟಗೇರಿ, ಆನಂದ ಚಂಗಳಿ, ನಾಜಬೇಗಂ ಯಲಿಗಾರ,ಗೀತಾ ಮಾಡಲಗೇರಿ, ಸಂಗು ನವಲಗುಂದ, ಮಲೀಕ ಯಲಿಗಾರ, ಈಶ್ವರ ಕಡಬಲಕಟ್ಟಿ ಸೇರಿದಂತೆ ಪುರಸಭೆ ಮುಖ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಿಗದ ಸಹಕಾರ

ಪಟ್ಟಣದ ಹೃದಯ ಭಾಗದಲ್ಲಿರುವ ಕೆರೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿ ಕೆರೆಯ ಸೌಂದರ್ಯವನ್ನು ಹೆಚ್ಚಿಸಿ ಅದೊಂದು ಪ್ರವಾಸಿ ತಾಣವನ್ನಾಗಿ ಮಾಡಬೇಕು ಎಂಬ ನಿರೀಕ್ಷೆಯಿಂದ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ಮಲಪ್ರಭಾ ನೀರಿನಿಂದ ಕೆರೆಯನ್ನು ಭರ್ತಿಗೊಳಿಸಿ ಅಲ್ಲಿ ಬೋಟಿಂಗ್ ವ್ಯವಸ್ಥೆ, ಮಕ್ಕಳ ಉದ್ಯಾನವನ, ವಾಯು ವಿಹಾರಕ್ಕೆ ಸ್ಥಳ, ಹಿರಿಯ ನಾಗರಿಕರಿಗೆ ವಿಶ್ರಾಂತಿ ಸೇರಿ ಪಿಕ್‌ನಿಕ್ ಸ್ಪಾಟ್ ಆಗುವ ರಿತಿಯಲ್ಲಿ ಅಭಿವೃದ್ಧಿ ಪಡಿಸಬೇಕು ಎಂಬ ಕನಸು ನನ್ನದು. ವಿಪರ್ಯಾಸ ಅಂದರೆ ಸಹಕಾರ ಸಿಗುತ್ತಿಲ್ಲ. ಇದು ನನ್ನ ಮನಸ್ಸಿಗೆ ತೀವ್ರ ನೋವು ತರಿಸಿದೆ ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಎನ್‌ಎ ಆದರಷ್ಟೇ ಅನುದಾನ ಬಳಕೆ

ಜೀವನ ಸುಖದಿಂದ ಕೂಡಿರಲು ನಿವೇಶನ ಹೊಂದಬೇಕು ಎನ್ನುವ ಭಾವನೆ ಎಲ್ಲರದ್ದು. ವಿಪರ್ಯಾಸ ಅಂದರೆ ನಿವೇಶನ ಎನ್‌ಎ ಆಗಿದೆಯಾ ಎಂಬುದನ್ನು ಸಹ ನಾವುಗಳು ನೋಡದೆ ನಿವೇಶನ ಖರಿದಿ ಮಾಡುತ್ತೇವೆ. ಇದರಿಂದ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಕಾರಣ ಎನ್‌ಎ ಆಗದ ಪ್ಲಾಟ್‌ಗಳಲ್ಲಿ ಸರ್ಕಾರದ ಅನುದಾನವನ್ನು ಬಳಕೆ ಮಾಡಲು ಬರುವುದಿಲ್ಲ ಎಂಬುದನ್ನು ಅರಿಯಬೇಕಿದ್ದು, ವಿನಾಕಾರಣ ಜನಪ್ರತಿನಿಧಿಗಳ ಮೇಲೆ ಗೂಬೆ ಕೂರಿಸುವುದು ಸಮಂಜಸವಲ್ಲ ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು.

> ಸಾಯಿ ನಗರದಲ್ಲಿ ಶ್ರೀ ಸಾಯಿಬಾಬಾನವರ ಮಂದಿರ ನಿರ್ಮಾಣವಾಗಬೇಕು ಎಂಬುದು ಇಲ್ಲಿನ ನಿವಾಸಿಗಳ ಆಸೆಯಾಗಿದ್ದು, ಆಸೆ ಈಡೇರಿಸಲು ನಾನು ಬದ್ಧನಾಗಿದ್ದೇನೆ. ಮಂದಿರ ನಿರ್ಮಾಣದ ಜಾಗದ ದಾಖಲೆ ಒದಗಿಸುವಲ್ಲಿ ಕಮಿಟಿ ಪದಾಧಿಕಾರಿಗಳು ಮುಂದಾಗಬೇಕು. ಅಂದಾಗ ಮಾತ್ರ ಸರ್ಕಾರದ ನೆರವು ಸಿಗಲು ಸಾಧ್ಯ. ಮಂದಿರದ ನಿರ್ಮಾಣಕ್ಕೆ ವೈಯಕ್ತಿಕ ಸಹಾಯ ಸಹಕಾರ ನೀಡುವೆ.
> ■ ಜಿ.ಎಸ್.ಪಾಟೀಲ, ಶಾಸಕ

- ಪಟ್ಟಣದಲ್ಲಿರುವ ಎಲ್ಲ 23 ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ
- 8 ಕೋಟಿ ರೂ.ಗಳ ವೆಚ್ಚದಲ್ಲಿ ಅನೇಕ ಕಡೆಗಳಲ್ಲಿ ರಸ್ತೆ ಮತ್ತು ಚರಂಡಿ ಸುಧಾರಣೆ ಕಾರ್ಯಗಳು ಪ್ರಗತಿಯಲ್ಲಿ
- ನಾಗರಿಕರು ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡಲಿ
- ಅಗತ್ಯಕ್ಕೆ ತಕ್ಕಂತೆ ಅನುದಾನ ಒದಗಿಸಲಾಗುವುದು ಎಂದ ಶಾಸಕ ಜಿ.ಎಸ್.ಪಾಟೀಲ

ತಂದೆ ತಾಯಿ ತ್ಯಾಗ ದೊಡ್ಡದು: ಕುಲಕರ್ಣಿ

ಲಕ್ಷ್ಮೇಶ್ವರ: ದೇಶದ ಅಭಿವೃದ್ಧಿಗೆ ಸಿವಿಲ್ ಇಂಜಿನಿಯರ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು. ಮಾಹಿತಿ ತಂತ್ರಜ್ಞಾನ ಶಿಕ್ಷಣ ಈ ಭಾಗದ ಮಕ್ಕಳಿಗೆ ದೊರೆಯಲಿ ಎಂದು ಕಾಲೇಜು ಸ್ಥಾಪನೆ ಮಾಡಿರುವುದು ಶ್ಲಾಘನಿಯ ಎಂದು ಶಿಕ್ಷಣ ತಜ್ಞ ಅಭಿನವ ಬೇಂದ್ರೆ ಸುರೇಶ ಕುಲಕರ್ಣಿ ಹೇಳಿದರು

ಅವರು ಪಟ್ಟಣದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ. ಅಗಡಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 20ನೇ ವರ್ಷದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳ ವಿದ್ಯಾಭ್ಯಾಸ ಸಲುವಾಗಿ ತಂದೆ ತಾಯಿ ತ್ಯಾಗ ದೊಡ್ಡದು. ಅಂತಹ ಪಾಲಕರ ಕಣ್ಣಲ್ಲಿ ನೀರು ಹಾಕಿಸುವ ಕೆಲಸ ಮಾಡಬಾರದು. ಗುರುಗಳ ಬಗ್ಗೆ ತಾತ್ಸಾರ ಬೇಡ ಅಭಿಮಾನವಿರಲಿ. ಮೊಬೈಲ್‌ನಲ್ಲಿ ಶಿಕ್ಷಣ ಸಂಬಂಧ ಮಹತ್ವವಾದ ವಿಷಯಗಳನ್ನು ನೋಡಿ ಎಂದರು.

ಪ್ರಾಚಾರ್ಯ ಪರಶುರಾಮ ಬಾರ್ಕಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಭಾಗದ ಬಡವರು, ರೈತರು, ಕೂಲಿ ಕಾರ್ಮಿಕರ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಸಿಗಬೇಕು ಎಂಬ ಉದ್ದೇಶದಿಂದ 2 ದಶಕಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅಗಡಿ ಕಾಲೇಜು ಶಿಕ್ಷಣ ನೀಡಿದೆ. ವಿದ್ಯಾರ್ಥಿಗಳು ಉತ್ತಮ ಜೀವನವನ್ನು ಕಟ್ಟಿಕೊಂಡಿದ್ದಾರೆ ಎಂದರು.

ಇದಕ್ಕೂ ಮೊದಲು ಇಂಜಿನಿಯರಿಂಗ್ ಪದವಿ ಮುಗಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಗೌನ್ ಧರಿಸಿ ತಮ್ಮ ವಿಭಾಗದ ಗೆಳೆಯರ ತಂಡದೊಂದಿಗೆ ಸಂಭ್ರಮದಿಂದ ಕುಣಿದರು., ಪಾಲಕರು ಮಕ್ಕಳ ಸಂಭ್ರಮ ಕಣ್ತುಂಬಿಕೊಂಡು ಮಕ್ಕಳೊಂದಿಗೆ ಸೆಲ್ಫಿ ಫೋಟೋ ಕ್ಲಿಕ್ಕಿಸಿ ತಮ್ಮೆಲ್ಲ ಕುಟುಂಬ ಫೋಟೋ ತೆಗೆಸಿಕೊಂಡರು. ಆಡಳಿತ ಅಧಿಕಾರಿ ಪ್ರೊ. ವಿಕ್ರಮ ಶಿರೋಳ, ಪ್ರೊ. ಆರ್. ಎನ್. ಪಾಟೀಲ, ಡಾ. ಸುಭಾಸ ಮೇಟಿ, ಪ್ರೊ. ಸ್ವಪ್ನ ಚನ್ನಗೌಡ್ರ, ಡಾ. ಗಿರೀಶ ಯತ್ತಿನಹಳ್ಳಿ, ಪ್ರೊ. ಅರುಣಕುಂಬಿ, ಪ್ರೊ. ಸಂತೋಷ ಭುಜರಿ, ಪ್ರೊ. ಶ್ರೀನಿವಾಸ ಆರ್., ಪ್ರೊ. ಶಿವರಾಜ ಹಿರೇಮಠ, ಪ್ರೊ. ಸೋಮಶೇಖರ ಕೇರಿಮನಿ, ಪ್ರೊ. ಎಸ್.ಎಫ್. ಕೊಡ್ಲಿ, ಪ್ರೊ. ಷಣ್ಮುಖ ಜಿ., ಪ್ರೊ. ಪ್ರತಿಮಾ ಮಹಾಪುರುಷ, ಪ್ರೊ. ರವಿಪ್ರಕಾಶ ಇದ್ದರು. ಅಭಿಷೇಕ ಕಣವಿ, ಅಕ್ಷತಾ ಹಡಪದ, ಲಕ್ಷಣ ಪಾಟೀಲ್ ನಿರೂಪಿಸಿದರು. ಶ್ರೀಲಕ್ಷ್ಮೀ ಪ್ರಾರ್ಥಿಸಿದರು. ರಾಘವೇಂದ್ರ ಎ. ಸ್ವಾಗತಿಸಿದರು. ಚಂದ್ರಮೌಳಿ ಜೋಶಿ ವಂದಿಸಿದರು.



ಸರ್ಕಾರಿ ಸೌಲಭ್ಯಕ್ಕೆ ಕಾರ್ಮಿಕರ ಕಾರ್ಡ್ ಅವಶ್ಯ

ನರಗುಂದ: ಸರ್ಕಾರಿ ಸೌಲಭ್ಯ ಪಡೆಯಲು ಕಾರ್ಮಿಕರ ಕಾರ್ಡ್ ಅವಶ್ಯ. ಮೂರು ವರ್ಷಕ್ಕೊಮ್ಮೆ ಕಾರ್ಡ್ ರಿನಿವಲ್ ಆಗಿದ್ದರೆ ಮಾತ್ರ, ಪಿಂಚಣಿ, ಕಿಟ್, ಸುರಕ್ಷಾ ಕಿಟ್ ಸೇರಿದಂತೆ ಹಲವಾರು ಸರ್ಕಾರಿ ಸೌಲಭ್ಯಗಳು ಸಿಗಲಿವೆ ಎಂದು ಕರುನಾಡು ಕಾರ್ಮಿಕರ ವೇದಿಕೆ ರಾಜ್ಯಾಧ್ಯಕ್ಷ ಚಂದ್ರಗೌಡ ಹೇಳಿದರು.

ಪಟ್ಟಣದ ಶ್ರೀ ಸಿದ್ಧರಾಮೇಶ್ವರ ನಗರದಲ್ಲಿ ಶನಿವಾರ ಕರುನಾಡ ಕಾರ್ಮಿಕರ ವೇದಿಕೆ ವತಿಯಿಂದ ನೂತನ ಕಚೇರಿ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೊಂದ ಕಾರ್ಮಿಕರಿಗೆ ಸೌಲಭ್ಯ ಒದಗಿಸಲು ಕಾರ್ಮಿಕರ ಕಚೇರಿಗಳಿವೆ. ಕಾರ್ಮಿಕರು ತಾವು ಮಾಡುವ ಕೆಲಸಕ್ಕೆ ಸಂಭಂದಿಸಿದ ಕಾರ್ಡಗಳನ್ನು ಹೊಂದಿರಬೇಕು. ಬೇರೆ ಬೇರೆ ಕಾರ್ಡಗಳಿಗೆ ಬೇರೆ ರೀತಿ ಸೌಲಭ್ಯ ಸಿಗಲಿವೆ. ಮಕ್ಕಳನ್ನು ಶಾಲೆಗೆ ಕಳಿಸದೇ ಕೇವಲ ಕೆಲಸಕ್ಕೆ ಕಳುಹಿಸಬಾರದು. ನಿಜವಾಗಿ ಕಾರ್ಮಿಕರ ಕಾರ್ಡ್ ಹೊಂದಿದವರಿಗೆ ಮಾತ್ರ ಕರುನಾಡು ಸಂಘಟನೆ ಸೌಲಭ್ಯ ಒದಗಿಸುವ ಪ್ರಯತ್ನ ಮಾಡಲಿದೆ. ಪಿಂಚಣಿ, ಮದುವೆ ಸಹಾಯಧನ, ಅಂತ್ಯಕ್ರಿಯೆಗೆ ಸಹಾಯಧನ ಸರ್ಕಾರದಿಂದ ಸಿಗಲಿದೆ ಎಂದರು.

ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದುಡಿಯುವ ವರ್ಗಕ್ಕೆ ಗೌರವ ಸಿಗಬೇಕೆನ್ನುವುದು 12ನೇ ಶತಮಾನದಿಂದ ಪ್ರಯತ್ನ ನಡೆದಿದೆ. ಸೌಲಭ್ಯಗಳು ನಿಜವಾದ ಕಾರ್ಮಿಕರಿಗೆ ಸಿಗಬೇಕಾಗಿದೆ. ಪ್ರಾಮಾಣಿಕ ಕೆಲಸದ ಹಿಂದೆ ಭಗವಂತ ಇದ್ದಾನೆ. ಕಾರ್ಮಿಕರು ದುಶ್ಚಟದಿಂದ ದೂರವಿರಬೇಕು. ಕಷ್ಟಪಟ್ಟು ದುಡಿದ ಕಾರ್ಮಿಕರು ಕುಟುಂಬದೊಂದಿಗೆ ಸುಂದರವಾದ ಜೀವನ ನಡೆಸಲಿ. ಕಾರ್ಮಿಕರ ಉದ್ಧಾರಕ್ಕೆ ಒಳ್ಳೆಯ ಶಿಬಿರಗಳನ್ನು ಏರ್ಪಡಿಸಿ, ಕಾರ್ಮಿಕರ ಕುಟುಂಬಗಳು ಚೆನ್ನಾಗಿರಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದರು.

ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಲಕ್ಷ್ಮೀಗೌಡ ಮಾತನಾಡಿ, ದೇಶಕ್ಕೆ ರೈತ, ಸೈನಿಕ ಎಷ್ಟು ಮುಖ್ಯವೋ, ಕಾರ್ಮಿಕನು ಅಷ್ಟೇ ಮುಖ್ಯ. ಸರ್ಕಾರದ ಸೌಲಭ್ಯ ಪಡೆಯಲು ಸಂಘಟನೆ ಮತ್ತು ಹೋರಾಟ ಅನಿವಾರ್ಯ. ನೊಂದ ಕಾರ್ಮಿಕರ ಜೊತೆ ಈ ಸಂಘಟನೆ ಸದಾ ಇರುತ್ತದೆ ಎಂದರು.

ಹಲವಾರು ಕಾರ್ಮಿಕರುಗಳಿಗೆ ಸುರಕ್ಷಾ ಕಿಟ್ ಹಾಗೂ ಸಾಮಗ್ರಿ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಅವಿನಾಶ, ಯಾಸೀನ ಮುಲ್ಲಾನಿ, ಅಭಿಯಂತರರಾದ ಎಸ್.ಎ. ಕಾಳಗಿ, ಸಂಜು ನಲವಡೆ, ರಾಕೇಶ ಹಬೀಬ, ಜಿಲ್ಲಾಧ್ಯಕ್ಷ ಶಂಕರ ಸುರೇಬಾನ, ಮಾರುತಿ ವಡ್ಡರ, ರೆಹಮಾನಸಾಬ ಎಲಿಗಾರ, ಭರತ ಕಟ್ಟಿಮನಿ, ಗಂಗಮ್ಮ ಸಂಗಳಮಠ, ಮಂಜು ವಡ್ಡರ, ರವಿಚಂದ್ರ ವಡ್ಡರ, ನಾಗೇಶ ವಡ್ಡರ, ಕಾರ್ಮಿಕ ನಿರೀಕ್ಷಕಿ ಪೂಜಾ ಶಿಂಧೆ, ಬಸವರಾಜ ವಡ್ಡರ ಇತರರಿದ್ದರು.



ಉಚಿತ ಕೊಡುಗೆ ಕಾಯಕ ತತ್ವಕ್ಕೆ ವಿರೋಧ: ಡಾ. ಬಿ.ಜಿ.ಜವಳಿ

ಮುಂಡರಗಿ: ಈಗಿನ ಸರ್ಕಾರವು ಕಾಯಕವನ್ನು ಕಡೆಗಣಿಸಿ ರಾಜ್ಯದ ಜನತೆಗೆ ಉಚಿತ ಕೊಡುಗೆಗಳನ್ನು ನೀಡುವ ಮೂಲಕ ಕಾಯಕವನ್ನು ಕಡೆಗಣಿಸುತ್ತಿದೆ. ಇದು ಕಾಯಕ ತತ್ವಕ್ಕೆ ವಿರೋಧವಾಗಿದೆ ಎಂದು ಶ್ರೀ ಜ.ಅ.ವಿದ್ಯಾ ಸಮಿತಿಯ ಆಡಳಿತಾಧಿಕಾರಿ ಡಾ. ಬಿ.ಜಿ.ಜವಳಿ ಹೇಳಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇಲ್ಲಿಯ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ವಚನ ಚಿಂತನ ಉಪನ್ಯಾಸ ಮಾಲೆ-39 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಾಸನ ಸಭೆಗಳಲ್ಲಿ ನಮ್ಮ ಸಂಸದರು ಮನಬಂದಂತೆ ವರ್ತಿಸುತ್ತಿದ್ದಾರೆ. ಸಂಸದೀಯ ಪದಗಳ ಬಳಕೆ ಹಾಗೂ ಉತ್ತಮ ನಡುವಳಿಕೆಗಳು ಅಲ್ಲಿ ಕಣ್ಮರೆಯಾಗುತ್ತಿದ್ದು, ನಮ್ಮ ಜನಪ್ರತಿನಿಧಿಗಳು ಶರಣರ ವಚನಗಳನ್ನು ಓದಬೇಕು ಎಂದರು.

ಹಿರಿಯ ಶಿಕ್ಷಕಿ ಅಕ್ಕಮಹಾದೇವಿ ಕೊಟ್ಟೂರಶೆಟ್ಟರ ಮಾತನಾಡಿ, ಜೀವನದಲ್ಲಿ ಮನುಷ್ಯ ಹೇಗೆ ಬದುಕಬೇಕು ಎನ್ನುವುದನ್ನು ನಮ್ಮ ಶರಣರು ನಮಗೆ ಕಲಿಸಿದ್ದಾರೆ. ಶರಣ ಸಂಕುಲದ ಕಣ್ಮಣಿಯಾಗಿದ್ದ ಬಸವಣ್ಣನು ನಮಗೆಲ್ಲ ಮಾದರಿಯಾಗಿದ್ದಾನೆ. ಅವರ ತತ್ವಾದರ್ಶಗಳು ನಮಗೆ ದಾರಿದೀಪಗಳಾಗಿವೆ ಎಂದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಮಾತನಾಡಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಲ್ಲರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರವಾಗಿದೆ ಎಂದರು. ಗಾಯಕಿ ಜಯಶ್ರೀ ಅಳವುಂಡಿ ವಚನ ಗಾಯನ ನಡೆಸಿದರು. ಐ.ಎ.ಮುಲ್ಲಾ ಪ್ರಾರ್ಥನೆ ಹಾಡಿದರು. ಕಾಶೀನಾಥ ಬಿಳಿಮಗ್ಗದ ಸ್ವಾಗತಿಸಿ, ಪ್ರಾಸ್ತಾವಿಸಿದರು. ಎನ್.ಎನ್. ಕಲಕೇರಿ ನಿರೂಪಿಸಿದರು. ಮಂಜುನಾಥ ಮುಧೋಳ, ವೀಣಾ ಪಾಟೀಲ, ಮಹೇಶ ಮೇಟಿ, ಅರುಣಾ ಗುಜ್ಜರಿ, ಮಧುಮತಿ ಇಲಕಲ್, ಹನುಮರಡ್ಡಿ ಇಟಗಿ, ಯುವರಾಜ ಮುಂಡರಗಿ, ಕೃಷ್ಣ ಸಾಹುಕಾರ, ಪರಶುರಾಮ ಏಳುಕೊಳ್ಳಿ ಉಪಸ್ಥಿತರಿದ್ದರು.



ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕ: ಚನ್ನವೀರ ಸ್ವಾಮೀಜಿ

ಲಕ್ಷ್ಮೇಶ್ವರ: ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು, ಜನರಲ್ಲಿ ಧಾರ್ಮಿಕ ಭಾವನೆ, ಭಯ-ಭಕ್ತಿ ಮೂಡಿಸಿ ಸನ್ಮಾರ್ಗದತ್ತ ಕೊಂಡ್ಯುಯುವ ಶ್ರದ್ಧಾ ಮತ್ತು ಶಕ್ತಿ ಕೇಂದ್ರಗಳಾಗಿವೆ ಎಂದು ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಹೇಳಿದರು.

ಅವರು ಗುರುವಾರ ಪಟ್ಟಣದ ಬಸ್ತಿಬಣದಲ್ಲಿನ ಜೀರ್ಣೋದ್ಧಾರಗೊಂಡ ಸಾಲೇಶ್ವರ ದೇವಸ್ಥಾನವು ಲೋಕಾರ್ಪಣೆ, ಧರ್ಮಸಭೆಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ದೇವಸ್ಥಾಗಳು ಪರಸ್ಪರರಲ್ಲಿ ಒಗ್ಗಟ್ಟು, ಸ್ನೇಹ, ಸೌಹಾರ್ದತೆ, ಭಾಂಧವ್ಯ ಬೆಸೆಯುತ್ತವೆ. ದೇವಸ್ಥಾನಗಳಲ್ಲಿ ಸ್ವಚ್ಛತೆ, ಪಾವಿತ್ರ್ಯತೆ ಕಾಪಾಡುವ ಜವಾಬ್ದಾರಿ ಎಲ್ಲರದ್ದಾಗಿದೆ. ಶಿವಸಮಸಾಲಿ ಸಮಾಜ ಬಾಂಧವರು ಮಕ್ಕಳಿಗೆ ಶಿಕ್ಷಣದ ಜತೆಗೆ ದೇವರು, ಧರ್ಮ, ಸಂಪ್ರದಾಯ, ಸಂಸ್ಕಾರದ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಸಾನ್ನಿಧ್ಯವಹಿಸಿದ್ದ ಕರೇವಾಡಿಮಠದ ಮಳೇಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿ, ದೇವಸ್ಥಾನಗಳು ಮನುಷ್ಯರಲ್ಲಿನ ಶ್ರೇಷ್ಠ ಗುಣಗಳನ್ನು ಜಾಗೃತಗೊಳಿಸುತ್ತವೆ. ಹುಟ್ಟು ಆಕಸ್ಮಿಕ ಸಾವು ನಿಶ್ಚಿತ ಈ ನಡುವಿನ ಅವಧಿಯಲ್ಲಿ ನಾವು ಮಾಡುವ ಧರ್ಮ ಮತ್ತು ಸಾಮಾಜಿಕ ಕಾರ್ಯಗಳು ಶಾಶ್ವತವಾಗಿರುತ್ತವೆ ಎಂದರು. ಶಿವಸಮಸಾಲಿ ಸಮಾಜದ ಅಧ್ಯಕ್ಷ ಶಾಂತಪ್ಪ ಗುಡಗೇರಿ ಅಧ್ಯಕ್ಷತೆ ವಹಿಸಿದ್ದರು. ವಿರೂಪಾಕ್ಷಪ್ಪ ಪಡಗೇರಿ, ಯಲ್ಲಪ್ಪ ದುರಗಣ್ಣವರ, ಬಸವರಾಜ ಓದುನವರ, ರಾಜಣ್ಣ ಕುಂಬಿ, ಶಂಕರ ಕೋಳಿವಾಡ, ಐ.ಎಸ್ ಹುಲ್ಲೂರ, ನಿಂಗಪ್ಪ ಮಂಟಗಣಿ, ಸಾವಿತ್ರಮ್ಮ ನೇಕಾರ, ಅಶೋಕ ಮಂಡಿಗನಾಳ, ಮಲ್ಲಪ್ಪ ಮಂಟಗಣಿ, ವೀರಭದ್ರಪ್ಪ ಕಲಕೋಟಿ, ಎಸ್. ಆರ್ ಕೋಳಿವಾಡ, ಎಂ.ಇ ದುರ್ಗದ, ಈಶ್ವರ ನೇಕಾರ, ಸೇರಿ ಅನೇಕ ಮುಖಂಡರು, ದೇವಸ್ಥಾನ ಕಮಿಟಿ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕ ನುಡಿದರು. ಕುಬೇರ ಕೋಷ್ಠಿ, ರಾಜೇಶ ಗುಡಗೇರಿ, ರವಿ ನೀರಲಗಿ ನಿರೂಪಿಸಿದರು. ಬೆಳಗ್ಗೆ ಪೂರ್ಣಕುಂಭ ಹಾಗೂ ಪಲ್ಲಕ್ಕಿ ಮೆರವಣಿಗೆ, ಮೂರ್ತಿ ಪ್ರಾಣಪ್ರತಿಷ್ಠಾಪನೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.



ದೇಶಕ್ಕೆ ಶಂಕರಾಚಾರ್ಯರ ಕೊಡುಗೆ ಅನನ್ಯ



ಗಜೇಂದ್ರಗಡ: ಶಂಕರಾಚಾರ್ಯರ ಕೊಡುಗೆ, ಅವರ ತತ್ವ ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಡಾ. ಆರ್. ಎಸ್.ಜೀರೆ ಹೇಳಿದರು.

ನಗರದ ಪಾಂಡುರಂಗ ರುಕ್ಮಿಣಿ ದೇವಾಲಯದಲ್ಲಿ ಬ್ರಾಹ್ಮಣ ಸಮಾಜ ಸೇವಾ ಸಮಿತಿ ವತಿಯಿಂದ ಆದಿ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾಜದ ಅಧ್ಯಕ್ಷ ರಾಮಚಂದ್ರ ಗಾಡಗೋಳಿ ಮಾತನಾಡಿ, ದಾರ್ಶನಿಕ ಪರಂಪರೆಯ ಮಹಾನ್ ತತ್ವಜ್ಞ ಆದಿ ಶಂಕರಾಚಾರ್ಯ ಅದ್ವೈತ ವೇದಾಂತವು ಜಗತ್ತಿನ ಏಕತ್ವ ಸಾರುತ್ತದೆ. ಇದು ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹೋದರತ್ವ ಬೆಳೆಸಲು ನೆರವಾಗುತ್ತದೆ. ಬ್ರಹ್ಮವೇ ಸತ್ಯ, ಜಗತ್ತು ಮಿಥ್ಯಾ ಎಂಬ ಶಂಕರಾಚಾರ್ಯರ ತತ್ವ ಮಾನವನ ಆತ್ಮಜ್ಞಾನಕ್ಕೆ ದಾರಿ ತೋರಿಸುತ್ತದೆ ಎಂದರು.

ಜಯಂತಿ ಆಚರಣೆಗೂ ಮುನ್ನ ಶಂಕರಾಚಾರ್ಯರ ಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ, ಹೆಂಗಳೆಯರಿಂದ ಆಚಾರ್ಯರಿಗೆ ತೊಟ್ಟಿಲೋತ್ಸವ ನಡೆಯಿತು. ಸುರೇಶಭಟ್ಟ ಪೂಜಾರ, ಸುಧಾಕರ ಕುಲಕರ್ಣಿ, ರಘುನಾಥಭಟ್ಟ ತಾಸಿನ, ಕೃಷ್ಣಾಚಾರ್ಯ ಇಟಗಿ, ವಿನಾಯಕ ಜೀರೆ, ರಾಮಚಂದ್ರ ರಾಜಪುರೋಹಿತ, ಲಕ್ಷ್ಮೀಕಾಂತ ಗಾಡಗೋಳಿ, ಪ್ರಾಣೇಶ ಕೊಡಗಾನೂರ, ವಾಸು ಕುಲಕರ್ಣಿ, ಗೋಪಾಲ ಕುಲಕರ್ಣಿ, ಎಸ್.ಬಿ.ಕೊಟ್ನಿಸ್, ಬದರಿನಾಥ ಜೋಶಿ ಸೇರಿದಂತೆ ಅನೇಕರು ಇದ್ದರು.

ಅಬ್ಬಿಗೇರಿ ಅನ್ನದಾನೇಶ್ವರ ರಥೋತ್ಸವ

ನರೇಗಲ್ಲ: ಸಮೀಪದ ಅಬ್ಬಿಗೇರಿ ಗ್ರಾಮದಲ್ಲಿ ಅನ್ನದಾನೇಶ್ವರ ಸ್ವಾಮಿಯ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು. ಬೆಳಗ್ಗೆಯಿಂದಲೇ ಮಠದಲ್ಲಿ ವಿಶೇಷ ಪೂಜೆ, ಅಭಿಷೇಕ ಮತ್ತು ಅಲಂಕಾರಿಕ ಕಾರ್ಯಕ್ರಮಗಳು ಜರುಗಿದವು. ಅನ್ನದಾನೇಶ್ವರ ಸ್ವಾಮಿಗಳ ಉತ್ಸವ ಮೂರ್ತಿಯನ್ನು ಭವ್ಯವಾಗಿ ಅಲಂಕೃತಗೊಳಿಸಿ, ಭಕ್ತಾದಿಗಳ ಜಯಘೋಷದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ರಥೋತ್ಸವ ಮೆರವಣಿಗೆ ಮಾಡಲಾಗಿದೆ. ಜಾತ್ರೆ ಪ್ರಯುಕ್ತ ಭಜನೆ, ಪುರಾಣ ಪ್ರವಚನ, ಸ್ಥಳೀಯ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.



ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ

ಲಕ್ಷ್ಮೇಶ್ವರ: ಸೋಮೇಶ್ವರ ಜಾತ್ರಾಮಹೋತ್ಸವ ಅಂಗವಾಗಿ ಮುನ್ನಾದಿನ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಮುತ್ತೈದೆಯವರಿಗೆ ಉಡಿ ತುಂಬುವ ಕಾರ್ಯಕ್ರಮ ನೆರವೇರಿತು. ಶಿವಲಿಂಗಯ್ಯ ಹಾಲೇವಾಡಿಮಠ ಉಡಿ ತುಂಬುವ ಕಾರ್ಯಕ್ರಮದ ಸಂಪ್ರದಾಯ ನೆರವೇರಿಸಿದರು, ಪುರಸಭೆ ಮಾಜಿ ಅಧ್ಯಕ್ಷೆ ಅಶ್ವಿನಿ ಅಂಕಲಕೋಟಿ, ಇಂದುಮತಿ ಜಕ್ಕನಗೌಡ್ರ, ಶ್ರೀದೇವಿ ಮಹಾಂತಶೆಟ್ಟರ, ನಂದಾ ಮೆಕ್ಕಿ, ಅನಿತಾ ಗಡ್ಡಿ, ಸುಶೀಲಾ ಮಲ್ಲಾಡದ, ವಿದ್ಯಾ ಬಳ್ಳೊಳ್ಳಿ, ಗಿರಿಜಾ ಮುಳಗುಂದ, ನೀಲಾ ಪಾಟೀಲ, ಜ್ಯೋತಿ ಚೌಕನವರ, ಶಿಲ್ಪಾ ಕೋಟೆಪ್ಪನವರ, ಇಂದ್ರಾ ಪಾಟೀಲ, ಗಿರಿಜಾ ಧರ್ಮಾಂತರ, ರಾಜೇಶ್ವರಿ ಮತ್ತೂರ, ಮುತ್ತಕ್ಕ ಜಾವೂರ, ನಂದಾ ಕಟ್ಟಿಗೌಡ್ರ, ಶೋಭಾ ಮೆಣಸಿನಕಾಯಿ, ದೀಪಾ ಸುತಾರ, ಸುಧಾ ಆಕ್ಕಿ, ಸೇರಿದಂತೆ ಅನೇಕ ಮಹಿಳೆಯರು ಉಡಿ ತುಂಬುವ ವ್ಯವಸ್ಥೆ ಮಾಡಿದ್ದರು. ಸೋಮೇಶ್ವರ ಜಾತ್ರಾ ಕಮಿಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ, ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಚಂಬಣ್ಣ ಬಾಳಿಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ಚನ್ನಪ್ಪ ಜಗಲಿ, ವಿಜಯಕುಮಾರ ಗಡ್ಡಿ, ನೀಲಪ್ಪ ಕರ್ಜೆಕಣ್ಣವರ, ನಂದೀಶ ಬಂಡಿವಾಡ, ಪೂರ್ಣಾಜಿ ಖರಾಟೆ, ವಿರೂಪಾಕ್ಷ ಆದಿ, ಮೆಕ್ಕಿ, ಸೋಮಪ್ಪ ಮುಳಗುಂದ, ಸುರೇಶ ರಾಚನಾಯ್ಕರ್, ಬಸವರಾಜ ಮೆಣಸಿನಕಾಯಿ ಇದ್ದರು.



ಮಹರ್ಷಿ ಭಗೀರಥ ಜಯಂತಿ



ಗಜೇಂದ್ರಗಡ: ನಗರ ಸಮೀಪದ ಓಂ ಶ್ರೀ ಸಾಯಿ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮಹರ್ಷಿ ಭಗೀರಥ ಜಯಂತಿ ಆಚರಣೆಯನ್ನು ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಆಚರಣೆ ಮಾಡಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಕೃಷ್ಣಾ ಮಂತ್ರಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಾಗೂ ವೈಯಕ್ತಿಕ ಜೀವನದಲ್ಲಿ ಯಾವುದೇ ಕಠಿಣ ಗುರಿಗಳನ್ನು ತಲುಪಲು ಭಗೀರಥನ ಅಚಲವಾದ ಪರಿಶ್ರಮ ಮತ್ತು ಏಕಾಗ್ರತೆಯನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು. ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಅಪ್ರತಿಮ ಛಲಗಾರ ಮಹರ್ಷಿ ಭಗೀರಥ. ಅವರ ಕಠಿಣ ತಪಸ್ಸಿನ ಫಲವಾಗಿ ಪವಿತ್ರ ಗಂಗೆಯು ಭೂಮಿಗೆ ಹರಿದು ಬಂದಳು. ಮಹರ್ಷಿ ಭಗೀರಥ ಕೇವಲ ಒಬ್ಬ ಪೌರಾಣಿಕ ವ್ಯಕ್ತಿಯಲ್ಲ, ಅವರು ಅಚಲವಾದ ಛಲ ಮತ್ತು ನಿರಂತರ ಪರಿಶ್ರಮದ ಪ್ರತೀಕ. ತಮ್ಮ 60 ಸಾವಿರ ಪೂರ್ವಜರ ಆತ್ಮಕ್ಕೆ ಮುಕ್ತಿ ನೀಡಲು ಅವರು ಮಾಡಿದ ತಪಸ್ಸು ಮತ್ತು ತಂದ ಗಂಗೆಯ ಅವತರಣ ಇಂದಿಗೂ ನಮಗೆ ಪ್ರೇರಣೆಯಾಗಿದೆ ಎಂದರು.

ಮುಖ್ಯ ಶಿಕ್ಷಕ ಸತೀಶ ದಳವಿ, ಲಕ್ಷ್ಮೀಕಾಂತ ಗಾಡಗೋಳಿ, ಮಲ್ಲಪ್ಪ ಮಾಟರಂಗಿ, ಶಿವನಗೌಡ ಸಿನ್ನೂರ, ಕಳಕವ್ವ ಹಾದಿಮನಿ, ಶಿಲ್ಪಾ, ಗಂಗಮ್ಮ ಕಲ್ಲುಡಿ, ಅಂದಮ್ಮ ಕಡವಲಕಟ್ಟಿ ಸೇರಿದಂತೆ ಅನೇಕರು ಇದ್ದರು.

ಇಳುವರಿ ಕುಂಠಿತ | ಆಮದು ಇಳಿಕೆ | ದಿಢೀರ್ ಬೆಲೆ ಏರಿಕೆ

ನಿಂಬೆಹಣ್ಣಿಗೆ ಡಿಮ್ಯಾಂಡ್

▸ ರುದ್ರಗೌಡ ಪಾಟೀಲ

ಗದಗ: ಬಿಸಿಲ ಝಳದಿಂದ ದಾಹ ತೀರಿಸಲು ಜನ ನಿಂಬೆ ಪಾನೀಯವನ್ನು ಬೇಸಿಗೆಯಲ್ಲಿ ಕುಡಿಯುವುದು ಸಾಮಾನ್ಯ. ಆದರೆ, ಈ ಬಾರಿ ಪೂರೈಕೆ ಕೊರತೆಯಿಂದ ನಿಂಬೆಹಣ್ಣಿನ ಬೆಲೆ ಏರಿಕೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ನಿತ್ಯ ಬಳಕೆ ಮಾಡುವ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಬೆನ್ನಲ್ಲೆ ನಿಂಬೆಹಣ್ಣಿನ ದರದಲ್ಲೂ ದಿಢೀರ್ ಏರಿಕೆ ಕಂಡಿದೆ. ನಿಂಬೆಹಣ್ಣಿನ ಇಳುವರಿ ಕುಂಠಿತ ಹಾಗೂ ಆಮದು ಪ್ರಮಾಣದಲ್ಲಿ ತೀವ್ರ ಇಳಿಕೆಯಾಗಿದ್ದರ ಪರಿಣಾಮವಾಗಿ ನಿಂಬೆಹಣ್ಣಿನ ದರದಲ್ಲಿ ವ್ಯತ್ಯಾಸ ಕಂಡು ಬಂದಿದೆ.

ಮೊದಲೆಲ್ಲ 100 ನಿಂಬೆಹಣ್ಣಿಗೆ 250ರಿಂದ 300 ರೂ., ಪ್ರತಿ ನಿಂಬೆಹಣ್ಣಿಗೆ 3ರಿಂದ 5 ರೂ.ಗೆ ಸಿಗುತ್ತಿದ್ದ ನಿಂಬೆಹಣ್ಣು ಸದ್ಯ ಮಾರುಕಟ್ಟೆಯಲ್ಲಿ ಸಗಟು ದರವು 100 ನಿಂಬೆಹಣ್ಣಿಗೆ 600 ರಿಂದ 750 ರೂ., ಚಿಲ್ಲರೆ ದರದಲ್ಲಿ ಪ್ರತಿ ನಿಂಬೆಹಣ್ಣಿಗೆ 7ರಿಂದ 10ರೂ. ನಿಗದಿಯಾಗಿದೆ. ಅಂದರೆ ದರದಲ್ಲಿ ಎರಡು ಪಟ್ಟು ಏರಿಕೆಯಾದಂತಾಗಿದೆ.

ದಿನದಿಂದ ದಿನಕ್ಕೆ ತಾಪಮಾನ ಏರಿಕೆಯ ಪರಿಣಾಮವಾಗಿ ಎಲ್ಲೆಡೆ ವಿಪರೀತ ಬಿಸಿಲು, ಬಿಸಿ ಹವೆಯಿಂದ ಸಾರ್ವಜನಿಕರು ತಲ್ಲಣಗೊಂಡಿರುವ ಬೆನ್ನಲ್ಲೆ ನಿಂಬೆಹಣ್ಣಿನ ದರವೂ ಕೊಂಚ ಬಿಸಿ ತೆಲೆ ಬಿಸಿ ಮಾಡಿದೆ.

ನಿಂಬೆ ಜ್ಯೂಸ್‌ಗೆ ಬೇಡಿಕೆ: ಪ್ರತಿ ಬೇಸಿಗೆಯಲ್ಲಿ ನಿಂಬೆ ಹಣ್ಣಿನ ಬೇಡಿಕೆ ಮತ್ತು ಬೆಲೆ ಹೆಚ್ಚಾಗುವುದು ಸಹಜ. ಕಳೆದ ಸುಮಾರು ದಿನಗಳಿಂದ ಬಿಸಲಿನ ಪ್ರಮಾಣ ಏರಿಕೆಯಿಂದ ನಿಂಬೆ ಜ್ಯೂಸ್‌ಗೆ 15ರೂ., ನಿಂಬು ಸೋಡ 20–30 ರೂ. ಆಗಿದೆ. 10 ರೂ. ಇದ್ದ ಬೀದಿ ಬದಿ ಮಾರುವ ಗೋಲಿ ಸೋಡ ಈಗ 30 ರೂ. ಏರಿದೆ. ಬೇಸಿಗೆಯಲ್ಲಿ ನಿಂಬು ಸೋಡ ಕುಡಿಯುವ ಸಂಖ್ಯೆ ಹೆಚ್ಚು ಇದ್ದಾರೆ. ಹೀಗಾಗಿ ಲಿಂಬು ಬೆಲೆಯಲ್ಲಿ ಏರಿಕೆಯಿಂದ ವ್ಯಾಪರಸ್ಥರಿಗೆ ಹಾಗೂ ಗ್ರಾಹಕರಿಗೆ ತೊಂದರೆಯಾಗಿದೆ.

ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ಅಮವಾಸ್ಯೆ, ಹುಣ್ಣಿಮೆ ಸೇರಿದಂತೆ ಶುಕ್ರವಾರ, ಮಂಗಳವಾರ ಹಾಗೂ ಭಾನುವಾರಗಳಂದು ರಾಹುಕಾಲ ಸಮಯದಲ್ಲಿ ಶಕ್ತಿ ದೇವತೆಯರಿಗೆ ನಿಂಬೆಹಣ್ಣಿನ ದೀಪ ಹಚ್ಚುವುದು ವಾಡಿಕೆ. ಹೀಗಾಗಿ ದೇವಸ್ಥಾನಗಳ ಸುತ್ತಮುತ್ತಲಿನ ಕೆಲ ವ್ಯಾಪಾರಿಗಳು ಈ ದಿನಗಳಂದು ನಿಂಬೆಹಣ್ಣಿನ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವುದೂ ಚಾಲ್ತಿಯಲ್ಲಿದೆ. ಕೆಲವರು ಸಮಾರಂಭಗಳಲ್ಲಿ ಅತಿಥಿಗಳಿಗೆ ಹೂವಿನೊಂದಿಗೆ ನಿಂಬೆಹಣ್ಣನ್ನೂ ಕೊಡುವುದು ವಾಡಿಕೆ.



ಬಾಯಾರಿಕೆಯಾದಾಗ ನಿಂಬೆ ಪಾನೀಯ ಕುಡಿದರೆ ಬಾಯಾರಿಕೆ ಕಡಿಮೆಯಾಗುವುದು, ದೇಹಕ್ಕೂ ಚೈತನ್ಯ ತುಂಬುತ್ತದೆ. ದೇಹವನ್ನೂ ತಂಪಾಗಿಡುತ್ತದೆ. ಸಾಮಾನ್ಯವಾಗಿ ಬೇಸಿಗೆಯ ದಿನಗಳಲ್ಲಿ ದೇಹವು ನಿರ್ಜಲೀಕರಣದಿಂದ ತಪ್ಪಿಸಲು ನಿಂಬೆ ಹಣ್ಣನ್ನು ಬಹಳವಾಗಿ ಬಳಸುತ್ತೇವೆ. ಇದು ದೇಹವನ್ನು ತಂಪಾಗಿ ಇಡುವಲ್ಲಿಯೂ ಸಹಕಾರಿ.

■ ಡಾ.ವೀರೇಶ ಸತ್ತಿಗೇರಿ, ವೈದ್ಯ

ನಿಂಬೆ ದರ
- ಸಗಟು ದರ: 100 ಹಣ್ಣಿಗೆ 600 ರಿಂದ 750 ರೂ.
- ಚಿಲ್ಲರೆ ದರ: ಪ್ರತಿ ಹಣ್ಣಿಗೆ 8 ರಿಂದ 10 ರೂ.

ಪ್ರಸಕ್ತ ಬೇಸಿಗೆಯಲ್ಲಿ ನಿಂಬೆಹಣ್ಣಿನ ಇಳುವರಿ ಹಾಗೂ ಪೂರೈಕೆ ಕುಂಠಿತಗೊಂಡಿದ್ದರಿಂದ ನಿಂಬೆಹಣ್ಣಿನ ದರದಲ್ಲಿ ಏರಿಕೆ ಕಂಡುಬಂದಿದ್ದು, ಮಳೆಗಾಲದ ಆರಂಭವಾಗುವವರೆಗೂ ನಿಂಬೆಹಣ್ಣಿನ ದರದಲ್ಲಿ ಇಳಿಕೆಯಾಗುವುದು ಕಷ್ಟ.

■ ದ್ಯಾಮಣ್ಣ, ನಿಂಬೆಹಣ್ಣಿನ ವ್ಯಾಪಾರಿ

ಅನುದಾನವಿಲ್ಲದೇ ಕಾಮಗಾರಿ ಸ್ಥಗಿತ: ಬಿ.ಆರ್.ಪಾಟೀಲ

ಕಲಬುರಗಿ: ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನೇ ದಿನೇ ಭೀಕರ ಸ್ವರೂಪ ಪಡೆಯುತ್ತಿದ್ದು, ಜಿಲ್ಲಾಡಳಿತ ಹಾಗೂ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಳ್ಳದಿದ್ದರೆ ಪರಿಸ್ಥಿತಿ ಕೈಮೀರಲಿದೆ ಎಂದು ಆಳಂದ ಶಾಸಕ ಬಿ.ಆರ್.ಪಾಟೀಲ ಎಚ್ಚರಿಸಿದರು.

ಭಾನುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನೀರಿನ ತೀವ್ರ ಸಂಕಷ್ಟ ಎದುರಾಗಿದೆ. ಆದರೆ, ಈ ಸಮಸ್ಯೆಯನ್ನು ಬಗೆಹರಿಸಬೇಕಾದ ಗ್ರಾಮ ಪಂಚಾಯತ್‌ಗಳಲ್ಲಿ ನಯಾಪೈಸೆ ಹಣವಿಲ್ಲ, ಆಳಂದ ತಾಲೂಕೊಂದಕ್ಕೇ ನೀರಿನ ತುರ್ತು ನಿರ್ವಹಣೆಗಾಗಿ 4.38 ಕೋಟಿ ರೂಪಾಯಿಗಳ ಬೇಡಿಕೆಯಿದೆ. ಆದರೆ, ಕೇವಲ ಎರಡು–ಮೂರು ಪಂಚಾಯತ್‌ಗಳನ್ನು ಹೊರತುಪಡಿಸಿದರೆ ಜಿಲ್ಲೆಯ ಉಳಿದ ಯಾವುದೇ ಪಂಚಾಯತ್‌ಗಳಲ್ಲಿ ಅನುದಾನವಿಲ್ಲದೆ ಕಾಮಗಾರಿಗಳು ಸ್ಥಗಿತಗೊಂಡಿವೆ. ಇದರಿಂದಾಗಿ ಜನರು ನೀರಿಗಾಗಿ ಮೈಲುಗಟ್ಟಲೆ ಅಲೆಯುವಂತಾಗಿದೆ ಎಂದು ದೂರಿದರು.

ಪಿಡಿಒಗಳ ಬೇಜವಾಬ್ದಾರಿಗೆ ತರಾಟೆ
ಗ್ರಾಮಗಳಲ್ಲಿನ ನೀರಿನ ಸ್ಥಿತಿಗತಿ ಆಲಿಸಬೇಕಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಕಚೇರಿಯಲ್ಲೂ ಇರುತ್ತಿಲ್ಲ, ಹಳ್ಳಿಗಳಿಗೂ ಭೇಟಿ ನೀಡುತ್ತಿಲ್ಲ. ಜನರು ಸಂಕಷ್ಟದಲ್ಲಿದ್ದಾಗ ಫೋನ್ ಮಾಡಿದರೆ ಅಧಿಕಾರಿಗಳು ಕರೆ ಸ್ವೀಕರಿಸುತ್ತಿಲ್ಲ. ಜನಪ್ರತಿನಿಧಿಗಳಿಗೆ ಸಿಗದ ಪಿಡಿಒಗಳು ಇನ್ನು ಸಾಮಾನ್ಯ ಜನರಿಗೆ ಹೇಗೆ ಸಿಗುತ್ತಾರೆ? ಎಂದು ಪ್ರಶ್ನಿಸಿದ ಅವರು, ಜಿಲ್ಲಾಡಳಿತ ತಕ್ಷಣ ಇಂತಹ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಭೀಮಾ ನದಿ ಈಗಾಗಲೇ ಸಂಪೂರ್ಣ ಬತ್ತಿ ಹೋಗಿದೆ. ಉಜಿನಿ ಜಲಾಶಯದಿಂದ ನೀರು ಹರಿಸುವವರೆಗೆ ಕಲಬುರಗಿಯ ದಾಹ ನೀಗಿಸಲು ಸಾಧ್ಯವಿಲ್ಲ. ಸರ್ಕಾರ ತಕ್ಷಣವೇ ನಾರಾಯಣಪುರ ಜಲಾಶಯದ ಇಂಡಿ ಕೆನಾಲ್ ಮೂಲಕ 2 ಟಿಎಂಸಿ ನೀರು ಬಿಡುಗಡೆ ಮಾಡಬೇಕು. ಇದರಿಂದ ಆಲಮೇಲ್, ಅಫಜಲಪುರ, ಜೇವರ್ಗಿ ಹಾಗೂ ಆಳಂದದ ಹಳ್ಳಿಗಳ ತಾತ್ಕಾಲಿಕ ನೀರಿನ ಸಮಸ್ಯೆ ಪರಿಹರಿಸಲು ಸಾಧ್ಯವಾಗುತ್ತದೆ. ಒಂದೋ ಪಂಚಾಯತ್‌ಗಳಿಗೆ ಹಣ ಕೊಡಿ, ಇಲ್ಲವೇ ಜಲಾಶಯದಿಂದ ನೀರು ಬಿಡಿ ಎಂದು ಸರ್ಕಾರಕ್ಕೆ ತಾಕೀತು ಮಾಡಿದರು.



ಸರ್ಕಾರ ಜಿಲ್ಲೆಗೆ ಬಿಡುಗಡೆ ಮಾಡಿರುವ 45 ಕೋಟಿ ರೂ. ಅನುದಾನ ಯಾವುದಕ್ಕೂ ಸಾಲದು. ಪ್ರತಿ ಗ್ರಾಮ ಪಂಚಾಯತ್‌ಗೆ ಅವರವರ ಬೇಡಿಕೆಗೆ ತಕ್ಕಂತೆ ಅನುದಾನ ನೀಡಬೇಕು. ಅಧಿಕಾರಿಗಳು ಎಸಿ ರೂಮಿನಲ್ಲಿ ಕುಳಿತು ಆದೇಶ ಮಾಡುವುದನ್ನು ಬಿಟ್ಟು ಹಳ್ಳಿಗಳಿಗೆ ತೆರಳಿ ವಾಸ್ತವ ಸ್ಥಿತಿ ಅರಿಯಬೇಕು.

■ ಬಿ.ಆರ್.ಪಾಟೀಲ, ಶಾಸಕರು, ಆಳಂದ

ಅವೈಜ್ಞಾನಿಕ ಜಲಜೀವನ್ ಮಿಷನ್‌ನಿಂದ ಸಂಕಷ್ಟ
ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆ ಜಿಲ್ಲೆಯಲ್ಲಿ ಸಂಪೂರ್ಣ ಹಳಿ ತಪ್ಪಿದೆ ಎಂದು ಶಾಸಕ ಬಿ.ಆರ್.ಪಾಟೀಲ ಕಿಡಿಕಾರಿದರು. ಈ ಯೋಜನೆಯಡಿ ಹಳ್ಳಿಗಳ ಸುಸಜ್ಜಿತ ರಸ್ತೆಗಳನ್ನು ಮನಬಂದಂತೆ ತೋಡಿ ಅವೈಜ್ಞಾನಿಕವಾಗಿ ನಲ್ಲಿಗಳನ್ನು ಅಳವಡಿಸಲಾಗಿದೆ. ನಲ್ಲಿ ಇದೆ ಆದರೆ ನೀರಿಲ್ಲ, ರಸ್ತೆಗಳು ಮಾತ್ರ ಹಾಳಾಗಿವೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ ಅನುದಾನ ಈವರೆಗೂ ಬಿಡುಗಡೆಯಾಗಿಲ್ಲ. ಇದರಿಂದಾಗಿ ಅತ್ತ ಯೋಜನೆಯೂ ಪೂರ್ಣಗೊಂಡಿಲ್ಲ, ಇತ್ತ ರಸ್ತೆಗಳೂ ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂದು ಅವರು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

ರಾಷ್ಟ್ರೀಯ ಕಲಾ ಪ್ರದರ್ಶನಕ್ಕೆ ಸರೋದೆ ಆಯ್ಕೆ



ಹುನಗುಂದ: ನಗರದ ಆದರ್ಶ ವಿದ್ಯಾಲಯ ಚಿತ್ರಕಲಾ ಶಿಕ್ಷಕ ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯ ಚಂದ್ರಕಾಂತ ಸರೋದೆ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿದ್ದಾರೆ.ಈ ಪ್ರದರ್ಶನದಲ್ಲಿ ಸರೋದೆ ಅವರು ಅಕ್ರಾಲಿಕ್ ವರ್ಣದಲ್ಲಿ ಚಿತ್ರಿಸಿದ ಹನುಮಾನ್ ಚಿತ್ರ ಪ್ರದರ್ಶನಗೊಳ್ಳಲಿದೆ. ದೇಶದ 272 ಚಿತ್ರಗಳು ಆಯ್ಕೆ ಆಗಿವೆ. ಇದರಲ್ಲಿ 20 ಕಲಾವಿದರಿಗೆ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಸದ್ಯ ಆಯ್ಕೆ ಆದ ಕಲಾಕೃತಿಗೆ ರೂ.25 ಸಾವಿರ ಗೌರವಧನ ಕೊಡಲಾಗುವುದು ಎಂದು ಲಲಿತಕಲಾ ಅಕಾಡಮಿ ಕಾರ್ಯದರ್ಶಿ ರಾಜೀವ ಕುಮಾರ ಆಯ್ಕೆಯ ಆದೇಶದಲ್ಲಿ ತಿಳಿಸಿದ್ದಾರೆ.



ವಾಲ್ಮೀಕಿ ಸಮುದಾಯಕ್ಕೆ ಅನ್ಯಾಯ: ರಾಜುಗೌಡ

ಹಾವೇರಿ: ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಗೆ ಶೇ.15ರಷ್ಟಿದ್ದ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿತ್ತು. ಪರಿಶಿಷ್ಟ ಪಂಗಡಕ್ಕೆ ಇದ್ದ ಶೇ.3ರಷ್ಟು ಮೀಸಲಾತಿಯನ್ನು ಶೇ.7ಕ್ಕೆ ಹೆಚ್ಚಿಸಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಮೊದಲಿದಂತೆ ಎಸ್ಸಿಗೆ ಶೇ.15, ಎಸ್‌ಟಿಗೆ ಶೇ.3 ಮೀಸಲಾತಿ ನಿಗದಿಪಡಿಸಿದ್ದು, ಇದರಿಂದ ವಾಲ್ಮೀಕಿ ಸಮುದಾಯಕ್ಕೆ ದೊಡ್ಡ ಅನ್ಯಾಯವಾಗಿದೆ ಎಂದು ಮಾಜಿ ಸಚಿವ ರಾಜುಗೌಡ ವಾಗ್ದಾಳಿ ನಡೆಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ವಾಲ್ಮೀಕಿ ಸಮಾಜದ ಬಹುಕಾಲದ ಕನಸು ನನಸು ಮಾಡಿದ್ದರೆ, ಕಾಂಗ್ರೆಸ್ಸಿನವರು ಮೀಸಲಾತಿ ವಿಚಾರದಲ್ಲಿ ವಾಲ್ಮೀಕಿ ಸಮಾಜಕ್ಕೆ ದೊಡ್ಡ ಅನ್ಯಾಯ ಮಾಡಿದೆ. ದಲಿತರು, ಹಿಂದುಳಿದವರ ಪಕ್ಷ ಎಂದು ಹೇಳುವ ಕಾಂಗ್ರೆಸ್ ಅವರಿಗೇ ಮೋಸ ಮಾಡಿದೆ. ಕೇವಲ ವೋಟ್ ಬ್ಯಾಂಕ್ ರಾಜಕೀಯಕ್ಕೆ ಸಮುದಾಯವನ್ನು ಬಳಸುತ್ತಿದ್ದು, ಭಾಷಣದಲ್ಲಿ ಬದನೆಕಾಯಿ ತಿನ್ನಿಸುತ್ತಾರೆ, ನಿಜದಲ್ಲಿ ಏನೂ ಕೊಡೋದಿಲ್ಲ ಎಂದು ದೂರಿದರು.



ಎಸ್ಸಿ ಎಸ್‌ಟಿ ಸಮುದಾಯ ಹೋರಾಟದಿಂದಲೇ ಮೀಸಲಾತಿ ಪಡೆದಿದೆ. ಸರ್ಕಾರ ಕೋರ್ಟ್‌ನಲ್ಲಿ ಸರಿಯಾಗಿ ಹೋರಾಟ ಮಾಡಿಲ್ಲ. ಸ್ವಯಂ ಪ್ರೇರಿತ ಹೋರಾಟದಿಂದಲೇ ಮೀಸಲಾತಿ ಹಕ್ಕು ಸಿಗುತ್ತದೆ. ನಮ್ಮ ರಾಜಕಾರಣದ ಸಲುವಾಗಿ ಸಮಾಜವನ್ನು ಬಲಿ ಕೊಡುತ್ತಿದ್ದಾರೆ. ಮೀಸಲಾತಿ ಪರಿಣಾಮ ಇಂದು ನಡೆದ ಮಹರ್ಷಿ ವಾಲ್ಮೀಕಿ ಮೂರ್ತಿ ಅನಾವರಣ ಕಾರ್ಯಕ್ರಮಕ್ಕೆ ಜನ ಬಂದಿಲ್ಲ, ಜನರಲ್ಲಿ ಈಗಾಗಲೇ ಆಕ್ರೋಶ ಜ್ವಾಲೆ ಶುರುವಾಗಿದೆ.

ಸರ್ಕಾರದ ಮೇಲೆ ನಮ್ಮ ಸಮುದಾಯದಲ್ಲಿ ದ್ವೇಷ ಶುರುವಾಗಿದೆ. ಉಪಚುನಾವಣೆ ಫಲಿತಾಂಶದ ಬಳಿಕ ದೊಡ್ಡ ರಾಜಕೀಯ ಬದಲಾವಣೆ ಆಗಲಿದೆ. ಕಾಂಗ್ರೆಸ್ಸಿನಲ್ಲಿ ದೊಡ್ಡ ಬದಲಾವಣೆ ಆಗಲಿದೆ ಎಂದರು.

ಕವಿವಿಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ | ಕುಲಪತಿ ಪ್ರೊ.ರಮೇಶ ಅಭಿಮತ

ಮಹಿಳಾ ಸಬಲೀಕರಣದಿಂದ ದೇಶ ಅಭಿವೃದ್ಧಿ

ಧಾರವಾಡ: ಮಹಿಳೆಯರ ಅಭಿವೃದ್ಧಿ ಹೊಂದಿದರೆ ಮಾತ್ರವೇ ಯಾವುದೇ ದೇಶದ ಅಭಿವೃದ್ಧಿ ಸಾಧ್ಯ. ಇದನ್ನರಿತ ಡಾ.ಅಂಬೇಡ್ಕರ್, ಪುರುಷರಷ್ಟೇ ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಿದ್ದಾಗಿ ಬೆಂಗಳೂರ ವಿವಿ ಕುಲಪತಿ ಪ್ರೊ. ರಮೇಶ ಬಿ ಹೇಳಿದರು.

ಇಲ್ಲಿನ ಕವಿವಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ವಿಭಾಗವು ಕವಿವಿ ಸುವರ್ಣ ಮಹೋತ್ಸವ ಭವನದಲ್ಲಿ ಹಮ್ಮಿಕೊಂಡ ಭಾರತದಲ್ಲಿ ಮಹಿಳಾ ಸಂಬಲೀಕರಣಕ್ಕೆ ಡಾ.ಅಂಬೇಡ್ಕರ್ ಕೊಡುಗೆ, ಅಂತಾರಾಷ್ಟ್ರೀಯ ಸಮ್ಮೇಳನದ ದಿಕ್ಸೂಚಿ ಭಾಷಣ ಮಾಡಿದರು. ಸಮಾಜದಲ್ಲಿ ಮಹಿಳೆಯರು ಕೂಡ ಗೌರವಯುತ ಬದುಕು ನಡೆಸಲು ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಹಕ್ಕುಗಳು ನೀಡಿದ ಡಾ.ಅಂಬೇಡ್ಕರ್ ಅವರು, ಈ ಮೂಲಕ ಮಹಿಳಾ ಸಬಲೀಕರಣಕ್ಕೂ ಪ್ರಮುಖ ಆದ್ಯತೆ ನೀಡಿದ್ದಾಗಿ ತಿಳಿಸಿದರು.

ಜಾತಿ ವಿನಾಶ ಎಂಬ ಡಾ.ಅಂಬೇಡ್ಕರ್ ಕೃತಿಯಲ್ಲಿ ಮಹಿಳೆಯರ ವರ್ಣಾಶ್ರಮ ವ್ಯವಸ್ಥೆ ಮುಂದುವರಿಸಲು ಮಹಿಳೆಯರನ್ನು ಬಳಸಿದೆ. ಶತಮಾನಗಳಿಂದಲೂ ಮಹಿಳೆಯರ ಶೋಷಣೆ ನಡೆಯುತ್ತಿದೆ. ಇಂದಿಗೂ ಮಹಿಳಾ ದೌರ್ಜನ್ಯ ನಿಂತಿಲ್ಲ ಎಂದರು.

ಡಾ.ಅಂಬೇಡ್ಕರ್ ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಸೇರಿದಂತೆ ಅನೇಕ ಹಕ್ಕುಗಳನ್ನು ನೀಡಿದರು. ಡಾ.ಅಂಬೇಡ್ಕರ್ ಅವರ 35 ಕೃತಿಯಲ್ಲಿ ಶೇ.50ರಷ್ಟು ಮಹಿಳೆಯರ ಪರವಾಗಿವೆ ಎಂದು ಪ್ರೊ. ರಮೇಶ ಮಾಹಿತಿ ನೀಡಿದರು.ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ ಮಾತನಾಡಿ, ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಸಿಗುವಲ್ಲಿ ಡಾ.ಅಂಬೇಡ್ಕರ್ ಅವರ ಕಾನೂನು ಕಾರಣ. ನಾವೆಲ್ಲರೂ ಪೇ ಬ್ಯಾಕ್ ಟು ಸೊಸೈಟಿ ತತ್ವ ಅನುಸರಿಸಬೇಕು ಎಂದು ಹೇಳಿದರು.



ತಾಂತ್ರಿಕ ಗೋಷ್ಠಿಗಳು
'ಮಹಿಳಾ ಸಬಲೀಕರಣ ಸಾಧನವಾಗಿ ಹಿಂದು ಕೋಡ್ ಬಿಲ್', 'ಮಹಾಡ್ ಸತ್ಯಾಗ್ರಹ ನೂರರ ಸಂಭ್ರಮ; ಅಸ್ಮಿತೆ, ಸ್ವಾಭಿಮಾನ ಮತ್ತು ಸ್ವ–ಅರಿವಿನಡೆಗೆ ಮಹಾಯಾನ' ವಿಷಯಗಳ ಕುರಿತಂತೆ ತಾಂತ್ರಿಕ ಗೋಷ್ಠಿಗಳಲ್ಲಿ ತಜ್ಞರು ವಿಷಯ ಮಂಡಿಸಿದರು.

ಅಕ್ಷರ ಸೂರ್ಯ ಸಂಶೋಧನಾ ನಿಯತಕಾಲಿಕೆ ಹಾಗೂ ಅರ್ಥಶಾಸ್ತ್ರ ವಿಭಾಗದ ಸಂಶೋಧಕ ತರುಣ ದೊಡಮನಿ ಬರೆದ ಡಾ. ಬಿ.ಆರ್. ಅಂಬೇಡ್ಕರ್ ಆನ್ ಪಬ್ಲಿಕ್ ಫೈನಾನ್ಸ್ ಎಂಬ ಕೃತಿಯನ್ನು ಕವಿವಿ ಕುಲಪತಿ ಡಾ. ಎ.ಎಂ. ಖಾನ್ ಬಿಡುಗಡೆಗೊಳಿಸಿದರು. ಸಮ್ಮೇಳನದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ ಅಂಗವಾಗಿ ಹಮ್ಮಿಕೊಂಡ ಕ್ರಾಂತಿ ಗೀತೆ ಸ್ಪರ್ಧೆ, ಕ್ವಿಜ್ ಹಾಗೂ ಸಿದ್ಧ ಭಾಷಣದ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಸಮ್ಮೇಳನದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಶಿವರುದ್ರ ಕಲ್ಲೊಳಿಕರ, ಉದ್ಯಮಿ ಅರವಿಂದ ಘಟ್ಟಿ, ಕುಲಸಚಿವ ಡಾ.ಎನ್.ವೈ.ಮಟ್ಟಿಹಾಳ, ಸಿಂಡಿಕೇಟ್ ಸದಸ್ಯ ಮಹೇಶ ಹುಲ್ಲನ್ನವರ, ಡಾ.ಸುಭಾಷಚಂದ್ರ ನಾಟೀಕಾರ, ಡಾ.ಸದಾಶಿವ ಮರ್ಜಿ ಇದ್ದರು.

ಸೌಕರ್ಯವಿಲ್ಲದೆ ಆಸ್ಪತ್ರೆ ಉದ್ಘಾಟನೆ ಸರಿಯಲ್ಲ: ಬೊಮ್ಮಾಯಿ

ಹಾವೇರಿ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶಿಗ್ಗಾವಿಯಲ್ಲಿ ಏ.27ರಂದು 250 ಹಾಸಿಗೆಯ ಆಸ್ಪತ್ರೆ ಉದ್ಘಾಟನೆ ಮಾಡಲು ಬರುತ್ತಿದ್ದಾರೆ. ಆಸ್ಪತ್ರೆ ಉದ್ಘಾಟನೆ ಆದ ತಕ್ಷಣ ಆಸ್ಪತ್ರೆ ಆರಂಭ ಆಗುವುದಿಲ್ಲ, ಅವರು ವೈದ್ಯಕೀಯ ಸಲಕರಣೆ, ವೈದ್ಯರ ನೇಮಕ ವ್ಯವಸ್ಥೆ ಮಾಡಿ ಸುಸಜ್ಜಿತ ಆಸ್ಪತ್ರೆ ಉದ್ಘಾಟನೆ ಮಾಡಿದ್ದರೆ ಸಾರ್ಥಕ ಆಗುತ್ತಿತ್ತು. ಅದು ಆಗದಿರುವುದು ನಮಗೆ ನಿರಾಸೆಯಾಗಿದ್ದು ಕನಿಷ್ಟ 2–3 ತಿಂಗಳಲ್ಲಿ ವೈದ್ಯರ ನೇಮಕ ಮಾಡಿ ಎಲ್ಲ ವೈದ್ಯಕೀಯ ಸಲಕರಣೆ, ಬೆಡ್ ವ್ಯವಸ್ಥೆ ಮಾಡಿ ಬಡರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಆರೋಗ್ಯ ಸಚಿವರು ಶಿಗ್ಗಾವಿಯಲ್ಲಿ 250 ಹಾಸಿಗೆಯ ಆಸ್ಪತ್ರೆ ಉದ್ಘಾಟನೆ ಮಾಡಲು ಬರುತ್ತಿದ್ದಾರೆ. ಅದು ಸೂಕ್ತ ಆದರೆ, ಅವರು ಕೇವಲ ಆಸ್ಪತ್ರೆ ಕಟ್ಟಡ ಉದ್ಘಾಟನೆ ಮಾಡಲು ಬರುತ್ತಿದ್ದಾರೆ. ಇದರಿಂದ ಆಸ್ಪತ್ರೆ ಉದ್ಘಾಟನೆಗೊಂಡ ತಕ್ಷಣ ಆಸ್ಪತ್ರೆ ಆರಂಭ ಆಗುವುದಿಲ್ಲ. ನಾನು ಸಿಎಂ ಆಗಿದ್ದಾಗ 250 ಬೆಡ್ ಆಸ್ಪತ್ರೆಗೆ ಮಂಜೂರಾತಿ ಮಾಡಿದ್ದೆ 2022ರ ಜೂನ್ 7ಕ್ಕೆ ಆಡಳಿತಾತ್ಮಕ ಆದೇಶ ಆಗಿತ್ತು. ಗುತ್ತಿಗೆದಾರರಿಗೆ 2022 ನವೆಂಬರ್ 7ರಿಂದ 24 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವ ಕರಾರಿನೊಂದಿಗೆ 96.5 ಕೋಟಿ ರೂ. ಮೊತ್ತದ ಕಾಮಗಾರಿ ಗುತ್ತಿಗೆ ನೀಡಲಾಗಿದೆ. ಇದರ ಜೊತೆಗೆ ಸುಮಾರು 50 ಕೋಟಿ ವೆಚ್ಚದ ವೈದ್ಯಕೀಯ ಸಲಕರಣೆಗಳು, ಲ್ಯಾಬ್, ಹಾಸಿಗೆ, ಆಪರೇಷನ್ ಥೇಟರ್‌ಗೆ ಬೇಕಾದ ಸಲಕರಣೆಗಳನ್ನು ಮಂಜೂರಾತಿ ಮಾಡಿದ್ದೇವು. ಈಗಾಗಲೇ 2024ಕ್ಕೆ ಮುಗಿಯಬೇಕಾಗಿದ್ದು 2026ಕ್ಕೆ ಮುಗಿಯುತ್ತಿದೆ. ಎರಡು ವರ್ಷ ತಡವಾಗಿ ಮುಗಿಯುತ್ತಿದೆ. ಆದಾಗ್ಯೂ ಕೂಡ ಅಲ್ಲಿ ಯಾವುದೇ ವೈದ್ಯಕೀಯ ಸಲಕರಣೆ, ಬೆಡ್ ಕೂಡ ಇರದಿರುವುದು ಶೋಚನೀಯ ಎಂದು ತಿಳಿಸಿದ್ದಾರೆ.

ಸಿಬ್ಬಂದಿ ಕೊರತೆ: ಈಗಿರುವ ನೂರು ಬೆಡ್‌ನ ಆಸ್ಪತ್ರೆಗೆ ವೈದ್ಯರು ಮತ್ತು ಪ್ಯಾರಾ ಮೆಡಿಕಲ್ ಸ್ಟಾಫ್ ಕೊರತೆ ಇದೆ. ದಿನೇಶ ಗುಂಡೂರಾವ್ ಅವರು ಒಬ್ಬ ಸಮರ್ಥ ಆರೋಗ್ಯ ಸಚಿವರು ಎಂದು ನಂಬಿದ್ದೇವೆ. ಅವರು ಬಹಳಷ್ಟು ತಿಳುವಳಿಕೆ ಇದ್ದವರು. ಅವರು ಇದೆಲ್ಲ ವ್ಯವಸ್ಥೆ ಮಾಡಿ ಉದ್ಘಾಟನೆ ಮಾಡುತ್ತಾರೆ ಎಂದು ನಂಬಿದ್ದೇವು. ಆ ಹಿನ್ನೆಲೆಯಲ್ಲಿ ಉದ್ಘಾಟನೆ ಮಾಡುತ್ತಿರುವುದು ಒಳ್ಳೆಯದಿದ್ದರೂ ಕೂಡ ಸುಸಜ್ಜಿತ ಆಸ್ಪತ್ರೆ ಉದ್ಘಾಟನೆ ಮಾಡಿದ್ದರೆ ಸಾರ್ಥಕ ಆಗುತ್ತಿತ್ತು. ದಿನೇಶ ಗುಂಡೂರಾವ್ ಅವರಿಗೆ ಒಳ್ಳೆಯ ಹೆಸರು ಬರುತ್ತಿತ್ತು ಅದು ಆಗದಿರುವುದು ನಮಗೆ ನಿರಾಸೆಯಾಗಿದ್ದು ಕನಿಷ್ಟ 2–3 ತಿಂಗಳಲ್ಲಿ ವೈದ್ಯರ ನೇಮಕ ಮಾಡಿ ಎಲ್ಲ ವೈದ್ಯಕೀಯ ಸಲಕರಣೆ, ಬೆಡ್ ವ್ಯವಸ್ಥೆ ಮಾಡಿ ಬಡ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಹಳೆ ಆಸ್ಪತ್ರೆ ರಿಪೇರಿ ಕೂಡ ಇದರಲ್ಲಿದೆ. ಅದನ್ನು ಕೂಡ ಕೂಡಲೇ ಪ್ರಾರಂಭ ಮಾಡಬೇಕೆಂದು ಆಗ್ರಹಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಕಾಮಗಾರಿಗಳಿಗೆ ಶಾಸಕ ಭೂಮಿಪೂಜೆ

ಸಿದ್ದಾಪುರ: ಶಿರಸಿ–ಸಿದ್ದಾಪುರ ಕ್ಷೇತ್ರದ ಶಾಸಕರಾದ ಭೀಮಣ್ಣ ನಾಯ್ಕ ಸಿದ್ದಾಪುರ ಪಟ್ಟಣ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು. ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಯ ಕಟ್ಟಡ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿದರು. ನಂತರ ಇಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ 2.25 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಳೆಗಾಲದ ಆರಂಭಕ್ಕೂ ಮುನ್ನ ಗುಣಮಟ್ಟದಲ್ಲಿ ರಸ್ತೆ ಕೆಲಸ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ತಾಲೂಕಾ ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಎಪಿಎಂಸಿ ಆಡಳಿತಾಧಿಕಾರಿ ಎಂ.ಆರ್. ಕುಲಕರ್ಣಿ, ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ, ಎಪಿಎಂಸಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ವ್ಯಕ್ತಿ ಆತ್ಮಹತ್ಯೆ

ಅಂಕೋಲಾ: ಮಾನಸಿಕ ಅಸ್ವಸ್ಥ ವ್ಯಕ್ತಿಯೋರ್ವ ತನ್ನ ಮನೆಯ ಕೋಣೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ವಂದಿಗೆಯಲ್ಲಿ ನಡೆದಿದೆ.ವಂದಿಗೆ ನಿವಾಸಿ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ ರವಿಚಂದ್ರ ವಿಠ್ಠಲ ನಾಯ್ಕ(34) ಮೃತ ವ್ಯಕ್ತಿಯಾಗಿದ್ದು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ಈತ ಎ.24ರ ಬೆಳಗ್ಗೆ ಎ. 25ರ ಸಂಜೆ 4 ಗಂಟೆ ನಡುವಿನ ಅವಧಿಯಲ್ಲಿ ವಿಪರೀತ ಸರಾಯಿ ಕುಡಿದು ತಾನು ಮಲಗುವ ಕೋಣೆಯ ಮೇಲ್ಛಾವಣಿಗೆ ಸೀರೆಯಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ.ಘಟನೆಗೆ ಸಂಬಂಧಿಸಿದಂತೆ ಮೃತನ ಅಕ್ಕ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಸ್ಕೂಟರ್- ಕಾರು ಡಿಕ್ಕಿ: ಇಬ್ಬರಿಗೆ ಗಾಯ

ಅಂಕೋಲಾ: ಸ್ಕೂಟರ್ ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಇಬ್ಬರು ಮಹಿಳೆಯರು ತೀವ್ರವಾಗಿ ಗಾಯಗೊಂಡ ಘಟನೆ ತಾಲೂಕಿನ ಕುಂಬಾರಕೇರಿ ಬಳಿ ಅಂಕೋಲಾ ಗೋಕರ್ಣ ರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದೆ.ಸ್ಕೂಟರ್ ಸವಾರಳಾದ ತಾಲೂಕಿನ ತೆಂಕಣಕೇರಿಯ ನಿವಾಸಿ ಪೂರ್ಣಿಮಾ ರಾಜು ಆಚಾರಿ ಇವರಿಗೆ ತಲೆ,ಮುಖ, ಮೈ-ಕೈಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಹಿಂಬದಿ ಸವಾರೆ ಭವಾನಿ ರವಿ ಆಚಾರಿ ತಲೆ, ಎರಡೂ ಕೈಗಳಿಗೆ ಮತ್ತು ಬಲ ಕಿವಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಗಾಯಾಳುಗಳಿಗೆ ತಾಲೂಕು ಆಸ್ಪತ್ರೆಯಲ್ಲಿ ದಾಖಲಿಸಿ ಹೆಚ್ಚಿನ ಚಿಕಿತ್ಸೆಗೆ ಹೊರ ಜಿಲ್ಲೆಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿದೆ.ಶನಿವಾರ ರಾತ್ರಿ 8 ಗಂಟೆ ಸುಮಾರಿಗೆ ಅಂಕೋಲಾ ಕಡೆಯಿಂದ ಗೋಕರ್ಣ ಕಡೆ ತೆರಳುತ್ತಿದ್ದ ಕೆ.ಎ47ಎ04887 ನೋಂದಣಿ ಸಂಖ್ಯೆಯ ಕಾರು ಚಾಲಕ ಅತಿ ವೇಗ ಮತ್ತು ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಕುಂಬಾರಕೇರಿ ರಸ್ತೆಯ ಬಸವಕಲ್ಲು ಸಮೀಪ ಎದುರಿನಿಂದ ಹೋಗುತ್ತಿದ್ದ ಕೆ.ಎ30 ಎಸ್6901 ನೋಂದಣಿ ಸಂಖ್ಯೆಯ ಸ್ಕೂಟರಿಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ.ಅಪಘಾತ ಪಡಿಸಿದ ಕಾರು ಚಾಲಕ ಕಾರು ನಿಲ್ಲಿಸದೇ ಚಲಾಯಿಸಿಕೊಂಡು ಪರಾರಿಯಾಗಿದ್ದಾನೆ.ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಈ ಕುರಿತು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಿಧನ ಸುದ್ದಿ

ವೆಂಕಟ ಸುಬ್ಬ ಹೆಗಡೆ



ಹೊನ್ನಾವರ: ತಾಲೂಕಿನ ಕಡ್ಲೆ ಮೂಲದ ವೆಂಕಟ ಸುಬ್ಬ ದತ್ತಾತ್ರೇಯ ಹೆಗಡೆ (76) ಹೃದಯಘಾತದಿಂದ ನಿಧನರಾದರು. ಡಿಪ್ಲೋಮಾ ಇಲೆಕ್ಟ್ರೀಕಲ್ ಶಿಕ್ಷಣ ಪಡೆದಿರುವ ಇವರು ಜನರೇಟರ್ ರಿಪೇರಿ ಸ್ಪೆಷಾಲಿಸ್ಟ, ಹಡಗು ಇಲೆಕ್ಟ್ರಿಷಿಯಸ್ ಆಗಿರುವ ಇವರು ಜಿಲ್ಲೆಯಲ್ಲೆ ಮಿಷನ್ ಬಿಡಿಭಾಗಗಳ ಪೂರೈಕೆ ರಿಪೇರಿ ಮಾಡುವುದರಲ್ಲಿ ಜನಮನ್ನಣೆ ಪಡೆದಿದ್ದರು. ಮೃತರು ತಾಯಿ, ಪತ್ನಿ, ಒರ್ವ ಪುತ್ರಿ ಇರ್ವರು ಪುತ್ರರು, ಅಪಾರ ಬಂಧುಬಳಗವಿದೆ. ಇವರ ನಿಧನಕ್ಕೆ ಮಾಜಿ ಜಿಪಂಸದಸ್ಯ ಶಿವಾನಂದ ಹೆಗಡೆ ಕಡತೋಕಾ, ಕೆಡಿಸಿಸಿ ಬ್ಯಂಕ ನಿರ್ದೇಶಕ ವಿ.ಕೆ.ವಿಶಾಲ್, ಸಾಮಾಜಿಕ ಕಾರ್ಯಕರ್ತ ಜಿ.ಆರ್. ಹೆಗಡೆ ಗುಬ್ಬು, ಕಲಾವಿದ ವಿಶ್ವನಾಥ ಭಟ್ ಗೋಡಾಮಕ್ಕಿ, ಸೇರಿದಂತೆ ಹಲವು ಗಣ್ಯರು ಕಂಬನಿ ಮಿಡಿದಿದ್ದಾರೆ.



ಸಿದ್ದಾಪುರ: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಯ ಕಟ್ಟಡ ಅಭಿವೃದ್ಧಿ ಕಾಮಗಾರಿಗೆ ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕರಾದ ಭೀಮಣ್ಣ ನಾಯ್ಕ ಸಿದ್ದಾಪುರ ಪಟ್ಟಣ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಎ.30ರಿಂದ ಇಪ್ಪತ್ತನೇಯ ವರ್ಧಂತಿ ಉತ್ಸವ

ಹೊನ್ನಾವರ: ಪಟ್ಟಣದ ಸಾರ್ವಜನಿಕ ಶನಿದೇವರ ಭಕ್ತ ಸಮೂಹ ಶೆಟ್ಟಿಕೆರೆ ಹೊನ್ನಾವರ ಇದರ ಇಪ್ಪತ್ತನೇಯ ವರ್ಧಂತಿ ಉತ್ಸವ ಎ.30ಗುರುವಾರ ಮತ್ತು ಮೇ 1ಶುಕ್ರವಾರ ಜರುಗಲಿದೆ.

ಎ.30ರಂದು 4ಗಂಟೆಗೆ ದೇವರ ಪಲ್ಲಕ್ಕಿ ಉತ್ಸವ. ೯ ಲಕ್ಷ್ಮೀನಾರಾಯಣ ಭಜನಾ ಮಂಡಳಿಯಿಂದ ದುರ್ಗಾಕೇರಿ ಇವರಿಂದ ಸಂಜೆ 5ಗಂಟೆಗೆ ಭಜನಾ ಕಾರ್ಯಕ್ರಮ. ವಾಸ್ತು ಹವನ ಬಲಿಪ್ರದಾನ ರಾತ್ರಿ 8ಗಂಟೆಗೆ ಮಹಾಪೂಜೆ ನಡೆಯಲ್ಲಿದೆ.

ಮೇ.1ರಂದು ಶುಕ್ರವಾರ ಬೆಳಗ್ಗೆ 8 ಘಂಟೆಗೆ ದೇವತಾ ಪ್ರಾರ್ಥನೆ ,ನವಗ್ರಹ ಪರಸ್ಸರ ಶನಿಶಾಂತಿ, ಕಲಶಾಭಿಷೇಕ,12.15ಕ್ಕೆ ಪೂರ್ಣಾಹುತಿ. 12.30ಕ್ಕೆ ಡಾ.ಪತಂಜಲಿ ವೀಣಾಕರ ಇವರ ಪ್ರವಚನ .ಮಧ್ಯಾಹ್ನ1ಘಂಟೆಗೆ ಮಹಾಪೂಜೆ. 1.30ಕ್ಕೆ ಅನ್ನಸಂತರ್ಪಣೆ.

ಸಂಜೆ 5.30ಕ್ಕೆ ಮಂಕಿ ಸರ್ವೇಶ್ವರಿ ಭಜನಾ ಮಂಡಳಿ ವಿನೋದ ಮಹಾಲೆ ಸಂಗಡಿಗರು ಇವರು ನಡೆಸಿಕೊಂಡಲಿದ್ದಾರೆ.

ರಾತ್ರಿ 8 ಗಂಟೆಗೆ ಮಹಾಪೂಜೆ, ಯಕ್ಷಗಾನ ಶನ್ಯೆಶ್ಚರ ಮಹಾತ್ಮೆ ನಡೆಯಲಿದೆ. ಮೇ16ರಂದು ಶನ್ಯೆಶ್ಚರ ಜಯಂತಿ ನಿಮಿತ್ತವಾಗಿ ಲೋಕಕಲ್ಯಾಣಾರ್ಥ1001ಶನಿಕಥೆ ಮಾಡಲಾಗುವುದು ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಆಡಳಿತ ಮಂಡಳಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೊನ್ನಾವರ: ತಾಲೂಕಿನ ಗೇರುಸೊಪ್ಪಾ ಉಪ್ಪಿನಗೊಳಿಯ ಶ್ರೀಗುತ್ತಿಕನ್ನಿಕಾ ಪರಮೇಶ್ವರೀ ದೇವಾಲಯದ ನೂತನ ಸಭಾಭವನ ನಿರ್ಮಾಣಕ್ಕೆ ಶಿಲಾನ್ಯಾಸವನ್ನು ರಾಮಕ್ಷೇತ್ರ ಮಹಾಸಂಸ್ಥಾನದ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಶ್ರೀಗಳು ನೆರವೇರಿಸಿದರು.

ಹತ್ಯೆ ಪ್ರಕರಣ: 24 ಗಂಟೆಯಲ್ಲಿ ಐವರ ಬಂಧನ

ಮುಂಡಗೋಡ: ಪಟ್ಟಣದಲ್ಲಿ ನಡೆದಿದ್ದ ಬರ್ಬರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 24 ಗಂಟೆಯಲ್ಲಿಯೇ ಐದು ಜನ ಆರೋಪಿಗಳನ್ನು ಬಂಧಿಸುವಲ್ಲಿ ಇಲ್ಲಿನ ಪೊಲೀಸರು ಯಶಸ್ವಿಯಾಗಿದ್ದಾರೆ.

ಪಟ್ಟಣದ ಬಸ್ ನಿಲ್ದಾಣದ ಎದುರಿನ ಅಂಬಿಕಾ ಸಾವಜಿ ಹೋಟೆಲ್‌ವೊಂದರಲ್ಲಿ ಊಟಕ್ಕೆ ಬಂದಿದ್ದ ಜಮೀರ ಅಹ್ಮದ ದರ್ಗಾವಾಲೆ ಎಂಬಾತನನ್ನು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು.

ಮುಂಡಗೋಡದ ಮಂಜುನಾಥ ಕಾಜಗಾರ, ಇಂದಿರಾನಗರಕೊಪ್ಪದ ಶ್ರೀಕಾಂತ ಕಿರಣ್ಣನವರ, ಧಾರವಾಡದ ಮಂಜುನಾಥ ಬೆಳಗಾಂವ, ಹುಬ್ಬಳ್ಳಿಯ ಅಭಿಷೇಕ ಬಡಶೆಟ್ಟಿ ಮತ್ತು ಧಾರವಾಡದ ದೀಪಕ ನವಲೆ ಬಂಧಿತ ಆರೋಪಿಗಳಾಗಿದ್ದಾರೆ.

ಕೊಲೆಯಾದ ಜಮೀರ್ ಹಾಗೂ ಆರೋಪಿ ಮಂಜು ಕಾಜಗಾರ ನಡುವೆ ಮೀಟರ್ ಬಡ್ಡಿ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದ ಬಗ್ಗೆ ಇಬ್ಬರ ನಡುವೆ ದ್ವೇಷ ಮೂಡಿತ್ತು. ಈ ಕಾರಣದಿಂದ ಪ್ರಕರಣದ ನಾಲ್ಕು ಜನ ಆರೋಪಿತರಿಗೆ ಹತ್ಯೆ ಮಾಡಲು ಪ್ರೇರೇಪಿಸಿ ಸುಪಾರಿ ನೀಡಿ ಕೊಲೆ ಮಾಡಿಸಿರುವುದಾಗಿ ಪೊಲೀಸರ ಮುಂದೆ ಬಾಯಿ ಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಕೊಲೆಯಾದ ಜಮೀರ ದರ್ಗಾವಾಲೆನ ಚಲನವನ ಬಗ್ಗೆ ನಾಲ್ಕೈದು ದಿನಗಳಿಂದ ಆರೋಪಿಗಳು ಸಂಗ್ರಹಿಸಿದ್ದರು. ಎ.24ರ ರಾತ್ರಿ ಜಮೀರ ಹಾಗೂ ಈತನ ಸ್ನೇಹಿತ ಸೇರಿ ಅಂಬಿಕಾ ಹೋಟೆಲ್‌ನಲ್ಲಿ ಊಟಕ್ಕೆ ಹೋಗಿದ್ದ ಬಗ್ಗೆ ಖಚಿತ ಪಡಿಸಿಕೊಂಡು ಆರೋಪಿಗಳು ದಾಳಿ ಮಾಡಿದ್ದಾರೆ.

ಮಂಜು ಕಾಜಗಾರ ಕಳೆದ ನಾಲ್ಕು ವರ್ಷಗಳ ಹಿಂದೆ ಹರ್ಷ ಬೆಂದ್ರಾಳ ಕೊಲೆಯಲ್ಲಿಯೂ ಈತ ಪ್ರಮುಖ ಆರೋಪಿಯಾಗಿದ್ದ. ಆದರೆ, ಈ ಪ್ರಕರಣದಲ್ಲಿ ಮಾತ್ರ ಸುಪಾರಿ ನೀಡಿ, ಜಮೀರನನ್ನು ಕೊಲೆ ಮಾಡಿಸಿರುವುದಾಗ ಪೊಲೀಸರ ಎದುರು ಬಾಯಿಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.



ಕೊಲೆಗೆ ಕಾರಣ: ಕೊಲೆಯಾದ ಜಮೀರ ಹಾಗೂ ಆರೋಪಿ ಮಂಜು ಕಾಜಗಾರ ನಡುವೆ ಮೀಟರ ಬಡ್ಡಿ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದ ಬಗ್ಗೆ ಇಬ್ಬರ ನಡುವೆ ದ್ವೇಷ ಮೂಡಿತ್ತು. ಈ ಕಾರಣದಿಂದ ಪ್ರಕರಣದ ನಾಲ್ಕು ಜನ ಆರೋಪಿತರಿಗೆ ಹತ್ಯೆ ಮಾಡಲು ಪ್ರೇರೆಪಿಸಿ ಸುಪಾರಿ ನೀಡಿ ಕೊಲೆ ಮಾಡಿಸಿರುವುದಾಗಿ ಪೊಲೀಸರ ಮುಂದೆ ಬಾಯಿ ಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಕೊಲೆಯಾದ ಜಮೀರ ದರ್ಗಾವಾಲೆನ ಚಲನವನ ಬಗ್ಗೆ ನಾಲ್ಕೈದು ದಿನಗಳಿಂದ ಆರೋಪಿಗಳು ಸಂಗ್ರಹಿಸಿದ್ದರು. ಎ24 ರ ರಾತ್ರಿ ಜಮೀರ ಹಾಗೂ ಈತನ ಸ್ನೇಹಿತ ಸೇರಿ ಅಂಬಿಕಾ ಹೊಟೇಲ ನಲ್ಲಿ ಊಟಕ್ಕೆ ಹೋಗಿದ್ದ ಬಗ್ಗೆ ಖಚಿತ ಪಡಿಸಿಕೊಂಡು ಆರೋಪಿಗಳು ಜಮೀರನ ಸ್ನೇಹಿತ ಸಿಗರೇಟ್ ತರಲು ಹೊರಗೆ ಬರುತ್ತಿದ್ದಂತೆ ದಾಳಿ ಮಾಡಿದ್ದಾರೆ. ಕೊಲೆ ಮಾಡಿ ಬೈಕ್ ಮೂಲಕ ಪರಾರಿಯಾಗಿದ್ದರು.

2 ಕಂಟ್ರಿಮೇಡ್ ಪಿಸ್ತೂಲ್ ವಶ

ಬಂಧಿತ ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಎರಡು ಬೈಕ್, ಒಂದು ಕಾರು, ಎರಡು ಕಂಟ್ರಿಮೇಡ್ ಪಿಸ್ತೂಲ್ ಮತ್ತು ಆರು ಜೀವಂತ ಗುಂಡುಗಳನ್ನು ಆರೋಪಿತರಿಂದ ವಶಕ್ಕೆ ಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಂತರ, ಹಾನಗಲ್ ನಾಲ್ಕರ ಕತ್ರಿ ಹತ್ತಿರ ಕೊಲೆಗೆ ಸುಪಾರಿ ನೀಡಿದ್ದ ಮಂಜುನಾಥ ಕಾಜಗಾರ ಜೊತೆಗೂಡಿ ಕಾರಿನಲ್ಲಿ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ್ದರು. ಈ ಮಾಹಿತಿಯನ್ನು ಕಲೆ ಹಾಕಿದ ಎಸ್.ಪಿ ದೀಪನ್ ಹಾಗೂ ಹಿಂದಿನ ಎಸ್.ಪಿ ಎಂ.ನಾರಾಯಣ ಇಬ್ಬರೂ ಸಮನ್ವಯತೆ ಸಾಧಿಸಿ, ಆರೋಪಿಗಳನ್ನು ಹಿಡಿಯಲು ಬೆಂಗಳೂರು ಗ್ರಾಮಾಂತರ ಪೊಲೀಸರೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ಎಂ.ನಾರಾಯಣ ಅವರ ಸಹಕಾರದೊಂದಿಗೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಹೆಚ್ಚುವರಿ ವರಿಷ್ಠಾಧಿಕಾರಿ ಕೃಷ್ಣಮೂರ್ತಿ.ಜಿ, ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ, ಸಿಪಿಐ ರಂಗನಾಥ ನೀಲಮ್ಮನವರ, ಗೋಕರ್ಣದ ಸಿಪಿಐ ಶ್ರೀಧರ್ ಎಸ್.ಆರ್. ಪಿಎಸ್ಐ ಮಂಜುನಾಥ ಗೌಡರ, ಚಿತ್ತಾಕುಲ ಪಿಎಸ್ಐ ಪರಶುರಾಮ ಮಿರ್ಜಗಿ ಪ್ರೊ. ಪಿಎಸ್ಐ ಕಾಸೀಂ ಹಾಗೂ ಸಿಬ್ಬಂದಿ ತಿರುಪತಿ ಚೌವಡಣ್ಣನವರ, ಬಸವರಾಜ ಲಂಬಾಣಿ, ಮಹಾಂತೇಶ ಮುಧೋಳ, ಮುತ್ತಣ್ಣ ಭೋವಿ, ನಾಗಪ್ಪ ಮೋರಟಗಿ, ಸಂಜು ರಾಠೋಡ ಸೇರಿದಂತೆ ಮುಂತಾದವರು ಕಾರ್ಯಾಚರಣೆಯಲ್ಲಿದ್ದರು.

ಭದ್ರಕಾಳಿ, ಪರಿವಾರ ದೇವರ ಬಂಡಿಹಬ್ಬ ಸಂಪನ್ನ

ಗೋಕರ್ಣ: ಗ್ರಾಮ ದೇವತೆ ಭದ್ರಕಾಳಿ ಹಾಗೂ ಪರಿವಾರ ದೇವರ ಬಂಡಿಹಬ್ಬ ಭಾನುವಾರ ಸಂಪನ್ನಗೊಂಡಿತು. ಒಂದು ವಾರದಿಂದ ಊರಿನ ಪ್ರಮುಖ ಸ್ಥಳಗಳಿಗೆ ದೇವಿ ಕಳಶೋತ್ಸವ ತೆರಳುವುದು, ವಿವಿಧ ದೈವಿಕ ಕಾರ್ಯಕ್ರಮ ನೇರವೇರಿದ ಬಳಿಕ ಕೊನೆಯ ದಿನ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಹರಕೆ ಹಾಗೂ ಕಾಣಿಕೆ ಒಪ್ಪಿಸುವುದರೊಂದಿಗೆ ಸಾಂಪ್ರದಾಯಿಕ ಪದ್ಧತಿಯ ಪ್ರಾಚೀನ ಹಬ್ಬ ಮುಕ್ತಾಯಗೊಂಡಿತು.

ಕೃಷಿಯೇ ಬದುಕಿನ ಆಧಾರವಾಗಿದ್ದ ಅಂದಿನ ದಿನದಲ್ಲಿ ಮಳೆಗಾಲದ ಪೂರ್ವದಲ್ಲಿ ಕೃಷಿ ಚಟುವಟಿಕೆ ತೊಡಗಿ ಕೊಳ್ಳುವ ಮುನ್ನ ಗ್ರಾಮ ದೇವತೆಯನ್ನ ಆರಾಧಿಸಿ ಮಳೆ, ಬೆಳೆ ಚನ್ನಾಗಿ ಆಗಲಿ ಎಂದು ಪ್ರಾರ್ಥಿಸುವ ಅನಾದಿಕಾಲದಿಂದ ಇಂದಿನವರೆಗೂ ನಡೆದುಕೊಂಡ ಬಂದ ಹಬ್ಬ ಇದಾಗಿದ್ದು,ಅದರಂತೆ ಈ ವರ್ಷವು ನಡೆಯಿತು.

ಬಂಡಿತೇರಿಗೆ ಅರ್ಪಿಸಿದ ಬಾಳೆಹಣ್ಣು ಹಾಗೂ ಭಕ್ತರು ತಂದ ಬಾಳೆಹಣ್ಣುಗಳನ್ನ ಪರಿವಾರ ದೇವರಾದ ಹುಲಿದೇವರಿಗೆ ತಿನ್ನಿಸಿ ತಮ್ಮ ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು. ಪ್ರಧಾನ ಗುನಗರ ನೇತೃತ್ವದಲ್ಲಿ ವಿವಿಧ ಸಮಾಜದವರು ಬೇರೆ, ಬೇರೆ ಜವಾಬ್ದಾರಿ ನಿರ್ವಹಿಸಿದರು. ಈ ಭಾಗದ ವಿವಿಧ ಗ್ರಾಮದವರ ಹಾಗೂ ತಾಲೂಕಿನ ವಿವಿಧ ಕಡೆಯಿಂದ ಸಹ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಭದ್ರಕಾಳಿ ದೇವಾಲಯದಿಂದ ಮಾರುತಿಕಟ್ಟೆಯವರೆಗೆ ಮೀಠಾಯಿ, ಆಟಿಕೆ ಅಂಗಡಿಗಳು ಬಂದಿದ್ದು, ವಹಿವಾಟು ಜೋರಾಗಿ ನಡೆಯಿತು.



ಪರಿಶ್ರಮ, ವಿಶ್ವಾಸವಿಟ್ಟು ಮುನ್ನಡೆಯಿರಿ: ಹೆಗಡೆ

ಹೊನ್ನಾವರ: ಸೋತಾಗ ಕುಗ್ಗದೇ ಕಠಿಣ ಪರಿಶ್ರಮ, ವಿಶ್ವಾಸ ಇಟ್ಟು ಮುನ್ನಡೆದರೆ ಪ್ರತಿಯೊರ್ವರಿಗೂ ಯಶಸ್ಸು ಲಭಿಸಲಿದೆ ಎಂದು ಗ್ಲೋಬ್ ಟೆಕ್ ಫೊರ್ಚ್ಯನ್ ಇಂಡಸ್ಟ್ರಿಸ್ ಪ್ರೈಲಿ ಮ್ಯಾನೇಜಿಂಗ್ ಡೈರಕ್ಟರ್ ಗಣೇಶ ಹೆಗಡೆ ಹೇಳಿದರು.

ಅವರು ತಾಲೂಕಿನ ಅರೇಅಂಗಡಿಯ ಎಸ್.ಎಸ್.ಕೆ.ಪಿ ಜ್ಯೂನಿಯರ್ ಕಾಲೇಜಿನಲ್ಲಿ ಎಸ್.ಕೆ.ಪಿ ಪೂರ್ವ ವಿದ್ಯಾರ್ಥಿ ಬಳಗದ ವತಿಯಿಂದ ಹಮ್ಮಿಕೊಂಡ 'ಸಾಂಸ್ಕೃತಿಕ ಸಂಭ್ರಮ ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಯನ ಮಾಡುವ ಸಮಯದಲ್ಲಿ ಕೇವಲ ವಿದ್ಯೆಯನ್ನು ಮಾತ್ರ ಶಿಕ್ಷಣ ಸಂಸ್ಥೆಯು ನೀಡುವುದಿಲ್ಲ, ಬದುಕಿಗೆ ನೈತಿಕ ಶಿಕ್ಷಣ ನೀಡುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಯನ್ನಾಗಿಸುತ್ತದೆ ಎಂದರು.

ಎಸ್. ಎಸ್.ಕೆ.ಪಿ ಕಾಲೇಜಿನ ಪ್ರಾ. ವಿ.ಎನ್.ಭಟ್ ಮಾತನಾಡಿ, ಶಿಕ್ಷಣದ ಜೊತೆ ಸಂಸ್ಕಾರಯುತ ಶಿಕ್ಷಣದ ಅಗತ್ಯವಿದೆ. ಇಂದು ಮಕ್ಕಳು ಮೊಬೈಲ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದಾರೆ. ಇದು ಶಿಕ್ಷಣ ಮತ್ತು ಆರೋಗ್ಯದಮೇಲೆಪರಿಣಾಮಬೀಳುವುದರಿಂದ ಭವಿಷ್ಯದ ಯುವ ಸಮುದಾಯ ಇನ್ನಷ್ಟು ಸಮಸ್ಯೆ ಉಂಟಾಗಲಿದೆ. ಪಾಲಕರು ತಾವು ಮೊಬೈಲನಿಂದ ದೂರ ಇದ್ದು, ಮಕ್ಕಳ ಬಳಕೆಯ ಮೇಲೂ ನಿಗಾ ವಹಿಸುವಂತೆ ಸಲಹೆ ನೀಡಿದರು.

ಬೆಂಗಳೂರಿನ ಸರ್ಕಾರಿ ಹೊಮಿಯೊಪಥಿಕ್ ಕಾಲೇಜಿನ ಉಪನ್ಯಾಸಕ ಡಾ. ಶ್ರೀಪಾದ ಹೆಗಡೆ, ಕಾಲೇಜಿನ ಇತಿಹಾಸ ವಿಭಾಗದ ನಿವೃತ್ತ ಉಪನ್ಯಾಸಕ ಎಸ್.ಎಸ್.ಶಿವಪ್ಪ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕ್ರೀಡೆ ಹಾಗೂ ಶೈಕ್ಷಣಿಕವಾಗಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಯಿತು.ಪೂರ್ವ ವಿದ್ಯಾರ್ಥಿ ಬಳಗದ ಕಾರ್ಯದರ್ಶಿ ಗೋಪಾಲಕೃಷ್ಣ ಹೆಗಡೆ ಹುಕ್ಲಮಕ್ಕಿ, ನಿವೃತ್ತ ಉಪನ್ಯಾಸಕ ಕೆ.ಎಸ್.ಹೆಗಡೆ ಸಂಘಟನೆಯ ಕಾರ್ಯವನ್ನು ಪ್ರಶಂಸಿದರು.ಸಾಮವೇದದ ಹಿರಿಯ ವಿದ್ವಾಂಸರಾದ ಸುಬ್ರಹ್ಮಣ್ಯ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘಟನೆಯ ಅಧ್ಯಕ್ಷ ಜಿ.ಆರ್.ನಾಯ್ಕ ಹಾಗೂ ಸದಸ್ಯರು ಉಪಸ್ಥಿತರಿದ್ದರು. ಉಪನ್ಯಾಸಕ ಪ್ರಶಾಂತ ಹೆಗಡೆ ಮೂಡಲಮನೆ ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತನಾಡಿದರು. ಶಿಕ್ಷಕ ಸಂದೀಪ ಭಟ್ ಕಾರ್ಯಕ್ರಮ ನಿರ್ವಹಿಸಿದರು.ನಂತರ ಪೂರ್ವ ವಿದ್ಯಾರ್ಥಿಗಳು ಮತ್ತು ಅತಿಥಿ ಕಲಾವಿದರ ಕೂಡುವಿಕೆಯಲ್ಲಿ 'ವಾಲಿಮೋಕ್ಷ' ಯಕ್ಷಗಾನ ಪ್ರದರ್ಶನಗೊಂಡಿತು.



ಯೋಗದಿಂದ ರೋಗ ಮುಕ್ತಿ: ಗಿರೀಶ

ಭಟ್ಕಳ: ಪಟ್ಟಣದ ಮಣ್ಕುಳಿಯ ನಾಗಮಾಸ್ತಿ ಕ್ಷೇತ್ರದ ಆವರಣದಲ್ಲಿ ಸ್ಥಳೀಯ ಪತಂಜಲಿ ಯೋಗ ಪರಿವಾರ, ರಾಜ್ಯ ಪ್ರಭಾರಿ ಅಂತಾರಾಷ್ಟ್ರೀಯ ಯೋಗ ಗುರು ಭವರಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ ಯೋಗ ಶಿಕ್ಷಕರ 23 ದಿನಗಳ ತರಬೇತಿ ಶಿಬಿರಕ್ಕೆ ಪತಂಜಲಿ ಕಿಸಾನ್ ಸಂಘಟನೆಯ ರಾಜ್ಯ ಪ್ರಭಾರಿ ಸಂಜಯ್ ಗುತ್ತೇದಾರ್ ಚಾಲನೆ ನೀಡಿದರು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಡಿವೈಎಸ್ಪಿ ಎಂ.ಗಿರೀಶ್ ಅವರು ಮಾತನಾಡಿ, ಯೋಗದಿಂದ ರೋಗ ಮುಕ್ತಿ ಪಡೆಯಬಹುದು. ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗ ಪ್ರತಿ ವ್ಯಕ್ತಿಗಳಿಗೂ ಅತ್ಯಗತ್ಯ. ಚಿಕ್ಕವರಿಂದ ವಯೋವೃದ್ಧರವರಿಗೆ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳುವುದರ ಮೂಲಕ ಸ್ವಸ್ಥ ಹಾಗೂ ಸ್ವಚ್ಛ ಜೀವನವನ್ನು ನಡೆಸಲು ಸಾಧ್ಯ. ಯೋಗ ದಲ್ಲಿ ಇಂದು ಜಗತ್ತಿನ ವಿವಿಧ ದೇಶಗಳಿಗೆ ಭಾರತ ದೇಶವೇ ಮಾದರಿಯಾಗಿರುತ್ತದೆ ಎಂದರು.

ಮುಖ್ಯ ಅತಿಥಿಯಾದ ಉದ್ಯಮಿ ಹಾಗೂ ಭಟ್ಕಳ ಎಜ್ಯುಕೇಶನ್ ಟ್ರಸ್ಟ ಟ್ರಸ್ಟಿ ನಾಗೇಶ್ ಭಟ್, ಅಧ್ಯಕ್ಷತೆ ವಹಿಸಿದ್ದ ನಾಗ ಮಾಸ್ತಿ ಕ್ಷೇತ್ರದ ಅಧ್ಯಕ್ಷ ಸತೀಶ್ ಕುಮಾರ್ ಅವರು ಯೋಗದ ಮಹತ್ವದ ಕುರಿತು ವಿವರಿಸಿದರು.

ಭಟ್ಕಳದಲ್ಲಿ ಯೋಗ ತರಬೇತಿಗಾಗಿ ಕೆಲವು ದಶಕಗಳ ಕಾಲ ಶ್ರಮಿಸಿದ ಹಿರಿಯ ಯೋಗ ಪಟು ವಿಠ್ಠಲ್ ಬಾಳೇರಿ ಅವರನ್ನು ಗೌರವಿಸಲಾಯಿತು. ಗೋವಿಂದ ಗುರೂಜಿ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಪತಂಜಲಿ ಯೋಗ ಸಮಿತಿ ಅಧ್ಯಕ್ಷ ಶ್ರೀನಾಥ್ ಗೌಡ, ಪತಂಜಲಿ ಜಿಲ್ಲಾ ಪ್ರಭಾವಿ ರಘುರಾಮ್ ಹೆಗಡೆ, ರಾಜ್ಯ ಪತಂಜಲಿ ಸದಸ್ಯ ನಾಗೇಂದ್ರ ಭಟ್ ಮೊದಲಾದವರಿದ್ದರು. ನೂರಾರು ಶಿಬಿರಾರ್ಥಿಗಳು ಪಾಲ್ಗೊಂಡಿದರು.



ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ



ಸಿದ್ದಾಪುರ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿಪಟ್ಟಣದಪ್ರಶಾಂತಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿ ರಜತ ವಿನಾಯಕ ಶೇಟ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಸೇವಾ ಸಂಕಲ್ಪ ಟ್ರಸ್ಟ್ ಹೊಸೂರ ಸಿದ್ದಾಪುರ ಮತ್ತು ಪ್ರಶಾಂತಿ ಟ್ರಸ್ಟ್ ವತಿಯಿಂದ ಗೌರವಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಯ ತಂದೆ ವಿನಾಯಕ ಶಂಕರ ಶೇಟ, ತಾಯಿ ಪುಷ್ಪಾ ಶೇಟ, ಅಜ್ಜಿ ಲಲಿತಾ ಶೇಟ, ಶ್ರೀ ಸೇವಾ ಸಂಕಲ್ಪ ಟ್ರಸ್ಟಿನ ನಿರ್ದೇಶಕ ಪ್ರಕಾಶ.ಬಿ. ಹೊಸೂರ, ಸದಸ್ಯೆ ಬಿಳಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕಿ ಲೀಲಾವತಿ. ಎಂ.ಮಡಿವಾಳ, ಪ್ರಶಾಂತಿ ಟ್ರಸ್ಟಿನ ಸದಸ್ಯ ಡಿ.ವಿ.ಶೇಟ, ನಿವೃತ್ತ ಮುಖ್ಯಾಧ್ಯಾಪಕಿ ವಿಜಯಾ ಶೇಟ ಇತರರು ಉಪಸ್ಥಿತರಿದ್ದರು.

ಸಿದ್ದಾಪುರ ತಾಲೂಕಿನ ಜಿಡ್ಡಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ನಿಶಾ ಪರಮೇಶ್ವರ ಮಡಿವಾಳ ಇವಳು ಎಸ್ಸೆಸ್ಸೆಲ್ಸಿ ರಾಜ್ಯಕ್ಕೆ 9ನೇ ಸ್ಥಾನವನ್ನು ಪಡೆದಿದ್ದು ಸೇವಾ ಸಂಕಲ್ಪ ಟ್ರಸ್ಟ್ ಹೊಸೂರ ಸಿದ್ದಾಪುರ ಇವರ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಜಿಡ್ಡಿ ಸರ್ಕಾರಿ ಪ್ರೌಢಶಾಲೆಯ ಮುಖ್ಯಾಧ್ಯಾಪಕ ಪಿ.ಆರ್ .ಭಟ್ಟ, ಶಿಕ್ಷಕ ವೆಂಕಟೇಶ ಮಡಿವಾಳ, ಸೇವಾ ಸಂಕಲ್ಪ ಟ್ರಸ್ಟಿನ ನಿರ್ದೇಶಕ ಪಿ.ಬಿ.ಹೊಸೂರ, ಸದಸ್ಯೆ ಲೀಲಾವತಿ ಮಡಿವಾಳ (ಕಾವ್ಯಾ ಪ್ರಕಾಶ ಹೊಸೂರ) ವಿದ್ಯಾರ್ಥಿನಿಯ ತಂದೆ ಪರಮೇಶ್ವರ ಸೇರಿದಂತೆ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.


ಎ.30ರಿಂದ ವಿವಿಧೆಡೆ ಬಂಡಿಹಬ್ಬದ ಸಡಗರ

ಅಂಕೋಲಾ: ಉಕ ಜಿಲ್ಲೆಯಲ್ಲಿ ಸಾಂಸ್ಕೃತಿಕ ಮತ್ತು ಜಾನಪದೀಯ ವೈಶಿಷ್ಟ್ಯತೆಗಳಿಂದ ಗುರುತಿಸಿಕೊಂಡ ಅಂಕೋಲಾ ತಾಲೂಕಿನಲ್ಲಿ ಗ್ರಾಮ ದೇವರ ಜಾತ್ರೆಬಂಡಿಹಬ್ಬಗಳು ಸಾಲು ಸಾಲಾಗಿ ಎದುರು ನಿಂತಿದ್ದು, ಎಲ್ಲಡೆ ಸಡಗರ ಸಂಭ್ರಮ ಮನೆಮಾಡಿದೆ.


ಅಂಕೋಲದೊಡತಿ ಭೂಮ್ತಾಯಿ ಶ್ರೀ ಶಾಂತಾದುರ್ಗಾದೇವಿಯ ಬಂಡಿಹಬ್ಬದಿಂದ ತಾಲೂಕಿನ ವಿವಿಧಡೆ ಬಂಡಿಹಬ್ಬಗಳು ಆರಂಭವಾಗಲಿವೆ. ಅಂಕೋಲೆ ಬಂಡಿಹಬ್ಬ ಎಂದು ಖ್ಯಾತಿ ಪಡೆದಿರುವ ಭೂಮ್ತಾಯಿಯ ಬಂಡಿಹಬ್ಬ ಎ.30ರಂದು ನಡೆಯಲಿದ್ದು, ಮೇ 1ರಂದು ಮರು ಬಂಡಿಹಬ್ಬ ನಡೆಯಲಿದೆ.

ತೆಂಕಣಕೇರಿಯ ಶ್ರೀ ಬೊಮ್ಮಯ್ಯ ದೇವರ ಬಂಡಿಹಬ್ಬದ ಪ್ರಕ್ರಿಯೆಗಳು ಭರದಿಂದ ಸಾಗಿದ್ದು, ಎ. 29ರಂದು ದೇವರು ಕರೆಯುವ ಸಂಪ್ರದಾಯ ನಡೆಯಲಿದ್ದು, ಮೇ 2ರಂದು ಬಂಡಿಹಬ್ಬ ಹಾಗೂ ಮೇ 3ರಂದು ಮರು ಬಂಡಿಹಬ್ಬ ನಡೆಯಲಿದೆ.

ಅಲಗೇರಿಯ ಶ್ರೀಕಣ್ಣಮ್ಮದೇವಿ, ಶ್ರೀಬೊಮ್ಮಯ್ಯ ದೇವ ಹಾಗೂ ಪರಿವಾರ ದೇವರುಗಳ ಬಂಡಿಹಬ್ಬ ಮೇ 2ರಂದು ನಡೆಯಲಿದ್ದು, ಮೇ 3ರಂದು ಕಿರು ಬಂಡಿಹಬ್ಬ ನಡೆಯಲಿದೆ.ಎ.27ರಂದು ಸಾಸಿ ಹಾಕುವುದು, ಎ.28ರಂದು ಒಂದು ಹೊತ್ತು, ಎ.29ರಂದು ದೇವರು ಕರೆಯುವುದು ಎ. 30ರಂದು ಮಹಾಸತಿ, ಮೇ 1ರಂದು ಜಾಗರಣೆ ಕಾರ್ಯಕ್ರಮ ನಡೆಯಲಿದೆ. ತಾಲೂಕಿನ ಅವರ್ಸಾ ಸುತ್ತ ಮುತ್ತಲಿನ ಪಂಚ ಗ್ರಾಮಗಳ ಆಧಿದೇವತೆ ಗ್ರಾಮದೇವಿ ಭೂದೇವಿಯ ಬಂಡಿಹಬ್ಬ ಉತ್ಸವ ಮೇ 6ರಂದು ನಡೆಯಲಿದ್ದು, ಮೇ 7 ರಂದು ಮರು ಬಂಡಿಹಬ್ಬ ಹರಕೆಗಳ ಸಲ್ಲಿಕೆ ನಡೆಯಲಿದೆ.ಅವಾರಿ ಸಾಸಿ ಹಾಕುವ ಮೂಲಕ ಬಂಡಿಹಬ್ಬದ ಪ್ರಕ್ರಿಯೆಗಳು ಆರಂಭವಾಗಿದ್ದು, ಮೇ 1ರಂದು ದೇವರು ಕರೆಯುವುದು, ಮೇ 4ರಂದು ಮಾಸ್ತಿ ಬೀಳುವ ಸಾಂಪ್ರದಾಯಿಕ ವಿಧಿಗಳು ನಡೆಯಲಿವೆ.ಹೊಸ್ಕೇರಿಯ ಬೊಮ್ಮಯ್ಯ ದೇವರು, ಬಿಳಿಗಿರಿ ದೇವಿ ಬಂಡಿಹಬ್ಬ ಮೇ 6 ಮತ್ತು ಮೇ 7ರಂದು ನಡೆಯಲಿದೆ.ಪೂಜಗೇರಿಯ ಬೀದಿಬೀರ ದೇವರ ಬಂಡಿಹಬ್ಬ ಮೇ 13ರಂದು ನಡೆಯಲಿದ್ದು, ಮೇ14ರಂದು ಕಿರು ಬಂಡಿಹಬ್ಬ ನಡೆಯಲಿದೆ.ಮೇ6 ರಂದು ಸಾಸಿ ಹಾಕುವುದು, ಮೇ 10ರಂದು ದೇವರು ಕರೆಯುವ ಕಾರ್ಯಕ್ರಮ ನಡೆಯಲಿದೆ. ಕೊಗ್ರೆಯ ಬೊಮ್ಮಯ್ಯ ದೇವರು, ಮಾಣಿಬೀರ,ಉಲಿಬೀರ ಮತ್ತು ಅಮ್ಮನವರ ಮತ್ತು ಪರಿವಾರ ದೇವರುಗಳ ಬಂಡಿಹಬ್ಬ ಮೇ 16ರಂದು ನಡೆಯಲಿದ್ದು ಮೇ 17ರಂದು ಕಿರು ಬಂಡಿಹಬ್ಬ ನಡೆಯಲಿದೆ.ಹೊನ್ನೆಬೈಲ್ ಗ್ರಾಮದ ಶ್ರೀಬೊಮ್ಮಯ್ಯ ದೇವರು, ಶ್ರೀಕುಸ್ಲೆ ದೇವರು ಮತ್ತು ಮಾಣಿಬೀರ ದೇವರ ಬಂಡಿಹಬ್ಬ ಮೇ 19ರಂದು ನಡೆಯಲಿದೆ.



ನಾಯ್ಕಗೆ ಪಿಎಚ್‌ಡಿ ಪ್ರದಾನ



ಹಳಿಯಾಳ: ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ಆಯೋಜಿಸಲಾದ 75ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಹಳಿಯಾಳದ ಡಾ. ಪೂರ್ಣಿಮಾ ಕೆ. ನಾಯ್ಕ ಅವರಿಗೆ ಪಿಎಚ್‌ಡಿ ಪದವಿ ಪ್ರಧಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಾನ್ಯ ರಾಜ್ಯಪಾಲರು ಡಾ. ಪೂರ್ಣಿಮಾ ಕೆ. ನಾಯ್ಕ ಅವರಿಗೆ ಪಿಎಚ್‌ಡಿ ಪದವಿ ನೀಡಿ ಗೌರವಿಸಿದರು. ಇವರು ತಮ್ಮ ಸಂಶೋಧನಾ ಕಾರ್ಯವನ್ನು ಡಾ. ಎಲ್. ಎಸ್. ನಾಯಕ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.


ಪ್ರಸ್ತುತ ಬೆಳಗಾವಿಯ ಸರ್ಕಾರಿ ಚಿಂತಾಮಣಿರಾವ ಪಿಯು ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಪೂರ್ಣಿಮಾ ಅವರ ಸಾಧನೆಗೆ ಕುಟುಂಬಸ್ಥರು, ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಇಂದು ಓಂ ಶಾಂತಿ ಭವನ ಉದ್ಘಾಟನೆ

ಮುಂಡಗೋಡ: ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮುಂಡಗೋಡ ಶಾಖೆಯ ನೂತನವಾಗಿ ನಿರ್ಮಾಣ ಮಾಡಿದ ಓಂ ಶಾಂತಿ ಭವನದ ಉದ್ಘಾಟನೆ ಕಾರ್ಯಕ್ರಮವನ್ನು ಎ.27ರಂದು ಏರ್ಪಡಿಸಿದ್ದೇವೆ ಎಂದು ಸೇವಾಧಾರಿ ಬ್ರಹ್ಮಕುಮಾರಿ ಗಂಗಾಂಬಿಕೆ ಹೇಳಿದರು.

ಪಟ್ಟಣದ ನಂದೀಶ್ವರ ನಗರದಲ್ಲಿ ನೂತನವಾಗಿ ನಿರ್ಮಾಣ ಮಾಡಿದ ಓಂ ಶಾಂತಿ ಭವನದ ಉದ್ಘಾಟನೆ ಕುರಿತು ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ಹೊನ್ನಾಳಿ ಸೇವಾ ಕೇಂದ್ರದ ಮುಖ್ಯ ಸಂಚಾಲಕಿ ಬ್ರಹ್ಮಕುಮಾರಿ ಜ್ಯೋತಿ ಮಾತನಾಡಿ, ನಮ್ಮ ಸಂಸ್ಥೆ ಅಂತಾರಾಷ್ಟ್ರೀಯ ಆಧ್ಯಾತ್ಮಿಕ, ನೈತಿಕ, ಯೋಗ ಶಿಕ್ಷಣ ನೀಡುವ ಸಂಸ್ಥೆ ಆಗಿದೆ. ವಿಶ್ವದಾದ್ಯಂತ ಸುಮಾರು 10 ಸಾವಿರ ಶಾಖೆಗಳನ್ನು ಹೊಂದಿದೆ. 142 ದೇಶಗಳಲ್ಲಿ ಉಚಿತವಾದ ಸೇವೆ ನೀಡುತ್ತಿದೆ. ಜಾತಿ, ಮತ, ಭೇದಗಳಿಲ್ಲದೆ ವಿಶ್ವ ಕಲ್ಯಾಣ, ಎಲ್ಲ ಧರ್ಮದವರಿಗೂ ಶಾಂತಿಯನ್ನು ಸ್ಥಾಪನೆ ಮಾಡುವ ಮೂಲ ಉದ್ದೇಶ ಹೊಂದಿದೆ. ಮುಖ್ಯವಾಗಿ ಸಂಸ್ಥೆಯಲ್ಲಿ ಎಲ್ಲರೂ ಮಹಿಳೆಯರೇ ಇದ್ದಾರೆ.

ಸಂಸ್ಥೆಗೆ ಸರ್ಕಾರದಿಂದ ಯಾವುದೇ ಸೌಲಭ್ಯ ಇರುವುದಿಲ್ಲ. ಸಾರ್ವಜನಿಕರ ಸಹಕಾರದಿಂದ ಸಂಸ್ಥೆ ನಡೆಯುತ್ತಿದೆ. ಎಲ್ಲರ ಸಹಕಾರದಿಂದ 'ಓಂ ಶಾಂತಿ ಭವನ' ನಿರ್ಮಾಣವಾಗಿದೆ. ಸೋಮವಾರ ಲೋಕಾರ್ಪಣೆ ಕಾರ್ಯಕ್ರಮ ಇದೆ. ಇದೇ ಕಟ್ಟಡದಲ್ಲಿ ಇನ್ನು ಮುಂದೆ ತರಬೇತಿ ಶಿಕ್ಷಣಗಳು ನಡೆಯಲಿವೆ ಎಂದರು. ಬ್ರಹ್ಮಕುಮಾರಿ ಸರೋಜಿನಿ ಮಾತನಾಡಿ, ನಮ್ಮ ಸಂಸ್ಥೆ ಪಟ್ಟಣದಲ್ಲಿ ಹಲವಾರು ವರ್ಷಗಳಿಂದ ಆಧ್ಯಾತ್ಮಿಕ, ನೈತಿಕ ಮೌಲ್ಯ ಶಿಕ್ಷಣಗಳನ್ನು ನೀಡುತ್ತಾ ಬಂದಿದೆ. ಸೋಮವಾರ ಬೆಳಗ್ಗೆ 10.30 ಗಂಟೆಗೆ ಮಹಾಗಣಪತಿ ಮಂದಿರದ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮ ಜರುಗಲಿದೆ ಎಂದರು.ಬ್ರಹ್ಮಕುಮಾರಿ ಶಶಿಕಲಾ ಮಾತನಾಡಿದರು.



ಸಭಾ ಕಾರ್ಯಕ್ರಮ

ಬೆಳಗ್ಗೆ ಶಾಂತಿ ಯಾತ್ರೆ ಮಹಾಗಣಪತಿ ಮಂದಿರದಿಂದ ಹೊರಟು ಹುಬ್ಬಳ್ಳಿ ರಸ್ತೆ, ಕಲಾಲ ಓಣಿ, ಯಲ್ಲಾಪುರ ರಸ್ತೆ, ಶಿವಾಜಿ ಸರ್ಕಲ್, ನಂದೀಶ್ವರ ನಗರದಲ್ಲಿರುವ ಓಂ ಶಾಂತಿ ಭವನದ ಉದ್ಘಾಟನೆ ಕಾರ್ಯಕ್ರಮ ನಂತರ ರೋಟರಿ ಶಾಲೆ ಮಾರ್ಗವಾಗಿ ಮಹಾಗಣಪತಿ ಮಂದಿರದಲ್ಲಿ ಸಭಾ ಕಾರ್ಯಕ್ರಮ ಜರುಗುವುದು.

ಕಿರುಸುದ್ದಿ

ಎಸ್‌ಎಸ್‌ಪಿಎನ್ ಶಾಲೆ: ಶೇ. 99ರಷ್ಟು ಫಲಿತಾಂಶ



ಬ್ಯಾಡಗಿ: ಪ್ರಸಕ್ತ ವರ್ಷದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಎಸ್‌ಎಸ್‌ಪಿಎನ್ ಶಿಕ್ಷಣ ಸಂಸ್ಥೆ ಪ್ರೌಢಶಾಲೆಯು ಶೇ. 99ರಷ್ಟು ಫಲಿತಾಂಶ ಪಡೆದಿದೆ. ಪರೀಕ್ಷೆ ಎದುರಿಸಿದ 44 ವಿದ್ಯಾರ್ಥಿಗಳಲ್ಲಿ 43 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅತ್ಯುನ್ನತ ಶ್ರೇಣಿಯಲ್ಲಿ 5 ವಿದ್ಯಾರ್ಥಿಗಳು.

ಪ್ರಥಮ ಶ್ರೇಣಿಯಲ್ಲಿ 20 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಶ್ರೇಣಿಯಲ್ಲಿ 13 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.625 ಅಂಕಕ್ಕೆ ಒಟ್ಟು 598 ಅಂಕ ಶೇ.95.68ರಷ್ಟು ಪಡೆದು ವಿದ್ಯಾರ್ಥಿನಿ ಭಾಗ್ಯ ಲಕ್ಷ್ಮಣ್ ದಾವಣಗೆರೆ ಇವಳು ಶಾಲೆಗೆ ಪ್ರಥಮ ಶ್ರೇಣಿ ಪಡೆದಿದ್ದಾಳೆ.

ಸಂಜನಾ ಭರಮಣ್ಣ ಸುಣಗಾರ ಇವಳು 625 ಅಂಕಕ್ಕೆ 586 ಅಂಕ ಪಡೆದು ಶೇ.93.76 ರಷ್ಟು ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಚಿನ್ಮಯಿ ಮಹೆಂದ್ರ ಸೊರಟೂರ್ ಇವಳು 625 ಅಂಕಕ್ಕೆ 582 ಅಂಕ ಪಡೆದು ಶೇ. 93.12ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ.

ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆ ಅಧ್ಯಕ್ಷರು ಹಾಗೂ ಶಾಲೆಯ ಗುರುವೃಂದವರು ಅಭಿನಂದಿಸಿದ್ದಾರೆ.

ಎಸೆಸೆಲ್ಸಿ: ಶೇ.100ರಷ್ಟು ಫಲಿತಾಂಶ





ರಾಣೇಬೆನ್ನೂರ: ತಾಲೂಕಿನ ಹರನಗಿರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಪ್ರಸ್ತುತ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವು ಶೇ.100 ರಷ್ಟಾಗಿದ್ದು, ಶಾಲೆಗೆ ಎ ಗ್ರೇಡ್ ಸ್ಥಾನ ದೊರೆತಿದೆ. ಪರೀಕ್ಷೆಗೆ ಒಟ್ಟು 73 ವಿದ್ಯಾರ್ಥಿಗಳು ಹಾಜರಾಗಿದ್ದರು. ಡಿಸ್ಟಿಂಕ್ಷನ್‌ನಲ್ಲಿ 13, ಪ್ರಥಮ ದರ್ಜೆ-48,ದ್ವಿತೀಯ-4, ತೃತೀಯ-5 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಶಿವರಾಜ ಹನುಮಪ್ಪ ಕುದರಿಹಾಳ-604 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ, ಲಕ್ಷ್ಮೀ ರಾಮಪ್ಪ ಕಾಯಕದ-593 ಹಾಗೂ ಸಹನಾ ರಾಮಪ್ಪ ಬೆಳಕೇರಿ-593 ದ್ವಿತೀಯ ಸ್ಥಾನ. ಹೊನ್ನೇಶ ರಾಘವೇಂದ್ರ ತೋಪಿನ-589 ತೃತೀಯ ಸ್ಥಾನ ಪಡೆದಿದ್ದಾರೆ.

ಪೂಜಾ ನಿಂಗಪ್ಪ ಹೊನ್ನತ್ತಿ-575, ಶಿವಕುಮಾರ ಕುಪ್ಪೇಲೂರ-569, ವಿನಾಯಕ ಹನುಮಪ್ಪ ಗುಡಿಯವರ-568, ಸವಿತಾ ಬಿಷ್ಟಣ್ಣನವರ-560, ಹಿಮಾಶ್ರೀ ಪ್ರಕಾಶ ಜ್ಯೋತಿ-549, ಚೈತ್ರಾ ಬರಮಪ್ಪ ಕಂಬಳಿ-547, ವೀಣ ಕರೇಗೌಡ್ರ-545 ಅಂಕಗಳನ್ನು ಪಡೆದು ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ಸಾಧನೆಗೈದ ಎಲ್ಲ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯೋಪಾಧ್ಯಾಯ ರುದ್ರಪ್ಪ ಭಜಂತ್ರಿ ಹಾಗೂ ಸಹ ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ ಜ್ಯೋತಿ ಹಾಗೂ ಉಪಾಧ್ಯಕ್ಷರು ಮತ್ತು ಗ್ರಾಮದ ಗಣ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ



ಸವಣೂರ: ಯಲವಿಗಿ ಗ್ರಾಮದ ಜಗದ್ಗುರು ಗಂಗಾಧರ ರಾಜೇಂದ್ರ ಪ್ರೌಢಶಾಲೆ ಶೇ.100ಕ್ಕೆ 100ರಷ್ಟು ಫಲಿತಾಂಶ ಪಡೆದುಕೊಂಡಿದೆ.

ಪಾರ್ವತಿ ಹಾವೇರಿ 553 (ಶೇ. 88.48) ಅಂಕ ಪಡೆದು ಶಾಲೆಗೆ ಪ್ರಥಮ, ಸಿಮ್ರಾನ ಲಷ್ಕರ 536 (ಶೆ.85.76) ದ್ವಿತೀಯ ಹಾಗೂ ಕವಿತಾ ಹಳೇಬಂಕಾಪುರ 521 (ಶೆ. 83.36) ತೃತೀಯ ಸ್ಥಾನ ಪಡೆದುಕೊಂಡು ಶಾಲೆಗೆ ಕೀರ್ತಿ ಹೆಚ್ಚಿಸಿದ್ದಾರೆ.



ಶಿಗ್ಗಾವಿ: ಪಟ್ಟಣದ ಕಸಾಪ ತಾಲೂಕಾ ಅಧ್ಯಕ್ಷ ನಾಗಪ್ಪ ಬೆಂತೂರ ಅವರ ನಿವಾಸದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾವೇರಿ, ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತ ಸಮೀತಿ ಹಾವೇರಿ ಇವರ ಆಶ್ರಯದಲ್ಲಿ ಹಮ್ಮಿಕೊಂಡ 'ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಲಿಂಗಯ್ಯ ಹಿರೇಮಠ ಮಾತನಾಡಿದರು. ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ.ಡಿ.ಯತ್ನಳ್ಳಿ, ಕಸಾಪ ಅಧ್ಯಕ್ಷ ನಾಗಪ್ಪ ಬೆಂತೂರ, ಸಿ.ವಿ.ಮತ್ತಿಗಟ್ಟಿ, ಅರುಣ್ ಹುಡೇಗೌಡ್ರ, ಅಶೋಕ ಕಾಳೆ, ಚಂದ್ರಪ್ಪ ಸೊಬಟಿ, ರಮೇಶ ಹರಿಜನ ಇದ್ದರು.

ಉಜ್ವಲ ಭವಿಷ್ಯಕ್ಕಾಗಿ ಸಾಧನೆ ನಿರಂತರವಾಗಿರಲಿ

ಹಾವೇರಿ: ಸಾಧನೆ ಹಿಂದೆ ಸಾಕಷ್ಟು ಕಷ್ಟಗಳು ಹಾಗೂ ಸವಾಲುಗಳಿರುತ್ತವೆ. ಎಲ್ಲವನ್ನು ಎದುರಿಸಿ ಶ್ರದ್ದೆಯಿಂದ ಅಧ್ಯಯನ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಗೌರಿಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಗೌರಿಮಠದ ಮಲ್ಲಿಕಾರ್ಜುನ ಆಂಗ್ಲ ಮಾಧ್ಯಮ ಶಾಲೆಯ ಅಧಿಕ ಅಂಕ ಪಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಸಾಧನೆ ನಿಂತ ನೀರಾಗದೆ ನಿರಂತರವಾಗಿರಬೇಕು. ಸಾಧನೆಗೆ ಶಿಕ್ಷಕರು, ಪಾಲಕರು ಮತ್ತು ವಿದ್ಯಾರ್ಥಿಗಳು ಹೀಗೆ ಎಲ್ಲರ ಶ್ರಮ, ಪ್ರೋತ್ಸಾಹ ಇರಬೇಕು ಎಂದರು.ಮುಖ್ಯೋಪಾಧ್ಯಾಯ ಶಂಕರ ಅಕ್ಕಸಾಲಿ ಮಾತನಾಡಿ, ಮಕ್ಕಳು ಆಲಸ್ಯ ಬಿಟ್ಟು ಶ್ರದ್ದೆಯಿಂದ ಅಭ್ಯಾಸ ಮಾಡಿ ಉತ್ತಮ ಅಂಕ ಪಡೆದು ಪಾಲಕರಿಗೆ ಕೀರ್ತಿ ತರಬೇಕು. ನಮ್ಮ ಶಾಲೆಯ ಮಕ್ಕಳು ಉತ್ತಮ ಅಂಕ ಪಡೆದು ನೂರಕ್ಕೆ ನೂರು ಫಲಿತಾಂಶ ಬಂದಿರುವುದು ಸಂತಸ ತಂದಿದೆ ಎಂದರು. ಅಧಿಕ ಅಂಕ ಪಡೆದ ದಾನೇಶ್ವರಿ ಹಿರೇಮಠ, ಭವಾನಿ ಹಿರೇಮಠ, ಗೌಸಿಯಾ ಬೂದಗಟ್ಟಿ, ಸೂಫಿಯಾ ತಿಮ್ಮಾಪುರ ಅವರನ್ನು ಶ್ರೀಗಳು ಸನ್ಮಾನಿಸಿದರು.ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿಗಳು ಮಾತನಾಡಿ, ಶ್ರೀಗಳ ಆಶೀರ್ವಾದ, ಶಿಕ್ಷಕರ ಪ್ರೋತ್ಸಾಹ, ಸಹಕಾರದಿಂದ ಉತ್ತಮ ಅಂಕ ಪಡೆಯಲು ಸಾಧ್ಯವಾಗಿದೆ ಎಂದರು. ಚುಟುಕು ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಗಂಗಯ್ಯ ಕುಲಕರ್ಣಿ ಇದ್ದರು. ಶಿಕ್ಷಕ ಮಾಂತೇಶ ಸಂಗೂರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಹಾವೇರಿ: ನಗರದ ಗೌರಿಮಠದ ಮಲ್ಲಿಕಾರ್ಜುನ ಆಂಗ್ಲ ಮಾಧ್ಯಮ ಶಾಲೆಯ ಅಧಿಕ ಅಂಕ ಪಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಗೌರಿಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಶಾಸಕ ರುದ್ರಪ್ಪ ಲಮಾಣಿ ಹೇಳಿಕೆ

ಹೊಸ ಮತದಾರರ ನೋಂದಣಿ ಮಾಡಿಸಿ

ಹಾವೇರಿ: ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಹಾವೇರಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಬಿಎಲ್‌ಎ-2 ಅವರಿಗೆ ಎಸ್ ಐಆರ್ ಕಾರ್ಯಾಗಾರವನ್ನು ಭಾನುವಾರ ನಗರದ ಜಿಲ್ಲಾ ಸರ್ಕಾರಿ ನೌಕರರ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನಸಭೆ ಉಪಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಮಾತನಾಡಿ, ಪಕ್ಷ ಗೆಲುವು ಸಾಧಿಸುವಲ್ಲಿ ಬಿಎಲ್ ಓಗಳ ಪಾತ್ರ ಪ್ರಮುಖವಾಗಿರುತ್ತದೆ. ಮತದಾನ ಪಟ್ಟಿಯಲ್ಲಿ ಯಾರ ಹೆಸರು ಬಂದಿದೆ, ಯಾರ ಹೆಸರು ಬಂದಿಲ್ಲ ಎಂಬುದನ್ನು ಪರಿಶೀಲಿಸಬೇಕು. ಜೊತೆಗೆ ಹೊಸದಾಗಿ ಮತದಾರರ ನೋಂದಣಿ ಮಾಡಿಸಬೇಕು. ಮತದಾನದ ವೇಳೆಯಲ್ಲಿ ತಮ್ಮ ವ್ಯಾಪ್ತಿಯ ಮತದಾರರನ್ನು ಕರೆಸಿ ಮತದಾನ ಮಾಡಿಸಿಬೇಕು ಹಾಗೂ ಮತದಾನದ ಬಗ್ಗೆ ಅವರಿಗೆ ಅರಿವು ಮೂಡಿಸಬೇಕು. ಮತದಾನ ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ಮೋಹನ ಲಿಂಬಿಕಾಯಿ ಅವರು ಪಶ್ಚಿಮ ಪದವೀಧರರಕ್ಷೇತ್ರದಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಪದವೀಧರ ಕ್ಷೇತ್ರದ ಮತದಾನಕ್ಕೆ ನೋಂದಣಿ ಮಾಡಿಸಲು ಕಾಲಾವಕಾಶವಿದ್ದು, ದಯವಿಟ್ಟು ಪದವೀಧರರು ಹೆಚ್ಚಿನ ಸಂಖ್ಯೆಯಲ್ಲಿ ದ್ವಿ ಪ್ರತಿಯಲ್ಲಿ ದಾಖಲೆಯನ್ನು ಕೊಟ್ಟು ನೋಂದಣಿಯನ್ನು ಮಾಡಿಸಬೇಕು ಎಂದರು. ಎಸ್‌ಐಆರ್ ಕಾರ್ಯಾಗಾರದ ಉಪನ್ಯಾಸಕ ವಿನೋದಕುಮಾರ್ ಹಾಗೂ ಆದಂಖಾನ್ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಜಿಲ್ಲಾಧ್ಯಕ್ಷ ಎಂ.ಎಂ.ಹಿರೇಮಠ, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ಮುಖಂಡರಾದ ಎಂ.ಎಂ. ಮೈದೂರ, ಪ್ರಭುಗೌಡ್ರ ಭೀಷ್ಟನಗೌಡ್ರ, ಶಂಕರ ಮೆಹರವಾಡೆ ಸೇರಿದಂತೆ ಬಿಎಲ್‌ಎಗಳು ಇದ್ದರು.



> **ಪಕ್ಷದ ಯೋಜನೆಗಳು ಹಾಗೂ ಅಭಿವೃದ್ಧಿಗಳನ್ನು ಬಿಎಲ್ ಓಗಳ ತಮ್ಮ ಮತದಾರರಿಗೆ ತಿಳಿಸಿಕೊಡಬೇಕು. ಮತದಾರರ ಪಟ್ಟಿಯಿಂದ ಯಾರ ಹೆಸರು ರದ್ದಾಗಿದೆ, ವರ್ಗಾವಣೆಯಾಗಿದೆ ಹಾಗೂ ಹೊಸದಾಗಿ ಸೇರಿಸಿದ್ದಾರೆ ಎಂಬ ಬಗ್ಗೆ ಕೂಲಂಕುಶವಾಗಿ ತನಿಖೆಯನ್ನು ಮಾಡಬೇಕು.**
>
> ■ **ಸಂಜೀವಕುಮಾರ ನೀರಲಗಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ**

ಎಸ್ಸೆಸ್ಸೆಲ್ಸಿ: ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಹಾವೇರಿ: ಒಂದು ದೇವಸ್ಥಾನ ಕಟ್ಟುವುದಕ್ಕಿಂತ ಒಂದು ಶಾಲೆಯನ್ನು ಕಟ್ಟಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಇಂದಿನ ಅವಶ್ಯಕತೆ ಎಂದು ವಿಧಾನಸಭೆ ಉಪ ಸಭಾಧ್ಯಕ್ಷ, ಶಾಸಕ ರುದ್ರಪ್ಪ ಮಾನಪ್ಪ ಲಮಾಣಿ ಹೇಳಿದರು.

ನಗರದ ಜಿಲ್ಲಾ ಪ್ರವಾಸಿ ಮಂದಿರದಲ್ಲಿ ಶನಿವಾರಎಸ್ಸೆಸ್ಸೆಲ್ಸಿಪರೀಕ್ಷೆಯಲ್ಲಿಅತೀಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಸನ್ಮಾನಿಸಿ ಮಾತನಾಡಿದ ಅವರು, ಜಿಲ್ಲೆಯು ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿ ರಾಜ್ಯಕ್ಕೆ 7ನೇ ಸ್ಥಾನ ಪಡೆದುಕೊಂಡಿದೆ. ಇದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಅಭ್ಯಾಸದೊಂದಿಗೆ ಧೈರ್ಯದಿಂದ ಪರೀಕ್ಷೆ ಎದುರಿಸಿ ಉತ್ತಮ ಅಂಕಗಳನ್ನು ಪಡೆದುಕೊಂಡಿರುವ ಹಿನ್ನಲೆ ಈ ಸಾಧನೆ ಸಾಧ್ಯವಾಗಿದೆ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉಡುಪಿ, ಮಂಗಳೂರು ಹಾಗೂ ಕೆಲವು ಜಿಲ್ಲೆಗಳು ಉತ್ತಮ ಫಲಿತಾಂಶ ಪಡೆದುಕೊಂಡಿವೆ. ಅಂತಹ ಜಿಲ್ಲೆಗಳೊಂದಿಗೆ ಪೈಪೋಟಿ ಮಾಡಿ ಇಂದು ನಮ್ಮ ಜಿಲ್ಲೆ ಫಲಿತಾಂಶದಲ್ಲಿ ಸುಧಾರಣೆ ಕಂಡು ರಾಜ್ಯಕ್ಕೆ ನಮ್ಮ ಕ್ಷೇತ್ರ 7ನೇ ಸ್ಥಾನ ಪಡೆದುಕೊಂಡಿದೆ. ಈ ಬಾರಿ ಜಿಲ್ಲೆಯು ಶೇ.96ರಷ್ಟು ಸಾಧನೆ ಮಾಡಿದ್ದೇವೆ, ಇದು ಬಹಳ ದೊಡ್ಡ ಸಾಧನೆಯಾಗಿದೆ. ಜಿಲ್ಲೆಯ 58 ಶಾಲೆಗಳು 100ರಷ್ಟು, 17 ಶಾಲೆಗಳು ಶೇ.90ರಿಂದ 99ರಷ್ಟು, ಹಾಗೂ 7 ಶಾಲೆಗಳು ಶೇ. 80 ರಿಂದ 89 ರಷ್ಟು, ಹಾಗೂ ಎರಡು ಶಾಲೆಗಳು ಶೇ.70 ರಿಂದ 79ರಷ್ಟು ಫಲಿತಾಂಶ ಮಾಡಿವೆ.

ಗ್ರಾಮೀಣ ಪ್ರದೇಶದಲ್ಲಿ ಪ್ರತಿಶತ 97.45 ರಷ್ಟು ಫಲಿತಾಂಶ ಮಾಡಿದರೆ ನಗರ ಪ್ರದೇಶ 97.35 ರಷ್ಟು ಫಲಿತಾಂಶ ಮಾಡಿವೆ. ಈ ಫಲಿತಾಂಶ ಸುಧಾರಣೆಗೆ ಶ್ರಮಿಸಿದ ವಿದ್ಯಾರ್ಥಿಗಳು, ಶಾಲೆಯ ಮುಖ್ಯೋಪಾಧ್ಯಾಯರು ಎಸ್ ಡಿಎಂಸಿ ಅಧ್ಯಕ್ಷರು, ಸದ್ಯಸರು ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಹಾಗೂ ಶಿಕ್ಷಕರಿಗೆ ಅಭಿನಂದನೆಗಳನ್ನು ಅರ್ಪಿಸಿದರು. ಈ ವೇಳೆ ಶಾಸಕ ರುದ್ರಪ್ಪ ಲಮಾಣಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳೊಂದಿಗೆ ಕೇಕ್ ಕತ್ತರಿಸಿ ಸಂತಸ ಹಂಚಿಕೊಂಡರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿಗೌಡ್ರ, ತಾಲೂಕ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ್, ಬಿಇಒ ಎಂ.ಎಚ್. ಪಾಟೀಲ, ಸವಣೂರ ತಾಲೂಕಿನ ಬಿಇಒ ಬಾರ್ಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿದ ಶಾಸಕ

ಶಿಗ್ಗಾವಿ : ತಾಲೂಕಿನಲ್ಲಿ ಸುಮಾರು 20 ಸಾವಿರ ಕುಟುಂಬದ ಸದಸ್ಯರಿಗೆ ಹಕ್ಕು ಪತ್ರ ನೀಡುವ ಸಂಕಲ್ಪವಿದೆ ಇಲ್ಲಿಯವರೆಗೂ 8 ಸಾವಿರ ಹಕ್ಕು ಪತ್ರ ನೀಡಲಾಗಿದೆ ಎಂದು ಶಾಸಕ ಯಾಸೀರ ಅಹ್ಮದಖಾನ ಪಠಾಣ ಹೇಳಿದರು. ಪಟ್ಟಣದ ಮೌಲಾಲಿ ನಗರದಲ್ಲಿನಡೆದ 16, 17, 18 ವಾರ್ಡಿನ ನಿವಾಸಿಗಳಿಗೆ ಹಕ್ಕು ಪತ್ರ, ಇ-ಆಸ್ತಿ ಹಾಗೂ ಹೈ ಮಾಸ್ಕ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಟ್ಟಣ ಮತ್ತು ಗ್ರಾಮಗಳಲ್ಲಿ ಹಕ್ಕು ಪತ್ರ ನೀಡುವ ವಿಷಯವಾಗಿ ಹಣ ವಸೂಲಿ ಮಾಡುವ ಅಧಿಕಾರಿ ಹಾಗೂ ಸಿಬ್ಬಂದಿ ಬಗ್ಗೆ ನನ್ನ ಗಮನಕ್ಕೆ ಬಂದರೆ ನಾನು ನಿದ್ರಾಕ್ಷೀಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ. ಕುಡಿಯುವ ನೀರಿನ ಯೋಜನೆಗಾಗಿ ಒಟ್ಟು 350 ಕೋಟಿ ಹಣ ಮಂಜೂರಾಗಿದ್ದು ಅದರಲ್ಲಿ ಸತತವಾಗಿ 24 ಗಂಟೆ ಶಾಶ್ವತವಾಗಿ ಕುಡಿಯುವ ನೀರಿನ ವ್ಯವಸ್ಥೆಗಾಗಿ 109 ಕೋಟಿ ರೂ.ಹಣ ಮೀಸಲಿಡಲಾಗಿದೆ ಎಂದರು. ಮಾಜಿ ಪುರಸಭೆ ಅಧ್ಯಕ್ಷ ಅಬ್ದುಲ್ ಕರೀಂ ಮೊಗಲಲ್ಲಿ ಮಾತನಾಡಿದರು. ಗುಡ್ಡಪ್ಪ ಜಲದಿ, ಗೌಸಖಾನ ಮುನಶಿ, ಮುನ್ನಾ ಲಕ್ಷ್ಮೇಶ್ವರ, ತಹಶೀಲ್ದಾರ್ ಮುಸ್ತಾಕ ಅಹ್ಮದ, ವಸಂತಾ ಬಾಗೂರ, ನಾಗರಾಜ ಹಾವೇರಿ, ಮಲ್ಲಮ್ಮ ಸೋಮನಕಟ್ಟಿ, ಚಂದ್ರು ಕೊಡ್ಲಿವಾಡ, ಖಾಜಾಮೊಹಿದ್ದೀನ ಚೂಡಿಗಾರ, ಉಪಸ್ಥಿತರಿದ್ದರು.



ಮಹಿಳಾ ಮೀಸಲಾತಿಗೆ ಆಗ್ರಹಿಸಿ ಪ್ರತಿಭಟನೆ

ಹಾವೇರಿ : ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಶೀಘ್ರ ಜಾರಿಗೆ ಆಗ್ರಹಿಸಿ ಹಾವೇರಿ ಜಿಲ್ಲಾ ಮಹಿಳಾ ಕಾಂಗ್ರೆಸ್‌ನ ಮುಖಂಡರು ಹಾಗೂ ಪದಾಧಿಕಾರಿಗಳು ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜ್ಯ ಮಹಿಳಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರೇಮಾ ಪಾಟೀಲ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ಸ್ಪಷ್ಟ ಬಹುಮತ ಇರದಿದ್ದರೂ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಹಾಗೂ ಮಹಿಳಾ ಮೀಸಲಾತಿ ವಿಧೇಯಕವನ್ನು ಪಾಸ್ ಮಾಡಲು ಹೊರಟು ಸೋಲನ್ನು ಅನುಭವಿಸಿದೆ. ಬಿಜೆಪಿಯವರು ಮಹಿಳಾ ವಿರೋಧಿ ಇದ್ದಾರೆ. ಕಾಂಗ್ರೆಸ್‌ನವರು ಹಾಗೂ ಇಂಡಿಯಾ ಒಕ್ಕೂಟದ ಮಿತ್ರ ಪಕ್ಷಗಳು ಸರ್ಕಾರಕ್ಕೆ ಬೆಂಬಲ ಸೂಚಿಸಲಿಲ್ಲ ಎಂದು ಸುಖಾಸುಮ್ಮನೇ ಕಾಂಗ್ರೆಸ್‌ನ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದಕ್ಷಿಣ ಭಾರತದಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ಮಹಿಳೆಯರ ಮತ ಸೆಳೆಯಲು ಈ ರೀತಿಯ ಹುನ್ನಾರ ನಡೆಸಿದ್ದಾರೆ. ಮಹಿಳಾ ಮೀಸಲು ಅಂಗೀಕಾರಕ್ಕೆ ಕಾಂಗ್ರೆಸ್‌ನವರು ಸಹಮತ ವ್ಯಕ್ತಪಡಿಸುತ್ತಿಲ್ಲ ಎಂದು ಜನಸಾಮಾನ್ಯರನ್ನು ತಪ್ಪು ದಾರಿಗೆ ಕರೆದೊಯ್ಯುವ ಕುತಂತ್ರ ಕೇಂದ್ರ ಸರ್ಕಾರದ್ದಾಗಿದೆ. ಮಾಜಿ ಪ್ರಧಾನಿ ರಾಜೀವಗಾಂಧಿ ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಮೀಸಲು ಕೊಟ್ಟಿದ್ದರು. ಆದರೆ ಸ್ಪಷ್ಟ ಬಹುಮತ ಇರದ ಕಾರಣ ಈ ಮಸೂದೆ ನನೆಗುದಿಗೆ ಬಿದ್ದಿತ್ತು. ಕಾಂಗ್ರೆಸ್ ಪಕ್ಷವು ಮಹಿಳಾ ಮೀಸಲಾತಿ ಪರವಾಗಿದ್ದು, ಶೀಘ್ರವೇ ಶೇ.33ರಷ್ಟು ಮೀಸಲು ಮಸೂದೆಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷೆ ಶಾಂತಕ್ಕ ಶಿರೂರ, ವಸಂತಾ ಬಾಗೂರ, ಗೀತಾ ಪೂಜಾರ, ಗೀತಾ ಪ್ರಕಾಶ, ಮಮತಾ ಜಾಬೀನ್, ಶಿಲ್ಪಾ ಬಡೆಮ್ಮನವರ, ರತ್ನಾ ಶಿಡಗನಾಳ, ಪಾರ್ವತಿ ಹರಕುಣಿ, ರಾಧಾ ಸವಣೂರ, ಅನಸೂಯಾ ಬಳಗೇರ, ಜಯಶ್ರೀ ಶಿವಪುರ, ವೈಶಾಲಿ ಪೂಜಾರ, ಸಂಜನಾ ಕಲಾಲ, ಶಶಿಕಲಾ ಆರಿಕಟ್ಟಿ, ಶೋಭಾ ಭಜಂತ್ರಿ, ಬಸಮ್ಮ ಹಳ್ಳಿಕೇರಿ ಸೇರಿದಂತೆ ಇತರರು ಇದ್ದರು.



ಬೇಸಿಗೆ ಶಿಬಿರಗಳು ಸಾಮಾಜಿಕ ಕೌಶಲ್ಯ ಬೆಳೆಸುವ ವೇದಿಕೆ

ಶಿಗ್ಗಾವಿ: ಆಧುನಿಕ ಯುಗದಲ್ಲಿ ನಾವುಗಳುನಮ್ಮಮಕ್ಕಳನ್ನಮೊಬೈಲ್ ಗೀಳಿಗೆ ಕಟ್ಟಿಹಾಕಿರುವುದರಿಂದ ಮಾನಸಿಕವಾಗಿ ಬಹಳಷ್ಟು ಸಮಸ್ಯೆಗಳನ್ನುಎದುರಿಸಬೇಕಾಗಿದೆ, ಅದನ್ನು ದೂರ ಮಾಡಲು ಬೇಸಿಗೆ ಶಿಬಿರಗಳು ಬಹಳಷ್ಟು ಪರಿಣಾಮಕಾರಿ ಶಿಬಿರಗಳಾಗಿದ್ದು, ಆತ್ಮವಿಶ್ವಾಸ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವ ಸುರಕ್ಷಿತ ವೇದಿಕೆಯಾಗಿವೆ ಎಂದು ಹಾವೇರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಯಶೋದಾ ವಂಟಗೋಡಿ ಹೇಳಿದರು.



ಪಟ್ಟಣದ ತಾಲೂಕಾ ಕ್ರೀಡಾಂಗಣದಲ್ಲಿ ಭಾರತ ಸೇವಾ ಸಂಸ್ಥೆ ವತಿಯಿಂದ ನಡೆಯುತ್ತಿರುವ ಉಚಿತ ಬೇಸಿಗೆ ಶಿಬಿರ ಕಾರ್ಯಕ್ರಮಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮೊಬೈಲ್ ಬಳಕೆ ಮತ್ತು ಕೆಟ್ಟ ಚಟಗಳು ಮಕ್ಕಳ ಬೆಳವಣಿಗೆಯ ಮೇಲೆ ದೊಡ್ಡ ಮಟ್ಟದ ಪರಿಣಾಮ ಬೀರುತ್ತವೆ. ಇದು ದೇಹ, ಮನಸ್ಸು, ವರ್ತನೆ ಮೂರು ಕ್ಷೇತ್ರಗಳನ್ನೂ ಸ್ಪರ್ಶಿಸುತ್ತದೆ. ಇದೇ ರೀತಿ ಮುಂದುವರೆದರೆ ದೈಹಿಕ ಮತ್ತು ಮಾನಸಿಕವಾಗಿ ಬಹಳಷ್ಟು ಸಮಸ್ಯೆಗಳನ್ನು ನಮ್ಮ ಮಕ್ಕಳು ಎದುರಿಸಬೇಕಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಉಪ ಪೊಲೀಸ್ ವರಿಷ್ಠಾಧಿಕಾರಿ ಗುರುಶಾಂತಪ್ಪ ಕೆ.ವಿ, ದೈಹಿಕ ಶಿಕ್ಷಕರುಗಳಾದ ಬಸವರಾಜ ಹೊಸಪೇಟೆ, ಭರತ ಕಳ್ಳಿಮನಿ, ಸಾಧಿಕ ಸವಣೂರ, ಮಂಜುನಾಥ ಮಹಾಂತೇಶ, ನವೀನ ಸಾಸನೂರ, ರಮೇಶ್ ಸಾತಣ್ಣವರ, ರವಿ ಮಡಿವಾಳರ, ವಿಶ್ವನಾಥ ಗಾಣಿಗೇರ, ಚಂದ್ರು ಜಕ್ಕಣ್ಣವರ ಸೇರಿದಂತೆ ಶಿಭಿರಾರ್ಥಿಗಳು ಇದ್ದರು.

ಕ್ರೀಡಾಂಗಣ ಅಭಿವೃದ್ಧಿಗೆ ಒತ್ತಾಯ

ಬ್ಯಾಡಗಿ: ಪಟ್ಟಣದಲ್ಲಿರುವ ತಾಲೂಕಾ ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಿ ಕೊಡುವಂತೆ ಆಗ್ರಹಿಸಿ ನಿವೃತ್ತ ಸೈನಿಕ ಮಲ್ಲೇಶಣ್ಣ ಚಿಕ್ಕಣ್ಣನವರ ಜಿಲ್ಲಾಧಿಕಾರಿ ಮಹಾಂತೇಶ ದಾನಮ್ಮನವರ ಅವರಿಗೆ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು ಕ್ರೀಡಾಂಗಣದಲ್ಲಿರುವ ರಂಗಮಂದಿರವು ಹಲವು ವರ್ಷಗಳಿಂದ ಸುಣ್ಣ ಬಣ್ಣ ಕಾಣದೇ ಮಾಸಿ ಹೋಗಿದೆ. ಈ ಕ್ರೀಡಾಂಗಣದಲ್ಲಿ ಕ್ರೀಡೆಗಳ ಜೊತೆಗೆ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ಸೇರಿದಂತೆ ಇನ್ನಿತರೇ ಅನೇಕ ಕಾರ್ಯಕ್ರಮಗಳು ದಿನ ನಿತ್ಯ ನಡೆಯುತ್ತಲಿವೆ. ಕಾರ್ಯಕ್ರಮವನ್ನು ನೋಡಲು ಬರುವ ಸಾರ್ವಜನಿಕರಿಗೆ ಕ್ರೀಡಾಂಗಣದಲ್ಲಿರುವ ಮಾಸಿ ಹೋಗಿರುವ ರಂಗಮಂದಿರವು ನೋಡುಗರ ಮನಸ್ಸಿಗೆ ಘಾಸಿ ತರುವಂತಿದೆ. ಈ ರಂಗ ಮಂದಿರಕ್ಕೆ ಸುಣ್ಣ ಬಣ್ಣ ಬಳಿದು ಕ್ರೀಡಾಪಟುಗಳಿಗೆ ಉತ್ತಮ ವಾತಾವರಣ ನಿರ್ಮಾಣವಾಗುವಂತಾಗಬೇಕೆಂದರು.

ಕ್ರೀಡೆಗಳು ಯುವಕ ಯುವತಿಯರಲ್ಲಿ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಬಹಳ ಮುಖ್ಯ. ಕ್ರೀಡಾಂಗಣದ ಅಭಿವೃದ್ಧಿಯಿಂದ ಯುವ ಪ್ರತಿಭೆಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ ಎಂದರು.

ಕ್ರೀಡಾಂಗಣದಲ್ಲಿರುವ ರಂಗಮಂದಿರದ ಬಲಭಾಗದಲ್ಲಿ ಮಕ್ಕಳ ಮನೋರಂಜನೆಗಾಗಿ ಅಳವಡಿಸಲಾಗಿರುವ ಜೋಕಾಲಿಗಳನ್ನು ಬೇರೆಡೆ ಸ್ಥಳಾಂತರಿಸಬೇಕು. ಏಕೆಂದರೆ ಯಾವುದೇ ಕಾರ್ಯಕ್ರಮ ನಡೆಯುವಾಗ ಮುಖ್ಯ ಅತಿಥಿಗಳು ಬಂದಾಗ ಅವರ ವಾಹನಗಳಿಗೆ ನಿಲ್ಲಲು ಸ್ಥಳದ ತೊಂದರೆಯಾಗುತ್ತಲಿದೆ. ಆದ್ದರಿಂದ ಮಕ್ಕಳ ಮನೋರಂಜನೆಗಾಗಿ ಅಳವಡಿಸಿರುವ ಜೋಕಾಲಿಗಳನ್ನು ಕ್ರೀಡಾಂಗಣದ ಬೇರೊಂದು ಸ್ಥಳದಲ್ಲಿ ಜೋಡಿಸಿ ಮಕ್ಕಳಿಗೆ ಮನೋರಂಜನೆ ಒದಗಿಸುವ ಜೊತೆಗೆ ಕ್ರೀಡಾಭಿಮಾನಿಗಳಿಗೆ ನಿರಾಸೆ ಮೂಡದ ಹಾಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವಂತೆ ಕೋರಿದ್ದಾರೆ.

ಮಹನೀಯರ ತತ್ವಾದರ್ಶ ಮೈಗೂಡಿಸಿಕೊಳ್ಳಿ

ಬ್ಯಾಡಗಿ: ರಾಜನಾಗಿ, ಋಷಿಯಾಗಿ ಭಗೀರಥರು ಸಮಾಜಕ್ಕೆ ಒಂದು ದೊಡ್ಡ ಸಂದೇಶವನ್ನು ನೀಡಿದ್ದಾರೆ. ಅವರು ತಮ್ಮ ಛಲ ಹಾಗೂ ಪರಿಶ್ರಮದ ಮೂಲಕ ಗಂಗೆಯನ್ನೇ ಧರೆಗೆ ತಂದವರು. ಭಗೀರಥರ ತಪಸ್ಸು ಹಾಗೂ ಪರಿಶ್ರಮದ ಮನೋಭಾವವನ್ನು ನಮ್ಮ ದುಡಿಮೆ ಮತ್ತು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ರಾಜ್ಯ ಗ್ಯಾರಂಟಿ ಉಪಾಧ್ಯಕ್ಷ ಎಸ್.ಆರ್.ಪಾಟೀಲ್ ಹೇಳಿದರು

ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಶ್ರಯದಲ್ಲಿ ನಡೆದ ಭಗೀರಥ ಜಯಂತಿಯನ್ನು ಉದ್ಘಾಟಿಸಿ, ಭಗೀರಥರ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಸಮಾಜದಲ್ಲಿರುವ ಅಸಮಾನತೆ, ಅಸ್ಪಶ್ಯತೆ ಹಾಗೂ ಮೌಢ್ಯಗಳನ್ನು ಹೋಗಲಾಡಿಸಲು ಶ್ರಮಿಸಿ ಸಮಾಜಕ್ಕೆ ಕೊಡುಗೆ ನೀಡಿದ ದಾರ್ಶನಿಕರ ಕುರಿತು ಯುವ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಸರ್ಕಾರವು ಜಯಂತಿ ಕಾರ್ಯಕ್ರಮವನ್ನು ಆಯೋಜಿಸಿಕೊಂಡು ಬಂದಿದ್ದು, ಯುವ ಪೀಳಿಗೆಯು ಮಹನೀಯರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಜಯಂತಿಗಳು ಅರ್ಥಪೂರ್ಣ ಗೊಳ್ಳುತ್ತದೆ ಎಂದರು.

ತಾಲೂಕು ಅಧ್ಯಕ್ಷ ಮಂಜುನಾಥ ಉಪ್ಪಾರ ಮಾತನಾಡಿ, ಯಾವುದೇ ಸಮುದಾಯದ ಪ್ರಗತಿ ಹೊಂದಬೇಕಾದರೆ ಶಿಕ್ಷಣ ಸಂಘಟನೆ ಹೋರಾಟ ಅತ್ಯವಶ್ಯಕ ಸಮಾಜದ ಪ್ರತಿಯೊಂದು ಮಕ್ಕಳಿಗೂ ಉತ್ತಮ ಶಿಕ್ಷಣ ನೀಡಬೇಕು ಉತ್ತಮ ಸಂಸ್ಕಾರದ ಕಲಿಸಬೇಕು ಸಮುದಾಯದ ಜನರು ಮುಖ್ಯವಾಹಿನಿಗೆ ಬಂದು ಸಾಮಾಜಿಕವಾಗಿ ರಾಜಕೀಯವಾಗಿ ಪ್ರಗತಿ ಹೊಂದಲು ಶ್ರಮಿಸಬೇಕು ಯುವಕರು ಸಕ್ರಿಯವಾಗಿ ಸಮಾಜ ಕೆಲಸಗಳಲ್ಲಿ ಭಾಗವಹಿಸುವುದರಿಂದ ಮುಂದಿನ ನಾಯಕರಾಗಲು ಸಾಧ್ಯ ಎಂದು ಹೇಳಿದರು.



ತಹಶೀಲ್ದಾರ್ ಚಂದ್ರಶೇಖರ್ ನಾಯ್ಕ ಮಾತನಾಡಿದರು. ಈ ಸಂದರ್ಭದಲ್ಲಿ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಜಿ.ಕೋಟಿ, ತಾಲೂಕು ಆಡಳಿತ ಸಿಬ್ಬಂದಿ, ಉಪ್ಪಾರ ಸಮಾಜ ತಾಲೂಕು ಅಧ್ಯಕ್ಷ ಮಂಜುನಾಥ ಉಪ್ಪಾರ, ಉಪಾಧ್ಯಕ್ಷ ಮಾಲತೇಶ ಉಪ್ಪಾರ, ಶಿವಮೂರ್ತಿ ಉಪ್ಪಾರ, ಸಂಘಟನಾ ಕಾರ್ಯದರ್ಶಿ ವೆಂಕಟೇಶ ಉಪ್ಪಾರ, ಖಜಾಂಚಿ ಚಂದ್ರಶೇಖರ ಆಟದವರ, ಸದಸ್ಯರಾದ ಕೃಷ್ಣಪ್ಪ ಉಪ್ಪಾರ, ವಿಜಯ ಉಪ್ಪಾರ, ರವಿ, ಕೇಶವಮೂರ್ತಿ, ಸಂತೋಷ, ಬಸವರಾಜ ಬಡಗಡ್ಡಿ ಶಿವಣ್ಣ ನಂದೀಶ, ಬಸವರಾಜ ಬಂಕಾಪುರ, ದೇವರಾಜ, ಸುನಿಲ, ಶಿವಣ್ಣ ಜೊತೆಗೆ ಇನ್ನಿತರ ಉಪ್ಪಾರ ಸಮಾಜದ ಮುಖಂಡರು ಸದಸ್ಯರು ಉಪಸ್ಥಿತರಿದ್ದರು.

ಆತುರದ ಉದ್ಘಾಟನೆ ಜನರ ನಿರೀಕ್ಷೆಗೆ ಧಕ್ಕೆ: ಭರತ ಬೊಮ್ಮಾಯಿ

ಶಿಗ್ಗಾವಿ: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ 96.50 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಶಂಕುಸ್ಥಾಪನೆ ಮಾಡಲಾಗಿದ್ದ, ಶಿಗ್ಗಾವಿ ಸಾರ್ವಜನಿಕ ಆಸ್ಪತ್ರೆಯ 100 ಹಾಸಿಗೆಯ ಆಸ್ಪತ್ರೆಯನ್ನ 250 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವ ಮಹತ್ವಾಕಾಂಕ್ಷಿ ಯೋಜನೆಯು ಹಲವು ವರ್ಷಗಳ ವಿಳಂಬದ ನಂತರ ಕಾಂಗ್ರೆಸ್ ಸರ್ಕಾರವು ಈ ಅಪೂರ್ಣ ಕಾಮಗಾರಿಯನ್ನು ಆತುರದಲ್ಲಿ ಉದ್ಘಾಟಿಸಲು ಮುಂದಾಗಿರುವುದು ಅತ್ಯಂತ ವಿಷಾದದ ಸಂಗತಿಯಾಗಿದ್ದು, ಶಿಗ್ಗಾವಿ ಜನತೆಗೆ ಸಂಪೂರ್ಣ ಕಾರ್ಯನಿರ್ವಹಣೆಯಲ್ಲಿರುವ ಆಸ್ಪತ್ರೆ ಬೇಕಿದೆ. ಕೇವಲ ರಾಜಕೀಯ ಪ್ರದರ್ಶನಕ್ಕಾಗಿ ಮಾಡುವ ಉದ್ಘಾಟನೆ ಬೇಕಿಲ್ಲ ಎಂದು ಬಿಜೆಪಿ ಮುಖಂಡ ಭರತ್ ಬೊಮ್ಮಾಯಿ ಆರೋಪಿಸಿದ್ದಾರೆ.



ಪಟ್ಟಣದದಲ್ಲಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 100 ಹಾಸಿಗೆಗಳ ಆಸ್ಪತ್ರೆಯನ್ನು ಆಧುನಿಕ ಆಸ್ಪತ್ರೆಯಾಗಿ ರೂ. 68.85 ಕೋಟಿ ಗುತ್ತಿಗೆ ಮೌಲ್ಯದೊಂದಿಗೆ, ಶಿಗ್ಗಾವಿ ಹಾಗೂ ಸುತ್ತಮುತ್ತಲಿನ ಜನತೆಗೆ ಸಮಗ್ರ ಆರೋಗ್ಯ ಸೇವೆ ಒದಗಿಸುವ ಉದ್ದೇಶ ಹೊಂದಿತ್ತು, ಸುಮಾರು 10,946 ಚದರ ಮೀಟರ್ ವಿಸ್ತೀರ್ಣದ ಈ ಆಸ್ಪತ್ರೆಯಲ್ಲಿ ಐಸಿಯುಗಳು, ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳು, ಡಯಾಲಿಸಿಸ್ ಘಟಕ, ರಕ್ತ ಬ್ಯಾಂಕ್, ವೈದ್ಯರು ಮತ್ತು ಸಿಬ್ಬಂದಿಗೆ ವಸತಿ ವ್ಯವಸ್ಥೆ ಸೇರಿದಂತೆ ಅನೇಕ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿರುವಂತೆ ಯೋಜನೆ ರೂಪಿಸಲಾಗಿತ್ತು, ಆದರೆ ಈಗ ತರಾತುರಿಯಲ್ಲಿ ಉದ್ಘಾಟನೆಗೊಳಿಸುತ್ತಿರುವುದು ಇದು ಸಂಪೂರ್ಣ ಸಿದ್ಧಗೊಂಡ ಆಸ್ಪತ್ರೆಯ ಉದ್ಘಾಟನೆ ಅಲ್ಲ, ಕೇವಲ ಕಟ್ಟಡದ ಉದ್ಘಾಟನೆ ಮಾತ್ರ. ಅತ್ಯವಶ್ಯಕವಾದ ಸಾಧನಗಳು, ಮೂಲಸೌಕರ್ಯ, ಮತ್ತು ಸೇವಾ ಸಿದ್ಧತೆ ಇನ್ನೂ ಪೂರ್ಣಗೊಂಡಿಲ್ಲ, ಆಸ್ಪತ್ರೆ ಎಂದರೆ ಕೇವಲ ಕಟ್ಟಡವಲ್ಲ, ಅದು ಸಮರ್ಪಕ ಉಪಕರಣಗಳು, ವ್ಯವಸ್ಥೆಗಳು ಮತ್ತು ರೋಗಿಗಳಿಗೆ ಸೇವೆ ನೀಡುವ ಸಂಪೂರ್ಣ ಸಿದ್ಧತೆ ಹೊಂದಿರಬೇಕು. ಇಂತಹ ಪರಿಸ್ಥಿತಿಯಲ್ಲಿ ಆತುರದ ಉದ್ಘಾಟನೆ ಮಾಡುವುದು ಜನರ ನಿರೀಕ್ಷೆಗಳಿಗೆ ಧಕ್ಕೆ ತರುತ್ತದೆ ಎಂದಿದ್ದಾರೆ.

ಅಹವಾಲು ಪರಿಶೀಲನಾ ಅದಾಲತ್ ಮುಂದೂಡಿಕೆ

ಹಾವೇರಿ: ಕರ್ನಾಟಕ ರಾಜ್ಯದ ಗ್ರಾಪಂಗಳ ಚುನಾಯಿತ ಸದಸ್ಯ ಸ್ಥಾನಗಳನ್ನು ಪ್ರಕರಣ 5(1) ರಂತೆ ನಿಗದಿಪಡಿಸಿರುವ ಕರಡು ಪ್ರಕಟಣೆಗೆ ಸಾರ್ವಜನಿಕರಿಂದ ಆಕ್ಷೇಪಣೆಯನ್ನು ಸಲ್ಲಿಸುವ ಅವಧಿಯನ್ನು ಮೇ.2ರ ಸಂಜೆ 5.30 ಗಂಟೆಯವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ತಿಳಿದ್ದಾರೆ.ರಾಜ್ಯದ 31 ಜಿಲ್ಲೆಗಳ ಗ್ರಾಪಂ ಗಳ ಚುನಾಯಿತ ಸದಸ್ಯರ ಸಂಖ್ಯೆಯ ಕುರಿತಂತೆ, ಸ್ವೀಕರಿಸಿದ ಆಕ್ಷೇಪಣೆ ಹಾಗೂ ಅಹವಾಲುಗಳ ಪರಿಶೀಲನಾ ಅದಾಲತ್‌ನ್ನು ಮೇ.5ಕ್ಕೆ ಮುಂದೂಡಲಾಗಿದೆ.ಅದಾಲತ್ ದಿನಾಂಕ ಮತ್ತು ಸಮಯ: ಮೇ.5ರಂದು ಮಂಗಳವಾರ ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಗೇಟ್ ನಂ.2, 2ನೇ ಮಹಡಿ. ಬಹುಮಹಡಿಗಳ ಕಟ್ಟಡ ಬೆಂಗಳೂರ ಈ ವಿಳಾಸದಲ್ಲಿ ಹಾವೇರಿ ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸಬೇಕು. ಆಕ್ಷೇಪಣೆ ಮತ್ತು ಅಹವಾಲುಗಳನ್ನು ಸಲ್ಲಿಸಿದವರು ಅದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ತಮ್ಮ ಆಧಾರ್ ಅಥವಾ ಗುರುತಿನ ಚೀಟಿ ಅಥವಾ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಯಾವುದೇ ಗುರುತಿನ ಚೀಟಿಯ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರ

ಮೂಡಲಗಿ: ರಾಮದುರ್ಗ ತಾಲೂಕಿನ ಗೊಡಚಿ ಗ್ರಾಮದಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಅರಭಾವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ಅಂತಿಮ ವರ್ಷದ ಬಿ.ಎಸ್‌ಸಿ (ತೋಟಗಾರಿಕೆ) ವಿದ್ಯಾರ್ಥಿಗಳ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರವನ್ನು ಹಮ್ಮಿಕೊಳ್ಳಲಾಗಿತು. ಈ ಶಿಬಿರದಲ್ಲಿ ವಿದ್ಯಾರ್ಥಿಗಳು ಜೈವಿಕ ಗೊಬ್ಬರಗಳ ಅರಿವು ಮೂಡಿಸಲು ಹಾಗೂ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ನಿಯಂತ್ರಿಸಲು ಭಿತ್ತಿಪತ್ರ ಹಾಗೂ ಮಾಹಿತಿ ಫಲಕಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಯಿತು. ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯಿಂದ ಭೂಮಿಯು ತನ್ನ ಫಲವತ್ತತೆ ಕಳೆದುಕೊಳ್ಳುತ್ತಿದೆ. ಇದರಿಂದಾಗಿ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತಿದೆ. ಆದ್ದರಿಂದ ಜೈವಿಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದಾಗಿದೆ. ಹೀಗಾಗಿ ಜೈವಿಕ ಗೊಬ್ಬರಗಳ ಅವಶ್ಯಕತೆ ಇದೆ. ಈ ಸಮಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ದೀಲಿಪಕುಮಾರ ಮಸೂತಿ ಹಾಗೂ ಡಾ.ರಾಘವೇಂದ್ರ, ಮಾರ್ಗದರ್ಶನ ನೀಡಿದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ಲಕ್ಷ್ಮೀ ಚೆಪ್ಪಲಕಟ್ಟಿ ಪ್ರಥಮ



ಗೋಕಾಕ: ತಾಲೂಕಿನ ಮೆಳವಂಕಿ ಸರ್ಕಾರಿ ಪ್ರೌಢ ಶಾಲೆ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 94.29ರಷ್ಟು ಫಲಿತಾಂಶ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. 29ಜನ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಲಕ್ಷ್ಮೀ ನಾಗಪ್ಪ ಚೆಪ್ಪಲಕಟ್ಟಿ 596(95.36) ಪ್ರಥಮ, ಲಕ್ಷ್ಮೀ ಗಂಗಪ್ಪ ಕರಿಗಾರ 591(94.56) ದ್ವಿತೀಯ, ನಾಗರಾಜ ಯಲ್ಲಪ್ಪ ಮನ್ನಿಕೇರಿ 589(94.24)ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಮುಖ್ಯೋಪಾಧ್ಯಾಯರು, ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಯೋಗ ತರಬೇತಿ



ಗೋಕಾಕ: ಪಟ್ಟಣ ವಿವೇಕಾನಂದ ಯೋಗ ಕೇಂದ್ರದಲ್ಲಿ ಯೋಗ ಗುರು ಆನಂದ ಸೋರಗಾವಿ ಮಾರ್ಗದರ್ಶನದಲ್ಲಿ ಯೋಗ ತರಬೇತಿ ಪಡೆಯುತ್ತಿರುವ ಶ್ರದ್ಧಾ ಕಾಳಪ್ಪ ಕಮ್ಮಾರ ಹಾಗೂ ಸಾನ್ವಿ ಗುರು ಬಬಲಿ ಮೂಡಬಿದರಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಆಳ್ವಾಸ್‌ನಲ್ಲಿ ಉಚಿತ ಶಿಕ್ಷಣಕ್ಕೆ ಯೋಗ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಶ್ರದ್ಧಾ ಕಮ್ಮಾರ 6ನೇ ತರಗತಿ ಆಂಗ್ಲ ಮಾಧ್ಯಮಕ್ಕೆ ಸಾನ್ವಿ ಬಬಲಿ 6ನೇ ತರಗತಿ ಕನ್ನಡ ಮಾಧ್ಯಮಕ್ಕೆ ಆಯ್ಕೆಯಾಗಿದ್ದಾರೆ. ಇನ್ನು ಮುಂದೆ ಈ ಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಯೋಗಭ್ಯಾಸ ಆಳ್ವಾಸ್ ಸಂಸ್ಥೆಯು ಉಚಿತವಾಗಿ ನೀಡಲಿದೆ.

ಮಟ್ಕಾ: ಇಬ್ಬರು ಬಂಧನ

ಬೆಳಗಾವಿ: ನಗರದ ಸಾರ್ವಜನಿಕರ ಸ್ಥಳದಲ್ಲಿ ಸಂಖ್ಯೆಗಳ ಮೇಲೆ ಹಣ ಪಡೆದು ಮುಂಬೈ-ಮಟಕಾ ಆಟ ಆಡುತ್ತಿದ್ದ ವೇಳೆ ಮಾರ್ಕೆಟ್ ಪೊಲೀಸರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಶಾಂತ ಭರಮಾ ಪಾಟೀಲ(29) ಹಾಗೂ ಪ್ರತೀಕ ಮೋಹನ ಜಾಧವ (35) ಬಂಧಿತ ಆರೋಪಿಗಳು. ಆರೋಪಿತರಿಂದ ಹಣ ಹಾಗೂ ಓಸಿ ಚೀಟಿಗಳನ್ನು ವಶಕ್ಕೆ ಪಡೆದ ಪೊಲೀಸರು. ಆರೋಪಿಗಳು ಆಟದಿಂದ ಸಂಗ್ರಹಿಸಿದ ಹಣವನ್ನು ಇನ್ನೊರ್ವ ಆರೋಪಿ ಗಜಾನನ ಶಶಿಕಾಂತ ಗರಡ ಎಂಬಾತನಿಗೆ ನೀಡಿರುವುದು ಬೆಳಕಿಗೆ ಬಂದಿದೆ.





ಮೂವರು ಆರೋಪಿತರ ವಿರುದ್ಧ ಮಾರ್ಕೆಟ ಪೊಲೀಸ್ ಠಾಣೆ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಿ, ಪ್ರಕರಣದ ತನಿಖೆ ಮುಂದುವರೆಸಲಾಗಿದೆ.



ಮೂಡಲಗಿ: ರಾಮದುರ್ಗ ತಾಲೂಕಿನ ಗೊಡಚಿ ಗ್ರಾಮದಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಅರಭಾವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ಅಂತಿಮ ವರ್ಷದ ಬಿ.ಎಸ್‌ಸಿ (ತೋಟಗಾರಿಕೆ) ವಿದ್ಯಾರ್ಥಿಗಳ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರವನ್ನು ಹಮ್ಮಿಕೊಳ್ಳಲಾಗಿತು. ಈ ಸಮಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ದೀಲಿಪಕುಮಾರ ಮಸೂತಿ ಹಾಗೂ ಡಾ.ರಾಘವೇಂದ್ರ, ಮಾರ್ಗದರ್ಶನ ನೀಡಿದರು.

ನಾಲ್ಕು ಜನ ಕೊಲೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಬೆಳಗಾವಿ: 2020ರಲ್ಲಿ ಬೆಳಗಾವಿಯ ನೆಹರು ನಗರದಲ್ಲಿ ನಡೆದಿದ್ದ ಶಾಹಬಾಜ್ ಕೊಲೆ ಮತ್ತು ಅರ್ಫಾನ್ ಮೇಲಿನ ಮಾರಣಾಂತಿಕ ಹಲ್ಲೆ ಪ್ರಕರಣದ ತೀರ್ಪು ಶನಿವಾರ ನ್ಯಾಯಾಲಯವು ತೀರ್ಪು ಪ್ರಕಟಿಸಿದೆ. ಕೊಲೆ ಆರೋಪಿಗಳನ್ನು ಸುದೀರ್ಘ ವಿಚಾರಣೆ ನಡೆಸಿದ ಬೆಳಗಾವಿಯ ದ್ವಿತೀಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ನಾಲ್ವರು ಅಪರಾಧಿಗಳೆಂದು ಘೋಷಿಸಿ, ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ. 25-10-2020ರಂದು ಬೆಳಗಾವಿಯ ನೆಹರು ನಗರದಲ್ಲಿ ನಡೆದ ಶಾಹಬಾಜ್ ಕೊಲೆ ಮತ್ತು ಮತ್ತೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಿತು. ಪ್ರಕರಣದ ವಿಚಾರಣೆ ವೇಳೆ ಒಟ್ಟು 30 ಸಾಕ್ಷಿ ವಿಚಾರಣೆಗೊಳಪಡಿಸಲಾಗಿದ್ದು, 128ಕ್ಕೂ ಹೆಚ್ಚು ದಾಖಲೆ ಸಲ್ಲಿಸಲಾಗಿತ್ತು. ಎಲ್ಲ ಸಾಕ್ಷಾಧಾರ ಪರಿಶೀಲಿಸಿದ ನ್ಯಾಯಾಧೀಶರಾದ ಗಂಗಾಧರ ಕೆ.ಅವರು ಆರೋಪಿಗಳಾದ ಲಕ್ಷ್ಮಣ್ ಫಕೀರಪ್ಪ ದಡ್ಡಿ, ಬಸವರಾಜ್ ಹೊಳೆಪ್ಪ ದಡ್ಡಿ, ಬಸವರಾಜ್ ಸಿದ್ರಾಯಿ ಸಿದ್ದಪ್ಪ ನಾಯಕ್, ನವೀನ ಸಿದ್ದಪ್ಪ ದಡ್ಡಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ಮತ್ತು 9 ಲಕ್ಷ 60 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡದಲ್ಲಿ 8ಲಕ್ಷ ರೂ. ಮೃತನ ತಂದೆ ತಾಯಿಗೆ ಮತ್ತು 1ಲಕ್ಷ ರೂ. ದೂರುದಾರ ಅರ್ಫಾನ್‌ನಿಗೆ ನೀಡಬೇಕೆಂದು ಆದೇಶಿಸಿದೆ. ಈ ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕ ಭಾರತಿ ಹೊಸಮನಿ ಸರ್ಕಾರದ ಪರ ವಾದ ಮಂಡಿಸಿದ್ದರು. ಒಂದನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕ ಆರ್.ಎ. ಗಡಕರಿ ಮಾಧ್ಯಮಗಳಿಗೆ ಮಾಹಿತಿ ಹಂಚಿಕೊಂಡಿದ್ದಾರೆ.



ಬೆಳಗಾವಿ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಶನಿವಾರ ರಾತ್ರಿ ವೇಳೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಂಗ್ರಾಳಿ ಬಿಕೆ ಗ್ರಾಮಕ್ಕೆ ಭೇಟಿ ನೀಡಿ ಮಹಾಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ಹಾಗೂ ಜಾತ್ರಾ ಮಹೋತ್ಸವದ ಪೂರ್ವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದರು.

ನಮ್ಮ ಸಂಸ್ಕೃತಿ, ಆಚಾರ ವಿಚಾರ ಬೆಳೆಸೋಣ: ಕತ್ತಿ

ಹುಕ್ಕೇರಿ: ಯುವ ಜನಾಂಗದ ಒತ್ತಾಸೆ ಮತ್ತು ದೇಸಿ ಕ್ರೀಡೆಗಳನ್ನು ಬೆಳೆಸುವ ಆಶಯದೊಂದಿಗೆ ಅಂತರಾಜ್ಯ ಮಹಿಳಾ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಂಡಿದ್ದೇವೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ದೇಸಿ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಯುವ ಜನರಲ್ಲಿ ದೇಶಾಭಿಮಾನ ಹಾಗೂ ನಮ್ಮ ಸಂಸ್ಕೃತಿ, ಆಚಾರ ವಿಚಾರಗಳನ್ನು ಬೆಳೆಸೋಣ ಎಂದು ಶಾಸಕ ನಿಖಿಲ ಕತ್ತಿ ಹೇಳಿದರು.

ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ರಾಜ್ಯ ಅಮೆಚ್ಯೂರ ಕಬಡ್ಡಿ ಅಸೋಸಿಯೇಷನ್ ಮತ್ತು ರಾಹುಲ ಕತ್ತಿ ಸ್ಪೋರ್ಟ್ಸ್ ಮತ್ತು ಸೋಶಿಯಲ್ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಹೊನಲು ಬೆಳಕಿನ ಅಂತರಾಜ್ಯ ಮಹಿಳಾ ಕಬಡ್ಡಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ, ನಮ್ಮ ಮನೆತನ ಯಾವಾಗಲೂ ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಸೋದರ ರಾಹುಲ ಕತ್ತಿ ಹೆಸರಿನಲ್ಲಿ ಸುಸಜ್ಜಿತ ಕ್ರೀಡಾ ಮೈದಾನ ನಿರ್ಮಿಸಿ ಅಲ್ಲಿ ಹಲವು ವರ್ಷಗಳಿಂದ ಅಂತಾರಾಷ್ಟ್ರೀಯ ಮಟ್ಟದ ಸೌಲಭ್ಯ ಒದಗಿಸಿ ಕ್ರಿಕೆಟ್ ಪಂದ್ಯಾವಳಿ ನಡೆಸಿದ್ದೇವೆ ಎಂದರು.

ಅರ್ಬನ್ ಬ್ಯಾಂಕ್ ಅಧ್ಯಕ್ಷ ಪವನ ಕತ್ತಿ ಮಾತನಾಡಿ, ಕಲೆ, ಕ್ರೀಡೆ, ಧಾರ್ಮಿಕ ಮತ್ತು ಸಮಾಜ ಸೇವೆಗಳಿಗೆ ಪ್ರೋತ್ಸಾಹಿಸುವುದೇ ನಮ್ಮ ಗ್ರಾಮದ ವೈಶಿಷ್ಟ್ಯ. ದೇಸಿ ಕ್ರೀಡೆಗಳು ಗ್ರಾಮೀಣ ಜನರಿಂದ ಉಳಿದಿವೆ. ಆದಕ್ಕಾಗಿ ಜಿಲ್ಲಾ ಮತ್ತು ತಾಪಂ ಮಟ್ಟದಲ್ಲಿ ಕಬಡ್ಡಿ, ವಾಲಿಬಾಲ್, ಖೋ-ಖೋ ಮೊದಲಾದ ದೇಸಿ ಕ್ರೀಡೆ ಆಯೋಜಿಸುವ ಚಿಂತನೆ ಇದೆ ಎಂದರು.



33 ತಂಡಗಳು ಭಾಗಿ

9 ರಾಜ್ಯಗಳ 33 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿವೆ. ಕೆಲವರು ಈ ಮೊದಲು ನಡೆಸುತ್ತಿದ್ದ ಕ್ರಿಕೆಟ್ ಪಂದ್ಯಾವಳಿ ಮತ್ತೇ ಪ್ರಾರಂಭಿಸಲು ಶಾಸಕ ನಿಖಿಲ ಮತ್ತು ಪವನ ಕತ್ತಿ ಅವರನ್ನು ಒತ್ತಾಯಿಸಿದರು. ಇದಕ್ಕುತ್ತರಿಸಿದ ಇರ್ವರೂ ಮಾಜಿ ಸಂಸದ ರಮೇಶ ಕತ್ತಿ ಅವರ ಮಾರ್ಗದರ್ಶನದಲ್ಲಿ ನಾವು ಮತ್ತು ಗ್ರಾಮದ ಹಿರಿಯರು ಸೇರಿಕೊಂಡು ಚರ್ಚಿಸಿ ನಿಮ್ಮ ಆಶಯ ಈಡೇರಿಸುತ್ತೇವೆಂದು ಭರವಸೆಯಿತ್ತರು.

ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಉಪಾಧ್ಯಕ್ಷ ಅಜಿತ ಮುನ್ನೋಳಿ, ನಿರ್ದೇಶಕರಾದ ಕೆಂಪಣ್ಣಾ ವಾಸೇದಾರ, ನಂದು ಮುಡಸಿ, ಶಿವನಗೌಡ ಮದವಾಲ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಶೀತಲ ಬ್ಯಾಳಿ, ಗುರಪ್ಪಾ ತಳವಾರ, ಗ್ರಾಪಂ ಮಾಜಿ ಅಧ್ಯಕ್ಷ ಗಂಗಾಧರ ನಾಂವಿ, ಮುಖಂಡರಾದ ಸಂದೀಪ ಕತ್ತಿ, ಸುಧೀರ ಕತ್ತಿ, ಮಹಾನಿಂಗ ಶೆಟ್ಟಿ, ಎಂ.ಕೆ.ಪೂಜೇರಿ, ಸಿದ್ದಲಿಂಗಯ್ಯಾ ಕಡಹಟ್ಟಿಮಠ, ಅಶೋಕ ಬೆಲ್ಲದ, ಅಪ್ಪಾಸಾಹೇಬ ಖೇಮಲಾಪೂರೆ, ಎ.ಕೆ.ಪಾಟೀಲ, ಲಾಜಮ್ ನಾಯಿಕವಾಡಿ, ಶ್ರೀಶೈಲ ಮಠಪತಿ, ಬಸವರಾಜ ತಳವಾರ, ಲಕ್ಷ್ಮಣ ರಾಮದುರ್ಗ, ಯಾಸೀನ್ ಕಲೈಗಾರ, ಸತ್ತೆಪ್ಪಾ ಚಂದರಗಿ, ಆನಂದ ಲಕ್ಕುಂಡಿ, ಇಲಿಯಾಸ ಅತ್ತಾರ, ರಾಜು ಮುನ್ನೋಳಿ, ಗುರಪ್ಪಾ ತಳವಾರ, ಸುನೀಲ ಬೆಲ್ಲದ, ರವಿ ಕತ್ತಿ, ಶ್ರೀಶೈಲ ಚರಾಟಿ ಇತರರಿದ್ದರು. ವಿ.ಎಂ.ಕತ್ತಿ, ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಕೆ.ಸಿ.ಮುಚಖಂಡಿ ಸ್ವಾಗತಿಸಿದರು.

ಶಿವಬೋಧ ಶ್ರೀಗಳ ಪಲ್ಲಕ್ಕಿ ಉತ್ಸವ

ಮೂಡಲಗಿ: ಶಿವಬೋಧ ಸ್ವಾಮಿಜಿಗಳ ಪುಣ್ಯ ತಿಥಿಯು ಹೊಸ ಹುಮ್ಮಸಿನಿಂದ ಸಾವಿರಾರು ಭಕ್ತರು ಶ್ರದ್ಧೆ ಭಕ್ತಿಯಿಂದ ಅತಂತ್ಯ ಉತ್ಸಾಹದಿಂದ ಪಾಲ್ಗೊಳುವ ಮೂಲಕ ಅದ್ದೂರಿಯಾಗಿ ಜರುಗಿತು.

ಮೂಡಲಗಿಯ ಪವಾಡ ಪುರುಷ, ವಾಕ್ಸಿದ್ಧಿ ಮಹಿಮ ಶಿವಬೋಧ ಶ್ರೀಗಳ ಪುಣ್ಯತಿಥಿ ಅಂಗವಾಗಿ ಶನಿವಾರ ಸಂಜೆಯಿಂದಲೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ತಮ್ಮ ಭಕ್ತಿಗನುಸಾರವಾಗಿ ದೀರ್ಘದಂಡವತ ನಮಸ್ಕಾರ ಕಾರ್ಯ ಕೈಗೊಂಡಿದರು. ದೀರ್ಘಡಂಡವತ ನಮಸ್ಕಾರ ಭಾನುವಾರ ಭಕ್ತರು ಭಕ್ತಿಯಿಂದ ನೆರವೇರಿಸಿದರು. ಮಠದಲ್ಲಿ ಪಲ್ಲಕ್ಕಿಗೆ ವೇದ ಮಂತ್ರ ಪಠಣಗಳೊಂದಿಗೆ ಅಲಂಕಾರ ಹಾಗೂ ವಿಶೇಷ ಪೂಜೆ ಜರುಗಿತು.

ಮೇಲಿನ ಮಠದಿಂದ ಶಿವಬೋಧರಂಗರ ವಿಶೇಶ ಅಲಂಕೃತ ಪಲ್ಲಕ್ಕಿ ಕೆಳಗಿನ ಮಠಕ್ಕೆ ಹೊರಟಿತು ಪಲ್ಲಕಿಯ ಮುಂದೆ ಕರಡಿ ಮಜಲ್ ವಾದ್ಯ ಮೇಳದವರು,ಝಾಂಜ ಪಥಕ, ಯುವಕರ ಹಜ್ಜೆಯ ನಾದ, ಭಕ್ತರಲ್ಲಿ ದೈವದ ಸಾಕ್ಷಾಂತಾರದ ಅನುಭವ ನೀಡುತ್ತಿತು ಶನಿವಾರ ಸಂಜೆಯಿಂದ ರಸ್ತೆಯ ಉದ್ದಕ್ಕೂ ಭಕ್ತರು ತಮ್ಮ ವಾಹನದಲ್ಲಿ ಭಕ್ತಿಯ ಗೀತೆಗಳನ್ನು ಹಾಕುವದರೊಂದಿಗೆ ನೀರಿನ ಸೇವೆ ಸಲ್ಲಿಸಿದರು. ಮೂಡಲಗಿಯು ಜಾತ್ರೆ ಸಡಗರದಲ್ಲಿ ನಡೆಯಿತು. ಭಾನುವಾರ ಸಾವಿರಾರು ಭಕ್ತರು ಇಚ್ಛಾನುಸಾರ ಪಲ್ಲಕ್ಕಿಯ ಮೇಲೆ ಬೆಂಡು ಬೆತಾಸ ಖಾರೀಕ ಹಾಗೂ ಹೊ ಹಾರಿಸಿ ಕೃತಾರ್ಥರಾದರು. ಪಲ್ಲಕ್ಕಿಯು ಕೆಳಗಿನ ಮಠಕ್ಕೆ ಸಾಗಿತು. ನಂತರ ಅನ್ನಪ್ರಸಾದ ನಡೆಯಿತು. ಪೀಠಾಧಿಪತಿಗಳಾದ ದತ್ತಾತ್ರಯಬೋಧ ಶ್ರೀಗಳು, ಶ್ರೀಧರ ಶ್ರೀಗಳ ನೇತೃತ್ವದಲ್ಲಿ ಜರುಗಿತು.

ಏ.27ರಂದು ಕೆಳಗಿನ ಮಠದಲ್ಲಿ ವಿವಿಧ ಪಾರಾಯಣ ನಡೆಯಲಿವೆ. ಕೆಳಗಿನ ಮಠದಲ್ಲಿ ರಾತ್ರಿ 10ರಿಂದ ಪಲ್ಲಕ್ಕಿ ಸೇವೆ ನಡೆಯಲಿದೆ.

ಏ.28ರಂದು ಕೆಳಗಿನ ಮಠದಲ್ಲಿ ವೈದಿಕರಿಂದ ವಿವಿಧ ಪಾರಾಯಣಗಳು ನಡೆಯಲಿವೆ. ಭಕ್ತರಿಂದ ಶ್ರೀಫಲ, ಸಕ್ಕರೆ ಹಂಚುವುದು. ಮಧ್ಯಾಹ್ನ 4ಕ್ಕೆ ವಿವಿಧ ಕಲಾವಿ ದರಿಂದ ವಿವಿಧ ಪ್ರಕಾರದ ಸಂಗೀತ ಸೇವೆ ರಾತ್ರಿ 10 ಗಂಟೆವರೆಗೆ ಜರುಗಲಿವೆ. ಏ.29ರಂದು ಬೆಳಗ್ಗೆ 3ಕ್ಕೆ ಶ್ರೀಗಳವರ ಪಲ್ಲಕ್ಕಿ ಸಕಲ ವಾದ್ಯ ವೃಂದ ಹಾಗೂ ಸಂಗೀತ ಸೇವೆಗಳೊಂದಿಗೆ ಮುಂಜಾನೆ 5-30 ಗಂಟೆಗೆ ಮರಳಿ ಮೇಲಿನ ದೇವಸ್ಥಾನಕ್ಕೆ ಬಂದ ಮೇಲೆ ಆರತಿ ಮಾಡಿ ಕೀರ್ತನೆ ಮತ್ತು ಲಲಿತದ ನಂತರ ಶ್ರೀಗಳಿಂದ ಭಕ್ತರಿಗೆ ಮಂತ್ರಾಕ್ಷತೆ ಹಾಗೂ ಬೇಳೆ-ಬೆಲ್ಲ ವಿತರಣೆ. ಜೊತೆಗೆ ಉತ್ಸವ ಮಂಗಲಗೊಳ್ಳಲಿದೆ ಎಂದು ಪೀಠಾಧಿಪತಿಗಳಾದ ದತ್ತಾತ್ರಯಬೋಧ ಶ್ರೀಗಳು, ಶ್ರೀಧರ ಶ್ರೀಗಳ ತಿಳಿಸಿದ್ದಾರೆ.



ಮಕ್ಕಳು ರಾಷ್ಟ್ರೀಯ ಕ್ರೀಡಾಪಟುಗಳಾಗಿ ಕೀರ್ತಿ ತರಲಿ

ಹುಕ್ಕೇರಿ: ಕ್ರೀಡೆ ಆರೋಗ್ಯಕ್ಕೆ ಉತ್ತಮ ಮದ್ದು, ಆತ್ಮವಿಶ್ವಾಸ ಹೆಚ್ಚಿಸುವುದರ ಜತೆಗೆ ಸ್ಫೂರ್ತಿ ನೀಡುವ ಡಾಡ್ಜ್‌ಬಾಲ್ ಪಂದ್ಯಾವಳಿ ಇತ್ತೀಚಿನ ದಿನಗಳಲ್ಲಿ ಜನಮನ ಸೆಳೆಯುತ್ತಿದೆ. ಕ್ರೀಡೆ ಆರೋಗ್ಯಕ್ಕೆ ಉತ್ತಮ ಮದ್ದು ಈಗಾಗಲೇ 160 ದೇಶಗಳಲ್ಲಿ ಈ ಕ್ರೀಡೆ ಆಡಿಸುತ್ತಿದ್ದಾರೆಂದು ಧಾರವಾಡ ವಿಭಾಗದ ಶಿಕ್ಷಣ ಇಲಾಖೆ ಸಾರ್ವಜನಿಕ ಸೂಚನಾ ಹೆಚ್ಚುವರಿ ಆಯುಕ್ತ ಈಶ್ವರ ಉಳ್ಳಾಗಡ್ಡಿ ಹೇಳಿದರು.

ಹುಕ್ಕೇರಿ ಹೊರ ವಲಯದ ಭಾಪೂಜಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಡೆದ 18ನೇ ಕಿರಿಯರ ರಾಷ್ಟ್ರೀಯ ಡಾಡ್ಜ್‌ಬಾಲ್ ಚಾಂಪಿಯನ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ, ದೇಶಿಕ್ರೀಡೆ ಕಬಡ್ಡಿ ಇದೀಗ ಅಂತಾರಾಷ್ಟ್ರೀಯ ಕ್ರೀಡೆಯಾಗಿ ಪರಿವರ್ತನೆಗೊಂಡಿದೆ. ಇಂದಿನ ಕ್ರೀಡಾಕೂಟದಲ್ಲಿ ದೇಶದ 20 ರಾಜ್ಯಗಳ 35 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿರುವುದೇ ನಿದರ್ಶನವಾಗಿದೆ ಎಂದರು.

ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಸಂಜಯಕುಮಾರ ನವಲಗುಂದ ಅವರು ಮಾತನಾಡಿ, ರಾಷ್ಟ್ರೀಯ ಕ್ರೀಡಾಕೂಟ ಹುಕ್ಕೇರಿಯಲ್ಲಿ ಆಯೋಜಿಸಲು ಸಹಕರಿಸಿದ ರಾಷ್ಟ್ರೀಯ ಡಾಡ್ಜ್‌ಬಾಲ್ ಅಸೋಸಿಯೇಷನ್ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂಬರುವ ದಿನಗಳಲ್ಲಿ ಇಂತಹ ಕ್ರೀಡೆ ಹುಕ್ಕೇರಿಗೆ ತರುವ ಮೂಲಕ ಈ ಭಾಗದ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡುವುದರ ಜತೆಗೆ ನಮ್ಮ ಭಾಗದ ಮಕ್ಕಳು ರಾಷ್ಟ್ರೀಯ ಕ್ರೀಡಾಪಟುಗಳಾಗಿ ಕೀರ್ತಿತರಲಿ ಎಂಬುದೇ ನಮ್ಮ ಸಂಸ್ಥೆಯ ಕನಸು ಎಂದರು.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ವಿರಕ್ತಮಠದ ಶಿವಬಸವ ಶ್ರೀಗಳು ಮಾತನಾಡಿ, ಈ ಮೊದಲು ದಪ್ಪಾದುಪ್ಪಿ ಅಂತಾ ಆಟವಾಡುತ್ತಿದ್ದೇವು.ಇದೀಗ ಸುಧಾರಿಸಿದ ರೀತಿಯಲ್ಲಿ ಡಾಡ್ಜಬಾಲ್ ಆಟವಾಗಿ ಪರಿವರ್ತನೆಗೊಂಡಿದೆ. ಈ ಆಟ ಮನುಷ್ಯನ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿ ಎಂದರು.

ಭಾಪೂಜಿ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಡಾ.ಹೊಳಬಸಯ್ಯಾ ಸಂಕಣ್ಣವರ ಮಾತನಾಡಿ, ಕ್ರೀಡೆ ಕುರಿತು ವಿವರಿಸಿದರು.ಕ್ರೀಡಾ ಜ್ಯೋತಿ ಅತಿಥಿಗಳು ಬರಮಾಡಿಕೊಂಡರು. ಸಂಸ್ಥೆಯಿಂದ ಅತಿಥಿಗಳನ್ನು ಸನ್ಮಾನಿಸಿದರು.

ಕಮತ್ಯಾನಟ್ಟಿಯ ವಿರೂಪಾಕ್ಷ ಶ್ರೀಗಳು, ಶಿಕ್ಷಣ ಸಂಸ್ಥೆ ಸಂಸ್ಥಾಪಕ ಮತ್ತು ಮಾರ್ಗದರ್ಶಕ ಎ.ಎಸ್.ಬೂದಿಗೊಪ್ಪ, ಡಿಡಿಪಿಐ ಆರ್.ಎಸ್. ಸೀತಾರಾಮ, ಬಿಇಒ ಪ್ರಭಾವತಿ ಪಾಟೀಲ, ಇನ್ಸಪೆಕ್ಟರಗಳಾದ ಮಹಾಂತೇಶ ಬಸ್ಸಾಪೂರ, ಜಾವೇದ ಮುಶಾಪೂರಿ ಗಣ್ಯರಾದ ಜಿನಗೌಡ ಇಮಗೌಡನವರ, ರಾಜು ಚೌಗಲಾ, ಗೋಪಾಲ ಹೂಗಾರ, ಲಕ್ಷ್ಮಣ ಪಡಿಮನಿ ಮತ್ತು ಡಾಡ್ಜಬಾಲ್ ಅಸೋಸಿಯೇಷನ್ ಪದಾಧಿಕಾರಿಗಳಿದ್ದರು. ಬಸವರಾಜ ಅಮ್ಮಣಗಿ ಸ್ವಾಗತಿಸಿದರು.



ಮದ್ಯದ ಅಂಗಡಿ ಸ್ಥಳಾಂತರಕ್ಕೆ ಆಗ್ರಹ

ಚನ್ನಮ್ಮನ ಕಿತ್ತೂರು: ನನ್ನ ಗಂಡ ದಿನಾಲು ದುಡಿಯುವುದು ಅದೇ ಹಣದಿಂದ ಕುಡಿಯುವುದು, ಕುಡಿದು ಗಟಾರಿಗೆ ಬೀಳುವುದು ನಮಗೆ ಗಂಡು ಮಕ್ಕಳಾದರೂ ನಮ್ಮ ಕುಟುಂಬಕ್ಕೆ ಆಸರಾಗಿ ಇರಲಿ ಅದಕ್ಕಾಗಿ ಎಂಎಸ್‌ಐಎಲ್ ಅಂಗಡಿ ಬೇಡವೆಂದು ಸವಿತಾ ತಳವಾರ ಭಾವುಕರಾಗಿ ಹೇಳಿದರು.

ಸಮೀಪದ ಅಂಬಡಗಟ್ಟಿ ಗ್ರಾಮದಲ್ಲಿರುವ ಎಂಎಸ್‌ಎಲ್ ಮದ್ಯದ ಮಳಿಗೆಯು ಇಲ್ಲಿಂದ ಸ್ಥಳಾಂತರಗೊಳಿಸಬೇಕೆಂದು ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ನಾಲ್ಕನೆಯ ದಿನದ ಪ್ರತಿಭಟನೆಯಲ್ಲಿ ಮಾತನಾಡಿ, ಕೂಲಿ ನಾಲಿಯಾದರೂ ಮಾಡಿ ನಮ್ಮ ಕುಟುಂಬವನ್ನು ಸಲಹುತ್ತಿದ್ದೇನೆ. ಮುಂದೆ ನಮ್ಮ ಮಕ್ಕಳಿಂದಾದರೂ ನಮ್ಮ ಕುಟುಂಬವು ಸುಖದಿಂದ ಜೀವನ ನಡೆಸುವಂತಾಗಬೇಕೆಂದರು.

ಈಗ ಸಣ್ಣ ಮಕ್ಕಳು ಸಹಿತ ಕುಡಿಯಲು ಪ್ರಾರಂಭಿಸಿದ್ದಾರೆ ತಂದೆ ತಾಯಿಗೆ ಆಸರೆಯಾಗಬೇಕಿದ್ದ ಮಕ್ಕಳು ಬೇಸರಾಗಿದ್ದಾರೆ ನಮ್ಮ ಮಕ್ಕಳು ವ್ಯಸನಿಗಳಾಗಬಾರದು ಎಂದು ಸವಿತಾ ಹೇಳಿದರು.

ಆದಕ್ಕಾಗಿ ನಮ್ಮ ಗ್ರಾಮದಿಂದ ಈ ಮದ್ಯದ ಮಳಿಗೆಯನ್ನು ಸ್ಥಳಾಂತರಗೊಳಿಸಬೇಕು ಇಲ್ಲಿದಿದ್ದರೆ ಪ್ರತಿಭಟನೆ ನಿರಂತರವಾಗಿರುತ್ತದೆ ಎಂದು ಒಕ್ಕೊರಲಿನಿಂದ ಹೇಳಿದರು. ಮಡಿವಾಳೇಶ್ವ ಮಠದ ವೀರೇಶ್ವರ ಸ್ವಾಮೀಜಿ ಮಾತನಾಡಿ, ಒಬ್ಬ ಮಹಿಳೆಯು ತನಗೆ ಎಷ್ಟೇ ಕಷ್ಟ ಬಂದರೂ ಅದನ್ನು ಲೆಕ್ಕಿಸದೇ ತನ್ನ ಗಂಡ ಮತ್ತು ಮಕ್ಕಳು ಸುಖದಿಂದ ಇರಬೇಕೆಂಬುದೇ ಅವರ ಆಶಯವಾಗಿದೆ ಅವರಿಗೆ ಕುಟುಂಬದ ದೊಡ್ಡ ಜವಾಬ್ದಾರಿ ಇರುತ್ತದೆ. ಹೆಣ್ಣು ಮಕ್ಕಳಿಗೆ ಆದಷ್ಟು ತೊಂದರೆ ಗಂಡು ಮಕ್ಕಳಿಗೆ ಆಗುವುದಿಲ್ಲ, ಆದ್ದರಿಂದ ನಮ್ಮ ಗ್ರಾಮವು ವ್ಯಸನ ಮುಕ್ತರಾಗಿ ಉತ್ತಮ ಜೀವನ ನಡೆಸುವಂತಾಗಬೇಕು ಅದಕ್ಕಾಗಿ ಇಲ್ಲಿರುವ ಮದ್ಯದ ಮಳಿಗೆಯನ್ನು ಇಲ್ಲಿಂದ ಸ್ಥಳಾಂತರಗೊಳಿಸುವವರೆಗೂ ನಮ್ಮ ಹೋರಾಟವಿರುತ್ತದೆ ಎಂದರು. ಪ್ರತಿಭಟನೆಯಲ್ಲಿ ನೂರಾರು ಹೆಣ್ಣು ಮಕ್ಕಳು, ಸಾರ್ವಜನಿಕರು ಉಪಸ್ಥಿತರಿದ್ದರು.



ಬಡ ಮಕ್ಕಳ ಶಿಕ್ಷಣಕ್ಕೆ ಆಸರೆಯಾಗೋಣ

ತೆಲಸಂಗ: ಬಡ ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಆಸರೆಯಾಗುವ ಅವಶ್ಯಕತೆ ಇಂದಿನ ದಿನಗಳಲ್ಲಿ ಹೆಚ್ಚಿದ್ದು, ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡುಲು ಸಿದ್ಧವಿದ್ದೇವೆ ಎಂದು ಎಸ್‌ಪಿ ರವೀಂದ್ರ ಗಡಾದೆ ಹೇಳಿದರು.

ಗ್ರಾಮದ ಸರ್ಕಾರಿ ಕನ್ನಡ ಶಾಸಕರ ಮಾದರಿ ಶಾಲೆಯಲ್ಲಿ ಆಂತರಿಕ ಭದ್ರತಾ ವಿಭಾಗದ (ಧಾರವಾಡ ವಲಯ) ಪೊಲೀಸ್ ಅಧೀಕ್ಷಕ ರವೀಂದ್ರ ಗಡಾದೆ ಜನ್ಮದಿನದ ಪ್ರಯುಕ್ತ ಗ್ರಾಮಸ್ಥರು ಹಮ್ಮಿಕೊಂಡಿದ್ದ ಬಡ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಯಾವೊಬ್ಬ ಮಗುವೂ ವಂಚಿತರಾಗಬಾರದು. ಸಾಕ್ಷರ ಸಮಾಜದಿಂದ ಮಾತ್ರ ದೇಶದ ಉತ್ತಮ ಭವಿಷ್ಯ ಸಾಧ್ಯ, ಸಮಾಜದಲ್ಲಿ ಬದಲಾವಣೆ ತರಲು ಶಿಕ್ಷಣವೇ ಪ್ರಬಲ ಅಸ್ತ್ರವಾಗಿದೆ. ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆತಾಗ ಮಾತ್ರ ಸಮೃದ್ಧ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಬಡತನ ಎಂಬುದು ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಗ್ರಾಮಸ್ಥರು ಹಮ್ಮಿಕೊಂಡಿರುವ ಈ ಕಾರ್ಯ ಶ್ಲಾಘನೀಯ ಎಂದರು.



ಡಾ. ಆರ್.ಡಿ. ಪೂಜಾರಿ, ರಾಜಕುಮಾರ ಪರ್ನಾಕರ, ಎ.ಆರ್. ಜೋಶಿ, ಸಿದ್ದರಾಮಯ್ಯ ಪೂಜಾರಿ, ಗುರುಯ್ಯ ಮಠಪತಿ, ಬಸವರಾಜ್ ಅವಟಿ, ಡಾ. ಪ್ರಕಾಶ್ ಪರನಾಕರ್, ಶಿವಾನಂದ ಪೂಜಾರಿ, ಸಂಗಮೇಶ್ ಉಂಡೋಡಿ, ಜಗದೀಶ ಪೂಜಾರಿ, ಕಾಶಿಲಿಂಗ ಲೋಕಂಡೆ, ಭೀಮಪ್ಪಾ ಬನಗೊಂಡ, ಶ್ರವಣ ಪರ್ನಾಕರ, ರಾಜು ಹೊನಕಾಶಂಬಳೆ ಸೇರಿದಂತೆ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಲಾತಂಡಗಳಿಗೆ ಪ್ರೋತ್ಸಾಹ ನೀಡಿ ಬೆಳೆಸೋಣ

ಯಮಕನಮರಡಿ : ಸಮೀಪದ ಕೋಚರಿ ಗ್ರಾಮದಲ್ಲಿ ಜಾನಪದ ಸಾಂಸ್ಕೃತಿಕ ಕಲೆಗಳು ಹಳ್ಳಿ ಮನೆಯ ತವರೂರಿನ ಕಲೆಗಳು, ಅಂತಹ ಮೂಲ ಜಾನಪದ ಕಲಾ ಪರಂಪರೆಯನ್ನು ಉಳಿಸಲು ವಿವಿಧ ಕಲಾಪ್ರಕಾರಗಲನ್ನು ಒಂದೇ ವೇದಿಕೆ ತಂದು, ಕಲಾತಂಡಗಳಿಗೆ ಪ್ರೋತ್ಸಾಹ ನೀಡಿ ಕಲಾವಿದನಿಗೆ ಉತ್ತೇಜನ ನೀಡಿ ಬೆಳೆಸಬೇಕೆಂದು ಸಾಹಿತಿಗಳಾದ ಚಂದ್ರಶೇಖರ ಅರಭಾಂವಿ ಸಾಂಸ್ಕೃತಿಕ ಸಂಘಟಕರಿಗೆ ಹೇಳಿದರು.

ಇತ್ತೀಚಿಗೆ ರಂಗಕಲಾಶ್ರೀ ಗ್ರಾಮೀಣ ಸೇವಾ ಸಂಘ, ವಿರಭದ್ರೇಶ್ವರ ಸೇವಾ ಸಂಘ ಕೋಚರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಕಾರದಲ್ಲಿ ಸ್ಥಳೀಯ ವೀರಭದ್ರೇಶ್ವರ ದೇವಸ್ಥಾನ ಆವರನದಲ್ಲಿ ಜರುಗಿದ ಹಳ್ಳಿ ಜಾನಪದ ಬಯಲಾಟ ಸೊಬಗುನಲ್ಲಿ ಮಾತನಾಡಿ, ಬೆಳಗಾವಿ ಜಿಲ್ಲೆ ಸಣ್ಣಾಟದ ಕೊಡುಗೆ ನೀಡಿದ ಜಿಲ್ಲೆ ಬಯಲಾಟ ಸಣ್ಣಾಟ ಕಲೆ ಸೊಬಗನ್ನು ಸವಿಯಲು ಆಗಾಗ ಇಂತಹ ಕಲಾಮೇಳಗಳು ನಡೆಯಬೇಕೆಂದು ಎಂದರು.



ಆಕಾಶವಾಣಿ ದೂರದರ್ಶನ ಕಲಾವಿದರಾದ ಈಶ್ವರಚಂದ್ರ ಬೇಟಗೇರಿ ಮಾತನಾಡಿ, ರಂಗಕಲೆ, ಜಾನಪದ ಕಲೆ, ಸಣ್ಣಾಟ ಕಲೆ ತ್ರೀವೇಣಿ ಸಂಗಮದ ಕಲೆಗಳು. ಅನಕ್ಷರಸ್ಥರಿದ್ದರು ನೂರಾರು ಪದಗಳನ್ನು ಕಲಿತು ಹಾಡಿ ಕುಣಿದು ಕಲಾಪ್ರೇಕ್ಷಕರಿಗೆ ತಮ್ಮ ಕಲಾ ಪ್ರದರ್ಶನದಿಂದ ಮನಸ್ಸನ್ನು ಸೆಳೆಯುವ ನಮ್ಮ ಕಲೆ ಪ್ರತಿಯೊಬ್ಬರ ಉಸಿರಾಗಿರಬೇಕೆಂದರು.

ಹಿರಿಯ ಕಲಾವಿದ ಶಿವಮೊಗ್ಗಿ ಥರಕಾರ ವಾದ್ಯ ನುಡಿಸಿ ಚಾಲನೆ ನೀಡಿದರು.

ಈ ವೇಳೆ ಸೂರ್ಯಕಾಂತ ನಾಯಿಕ, ಕಾಳಪ್ಪಾ ಬಡಿಗೇರ ಕಲಾವಿದರು ಉಪಸ್ಥಿತರಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೀರಗಾಸೆ ಕುಣಿತ, ಸಂಗೀತ ಗಾಯನ, ಕರಡಿ ಮಜಲು, ಡೋಲ್ ಪಥಕ, ಭಜನಾ ಪದ, ಸಂಗ್ಯಾ-ಬಾಳ್ಯಾ ಸಣ್ಣಾಟ, ನಿಜಗುಣ ಶಿವಯೋಗಿ ಬಯಲಾಟ ಕಲಾಪ್ರದರ್ಶನ ನೀಡಿ ಪ್ರೇಕ್ಷಕರನ್ನು ಮನರಂಜಿಸಿದರು. ಕಲಾವಿದರಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಸುಜಾತಾ ಮಗದುಮ್ಮ ಸ್ವಾಗತಿಸಿ, ವಂದಿಸಿದರು.

ಬಂಟರ ಕ್ರೀಡೋತ್ಸವಕ್ಕೆ ಚನ್ನರಾಜ ಚಾಲನೆ

ಬೆಳಗಾವಿ: ಕ್ರೀಡೆಗಳು ದೇಹದ ಆರೋಗ್ಯಕ್ಕೆ ಮಾತ್ರವಲ್ಲದೆ ಮನಸ್ಸಿನ ಚೈತನ್ಯಕ್ಕೂ ಸಹಕಾರಿ. ಸಮಾಜದ ಒಗ್ಗಟ್ಟು ಮತ್ತು ಬಾಂಧವ್ಯ ಬಲಪಡಿಸುವಲ್ಲಿ ಇಂತಹ ಕ್ರೀಡೋತ್ಸವಗಳು ಮಹತ್ವದ ಪಾತ್ರ ವಹಿಸುತ್ತವೆ. ಯುವಕರು ಕ್ರೀಡೆಗಳತ್ತ ಹೆಚ್ಚು ಆಸಕ್ತಿ ತೋರಿಸಿ, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹೇಳಿದರು.

ನಗರದಲ್ಲಿ ಬಂಟರ ಯಾನೆ ನಾಡವರ ಸಂಘದ ವತಿಯಿಂದ ಬಂಟರ ಭವನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ ಬಂಟರ ಕ್ರೀಡೋತ್ಸವಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದ ಅವರು, ಬಂಟ ಸಮುದಾಯವು ಶಿಕ್ಷಣ, ಉದ್ಯಮ ಹಾಗೂ ಸಮಾಜ ಸೇವೆಯಲ್ಲಿ ನೀಡುತ್ತಿರುವ ಕೊಡುಗೆ ಶ್ಲಾಘನೀಯ. ಇಂತಹ ಕ್ರೀಡಾ ಕಾರ್ಯಕ್ರಮಗಳ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ದೊರೆಯುತ್ತದೆ ಎಂದರು. ಈ ಕ್ರೀಡೋತ್ಸವದಲ್ಲಿ ವಿವಿಧ ವಯೋಮಾನದವರಿಗೆ ತಕ್ಕಂತೆ ಹಲವು ಕ್ರೀಡಾ ಸ್ಪರ್ಧೆಗಳು ಆಯೋಜಿಸಲಾಗಿದ್ದು, ಮಹಿಳೆಯರು ಮತ್ತು ಮಕ್ಕಳೂ ಸಹ ಉತ್ಸಾಹದಿಂದ ಭಾಗವಹಿಸಿದರು. ಈ ಸಂದರ್ಭದಲ್ಲಿ ಬಂಟ್ ಸಮುದಾಯದ ಮುಖಂಡರು, ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದು, ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.



ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನೆ

ಚಿಕ್ಕೋಡಿ: ಆಧುನಿಕ ಪಠ್ಯಕ್ರಮ, ತಂತ್ರಜ್ಞಾನ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಶಿಕ್ಷಕರು, ವಿದ್ಯಾರ್ಥಿಗಳು ಜೀವನದಲ್ಲಿ ಅನ್ವಯ ಮಾಡಿದಾಗ ಜಾಗತಿಕ ಸ್ಪರ್ಧೆ ಹಾಗೂ ಸವಾಲುಗಳನ್ನು ಎದುರಿಸಲು ಸಾಧ್ಯ ಎಂದು ಕೊಲ್ಹಾಪುರದ ಹಿರಿಯ ಪ್ರಾಧ್ಯಾಪಕ ಎ.ಎಂ.ಗುರವ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಬಸಪ್ರಭು ಕೋರೆ ಮಹಾವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಔದ್ಯೋಗಿಕ ಕ್ಷೇತ್ರದಲ್ಲಿ ಕಚೇರಿ ಕೆಲಸ ಮಾಡುವ ಪ್ರಕ್ರಿಯೆ ಬದಲಾಗಿ ವರ್ಕ್ ಫ್ರಂ ಹೋಮ್ ಸಂಸ್ಕೃತಿ ಬರುತ್ತಿದೆ. ಕೌಶಲ್ಯಗಳನ್ನು ಬೆಳೆಸಿಕೊಂಡು ಜಗತ್ತಿನಲ್ಲಿ ಸ್ಪರ್ಧೆಗೆ ಯಾರು ಸಿದ್ಧರಾಗುತ್ತಾರೋ ಅವರು ಯಶಸ್ಸು ಗಳಿಸಲು ಸಾಧ್ಯವಿದೆ ಎಂದರು.



ಕರ್ನಾಟಕ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕಿ ಅಂಜನಾದೇವಿ ತಮುರಗುಂಡಿ ಮಾತನಾಡಿ, ವಿದ್ಯಾರ್ಥಿಗಳು ಭವಿಷ್ಯದ ಸವಾಲುಗಳನ್ನು ಎದುರಿಸಲು ಕೌಶಲ್ಯ, ನಾಯಕತ್ವ ಗುಣ, ಹೊಂದಾಣಿಕೆ ಮನೋಭಾವ ಬೆಳೆಸಿಕೊಳ್ಳಬೇಕು. ಆಧುನಿಕ ನಿರ್ವಹಣೆ ಲಾಭ ಗಳಿಕೆಗೆ ಮಾತ್ರ ಸೀಮಿತವಾಗದೇ, ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯಬೇಕಿದೆ ಎಂದು ಹೇಳಿದರು.

ಬಸಪ್ರಭು ಕೋರೆ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಜಿ. ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಲೇಜು ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಮಹೇಶ ಭಾತೆ, ಲಕ್ಷ್ಮೀಕಾಂತ ನಾಯಕ, ಶಾಂತಿನಾಥ ಭೋಸುಗೆ, ಸವಿತಾ ಹಿಟ್ನೆ, ಸಂಜೀವಿನಿ ಮಠಪತಿ, ಶ್ರೀವಲ್ಲ ಪಾಟೀಳ, ವಿಶಾಲ ಖೋತ, ಮಹಾಶ್ವೇತಾ ಬಿಸ್ಟೆ ಇತರರು ಇದ್ದರು.

ಕಿರುಸುದ್ದಿ

ಬೆಳಗಾವಿಗೆ ತುರ್ತು ಅನುದಾನ ಬಿಡುಗಡೆ

ಬೆಳಗಾವಿ: ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಒದಗಿಸಲು ತುರ್ತು ಅನುದಾನ ಬಿಡುಗಡೆ ಮಾಡಲಾಗಿದೆ.



ಬೆಳಗಾವಿ ಸೇರಿದಂತೆ ಎಲ್ಲ ಜಿಲ್ಲೆಗಳಿಗೆ 45 ಕೋಟಿ ರೂ.ಅನುದಾನ ಹಂಚಿಕೆಯಾಗಿದೆ. ಬೆಳಗಾವಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಒದಗಿಸಲು ಸರ್ಕಾರ ಬೆಳಗಾವಿಗೆ 2ಕೋಟಿ ರೂ.ಅನುದಾನ ನೀಡಿದೆ. ಬೇಸಿಗೆಯಿಂದಾಗಿ ಕುಡಿಯುವ ನೀರನ್ನು ಟ್ಯಾಂಕರ್ ಗಳ ಮೂಲಕ ಪೂರೈಸಲು ಹಾಗೂ ಖಾಸಗಿ ಕೊಳವೆ ಬಾವಿಗಳನ್ನುಬಾಡಿಗೆ ಪಡೆಯಲು ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಮಾಧ್ಯಮ ಪ್ರಕಟಣೆ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್‌ಖರ್ಗೆ ಮಾಹಿತಿ ನೀಡಿದ್ದಾರೆ.

ಜಿಲ್ಲಾವಾರು ಅನುದಾನ ವಿವರ: ಬೆಳಗಾವಿ–2 ಕೋಟಿ,ಬೆಂಗಳೂರು–1.5ಕೋಟಿ,ಬಾಗಲಕೋಟೆ–1.5 ಕೋಟಿ,ಬೆಂಗಳೂರು(ಗ್ರಾ)–1.5ಕೋಟಿ,ಬೆಂಗಳೂ ರು (ನಗರ)–1.5ಕೋಟಿ,ಬೀದರ–1.5ಕೋಟಿ,ಚಾಮರಾಜ ನಗರ–1.5ಕೋಟಿ,ಕ್ಕಬಳ್ಳಾಪುರ–1.5ಕೋಟಿ,ಚಿಕ್ಕಮ ಗ' ಳೂರು–1.5ಕೋಟಿ,ಚಿತ್ರದುರ್ಗ–1.5ಕೋಟಿ,ದಕ್ಷಿಣಕನ ್ನಡ–1ಕೋಟಿ,ದಾವಣಗೆರೆ–1ಕೋಟಿ,ಧಾರವಾಡ–1 ಕೋಟಿ,ಗದಗ–1ಕೋಟಿ, ಹಾಸನ–1.5ಕೊ ೀಟಿ,ಹಾವೇರಿ–1.5ಕೋಟಿ,ಕಲಬುರಗಿ–2ಕೋ ಟಿ, ಕೊಡಗು–1ಕೋಟಿ, ಕೋಲಾರ–2ಕೋಟಿ, ಕೊಪ್ಪಳ–1.5ಕೋಟಿ, ಮಂಡ್ಯ–1ಕೋಟಿ, ಮೈ ಸೂರು–1.5ಕೋಟಿ, ರಾಯಚೂರು–2ಕೋಟಿ, ರಾಮನಗರ–2ಕೋಟಿ, ಶಿವಮೊಗ್ಗ–1.5ಕೋಟಿ, ತುಮಕೂರು–1ಕೋಟಿ, ಉಡುಪಿ–2ಕೋಟಿ, ಉತ್ತರಕನ್ನಡ–1ಕೋಟಿ, ವಿಜಯನಗರ–1.5ಕೋಟಿ, ವಿಜಯಪುರ–1.5ಕೋಟಿ, ಯಾದಗಿರಿ–1.5ಕೋಟಿ.

ಅಕ್ರಮ ಮದ್ಯ ಮಾರಾಟ: ಇಬ್ಬರ ಬಂಧನ



ಬೆಳಗಾವಿ: ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ವೇಳೆ ಎಪಿಎಂಸಿ ಪೊಲೀಸರು ದಾಳಿ ನಡೆಸಿ ಇಬ್ಬರ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಾದ ಗೌತಮ ಕಲ್ಲಪ್ಪ ಕಲಕಾಂಬಕರ (24), ಸತೀಶ ಯಲ್ಲಪ್ಪ ಚೌಗಲಾ (29) ಬಂಧಿತರು. ಎಪಿಎಂಸಿ ಪೊಲೀಸ್ ಠಾಣೆಯ ಸಿಬ್ಬಂದಿಗಳ ನೇತೃತ್ವದಲ್ಲಿ ದಾಳಿ ನಡೆಸಿ, ಆರೋಪಿತರಿಂದ 20,326 ರೂ. ಮೌಲ್ಯದ ಅಕ್ರಮ ಮದ್ಯ ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಗಳ ವಿರುದ್ಧ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಸಿಕೊಂಡು ಕಾನೂನು ಕ್ರಮ ಜರುಗಿಸಿ, ಪ್ರಕರಣದ ತನಿಖೆ ಮುಂದುವರೆಸಲಾಗಿದೆ.

ಬೈಕ್ ಕಳ್ಳತನ: ಮೂವರು ವಶ



ಬೆಳಗಾವಿ: ತಾಲೂಕಿನ ಯಳ್ಳೂರ ಗ್ರಾಮದಲ್ಲಿ ನಡೆದ ಬೈಕ್ ಕಳ್ಳತನ ಪ್ರಕರಣ ಬೇಧಿಸಿದ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಳ್ಳತನದ ಆರೋಪಿಗಳು ಫಕೀರಪ್ಪ ಕರಿಗಾರ (25), ರಮೇಶ್ ಪಾಟೀಲ (23) ಮತ್ತು ಕಮಲಪ್ಪ ಗುಂಡ್ಯಾಗೋಳ (38) ಬಂಧಿತ ಆರೋಪಿಗಳು. ಹೊನಗಾ ತಾಜಿ ನಿವಾಸಿ ದಿಲೀಪ ತುಕಾರಾಮ ಜಾಧವ ಬೈಕ್ ಕಳ್ಳತನವಾಗಿರುವ ಕುರಿತು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಯಳೂರ, ಮಾರ್ಕಂಡೇಯನಗರ ಸೇರಿದಂತೆ ಟಿಳಕವಾಡಿ, ಶಹಾಪೂರ, ಹುಕ್ಕೇರಿ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮೋಟಾರ್ ಸೈಕಲ್ ಕಳ್ಳತನ ನಡೆಸಿರುವುದು ಒಪ್ಪಿಕೊಂಡಿದ್ದಾರೆ. ಬಂಧಿತರಿಂದ ಯಮಹಾ, ಹೀರೋ , ಟಿವಿಎಸ್, ಸುಜುಕಿ ಸೇರಿದಂತೆ ವಿವಿಧ ಕಂಪನಿಗಳ ಒಟ್ಟು 20 ಮೋಟಾರ್ ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದು, ಅವುಗಳ ಒಟ್ಟು ಮೌಲ್ಯ ಸುಮಾರು 11.73 ಲಕ್ಷವಾಗಿದೆ. ಈ ಕಳ್ಳತನದ ಕುರಿತು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬೆಳಗಾವಿ : ಹಿಂದೂ ಸ್ವರಾಜ್ಯದ ಸಂಸ್ಥಾಪಕ, ರೈತರ ರಾಜ, ಛತ್ರಪತಿ ಶಿವಾಜೀ ಮಹಾರಾಜರ 396ನೇ ಜಯಂತಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಮಹಾಪೌರ ಪ್ರೀತಿ ಕಾಮಕರ ಶಿವಜ್ಯೋತಿಯೊಂದಿಗೆ ಉದ್ಯಾನವನಕ್ಕೆ ಆಗಮಿಸಿ, ಮೂರ್ತಿಗೆ ಮಾಲಾರ್ಪಣೆ ಮಾಡಿದರು. ಉಪಮಹಾಪೌರ ಹಣುಮಂತ ಕೊಂಗಾಲಿ, ನಗರಸೇವಕ ಗಿರೀಶ ಧೋಂಗಡಿ, ಭರತ ಪಾಟೀಲ, ನಿತೀಜ್ ಜಾಧವ್ ಸೇರಿದಂತೆ ಅನೇಕು ಇದ್ದರು.

ಸೆಕೆಂಡ್ ಹ್ಯಾಂಡ್ ಸದಾಶಿವ ನಾಟಕ ಪ್ರದರ್ಶನ ನಾಳೆ

ಬೆಳಗಾವಿ: ಬೆಳಗಾವಿ ರಂಗಸೃಷ್ಟಿ ಸಾಂಸ್ಕೃತಿಕ ಸಂಘದಿಂದ ಸೆಕೆಂಡ್ ಹ್ಯಾಂಡ್ ಸದಾಶಿವ ಎಂಬ ಹಾಸ್ಯ ನಾಟಕ ಏ.28ರಂದು, ಸಂಜೆ 6.30ಕ್ಕೆ ಕನ್ನಡ ಭವನದಲ್ಲಿ ಪ್ರದರ್ಶಿಸಲಾಗುತ್ತಿದೆ. ಎಂ.ಎಸ್. ನರಸಿಂಹಮೂರ್ತಿ ರಚಿಸಿರುವ ನಾಟಕ ಶರಣಗೌಡ ಪಾಟೀಲ ನಿರ್ದೇಶಿಸಿದ್ದಲ್ಲದೆ, ಸಂಗೀತ ನಿರ್ದೇಶನ, ರಂಗವಿನ್ಯಾಸ ಮತ್ತು ಬೆಳಕಿನ ವಿನ್ಯಾಸ ಮಾಡಲಿದ್ದಾರೆ. ಲೋಕೋಪಯೋಗಿ ಇಲಾಖೆ ಕಾಯನಿರ್ವಾಹಕ ಇಂಜಿನಿಯರ್ ಪ್ರವೀಣ ಹುಲಜಿ ಉದ್ಘಾಟಿಸುವರು. ಸಮಾಜ ಸೇವಕ ಬಸವರಾಜ ಕಾಮಗಾರಕರ, ಅಕ್ಕೆ ಇಂಜಿನಿಯರಿಂಗ್ ವರ್ಕ್ಸ್ ಮಂಡಲೀಕ್ ಅತಿಥಿಗಳಾಗಿ ಭಾಗವಹಿಸುವರು. ರಂಗಾಯಣದ ನಿರ್ದೇಶಕ ಝಾಕೀರ್ ನದಾಫ್ ಅವರನ್ನು ಸನ್ಮಾನಿಸಲಾಗುವುದು. ರಂಗಸೃಷ್ಟಿ ಸಾಂಸ್ಕೃತಿಕ ಸಂಘದ ಅಧ್ಯಕ್ಷ ರಮೇಶ ಜಂಗಲ್ ಅಧ್ಯಕ್ಷತೆ ವಹಿಸುವರು. ಸಾಮಾಜಿಕ ಪರಿಸ್ಥಿತಿಗಳು ಹಾಗೂ ಮನರಂಜನೆ ಒಳಗೊಂಡ ಕಥಾವಸ್ತುವಿನ ಮೂಲಕ ಪ್ರೇಕ್ಷಕರಿಗೆ ಮನರಂಜನೆ ನೀಡಲಿದ್ದು, ಕಲಾವಿದರಾದ ವಾಮನ ಮಳಗಿ, ಶಾಂತಾ ಆಚಾರ್ಯ, ಶಿರೀಶ್ ಜೋಶಿ, ವಿಶ್ವನಾಥ ದೇಸಾಯಿ, ಅನುಶ್ರೀ ರಘುವೀರ, ಶರಣಯ್ಯ ಮಠಪತಿ ಅಭಿನಯ ವಿಶೇಷ ಆಕರ್ಷಣೆಯಾಗಲಿದೆ. ನಾರಾಯಣ ಗಣಾಚಾರಿ ತಬಲಾ ಸಾಥ್ ನೀಡಲಿದ್ದಾರೆ. ಉಚಿತ ಪ್ರದರ್ಶನವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕವನ್ನು ಆಸ್ವಾದಿಸುವಂತೆ ರಂಗಸೃಷ್ಟಿಯ ಉಪಾಧ್ಯ ಎಂ.ಕೆ.ಹೆಗಡೆ, ಶೈಲಜಾ ಭಿಂಗೆ, ಕನ್ನಡ ಭವನದ ಕಾರ್ಯದರ್ಶಿ ಯ.ರು.ಪಾಟೀಲ, ಎರಡೂ ಸಂಘಟನೆಗಳ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.



ಬೆಳಗಾವಿ: ನಗರದ ಕೋಟೆ ಆವರಣದಲ್ಲಿನ ಕಮಲ ಬಸದಿಯಲ್ಲಿ ನಡೆಯುತ್ತಿರುವ ಧರ್ಮಚಕ್ರ ಆರಾಧನಾ ಮಹೋತ್ಸವದ ಸಮಾರಂಭದಲ್ಲಿ ಕೆಎಲ್‌ಇ ಸಂಸ್ಥೆ ಗೌರವಾಧ್ಯಕ್ಷ ಪದ್ಮಶ್ರೀ ಡಾ.ಪ್ರಭಾಕರ ಕೋರೆ ಮಾತನಾಡಿದರು.

ಬಸವಣ್ಣನವರ ಭವ್ಯ ಮೆರವಣಿಗೆಗೆ ಚಾಲನೆ

ಬೆಳಗಾವಿ: ವಿಶ್ವಗುರು ಬಸವಣ್ಣನವರ ಜಯಂತಿ ಉತ್ಸವ ನಿಮಿತ್ತ ಏರ್ಪಡಿಸಲಾಗಿದ್ದ ಭವ್ಯ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಪೀಠಾಧಿಕಾರಿ ಡಾ.ಅಲ್ಲಮಪ್ರಭು ಶ್ರೀಗಳು, ಕಾರಂಜಿ ಮಠದ ಗುರುಸಿದ್ದೇಶ್ವರ ಶ್ರೀಗಳು, ಹಂದಿಗುಂದದ ಶಿವಾನಂದ ಶ್ರೀಗಳು, ನಿಷ್ಕಲ್, ಮಂಟಪದ ನಿಜಗುಣಾನಂದ ಶ್ರೀಗಳು, ಕಿತ್ತೂರು ಕಲ್ಮಠ ದ ಮಡಿವಾಳ ರಾಜ ಯೋಗಿಂದ್ರ ಶ್ರೀಗಳು, ಹುಕ್ಕೇರಿ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು, ಸಚಿವೆ ಲಕ್ಷ್ಮಿ ಹೆಬ್ಬಾಳಕರ್, ಕೆಎಲ್‌ಇ ಗೌರವ ಕಾರ್ಯಧ್ಯಕ್ಷ ಡಾ.ಪ್ರಭಾಕರ್ ಕೋರೆ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಮುಖ್ಯಮಂತ್ರಿ ಸಂಸದ ಜಗದೀಶ್ ಶೆಟ್ಟರ್, ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಶಾಸಕ ಗಣೇಶ್ ಹುಕ್ಕೇರಿ, ಮಾಜಿ ಶಾಸಕ ಮಹಾಂತೇಶ್ ದೊಡ ಗೌಡರ, ಬಸವ ಜಯಂತಿ ಉತ್ಸವ ಸಮಿತಿಯ ಮುಖ್ಯ ಸಂಚಾಲಕ ಬಸವರಾಜ ರೊಟ್ಟಿ, ವೀರಶೈವ ಮಹಾಸಭಾ ಅಧ್ಯಕ್ಷೆ ರತ್ನಪ್ರಭಾ ಬೆಲ್ಲದ್, ಶಾಸಕ ಆಸಿಫ್ ಶೆಟ್, ಮಹಾಪೌರ ಪ್ರೀತಿ ಕಾಮಕರ, ಉಪಮಹಾಪೌರ ಹನುಮಂತ ಕೊಂಗಾಲಿ, ಮಾಜಿ ಸಂಸದ ಮಂಗಲಾ ಅಂಗಡಿ, ಮಾಜಿ ಸಚಿವ ಎ.ಬಿ.ಪಾಟೀಲ್, ಸೇರಿದಂತೆ ಹಲವಾರು ಗಣ್ಯರು ಮೆರವಣಿಗೆಗೆ ಚಾಲನೆ ನೀಡಿದರು.

ಶಾಸಕ ಬಾಬಾ ಸಾಹೇಬ್ ಪಾಟೀಲ , ಡಾ.ಎಚ್ .ಬಿ. ರಾಜಶೇಖರ, ಮಾಜಿ ಸದಸ್ಯ ಮಹಾಂತೇಶ್ ಕವಟಗಿಮಠ,ಮಾಜಿ ಶಾಸಕ ವಿ.ಐ.ಪಾಟೀಲ, ಮಾಜಿ ಶಾಸಕ ಅನಿಲ ಬೆನಕೆ, ಹಲವಾರು ನಗರ ಸೇವಕರು ಉಪಸ್ಥಿತರಿದ್ದರು.



ಜಿಲ್ಲೆಯ ವಿವಿಧ ತಾಲೂಕುಗಳು ವಿವಿಧ ಸ್ಥಳಗಳಿಂದ ಆಗಮಿಸಿದ್ದ ಸಾವಿರಾರು ಬಸವಭಕ್ತರು ಸೇರಿದ್ದ ಈ ಮೆರವಣಿಗೆಯಲ್ಲಿ ವಚನ ಕಟ್ಟುಗಳನ್ನು ಪಲ್ಲಕ್ಕಿ ಮೆರವಣಿಗೆಯ ಮುಂಚೂಣಿಯಲ್ಲಿತು. ಉಡುಪಿಯಿಂದ ಬಂದಿದ್ದ ಚಂಡೇ ಮದ್ದಳೆ ತಂಡ, 16 ಅಡಿ ಎತ್ತರದ ಭವ್ಯ ಬಸವಣ್ಣನವರ ಮೂರ್ತಿ, ಎರಡು ಝಾಂಜ ಪಥಕಗಳು, ಬಸವಣ್ಣನವರ ಮೂರ್ತಿ ಹೊತ್ತ ಡಿಜಿಟಲ್ ಆನೆ, ಆಕರ್ಷಕ ನೃತ್ಯ ಪ್ರದರ್ಶನ ನೀಡುತ್ತಿದ್ದ ಶಿವಶರಣೆಯರ ತಂಡ, ಸೌಂಡ್ ಸಿಸ್ಟಮ್ಸ್ ತಂಡ, ಒಂದು ಭವ್ಯವಾದ ಟ್ಯಾಬ್ಲೋ, ದಾವಣಗೆರೆಯ ಭಜನಾ ಮಂಡಳಿ, ಇದಾದ ನಂತರ ಮತ್ತೊಂದು ರೂಪಕ ವಾಹನ, ಆಕರ್ಷಕ ಕೋಲಾಟ ಪ್ರದರ್ಶನ ನೀಡುತ್ತಿದ್ದ ತಂಡ, ಮತ್ತೊಂದು ಝಾಂಜ ಪಥಕ, ಎಸ್‌ಜಿಬಿಐಟಿ ಕಾಲೇಜ್ ರೂಪಕ ವಾಹನ ಹಾಗೂ ಇನ್ನಿತರ ಹಲವಾರು ರೂಪಕ ವಾಹನಗಳು ಮೆರವಣಿಗೆ ವಿಶೇಷ ಆಕರ್ಷಣೆಯಾಗಿದ್ದವು.

ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಆರಂಭವಾದ ಭವ್ಯ ಮೆರವಣಿಗೆಯು ಕಾಕತಿ ವೇಸ್ ಮೂಲಕ ಹಾಯ್ದು ಶನಿವಾರ ಖೂಟ್, ಗಣಪತಿ ಗಲ್ಲಿ, ಮಾರುತಿ ಗಲ್ಲಿ, ಕಿರ್ಲೋಸ್ಕರ್ ರೋಡ್ ಮೂಲಕ ಸಾಗಿ ಲಿಂಗರಾಜ್ ಕಾಲೇಜಿನ ಆವರಣದಲ್ಲಿ ಮುಕ್ತಾಯಗೊಂಡಿತು. ಅಲ್ಲಿ ಆಕರ್ಷಕ ಕ್ರ್ಯಾಕರ್ ಮತ್ತು ಸಿಡಿಮದ್ದು ಪ್ರದರ್ಶನ ಅಲ್ಲಿ ಸೇರಿದ್ದ ಸಾವಿರಾರು ಬಸವಾನುಯಾಯಿ ಕಣ್ತುಂಬಿಕೊಂಡರು.

ಮಾಜಿ ಸೈನಿಕರ ಸಂಘಟನೆಗಳ ಮಹಾ ಒಕ್ಕೂಟದ ಗೌರವಾಧ್ಯಕ್ಷ ರಮೇಶ್ ಚೌಗುಲಾ ಮತ್ತು ಅಧ್ಯಕ್ಷ ಜಗದೀಶ್ ಪೂಜಾರಿ ಅವರುಗಳ ನೇತೃತ್ವದಲ್ಲಿ ನೂರಾರು ಸದಸ್ಯರು ಮೆರವಣಿಗೆ ಉದ್ದಕ್ಕೂ ಎಲ್ಲ ವ್ಯವಸ್ಥೆ ಶಿಸ್ತು ಬದ್ಧವಾಗಿ ಯಾವುದೇ ರೀತಿಯ ಅಹಿತಗರ ಘಟನೆ ನಡೆಯದಂತೆ ನೋಡಿಕೊಂಡರು.

ಬಸವಣ್ಣನವರ ಕುರಿತ ಜೈಕಾರ ಮತ್ತು ವಚನಗಳ ಪಠಣ ನಡೆದಿತು. ಸಾವಿರಾರು ಬಸವಾನುಯಾಯಿಗಳಿಗೆ ಲಿಂಗರಾಜ್ ಕಾಲೇಜ್ ಆವರಣದಲ್ಲಿ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ: ಕೋರೆ

ಬೆಳಗಾವಿ: ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ಉತ್ತಮ ಸಂಸ್ಕಾರ, ಉತ್ತಮ ಆಹಾರ ಚರ್ಯೆ, ಉತ್ತಮ ನಡುವಳಿಕೆ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಕೆಎಲ್‌ಇ ಸಂಸ್ಥೆ ಗೌರವಾಧ್ಯಕ್ಷ ಪದ್ಮಶ್ರೀ ಡಾ.ಪ್ರಭಾಕರ ಕೋರೆ ಹೇಳಿದರು.

ನಗರದ ಕೋಟೆ ಆವರಣದಲ್ಲಿನ ಕಮಲ ಬಸದಿಯಲ್ಲಿ ನಡೆಯುತ್ತಿರುವ ಧರ್ಮಚಕ್ರ ಆರಾಧನಾ ಮಹೋತ್ಸವದ ಸಮಾರಂಭಕ್ಕೆ ಮುಖ್ಯ ಅತಥಿಯಾಗಿ ಆಗಮಿಸಿ ಮಾತನಾಡಿ, ಜೈನ ಧರ್ಮದ ಇತಿಹಾಸ ಅಪಾರವಾಗಿದೆ. ಇಲ್ಲಿನ ಕಮಲ ಬಸದಿ ಪುರಾತತ್ವ ಇಲಾಖೆಯ ಅಧೀನದಲ್ಲಿದೆ. ಈ ಹಿಂದೆಯೂ ಈ ಬಸದಿ ಜಿರ್ಣೋದ್ದಾರಕ್ಕೆ ಕ್ರಮ ಕೈಗೊಳ್ಳಲಾಗಿತು. ಆದರೆ ಈ ಬಾರಿ ಈ ಬಸದಿಯನ್ನು ಇನ್ನಷ್ಟು ಸುಶೋಭೀಕರಣ ಮಾಡುವ ಮೂಲಕ ಈ ಬಸದಿಗೆ ಐತಿಹಾಸಿಕ ಸ್ಥಳಕ್ಕೆ ಇನ್ನಷ್ಟು ಮೆರಗು ತಂದಿದೆ ಎಂದರು .

ಕರ್ನಾಟಕ ಮತ್ತು ಮಹಾರಾಷ್ಟ್ರ ದಲ್ಲಿ ಜೈನ ಸಮಾಜ ಅಪಾರವಾಗಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಜೈನ ಸಮಾಜದ ಕೊಡುಗೆ ಅಪಾರವಾಗಿದೆ. ಕನ್ನಡ ಭಾಷೆ ಜೀವಂತ ಇರಲಿಕ್ಕೆ ಜೈನ ಸಮಾಜ ಕಾರಣ ಎಂದು ಹೇಳಿದ ಅವರು, ನಾನು ಸಹ ಬೆಳೆದಿದ್ದು ಜೈನ ಸಮಾಜದ ನಡುವೆ ಬೆಳೆದಿದ್ದೇನೆ. ಹೀಗಾಗಿ ಅಹಿಂಸೆ ಸೇರಿದಂತೆ ಜೈನ ಸಂಸ್ಕಾರಗಳು ನನ್ನಲ್ಲಿ ಸಹ ಅಳವಡಿಸಿಕೊಂಡಿವೆ ಎಂದರು.

ಮಾಜಿ ಶಾಸಕ ಅನಿಲ ಬೆನಕೆ ಮಾತನಾಡಿ ,ಧಾರ್ಮಿಕ ಕಾರ್ಯಗಳು ಸಂಸ್ಕಾರ ಬೆಳೆಸಲು ಸಹಕಾರಿಯಾಗುತ್ತವೆ. ಸದಾ ಧರ್ಮದ ಚಿಂತನೆ ಮತ್ತು ಧರ್ಮದ ಪಾಲನೆಯಲ್ಲಿ ಜೀವನ ನಡೆಸಿ ಸಕಲ ಸಮಾಜಗಳ ಉನ್ನತಿಗೆ ಜೈನ ಸಮಾಜ ಶ್ರಮಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಶಾಸಕ ಅಭಯ ಪಾಟೀಲ ಮಾತನಾಡಿ, ಕಮಲ ಬಸದಿಯ ಜೀರ್ಣೋದ್ಧಾರ ಕಾರ್ಯಕ್ಕೆ ಹಾಗೂ ಸುಶೋಭಿಕರಣಕ್ಕೆ ಸುನಿಲ ಹನಮಣ್ಣವರ ಅವರು ಕಾರಣ. ಅವರ ನಿರಂತರ ಪರಿಶ್ರಮದಿಂದಾಗಿ ಇಂದು ದೊಡ್ಡ ಮಟ್ಟದ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿದೆ. ಯಾವುದೇ ವ್ಯಕ್ತಿ ಹಣದಿಂದ ಶ್ರೀಮಂತನಾಗುವುದಿಲ್ಲ, ಧರ್ಮ ಆಚರಣೆ ಮತ್ತು ಸಂಸ್ಕಾರದಿಂದ ಮಾತ್ರ ಶ್ರೀಮಂತನಾಗಿರಬೇಕು. ಆಗ ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದರು.

ಭರತ ಪಾಟೀಲ, ಡಾ.ರಮೇಶ ದೊಡ್ಡಣ್ಣವರ, ಸ್ಮೃತಿ ಕಸ್ತೂರಿ, ಅಭಿನಂದನ ಚಾಬನ್ನವರ, ಹೀರಾಚಂದ ಕಲಮನಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಈ ವೇಳೆ ಡಾ.ಪ್ರಭಾಕರ ಕೋರೆ, ಮಾಜಿ ಶಾಸಕ ಅನಿಲ ಬೆನಕೆ, ಶಾಸಕ ಅಭಯ ಪಾಟೀಲ, ಹಿರಿಯ ನ್ಯಾಯವಾದಿಗಳಾದ ಸದಾಶಿವ ಶಾಂತನಗೌಡ ಮತ್ತು ರವಿರಾಜ ಪಾಟೀಲ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು .

ಇದಕ್ಕೂ ಮುನ್ನ ಸುಮಾರು 150 ಮಕ್ಕಳಿಗೆ ಮೌಂಜಿ ಬಂಧನ ಉಪನಯನದ ಕಾರ್ಯಕ್ರಮ ನಡೆಯಿತು. ಆಚಾರ್ಯ ಧರ್ಮಸೇನ ಮುನಿಗಳು ಮೌಂಜಿ ಬಂಧನ ಮಕ್ಕಳಿಗೆ ವ್ರತಧಾರಣೆ ಮತ್ತು ನಿಯಮಗಳನ್ನು ನೀಡಿದರು. ವಿನೋದ ದೊಡ್ಡಣ್ಣವರ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಪಂಡಿತರಾದ ಅಮೋಲ ಉಪಾಧ್ಯೆ, ಮಹಾವೀರ ಉಪಾಧ್ಯೆ ಧಾರ್ಮಿಕ ವಿಧಿ ವಿಧಾನಗಳು ನಡೆಸಿಕೊಟ್ಟರು. ಪದ್ಮರಾಜ ವೈಜನ್ನವರ ಕಾರ್ಯಕ್ರಮ ನಿರೂಪಿಸಿದರು.

ಗಡ ಏರುವ, ಇಳಿಯುವ ಸ್ಪರ್ಧೆಗೆ ಚಾಲನೆ

ಬೆಳಗಾವಿ: ಐತಿಹಾಸಿಕ ರಾಜಹಂಸ ಗಡದ ತಪ್ಪಲಿನಲ್ಲಿ, ಶೌರ್ಯ ಮತ್ತು ಸಾಹಸದ ಪರಾಕಾಷ್ಠೆ ಕಂಡು ಬಂದಿತು. ಶಿವ ಜಯಂತಿ ನಿಮಿತ್ತ ಆಯೋಜಿಸಲಾಗಿದ್ದ ಗಡ ಏರುವ ಸ್ಪರ್ಧೆ ಅತ್ಯಂತ ರೋಚಕವಾಗಿ ಜರುಗಿದ್ದು, ನೂರಾರು ಕ್ರೀಡಾಪಟುಗಳು ದೈಹಿಕ ಕ್ಷಮತೆ ಪ್ರದರ್ಶಿಸಿದರು. ಕೇವಲ 6 ವರ್ಷದ ಬಾಲಕರಿಂದ ಹಿಡಿದು 75 ವರ್ಷದ ಹಿರಿಯರವರೆಗೆ ಎಲ್ಲರೂ ಸಮಾನ ಉತ್ಸಾಹದಿಂದ ಭಾಗವಹಿಸಿದ್ದು ಈ ಬಾರಿಯ ವಿಶೇಷವಾಗಿತು.

ನಗರದ ಮಧ್ಯವರ್ತಿ ಸಾರ್ವಜನಿಕ ಶಿವಜಯಂತಿ ಉತ್ಸವ ಮಂಡಳದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಐತಿಹಾಸಿಕ ರಾಜಹಂಸ ಗಡ ಏರುವ ಮತ್ತು ಇಳಿಯುವ ಸ್ಪರ್ಧೆಯು ಅತ್ಯಂತ ಸಡಗರದಿಂದ ಸಂಪನ್ನಗೊಂಡಿತು. ಮಂಡಲಳಿ ಅಧ್ಯಕ್ಷ ಅಂಕುಶ ಕೇಸರಕರ್ ಭಗವಾ ಧ್ವಜಾರೋಹಣ ಮಾಡುವ ಮೂಲಕ ಹಾಗೂ ಶಿವಾಜಿ ಮೂರ್ತಿಗೆ ಪೂಜೆ ಸಲ್ಲಿಸಿ ಕ್ರೀಡೆಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಗಣ್ಯರು, ಕಳೆದ ಆರು ದಶಕಗಳಿಂದ ಈ ಸಂಪ್ರದಾಯವನ್ನು ಪಾಲಿಸಿಕೊಂಡು ಬರಲಾಗುತ್ತಿದ್ದು, ಈ ಕ್ರೀಡಾಕೂಟವು ಬೆಳಗಾವಿಯ ಕ್ರೀಡಾಪಟುಗಳಿಗೆ ರಾಷ್ಟ್ರಮಟ್ಟದ ವೇದಿಕೆ ಕಲ್ಪಿಸಲು ಪ್ರೇರಣೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಇಡೀ ಸ್ಪರ್ಧೆಯಲ್ಲಿ ಅಪ್ರತಿಮ ವೇಗ, ಶೌರ್ಯ ಮೆರೆದ ಭೈರೂ ನಾಯ್ಕ 'ರಾಜಹಂಸ ಗಡದ ರಾಜ' ಎಂಬಬಿರುದನ್ನು ತನ್ನದಾಗಿಸಿಕೊಂಡರೆ, ಮಹಿಳಾ ವಿಭಾಗದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಅಕ್ಷರಾ ಮಜುಕರ್ 'ರಾಜಹಂಸ ಗಡದ ರಾಣಿ' ಪಟ್ಟಕ್ಕೆ ಪಾತ್ರರಾದರು.

ವಿಜೇತರ ವಿವರಗಳನ್ನು ನೋಡುವುದಾದರೆ, ಎಂಟು ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ವಂಶ ಬಿರ್ಜೆ ಹಾಗೂ ಬಾಲಕಿಯರ ವಿಭಾಗದಲ್ಲಿ ಸ್ವರಾಲಿ ಕುದ್ರ್ಕರ್ ಪ್ರಥಮ ಸ್ಥಾನ ಪಡೆದರು. ಹನ್ನೆರಡು ವರ್ಷದೊಳಗಿನವರಲ್ಲಿ ಕೃಷ್ಣಕುಮಾರ್ ಪೂಜೇರಿ ಮತ್ತು ಪ್ರೇರಣಾ ಪಾಟೀಲ್ ಅಗ್ರಸ್ಥಾನ ಗಳಿಸಿದರೆ, 16 ವರ್ಷದೊಳಗಿನವರ ವಿಭಾಗದಲ್ಲಿ ಅಥರ್ವ ನಾಯ್ಕ ಮತ್ತು ಶಿವಾನಿ ಶೆಲಾರ್ ವಿಜೇತರಾಗಿ ಹೊರಹೊಮ್ಮಿದರು. ಹಿರಿಯ ಸ್ಪರ್ಧಿಗಳಾದ ಸುರೇಶ್ ಸಾಂಗಾರ್ ಮತ್ತು ಸುರೇಶ್ ದೇವರಮನಿ ಉತ್ಸಾಹವು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ.

ವಿಜೇತರಿಗೆ ಗೌರವಚಿಹ್ನೆ, ಪ್ರಮಾಣಪತ್ರ ಹಾಗೂ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಮದನ್ ಬಾಮಣೆ ಕಾರ್ಯಕ್ರಮದ ಸೂತ್ರಸಂಚಾಲನ ನಡೆಸಿಕೊಟ್ಟರೆ, ವಿಕಾಸ್ ಕಲ್ಘಟಗಿ ವಂದನಾರ್ಪಣೆ ಮಾಡಿದರು.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಬಾಲಚಂದ್ರ ಭೂಮಿಪೂಜೆ

ಮೂಡಲಗಿ: ತುಕ್ಕಾನಟ್ಟಿಗ್ರಾಮದ ಪ್ರಗತಿಗಾಗಿ ಸರ್ಕಾರದ ಹಲವಾರುಜನಪರ ಯೋಜನೆ ಜಾರಿಗೊಳಿಸಿದ್ದೇನೆ. ಜತೆಗೆ ರಸ್ತೆಗಳ ಅಭಿವೃದ್ಧಿಗೂ 2.40 ಕೋಟಿ ರೂ. ಗಳ ಅನುದಾನ ಮಂಜೂರು ತಂದಿದ್ದೇನೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಇತ್ತೀಚಿಗೆ ತಾಲೂಕಿನ ತುಕ್ಕಾನಟ್ಟಿ ಗ್ರಾಮದಲ್ಲಿ ಒಟ್ಟು 2.45 ಕೋಟಿ ರೂ. ಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ನೆರವೇರಿಸಿ ಮಾತನಾಡಿ, ಭಗೀರಥ ಜಯಂತಿಗೆ ತುಕ್ಕಾನಟ್ಟಿ ಗ್ರಾಮಕ್ಕೆ ಸುಮಾರು 2.45 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡುವ ಮೂಲಕ ಸಿಹಿಸುದ್ದಿ ನೀಡಿದರು. ಶಾಸಕ ಬಾಲಚಂದ್ರ ಜಾರಕಿಹೊಳಿಯವರನ್ನು ಗ್ರಾಮದ ಮುಖಂಡರು ಸತ್ಕರಿಸಿ, ಗೌರವಿಸಿದರು.

ಎಲ್ಲೆಲ್ಲಿ ಕಾಮಗಾರಿಗಳು:
ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಸಮಾಜ ಕಲ್ಯಾಣ ಇಲಾಖೆಯ ಅನುದಾನದಡಿ ಪರಿಶಿಷ್ಟ ಜಾತಿ ಕಾಲೋನಿಗೆ ಮೂಲಭೂತ ಸೌಕರ್ಯ ಕಲ್ಪಿಸಲು 25 ಲಕ್ಷ ರೂವೆಚ್ಚದಲ್ಲಿ ತುಕ್ಕಾನಟ್ಟಿ ಗ್ರಾಮದ ರಾಜಾಪೂರ ರಸ್ತೆಯಿಂದ ದುರ್ಗಾದೇವಿ ದೇವಸ್ಥಾನದವರೆಗೆ ಕಾಂಕ್ರೀಟ್ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು. ತುಕ್ಕಾನಟ್ಟಿಗ್ರಾಮದ ರಸ್ತೆಗಳ ಡಾಂಬರೀಕರಣಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2.15 ಕೋಟಿ ರೂ ಅನುದಾನ ಮಂಜೂರಾಗಿದ್ದು, ಈ ಕಾಮಗಾರಿಗೆ ಅವರು ಗುದ್ದಲಿ ಪೂಜೆ ನೆರವೇರಿಸಿದರು.

50 ಲಕ್ಷರೂಪಾಯಿ ವೆಚ್ಚದಲ್ಲಿ ತುಕ್ಕಾನಟ್ಟಿ ಗ್ರಾಮದ ಗದಾಡಿ ತೋಟದ ಕಾಲುವೆಯಿಂದ ಸತ್ತೆಪ್ಪ ಬಿಲಕಾರ ಮನೆಯವರೆಗೆ ಡಾಂಬರೀಕರಣ, 90 ಲಕ್ಷರೂಪಾಯಿ ವೆಚ್ಚದಲ್ಲಿ ವಡೇರಹಟ್ಟಿ ಕಾಲುವೆಯಿಂದ ಅರ್ಜುನ ಉಪ್ಪಾರ ವ್ಹಾಯಾ ಲಕ್ಷ್ಮಣ ಹುಲಕುಂದ ಮನೆತನಕ ರಸ್ತೆ ಡಾಂಬರೀಕರಣ, 75 ಲಕ್ಷ ರೂ ವೆಚ್ಚದಲ್ಲಿ ತುಕ್ಕಾನಟ್ಟಿ ಗ್ರಾಮದ ಘಟಪ್ರಭಾ ರಸ್ತೆಯಿಂದ ಮರ್ದಿ (ಭೀಮಶೆಪ್ಪಗೋಳ) ಮನೆತನಕ ರಸ್ತೆ ಕಾಮಗಾರಿಗೆ ಒಟ್ಟು 2.15 ಕೋಟಿ ರೂ. ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿದರು.



ನಂತರ ತಮ್ಮ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ 5 ಲಕ್ಷ ರೂ.ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಬಸ್ ಶೆಲ್ಟರ್‌ನ್ನು ಶಾಸಕ ಬಾಲಚಂದ್ರ ಜಾರಕಿಹೊಳಿ ಉದ್ಘಾಟಿಸಿದರು. ಮುಖಂಡರಾದ ಸಿದ್ದಪ್ಪ ಹಮ್ಮನವರ, ಶಿವಪ್ಪ ಮರ್ದಿ, ಸೋಮು ಹುಲಕುಂದ, ಅಜ್ಜಪ್ಪ ಮನ್ನಿಕೇರಿ, ಡಾ.ವಸಂತ ನಾಯಿಕವಾಡಿ, ಕುಮಾರ ಮರ್ದಿ, ಮಂಜುನಾಥಗದಾಡಿ, ರಾಮಪ್ಪ ಬಾಗೇವಾಡಿ, ಯಲ್ಲಪ್ಪ ಹುಲಕುಂದ, ಸತ್ತೆಪ್ಪ ಮಲ್ಲಾಪೂರ, ಸುನಂದಾ ಭಜಂತ್ರಿ, ಪರಶುರಾಮಗದಾಡಿ, ಲಗಮಪ್ಪ ಭೋಜ, ರಾಮಚಂದ್ರ ಮದಿಹಳ್ಳಿ ಸೇರಿದಂತೆಅನೇಕರು ಉಪಸ್ಥಿತರಿದ್ದರು.

ಹಾರೂಗೇರಿ: ಪಟ್ಟಣದ ಆರಾಧ್ಯ ದೈವ ಕರಸಿದ್ಧೇಶ್ವರ ದೇವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಹೊಸ ದಿಗಂತ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಹಾಗೂ ಜಾಹೀರಾತು ಒಳಗೊಂಡ ಮುದ್ರಿಕೆ ದೇವಸ್ಥಾನದ ಆಡಳಿತ ಮಂಡಳಿಯವರು ಉದ್ಘಾಟನೆಗೊಳಿಸಿದರು. ಈ ಸಂದರ್ಭದಲ್ಲಿ ಮಾರುತಿ ಪೂಜೇರಿ, ಗೂಳಪ್ಪ ಸಿದ್ದಪ್ಪ ಪೂಜೇರಿ, ಕರೆಪ್ಪ ಶಿ.ಪೂಜೇರಿ, ಕರೆಪ್ಪ ಪ್ರಭು ಪೂಜೇರಿ, ಸಿದ್ರಾಮ ತೇಗುಣಸಿ, ಬೀರಪ್ಪ ರಾಮಪ್ಪ ಪೂಜೇರಿ, ಸಿದ್ದಪ್ಪ ವಿ ಪೂಜೇರಿ, ಪ್ರಕಾಶ ಕುರಿ, ಬಸವರಾಜ ಪೂಜೇರಿ, ಮಾಳಪ್ಪ ಪೂಜೇರಿ, ಕರೆಪ್ಪ ಯಂಕಪ್ಪ ಪೂಜೇರಿ, ಸಿದ್ಧಾರೂಢ ಗೂಳಪ್ಪ ಪೂಜೇರಿ, ಬೀರಪ್ಪ ತಿಪ್ಪಣ್ಣ ಪೂಜೇರಿ, ಸಂತೋಷ ಕ.ಪೂಜೇರಿ, ಕುಮಾರ ಕ.ಪೂಜೇರಿ, ಮಲ್ಲಪ್ಪ ನರಟ್ಟಿ, ಸತ್ಯಪ್ಪ ಗೂ.ಪೂಜೇರಿ, ಹಿರಿಯರು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ಬಸವರಾಜ ಕಟ್ಟೀಮನಿ ದಿಟ್ಟ ಹೋರಾಟಗಾರರು

ರಾಮದುರ್ಗ: ಸ್ವಾತಂತ್ರ್ಯ ಸಂಗ್ರಾಮದ ದಿಟ್ಟ ಹೋರಾಟದ ಚರಿತ್ರೆಯಲ್ಲಿ ಚನ್ನಮ್ಮ ರಾಣಿ ಹೇಗೋ, ಪ್ರಗತಿಶೀಲ ಸಾಹಿತ್ಯ ಕ್ಷೇತ್ರದಲ್ಲಿ ಬಸವರಾಜ ಕಟ್ಟೀಮನಿ ಅಷ್ಟೇ ಗಟ್ಟಿ ಮತ್ತು ದಿಟ್ಟ ಹೋರಾಟಗಾರರು ಎಂದು ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ ಡಾ.ಯಲ್ಲಪ್ಪ ಹಿಮ್ಮಡಿ ಹೇಳಿದರು.

ಪಟ್ಟಣದ ಐ.ಎಸ್. ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಹಾಗೂ ಬೆಳಗಾವಿಯ ಡಾ. ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ಡಾಕ್ಟರ್ ಬಸವರಾಜ ಕಟ್ಟಿಮನಿ ಭಾವಚಿತ್ರ ಅನಾವರಣ ಹಾಗೂ ಗಿರಿಯು ನವಿಲು ಕಾದಂಬರಿಯ ಚರಿತ್ರೆ ಹಾಗೂ ಸೃಜನಶೀಲತೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಬಸವರಾಜ ಕಟ್ಟೀಮನಿ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿ, ಅವರು, ಚನ್ನಮ್ಮ ಹೊರದೇಶದ ಬ್ರಿಟಿಷರಿಗೆ ಹೇಗೆ ಸಿಂಹ ಸ್ವಪ್ನರಾಗಿದ್ದರೋ ಕಟ್ಟೀಮನಿಯವರು ಈ ನಾಡಿನೊಳಗಿನ ಬಂಡವಾಳಶಾಹಿ, ಜಮೀನ್ದಾರಿ ಮತ್ತು ಸಾಂಪ್ರದಾಯಿಕ ಮತೀಯವಾದಿಗಳಿಗೆ ಮೊನಚು ಕತ್ತಿಯಾಗಿದ್ದರು. ನಾಡಿನ ಸ್ವಾತಂತ್ರ್ಯಕ್ಕಾಗಿ ರಾಣಿ ಚನ್ನಮ್ಮ ಖಡ್ಗ ಹಿಡಿದಿದ್ದರೆ, ಸಮಾನತಾ ಸಮಾಜಕ್ಕಾಗಿ ಬಸವರಾಜ ಕಟ್ಟೀಮನಿಯವರು ಲೇಖನಿಯನ್ನೇ ಮೊನಚು ಕತ್ತಿಯನ್ನಾಗಿಸಿದ್ದರು. ತಾವು ಬರೆಯುವ ಸೈದ್ಧಾಂತಿಕ ವಿಚಾರಗಳಿಗೆ ತಕ್ಕಂತೆ ಜೀವಿತದ ಕೊನೆಯವರೆಗೂ ಬದುಕಿ ಆದರ್ಶವಾಗಿದ್ದರೆಂದರು.



ಈ ಸಂದರ್ಭದಲ್ಲಿ ಡಾ. ನಿರ್ಮಲ ಬಟ್ಟಲ ವಿಶೇಷ ಉಪನ್ಯಾಸ ನೀಡಿದರು.

ಈ ವೇಳೆ ಡಾ. ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಸದಸ್ಯ ಪ್ರಾ. ಎಸ್.ಜಿ.ಚಿಕ್ಕನರಗುಂದ ಸೇರಿದಂತೆ ಗಣ್ಯರು ಮಾತನಾಡಿದರು.

ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯ ಡಾ.ಎ.ಬಿ.ವಗ್ಗರ ಅಧ್ಯಕ್ಷತೆ ವಹಿಸಿದರು. ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ವೆಂಕಟೇಶ ಸ್ವಾಗತಿಸಿದರು. ಡಾ. ಎಂ.ಆರ್.ದೊಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಪಿ.ಎಂ. ಸಿಂಗಾರಗೊಪ್ಪ ನಿರೂಪಿಸಿದರು. ಕಾವ್ಯ ಕಟಾವಕರ ವಂದಿಸಿದರು.

ಶಾಂತಿ ಸುವ್ಯವಸ್ಥೆಗಾಗಿ ರೌಡಿ ಪರೇಡ್



ಸಂಕೇಶ್ವರ: ಪಟ್ಟಣದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಸಲುವಾಗಿ ಪೊಲೀಸ್ ಠಾಣಾ ಆವರಣದಲ್ಲಿ ಭಾನುವಾರ ಸಿಪಿಐ ಶಿವಶರಣ ಅವಜಿ ನೇತೃತ್ವದಲ್ಲಿ ರೌಡಿ ಪರೇಡ್ ನಡೆಸಲಾಯಿತು.

ಠಾಣಾ ವ್ಯಾಪ್ತಿಯಲ್ಲಿನ 22 ಜನ ರೌಡಿ ಜನರಿಗೆ ಕಾನೂನು ತಿಳುವಳಿಕೆಯೊಂದಿಗೆ ಅಪರಾಧ ಕೃತ್ಯಗಳಲ್ಲಿ ತೊಡಗಿ ಸಮಾಜದ ಸ್ವಾಸ್ಥ್ಯ ಹದಗೆಡಿಸುವ ಕೆಲಸ ಮಾಡುವುದನ್ನು ಬಿಟ್ಟು ಸಾಮಾನ್ಯ ನಾಗರಿಕರಂತೆ ಸನ್ನಡತೆಯಿಂದ ಬದುಕಬೇಕು. ಇಲ್ಲವಾದಲ್ಲಿ ಇನ್ನಷ್ಟು ಕಠಿಣ ಕಾನೂನಿನ ಕ್ರಮ ಜರುಗಿಸಲಾಗುವುದು ಎಂದು ರೌಡಿಶೀಟರ್ ಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಪ್ರತಿಯೊಬ್ಬ ರೌಡಿಶೀಟರ್ ಗಳ ಚಲನವಲನಗಳ ಮೇಲೆ ಪೊಲಿಸ ಇಲಾಖೆಯು ಕಣ್ಣಿಟ್ಟಿರುತ್ತದೆ. ಪದೇ ಪದೇ ಕಾನೂನು ಬಾಹಿರ ಕೃತ್ಯಗಳಲ್ಲಿ ಭಾಗಿಯಾದರೆ ಕಠಿಣ ಕಾನೂನು ಜಾರಿಗೊಳಿಸಿ, ಗಡಿಪಾರು ಮಾಡುವ ಕೆಲಸ ಮಾಡಲಾಗುವುದು. ಯಾವುದೇ ಅಹಿತಕರ ಚಟುವಟಿಕೆಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಪಾಲ್ಗೊಳ್ಳವ ಕುರಿತು ಇಲಾಖೆ ಗಮನಕ್ಕೆ ಬಂದರೆ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದರು.

ಸಕಾಲದಲ್ಲಿ ಸಾಲ ಮರುಪಾವತಿಸಿ: ವೈದ್ಯ

ಯರಗಟ್ಟಿ: ಸಹಕಾರ ಸಂಘಗಳ ಅಭಿವೃದ್ಧಿಗೆ ಎಲ್ಲ ನಿರ್ದೇಶಕರು ಒಗ್ಗಟಿನಿಂದ ಶ್ರಮಿಸಬೇಕು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಮಬನೂರ ಗ್ರಾಮದ ವಿವಿದ್ದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ಸಭಾ ಭವನದಲ್ಲಿ ಇತ್ತೀಚಿಗೆ ಹಮ್ಮಿಕೊಂಡಿದ ಸಾಲ ವಿತರಣಾ ಸಮಾರಂಭದಲ್ಲಿ ಸಾಲಗಾರರಿಗೆ ಸಾಲ ವಿತರಿಸಿ ಮಾತನಾಡಿ, ಕ್ಷೇತ್ರದ ಅನ್ನದಾತರ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ಮತ್ತು ನಾನು ಸದಾ ನಿಮ್ಮ ಜೊತೆಗೆ ಇರುತ್ತೇನೆ. ಈ ಸಾಲ ಸೌಲಭ್ಯದ ಸದುಪಯೋಗ ಪ್ರತಿಯೊಬ್ಬ ರೈತರು ಪಡೆದುಕೊಂಡು ಕೃಷಿಯಲ್ಲಿ ಮತಷ್ಟು ಪ್ರಗತಿ ಸಾಧಿಸಲಿ ಎಂದು ಹೇಳಿದರು.

ತಾಲೂಕು ಕಾಂಗ್ರೆಸ್ ಮುಖಂಡ ಆರ್. ಕೆ.ಪಟಾತ ಮಾತನಾಡಿ, ಸಾಲಗಾರರು ಪಡೆದ ಸಾಲ ಸಕಾಲದಲ್ಲಿ ಮರುಪಾವತಿ ಮಾಡಿದರೆ ಠೇವುದಾರರಿಗೆ ಹಣ ಮರಳಿ ಕೊಡಲು ಅನುಕೂಲವಾಗುತ್ತದೆ ಎಂದರು.

ಸಂಘದ ಅಧ್ಯಕ್ಷ ಮಹಾದೇವ ಪಟಾತ್, ಜಿಪಂ ಮಾಜಿ ಸದಸ್ಯ ಫಕೀರಪ್ಪ ಹದ್ದನ್ನವರ, ಬ್ಯಾಂಕ್ ನಿರೀಕ್ಷಕ ಎಸ್.ಎನ್.ಸಿದ್ದನ್ನವರ, ತಾಲೂಕ ನಿಯಂತ್ರನಾಧಿಕಾರಿ ಚಂದ್ರಶೇಖರ ಕೊರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ ಅಂಗಡಿ, ವಾಯ್ .ಎಸ್.ನರಿ, ಭೀಮಪ್ಪ ಮಳಗಲಿ, ಶಿವಪ್ಪ ಅಗಸಿಮನಿ, ಭೀಮಪ್ಪ ಚುಂಚನೂರ, ವಿಠ್ಠಲ ಮಾದರ, ಹನುಮಂತ ಅಗಸಿಮನಿ, ನಿಂಗಪ್ಪ ನರಿ, ರಮೇಶ ಪಟಾತ, ಸಿದ್ದಪ್ಪ ಮಳಗಲಿ, ಮುಂಡಲೀಕ ಮಳಗಲಿ ಮತ್ತಿತರಿದ್ದರು.



ಕಿರುಸುದ್ದಿ

ಉತ್ತಮ ಸಾಧನೆ

ಬಾದಾಮಿ: ತಾಲೂಕಿನ ಮುತ್ತಲಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ)ಗೆ 2025 – 26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಶೇ.100 ಬಂದಿದೆ. ಶಾಲೆಯಲ್ಲಿ ಒಟ್ಟು 56 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿದ್ದರು. ಪರೀಕ್ಷೆಗೆ ಹಾಜರಾದ ಎಲ್ಲ 56 ಜನರು ಉತ್ತೀರ್ಣರಾಗುವ ಮೂಲಕ ಶಾಲೆಯ ಫಲಿತಾಂಶ 100% ಬಂದಿದೆ.ಶಾಲೆಗೆ ಶೌಭಾಗ್ಯ ಕಳಸನ್ನವರ(ಶೇ.96.96) ಪ್ರಥಮ, ಪ್ರಕಾಶ ಅನವಾಲ(ಶೇ.93.60)ದ್ವಿತೀಯ, ಹುಲಿಗೆವ್ವ ಹಳ್ಳಿ(ಶೇ.93.12) ತೃತೀಯ ಸ್ಥಾನ ಹಾಗೂ ನವೀನ ಮಾದರ(ಶೇ.90.70), ಕಾವೇರಿ ಸಿಂಗನ್ನವರ(ಶೇ.90.40), ಸುಜಾತಾ ಹಳ್ಳಿ(ಶೇ.91.68), ಸ್ನೇಹಾ ಮಾಳಗಿ(ಶೇ.90) ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಒಟ್ಟು ಮಕ್ಕಳಲ್ಲಿ ಡಿಸ್ಟಿಂಕ್ಷನ್–34, ಪ್ರಥಮ ದರ್ಜೆ–14, ದ್ವಿತೀಯ ದರ್ಜೆ–6, ಪಾಸ್–2 ಉತ್ತೀರ್ಣರಾಗಿದ್ದಾರೆ. ಶಾಲೆಯ ಪೇಟೇಜ್ 88 ಆಗಿದೆ ಎಂದು ಪ್ರೌಢಶಾಲೆಯ ಪ್ರಭಾರಿ ಮುಖ್ಯಶಿಕ್ಷಕಿ ಶಶಿಕಲಾ ಎಂ. ತಿಳಿಸಿದ್ದಾರೆ.



ಅಭಿನಂದನೆ: ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಎಸ್.ಡಿ.ಎಂ.ಸಿ.ಅಧ್ಯಕ್ಷ ಎಸ್.ಎಸ್. ಮಾಳಗಿ, ಮುಖ್ಯ ಶಿಕ್ಷಕಿ ಶಶಿಕಲಾ ಎಮ್, ನಿಕಟ ಪೂರ್ವ ಪ್ರಭಾರಿ ಮುಖ್ಯ ಶಿಕ್ಷಕ ಎ.ಪಿ.ಮೇಟಿ, ಎಸ್.ಡಿ.ಎಂ.ಸಿ. ಎಲ್ಲ ಸದಸ್ಯರು, ಹಾಗೂ ಊರಿನ ಹಿರಿಯರು, ಶಾಲೆಯ ಎಲ್ಲ ಶಿಕ್ಷಕರು ಅಭಿನಂದಿಸಿದ್ದಾರೆ.

ಶೇ. 98.41ರಷ್ಟು ಫಲಿತಾಂಶ

ಬಾದಾಮಿ: ತಾಲೂಕಿನ ಕೆರಕಲಮಟ್ಟಿ ಗ್ರಾಮದ ಶ್ರೀಮಂತ ಮಹೇಶ ಪಾಂ.ನಾಡಗೌಡರ ಸರಕಾರಿ ಪ್ರೌಢಶಾಲೆಗೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ. ಫಲಿತಾಂಶ ಶೇ.98.41ರಷ್ಟು ಬಂದಿದೆ. ಒಟ್ಟು 63 ಮಕ್ಕಳಲ್ಲಿ 62 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಗೆ ನಾಗರಾಜ ದೊಡಮನಿ(ಶೇ.97.76) ಪ್ರಥಮ, ಲಲಿತಾ ಮುಚಖಂಡಿ (ಶೇ. 92.80) ದ್ವಿತೀಯ, ಸೌಮ್ಯ ಮಾಯಪ್ಪನ್ನವರ(ಶೇ.92) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಪ್ರಭಾರಿ ಮುಖ್ಯಶಿಕ್ಷಕ ಎಸ್.ವೈ.ಮಡಿವಾಳರ ತಿಳಿಸಿದ್ದಾರೆ.



ಅಭಿನಂದನೆ: ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷ ಮಹೇಶ ಪಾಂಡುರಂಗ ನಾಡಗೌಡರ, ಶಿಕ್ಷಕರು, ಸಿಬ್ಬಂದಿಗಳು, ಎಸ್‌ಡಿಎಂಸಿ ಪದಾಧಿಕಾರಿಗಳು, ಸದಸ್ಯರು, ಪಾಲಕರು ಅಭಿನಂದನೆ ಸಲ್ಲಿಸಿದರು.

ಉತ್ತಮ ಫಲಿತಾಂಶ

ಬಾದಾಮಿ: ಪಟ್ಟಣದ ಶ್ರೀ ಕಾಳಿದಾಸ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶಾಲೆಗೆ ಸತೀಶ ಶಿವನಗೌಡ ಗೌಡರ(ಶೇ97.12) ಪ್ರಥಮ, ಆಕಾಶ ಹೆಗ್ರಿ(ಶೇ95.36) ದ್ವಿತೀಯ, ಪ್ರೀತಿ ಸಿದ್ದಲಿಂಗಪ್ಪ ಉಗಲವಾಟ(ಶೇ88.16) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಶಾಲೆಯ ಮುಖ್ಯಶಿಕ್ಷಕ ಆನಂದ ಪ್ರಭನ್ನವರ ತಿಳಿಸಿದ್ದಾರೆ.



ಅಭಿನಂದನೆ: ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ, ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ, ಕಾರ್ಯದರ್ಶಿ, ಶಾಸಕ ಭೀಮಸೇನ ಚಿಮ್ಮನಕಟ್ಟಿ, ಆಡಳಿತಾಧಿಕಾರಿ ಡಾ.ರಾಘವನ್ ಕೆ, ಮುಖ್ಯಶಿಕ್ಷಕ ಆನಂದ ಪ್ರಭನ್ನವರ, ಸಹಶಿಕ್ಷಕರು, ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಅನುಸೂಯಾ ಉಕುಮನಾಳ ನಿಧನ

ಜಮಖಂಡಿ: ನಗರದ ರಾಮೇಶ್ವರ ಕಾಲೋನಿಯ ನಿವಾಸಿ, ಆರೋಗ್ಯ ಇಲಾಖೆಯ ನಿವೃತ್ತ ಕಿರಿಯ ಆರೋಗ್ಯ ನಿರೀಕ್ಷಕಿ, ಅನುಸೂಯಾ ಮುಕ್ಕಣ್ಣ ಉಕುಮನಾಳ(80) ನಿಧನರಾಗಿದ್ದಾರೆ. ಮೃತರು ನಗರಸಭೆ ಮಾಜಿ ಅಧ್ಯಕ್ಷೆ ಹಾಗೂ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯದರ್ಶಿ ವಿಜಯಲಕ್ಷ್ಮೀ ಉಕುಮನಾಳ ಅವರ ಸಹೋದರಿಯಾಗುದ್ದರು. ಮೃತರಿಗೆ ಇಬ್ಬರು ಪುತ್ರಿಯರು, ಹಾಗೂ ಒರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗದವರಿದ್ದಾರೆ.





ಗಲಗಲಿ: ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಭಾನುವಾರ ಲಕ್ಷ್ಮೀ ನರಸಿಂಹ ಉತ್ಸವಕ್ಕೆ ಚಾಲನೆ ನೀಡಲಾಯಿತು. ಉತ್ಸವದ ನಿಮಿತ್ಯ ಪಲ್ಲಕ್ಕಿ ಸೇವೆ ಗ್ರಾಮ ಪ್ರದಕ್ಷಣೆ ನಡೆಯಿತು. ಈ ಸಂದರ್ಭದಲ್ಲಿ ಶ್ರೀನಿವಾಸ ಆಚಾರ್ಯ ಗಲಗಲಿ, ಹಣಮಂತ ದೇಶಪಾಂಡೆ, ಆದಿತ್ಯ ಅಂಬೇಕರ್, ರವಿ ಪಡನಿಸ್, ಕಿರಣ ಅಂಬೇಕರ್, ಶ್ರೀಹರಿ ದೇಶಪಾಂಡೆ ಮುಂತಾದವರಿದ್ದರು.

ಕಾಶಿಲಿಂಗೇಶ್ವರ ಜಾತ್ರಾ ಮಹೋತ್ಸವ

ಜಮಖಂಡಿ: ಸಮೀಪದ ಹುನ್ನೂರು ಗ್ರಾಮದಲ್ಲಿ ಗ್ರಾಮದ ಆಧಿ ದೇವತೆ ಕಾಶಿಲಿಂಗೇಶ್ವರ ಜಾತ್ರೆಯು ವಿಜೃಂಭಣೆಯಿಂದ ನಡೆಯಿತು.

ಬನಸಿದ್ಧೇಶ್ವರರು ಮೂಲತಃ ತಾಲೂಕಿನ ಆಲಗೂರ ಗ್ರಾಮದವರಾದ ಇವರು ಪವಾಡ ಪುರುಷರಾಗಿದ್ದರು ಅವರೇ ಈ ಕಾಶಿಲಿಂಗೇಶ್ವರನ್ನು ಪ್ರತಿಷ್ಠಾಪಿಸಿದ್ದಾರೆ ಎಂದು ಐಹಿತ್ಯವಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಈ ಜಾತ್ರೆ ಪ್ರತಿ 12 ವರ್ಷಕ್ಕೊಮ್ಮೆ ನಡೆಯುತ್ತಿದ್ದು, 12 ಜ್ಯೋತಿರ್ಲಿಂಗಗಳನ್ನು ವಿಶೇಷವಾಗಿ ಸ್ಥಾಪನೆ ಮಾಡಲಾಗಿದೆ. ಹಿಮಾಲಯದಿಂದ 12 ಗಿಡಮೂಲಿಕೆಗಳು ಹಾಗೂ ಕುರಿ ಹಾಲಿನೊಂದಿಗೆ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಪ್ರತೀತಿಯಿದೆ.

ಈ ಜಾತ್ರೆಯಲ್ಲಿ ಡೊಳ್ಳು ಕುಣಿತ ವಿಶೇಷತೆಯನ್ನು ತೋರಿಸುತ್ತದೆ. ಸುಮಾರು 4 ದಿನಗಳ ಕಾಲ ಅವ್ಯಾಹತವಾಗಿ ಈ ಜಾತ್ರೆಯು ದೊಡ್ಡ ಪ್ರಮಾಣದಲ್ಲಿ ನೆರವೇರುತ್ತದೆ. ಜಾತ್ರೆಯ ದಿನದಂದು ಕುಂಭಮೇಳ ಹಾಗೂ ಮುತ್ತೈದೆಯರ ಆರತಿ, ಸಕಲ ವಾದ್ಯ ಡೊಳ್ಳು ಮೇಳದೊಂದಿಗೆ ಬೀರಸಿದ್ಧೇಶ್ವರ ಪಲ್ಲಕ್ಕಿ, ಪರಮೇಶ್ವರ ಪಲ್ಲಕ್ಕಿ, ಕಾಶಿಲಿಂಗೇಶ್ವರ ಪಲ್ಲಕ್ಕಿ, ಯಳಮಳಸಿದ್ಧೇಶ್ವರ ಪಲ್ಲಕ್ಕಿ, ಮಾಳಿಂಗರಾಯ ಪಲ್ಲಕ್ಕಿ, ಬೀರಸಿದ್ಧೇಶ್ವರ ಪಲ್ಲಕ್ಕಿ, ಶ್ರೀ ಗುರು ಜಟ್ಟಿಂಗರಾಯ ಪಲ್ಲಕ್ಕಿ, ಕಾಶಿಲಿಂಗೇಶ್ವರ ಪಲ್ಲಕ್ಕಿ, ಶ್ರೀ ಕಾಶಿಲಿಂಗೇಶ್ವರ ಪಲ್ಲಕ್ಕಿ, ಕಾಶಿಲಿಂಗೇಶ್ವರ ಪಲ್ಲಕ್ಕಿಗಳೊಂದಿಗೆ ಗಂಗಾ ಸ್ನಾನಕ್ಕೆ ಹೋಗಿಗ್ರಾಮದಲ್ಲಿ ಮೆರವಣಿಗೆ, ರಾತ್ರಿ ಶ್ರೀ ಭೀಮಶಂಕರ ಡೊಳ್ಳಿನ ಗಾಯನ ಸಂಘಉತ್ನಾಳ ಹಾಗೂ ಶ್ರೀ ಮಾರಾಯ ಸಿದ್ದೇಶ್ವರ ಡೊಳ್ಳಿನ ಗಾಯನ ಸಂಘ ಕುಂಬಾರಹಳ್ಳ ಇವರಿಂದ ಡೊಳ್ಳಿನ ಪದಗಳು ಜರುಗಿದವು.



ಜಮಖಂಡಿ: ಸಮೀಪದ ಹುನ್ನೂರು ಗ್ರಾಮದಲ್ಲಿ ಗ್ರಾಮದ ಅಧಿ ದೇವತೆ ಕಾಶಿಲಿಂಗೇಶ್ವರ ಜಾತ್ರೆಯು ವಿಜೃಂಭಣೆಯಿಂದ ನಡೆಯಿತು.

ಮಾನವ ಕುಲಕ್ಕೆ ಜ್ಯೋತಿಬಾ ಫುಲೆ ಕೊಡುಗೆ ಅಪಾರ

ತೇರದಾಳ: ಮಹಾತ್ಮ ಜ್ಯೋತಿಬಾ ಫುಲೆಯವರ ಅದ್ದೂರಿ ಕಾರ್ಯಕ್ರಮ ನೋಡಿ ನನ್ನ ಮನ ತುಂಬಿಬಂದಿತು. ಇದೊಂದು ಅವಿಸ್ಮರಣಿ ಕಾರ್ಯಕ್ರಮವಾಗಿದೆ. ಇಂತಹ ದೃಶ್ಯವನ್ನು ನೋಡುವಂತಹ ಭಾಗ್ಯ ಸಿಕ್ಕಿದ್ದು ನನ್ನ ಅದೃಷ್ಟವೆನ್ನುತ್ತೇನೆ. ಸಮಾನತೆಯ ಹರಿಕಾರ, ಸಾಮಾಜಿಕ ಕ್ರಾಂತಿಯ ಮೂಲ ಪುರುಷ ಜ್ಯೋತಿಬಾ ಫುಲೆ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅವರು ಕೇವಲ ಮಾಳಿ ಸಮಾಜಕಷ್ಟೇ ಕೊಡುಗೆ ನೀಡಲಿಲ್ಲ ಇಡೀ ಮಾನವ ಕುಲಕ್ಕೆ ಕೊಡುಗೆ ನೀಡಿದ ಶ್ರೇಷ್ಠ ಪುರುಷ ಎಂದು ಬೆಂಗಳೂರಿನ ಮಾಜಿ ಶಾಸಕ ಎಲ್.ಎನ್. ನರೇಂದ್ರ ಬಾಬು ಹೇಳಿದರು.



ಪಟ್ಟಣದಲ್ಲಿ ಶನಿವಾರದಂದು ಶ್ರೀ ಪಿ.ಬಿ.ಹೈಸ್ಕೂಲ್ ಆವರಣದಲ್ಲಿ ಮಹಾತ್ಮ ಜ್ಯೋತಿಬಾ ಫುಲೆಯವರ 199ನೇ ಜನ್ಮದಿನಾಚರಣೆ ನಿಮಿತ್ಯ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾಳಿ ಸಮಾಜವೂ ದೊಡ್ಡ ಸಮಾಜ ಇದರ ಕವಲು ಹಲವಾರು ರಾಜ್ಯಗಳಲ್ಲಿ ಹರಡಿಕೊಂಡಿದೆ. ಬೇರೆ ರಾಜ್ಯಕ್ಕೆ ಹೋಲಿಸಿದಾಗ ನಮ್ಮ ರಾಜ್ಯದಲ್ಲಿ ಸಂಘಟನೆಯ ಕೊರತೆ ಕಾಣುತ್ತಲಿದೆ. ಸಂಘಟನೆಯಿಂದಲೇ ಶಕ್ತಿ, ಸಂಘಟನೆ ಇದ್ದಲ್ಲಿ ಅಧಿಕಾರ ಹುಡುಕಿಕೊಂಡು ಬರುತ್ತದೆ. ಡಾ.ಬಾಬಾಸಾಹೇಬ ಅಂಬೇಡ್ಕರವರು ಹೇಳಿದಂತೆ ಮೊದಲು ಶಿಕ್ಷಣ ನಂತರ ಸಂಘಟನೆ ಆಮೇಲೆ ಹೋರಾಟ ಎಂಬುದನ್ನು ಮರೆಯಬಾರದು. ಪ್ರಶ್ನಿಸುವ ತಾಕತ್ತು ಸಂಘಟನೆಗೆ ಮಾತ್ರ ಇದೆ. ಹಿಂದುಳಿದ ವರ್ಗದಲ್ಲಿರುವ ಸಣ್ಣಸಣ್ಣ ಸಮಾಜಗಳು ಒಗ್ಗಟ್ಟಾಗದೆ ಹೋದರೆ ರಾಜಕೀಯ ಶಕ್ತಿ ಸಿಗೋದಿಲ್ಲ. ಪಕ್ಷವಾಗಲಿ ಅಥವಾ ಸರಕಾರಗಳಾಗಲಿ ತಪ್ಪುಮಾಡಿದರೆ ಅವುಗಳ ಕಿವಿ ಹಿಂಡುವ ಶಕ್ತಿ ಸಂಘಟನೆಗೆ ಇದೆ. ಸಾಮಾಜಿಕ ಸಮಾನತೆ ಎನ್ನುವುದು ಕೇವಲ ಪುಸ್ತಕಕ್ಕೆ ಸೀಮಿತವಾಗಿದೆ ಕಾರಣ ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಅನಿವಾರ್ಯ.ಯುವಶಕ್ತಿಯಲ್ಲಿ ಒಳ್ಳೆಯ ಚಿಂತನೆಯನ್ನು ಬಿತ್ತೋಣ ಎಂದರು.

ಮಹಾತ್ಮಾ ಜ್ಯೋತಿಭಾ ಫುಲೆಯವರ ಸ್ಮರಣೆಗಾಗಿ ಬೆಂಗಳೂರಿ ನಲ್ಲಿ ಪುತ್ಥಳಿ ನಿರ್ಮಿಸೋಣ. ಪ್ರಸ್ತುತ ನಮ್ಮ ಸಮಾಜದಲ್ಲಿ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ಹಾಸ್ಟಲ ಕೊರತೆಯಿಂದ ಶಿಕ್ಷಣವನ್ನು ಅರ್ಧದಲ್ಲೆ ಮೊಟಕುಗೊಳಿಸುತ್ತಿದ್ದಾರೆ. ಕಾರಣ ಅಂತಹ ಮಕ್ಕಳಿಗಾಗಿ ಸರಕಾರದಿಂದ ವಸತಿನಿಲಯಗಳನ್ನು ನಿರ್ಮಿಸಿಕೊಳ್ಳೋಣ. ನಮ್ಮ ಸಮಾಜದ ಏಳ್ಗೆಗಾಗಿ ಒಗ್ಗಟ್ಟಾಗೋಣ ರಾಜಕೀಯದಲ್ಲಿ ಅಧಿಕಾರ ಹಿಡಿಯೋಣ ಎಂದರು.

ಶಾಸಕ ಸಿದ್ದು ಸವದಿ, ಸಿದ್ದು ಕೊಣ್ಣೂರ, ಬಸವರಾಜ ಕೊಕಟನೂರ ಮಾತನಾಡಿದರು.

ಜ್ಞಾನೇಶ್ವರ ಮಹಾಸ್ವಾಮಿಗಳು, ಗಂಗಾಧರ ದೇವರು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಪ್ರಭುಮಹಾರಾಜರು, ತುಳಜಪ್ಪ ಅಥಣಿ, ಡಾ.ವ್ಹಿ. ಎಸ್.ಮಾಳಿ, ಪ್ರವೀಣ ನಾಡಗೌಡ, ಕಡಪಟ್ಟಿ ನ್ಯಾಯವಾದಿಗಳು, ಬರಮು ಉಳ್ಳಾಗಡ್ಡಿ, ಶಿವಶಂಕರ ಮುಕರಿ, ವಿಜಯ ಮಾಳಿ, ಪರಪ್ಪ ದೇಸ್ತೋಟ, ಸದಾಶಿವ ಮಠಾಣಿ, ಶಂಕರ ಹೂಗಾರ, ವಾಸು ಮೂಡಲಗಿ, ಇನ್ನಿತರರು ಇದ್ದರು. ಬಸವರಾಜ ಬಾಳಿಕಾಯಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಂ.ಬಿ.ಮಾಳೇದ ಸ್ವಾಗತಿಸಿದರು, ಶೃತಿ ನಿಗಡೆ ನಿರೂಪಿಸಿದರು, ಶ್ರೀಶೈಲ ಹಳ್ಳೂರ ವಂದಿಸಿದರು.

ಸೃಜನಾತ್ಮಕವಾಗಿ ಬದುಕು ರೂಪಿಸಿಕೊಳ್ಳಿ

ಬಾಗಲಕೋಟೆ: ಆಧುನಿಕ ಜಗತ್ತಿನಲ್ಲಿಂದು ವಿದ್ಯಾರ್ಥಿಗಳು ಪುಸ್ತಕದ ಜ್ಞಾನಾರ್ಜನೆಯಿಂದ ದೂರ ಸರಿಯುವ ವಾತಾವರಣ ನಿರ್ಮಾಣವಾಗುತ್ತಿದೆ. ನಮ್ಮ ನೆಲದ ಜನಪದರು ಕಲೆ, ಸಂಸ್ಕೃತಿ ಸಂಪ್ರದಾಯವನ್ನು ಶ್ರೀಮಂತಗೊಳಿಸಿದ್ದು, ಬದುಕು ಸೃಜನಾತ್ಮಕವಾಗಿ ರೂಪಿಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ನೌಕರರ ಸಂಘದ ಜಿಲ್ಲಾಧ್ಯಕ್ಷ ಆನಂದ ಹಲಕುರ್ಕಿ ಹೇಳಿದರು.

ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ 'ಸೃಜನೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಬದುಕು ಸುಂದರಗೊಳ್ಳಬೇಕಾದರೆ ಶಿಕ್ಷಣ, ಸಂಸ್ಕಾರ, ಪರಿಶ್ರಮ ಅಗತ್ಯವಾಗಿದೆ. ಗುರು ಹಿರಿಯರು ಹಾಕಿಕೊಟ್ಟಿರುವ ಮಾರ್ಗವನ್ನು ಜೀವನದಲ್ಲಿ ಅನುಸರಿಸಿಕೊಂಡಾಗ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಮಾತನಾಡಿ, ವಿದ್ಯಾರ್ಥಿಗಳು ಮೊದಲು ಜ್ಞಾನ ಸಂಪಾದನೆ ಮಾಡಿಕೊಂಡು ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಸಮಾಜದಲ್ಲಿ ಆದರ್ಶವಾದ ವ್ಯಕ್ತಿತ್ವ ಕಟ್ಟಿಕೊಳ್ಳಲು ತಾವು ಪಡೆಯುವ ಶಿಕ್ಷಣದ ಮೂಲಕ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರೊ.ಪರಸಪ್ಪ ತಳವಾರ, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಡಾ.ಸುಮಂಗಲಾ ಮೇಟಿ, ಕ್ರೀಡಾ ನಿರ್ದೇಶಕರಾದ ನೀಲಪ್ಪ ಕುರಿ, ರಾಜ್ಯಶಾಸ್ತ್ರ ವಿಬಾಗದ ಮುಖ್ಯಸ್ಥ ಪ್ರೊ.ಸಂಪತ್ತ ಲಮಾಣಿ, ಇಂಗ್ಲೀಷ್ ವಿಭಾಗ ಮುಖ್ಯಸ್ಥ ಪ್ರೊ.ಶಿವಶಂಕರ ಪ್ರಸಾದ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಮುಬೀನ್ ಬೆಳಗಾಂ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸುಮನ್ ಮುಚಖಂಡಿ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಲೇಪಾಕ್ಷಯ್ಯ ಸೇರಿದಂತೆ ಬೋಧಕರು, ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಧೃತಿ ಕುರಬರ ಸ್ವಾಗತಿಸಿದರು, ಸಂಗಮೇಶ ಕಾಂಬಳೆ ಅತಿಥಿಗಳ ಪರಿಚಯ ಮಾಡಿದರು, ವಿಜಯಕುಮಾರ ಕೊಮಾರ ಮತ್ತು ಚಂದ್ರಮತಿ ಪಾಟೀಲ ನಿರೂಪಿಸಿದರು, ಶಿವಕುಮಾರ ಪಿಂಡರಕಿ ವಂದಿಸಿದರು.



ಮುಕ್ತ ಕಬಡ್ಡಿ ಪಂದ್ಯಾವಳಿ ಇಂದಿನಿಂದ

ಕಲಾದಗಿ: ಸಮೀಪದ ಐತಿಹಾಸಿಕ ಧಾರ್ಮಿಕ ಕ್ಷೇತ್ರ ತುಳಸಿಗೇರಿ ಆಂಜನೇಯನ ಓಕಳಿ ನಿಮಿತ್ಯ ರಾಜ್ಯ ಅಂತರಾಜ್ಯ ಮಟ್ಟದ ಹೊನಲು ಬೆಳಕಿನ ಮುಕ್ತ ಕಬಡ್ಡಿ ಪಂದ್ಯಾವಳಿ ಏ.27ರಿಂದ ಮೂರು ದಿನಗಳ ಕಾಲ ನಡೆಯಲಿದೆ.

ತುಳಸಿಗೇರಿ ಗ್ರಾಮದ ಪವನಪುತ್ರ ಕಬಡ್ಡಿ ತಂಡದ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಅಮೇಚ್ಯೂರ ಕಬಡ್ಡಿ ಅಸೋಸಿಯೇಷನ್, ಬಾಗಲಕೋಟೆ ಜಿಲ್ಲಾ ಕಬಡ್ಡಿ ಅಸೋಸಿಯೇಷನ್ ಸಹಯೋಗದಲ್ಲಿ ಈ ಕಬಡ್ಡಿ ಪಂದ್ಯಗಳು ನಡೆಯಲಿದ್ದು ದೇವಸ್ಥಾನದ ಹತ್ತಿರದ ಆವರಣದಲ್ಲಿ ಮ್ಯಾಟಗಳ ಮೇಲೆ ಪಂದ್ಯಗಳು ನಡೆಯಲಿದ್ದು ವೀಕ್ಷಕರಿಗಾಗಿ ದೊಡ್ಡದಾದ ಗ್ಯಾಲರಿ ವ್ಯವಸ್ಥೆ ಮಾಡಲಾಗಿದೆ.

ಏ.27ರಂದು ಸಂಜೆ ಓಕಳಿ ಕಾರ್ಯಕ್ರಮ ಮುಗಿದ ನಂತರ ರಾಜ್ಯ ಹಾಗೂ ಅಂತರಾಜ್ಯ ಕಬಡ್ಡಿ ತಂಡಗಳನ್ನು ಬರಮಾಡಿಕೊಳ್ಳಲಾಗುವುದು.



ಏ.28ರಂದು ಸಂಜೆ 4ಗಂಟೆಗೆ ಉದ್ಘಾಟನಾ ಪಂದ್ಯಾವಳಿ ನಡೆಯಲಿದ್ದು ಉದ್ಘಾಟನಾ ಕಾರ್ಯಕ್ರಮಕ್ಕೆ ಸ್ವಗ್ರಾಮ ತುಳಸಿಗೇರಿಯ ನಿವಾಸಿಗಳಾದ ವಿಧಾನ ಪರಿಷತ ಸದಸ್ಯ ಪಿ.ಎಚ್.ಪೂಜಾರ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಅಜಯಕುಮಾರ ಸರನಾಯಕ, ಮಾಜಿ ಸಚಿವ ಮುರುಗೇಶ ನಿರಾಣಿ, ನಾಗಪ್ಪ ಸೊನ್ನದ, ಸಂಗಣ್ಣ ಮುಧೋಳ, ಪಾಂಡಪ್ಪ ಪೋಲಿಸ, ಹನಮಂತ ಭಂಗಿ, ಹನಮಂತ ಚನ್ನಾಳ, ಬಶೆಟ್ಟೆಪ್ಪ ಅಂಗಡಿ, ಪ್ರವೀಣ ಆರಕೇರಿ, ಮಂಜುಗೌಡ ಪಾಟೀಲ, ರಮೇಶ ಕೊಳಚಿ ಸೇರಿದಂತೆ ಅನೇಕ ಗಣ್ಯರು ಈ ಸಂದರ್ಭದಲ್ಲಿ ಪಾಲ್ಗೊಳ್ಳುವರು ಎಂದು ಸಂಘಟಕರು ತಿಳಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ

ಜಮಖಂಡಿ: ನಗರದ ಹೊರವಲಯದ ಆಲಗೂರ ಪುನರ್ವಸತಿ ಕೇಂದ್ರದಲ್ಲಿರುವ ಆದರ್ಶ ವಿದ್ಯಾಲಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಕುಳಿತ ಎಲ್ಲ 77 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 36 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡ ವಿಷಯದಲ್ಲಿ 34, ಹಿಂದಿ 21, ಸಮಾಜ ವಿಜ್ಞಾನ 4 ವಿದ್ಯಾರ್ಥಿ 100ಕ್ಕೆ 100 ಅಂಕಪಡೆದಿದ್ದಾರೆ. ಇದರಲ್ಲಿ ಆದರ್ಶ ಬಸಗೊಂಡನವರ 625ಕ್ಕೆ 616 ಅಂಕ ಪಡೆದು ಶೇ.98.56 ಹಾಗೂ ಸ್ನೇಹಾ ಜಾಧವ 625ಕ್ಕೆ 616 ಅಂಕ ಪಡೆದು ಶೇ.98.56 ಶಾಲೆಗೆ ಪ್ರಥಮ. ಆದಿತ್ಯಾ ಮಾಳಶೆಟ್ಟಿ 613, ಅನುಷ್ಕಾ ದ್ಯಾವಗೊಂಡ 613 ಅಂಕ ಪಡೆದು ಶೇ. 98.06 ದ್ವಿತಿಯ, ಮಹಮ್ಮದಆಶ್ರಫ್ ಮಸೂತಿ 612 ಅಂಕ ಪಡೆದು ಶೇ. 97.92 ತೃತೀಯ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಮುಖ್ಯ ಶಿಕ್ಷಕ ನರಸಿಂಹ ಕಲ್ಲೋಳಿ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಎಸ್.ಡಿ.ಎಮ್.ಸಿ ಅಧ್ಯಕ್ಷ ದುಂಡಯ್ಯ ಹಿರೇಮಠ ಹಾಗೂ ಸರ್ವ ಸದಸ್ಯರು, ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ಶೇ. 100ರಷ್ಟು ಸಾಧನೆ

ರನ್ನ ಬೆಳಗಲಿ: ಕಳೆದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಶೇ. 100ರಷ್ಟು ಫಲಿತಾಂಶ ದಾಖಲಿಸಿದೆ.



ಸಹನಾ ಈಶ್ವರ ಕುಗಾಟೆ 609(97.44%) ಪ್ರಥಮ, ಚೇತನ ಲಕ್ಷ್ಮೀ ತಳಗೇರಿ 607 (97.12%) ದ್ವಿತೀಯ, ಸ್ನೇಹ ಯಲ್ಲಪ್ಪ ವಡ್ಡರ 606(96.96%) ತೃತೀಯ,

ಅಶ್ವಿನಿ ವಿಠ್ಠಲ ಚೇಂಬರ 597(95.52%), ತನುಜಾ ಕುಮಾರ ಕಾಂಬಳೆ 594 (95.04%), ಕಾವೇರಿ ಕಾಡಪ ಸಾರವಿ 593 (94.88%), ಸಿಂಧುಶ್ರೀ ಪರಮಾನಂದ ಸಂಕ್ರಟಿ 591(94.56%), ಅಂಕಿತಾ ಚಂದ್ರಶೇಖರ ಕಾಂಬಳೆ 590 (94.40%), ರಂಜಿತಾ ನಾಗಪ್ಪ ಗೊನ್ನಾಗೋಳ 583(93.28%), ಸಹನಾ ಲಕ್ಷ್ಮಣ್ ಚಾಂಬರ 575(92.00%), ಹಣಮಂತ ಶಿವಪ್ಪ ಭೂಮಾರ 571 (91.36), ಸ್ನೇಹಾ ದುರ್ಗಪ್ಪ ಗುಡೇನ್ನವರ 567 (90.72), ಸಾಹಿತ್ಯ ವಿಶ್ವನಾಥಮೇತ್ರಿ 564 (90.24) ರಷ್ಟು ಅಂಕಗಳ ನ್ನು ಪಡೆದು ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ, ಪ್ರಾಚಾರ್ಯ ಎಮ್.ವಿ. ಸೊಪ್ಪಿಮಠ, ನಿಲಯ ಪಾಲಕರಾದ ಕೆ.ಎಸ್ ಉಳ್ಳಾಗಡ್ಡಿ, ಶಿಕ್ಷಕರಾದ ರಾಹುಲ ಸಾಗರ, ಯಲ್ಲಪ್ಪ ಶಿರಗಾಂವಿ, ನಿಂಗಪ್ಪ ಜಂಗಾಲಿ, ಸುರೇಶಕುಮಾರ ಮುದಕನ್ನವರ, ಕಾಂತು ಕಲಶೇಟ್ಟಿ, ಎಂ.ಬಿ. ತೇರದಾಳ, ಶೃತಿ ಪೋಲಿಸನವರ, ಶಿಲ್ಪಾ ಹಾರೂಗೇರಿ, ವಿಲಾಸ ಆರ್. ಎಣ್ಣೆ, ಜಿ.ಎಂ. ಮಠಪತಿ, ಶಿವಶಂಕರಯ್ಯ ವೀರಕ್ತಮಠ, ಗಜಾನನ ಗಾಜಾರ ಹಾಗೂ ಪಾಲಕಪೋಷಕರು, ಶಿಕ್ಷಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ

ಹುನಗುಂದ: ತಾಲೂಕಿನ ಸರ್ಕಾರಿ ಆದರ್ಶ ವಿದ್ಯಾಲಯ (ಆರ್ ಎಂಎಸ್‌ಎ) ಹುನಗುಂದ ಶಾಲೆಯು ಉತ್ತಮ ಸಾಧನೆ ಮಾಡಿದೆ. ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಾದ ಶ್ರದ್ಧಾ ಕಟಗಿ 615 ಅಂಕ ಪಡೆದು ಶೇ. 98.40 ರಷ್ಟು ಸಾಧನೆ ಮಾಡಿ ಪ್ರಥಮ ಸ್ಥಾನ, ಅನುಷಾ ಕೆಸರಭಾವಿ 614 ಅಂಕ ಪಡೆದು ಶೇ. 98.24 ರಷ್ಟು ಸಾಧನೆ ಮಾಡಿ ದ್ವಿತೀಯ ಸ್ಥಾನ, ಹಾಗೂ ಭೂಮಿಕಾ ಪಾಟೀಲ 613 ಅಂಕ ಪಡೆದು ಶೇ. 98.08 ರಷ್ಟು ಸಾಧನೆ ಮಾಡಿ ತೃತೀಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿರುತ್ತಾರೆ.



ಶಾಲೆಯಲ್ಲಿ ಒಟ್ಟು 74 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, ಶೇ 100ಕ್ಕೆ 100 ರಷ್ಟು ಫಲಿತಾಂಶ ಆಗಿದ್ದು, 57 ವಿದ್ಯಾರ್ಥಿಗಳು ಡಿಸ್ಟಿಂಗಷನ್, 16 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿರುತ್ತಾರೆ. ಅವರಿಗೆ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರು, ಮತ್ತು ಶಾಲೆಯ ಸರ್ವ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿರುತ್ತಾರೆ.

ಶಂಕರ ಸಣಪಾಗೆ ಸಂಗೀತ ಸೇವಾರತ್ನ ಪ್ರಶಸ್ತಿ

ಗುಳೇದಗುಡ್ಡ: ಪಟ್ಟಣದ ಶಿಕ್ಷಕ, ಸಂಗೀತ ಕಲಾವಿದ ಶಂಕರ ಸಣಪಾ ಅವರು ಕಳೆದ 20 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಮಾಡುತ್ತಿರವ ಸಾಧನೆಯನ್ನು ಪರಿಗಣಿಸಿ ಬೆಂಗಳೂರಿನ ಕನ್ನಡ ಫೀಲ್ಮ ಛೆಂಬರ್ ವತಿಯಿಂದ ನೀಡುವ ರಾಜ್ಯಮಟ್ಟದ ಸಂಗೀತ ಸೇವಾರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಫೀಲ್ಮ ಛೇಂಬರ್‌ನ ಅಧ್ಯಕ್ಷ ಡಾ. ಎಂ.ಎಸ್.ರವೀಂದ್ರ ತಿಳಿಸಿದ್ದಾರೆ.



ಇಂದು ವಿಶೇಷ ಚಿಂತನಾಗೋಷ್ಠಿ

ಗಲಗಲಿ: ಸ್ಥಳೀಯ ಗಾಲವ ಮಹರ್ಷಿ ಚಿಂತನ ವೇದಿಕೆ ಇವರ ಆಶ್ರಯದಲ್ಲಿ ವಿಶೇಷ ಸಾಪ್ತಾಹಿಕ ಚಿಂತನಾಗೋಷ್ಠಿಯನ್ನು ಏ.27ರಂದು ಆಯೋಜಿಸಲಾಗಿದೆ. ಗ್ರಾಮದ ಗಾಲವ ಶಿಕ್ಷಣ ಸಂಸ್ಥೆ ಆವರಣದಲ್ಲಿ ಸಂಜೆ 4.30 ಗಂಟೆಗೆ ಕಾರ್ಯಕ್ರಮ ನಡೆಯಲಿದೆ.

ಅಧ್ಯಕ್ಷತೆಯನ್ನು ಪರಿಸರ ತಜ್ಞ ಡಾ. ಎಂ. ಆರ್. ದೇಸಾಯಿ ಅವರು ವಹಿಸುವರು. ಉಪನ್ಯಾಸಕರಾಗಿ ಜನಪದ ವಿದ್ವಾಂಸ ಬಿ.ಆರ್. ಪೊಲೀಸ್ ಪಾಟೀಲ್ ಆಗಮಿಸಿ ಜಾನಪದದಲ್ಲಿ ಶಿವಾನುಭವ ವಿಷಯದ ಬಗ್ಗೆ ಮಾತನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಸಹಕಾರಿ ಧುರೀಣ ನಿಂಗಣ್ಣ ಗೋಳಿಪಲ್ಲಿ, ಧಾರವಾಡದ ಬಾಲ ವಿಕಾಸ ಅಕಾಡೆಮಿ ನಿರ್ದೇಶಕ ಎಚ್.ವೈ. ಜರಾಳಿ ಹಾಗೂ ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶಲ್ಲಿಕೇರಿ ಆಗಮಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ: ಕ್ರಮಕ್ಕೆ ಬಿಜೆಪಿ ಮನವಿ

ಮಹಾಲಿಂಗಪುರ: ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು, ಅದೇ ರೀತಿ ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ವಿಷ ಸರ್ಪವಿದ್ದಂತೆ ಅವರನ್ನು ಕೊಲ್ಲದಿದ್ದರೆ ನೀವು ಬದುಕುವುದಿಲ್ಲ ಎಂದು ಕುರಾನಿನಲ್ಲಿ ಬರೆದಿದೆ ಎಂದು ಹೇಳಿಕೆ ನೀಡಿ ಮುಸಲ್ಮಾನರಿಗೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಸದಸ್ಯರನ್ನು ಕೊಲ್ಲಲು ಪ್ರಚೋದಿಸಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಮತ್ತು ಬಿಜೆಪಿ ಮತ್ತು ಸಂಘ ಪರಿವಾರದವರಿಗೆ ರಕ್ಷಣೆ ನೀಡಬೇಕು ಎಂದು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮಲ್ಲು ದಲಾಲ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಯುವ ಮೋರ್ಚಾ ಮತ್ತು ನಗರ ಘಟಕದ ವತಿಯಿಂದ ಮಹಾಲಿಂಗಪುರ ಪೊಲೀಸ್ ಠಾಣೆಗೆ ದೂರು ನೀಡಿ ಮಾತನಾಡಿದ ಅವರು, ಕೇವಲ ಅಲ್ಪಸಂಖ್ಯಾತರನ್ನು ಓಲೈಸುವ ಉದ್ದೇಶದಿಂದ ಅತ್ಯಂತ ಜವಾಬ್ದಾರಿ ಸ್ಥಾನದಲ್ಲಿರುವ ಖರ್ಗೆಯವರು ಪ್ರಚೋದನಕಾರಿ ಭಾಷಣ ಮಾಡಿ ದೇಶದಲ್ಲಿರುವ ಲಕ್ಷಾಂತರ ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ಜೀವಕ್ಕೆ ಅಪಾಯ ತಂದಿದ್ದಾರೆ. ಇದು ಇದು ಮತಿಗೇಡಿ ಉತ್ತೇಜನವಾಗಿದ್ದು ದೇಶಾದ್ಯಂತ ಇರುವ ಸಂಘ ಪರಿವಾರದ ಮೇಲೆ ಮಾಡಿರುವ ದಾಳಿಯಾಗಿದೆ ಪರಿಣಾಮ ದೇಶವ್ಯಾಪಿ ದಾಳಿಗಳು ಸಂಭವಿಸಬಹುದು. ಧಾರ್ಮಿಕ ಮತ್ತು ಸಮುದಾಯಗಳ ನಡುವಿನ ಸೌಹಾರ್ದತೆಗೆ ಭಂಗ ತರುವ ಮತ್ತು ಸಂಘರ್ಷಕ್ಕೆ ಕಾರಣವಾಗುವ ಹೇಳಿಕೆಯಾಗಿದೆ ಆದ್ದರಿಂದ ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು



ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಸಚಿವರಾಗಿರುವ ಪ್ರಿಯಾಂಕ ಖರ್ಗೆ ಅವರು ಕೂಡ ಪದೇ ಪದೇ ಆರ್‌ಎಸ್‌ಎಸ್ ವಿರುದ್ಧ ವಿಷಕಾರಿ ಹೇಳಿಕೆಗಳನ್ನು ನೀಡುವುದು ಸಮಾಜಘಾತುಕ ಶಕ್ತಿಗಳು ಸರ್ಕಾರದ ಸಹಾನುಭೂತಿಯನ್ನು ದುರುಪಯೋಗಪಡಿಸಿಕೊಳ್ಳಲು ಪ್ರಚೋದನೆಯಾಗಿ ಆರ್ ಎಸ್ ಎಸ್ ಕಾರ್ಯಕರ್ತರಮೇಲೆ ದಾಳಿ ಮಾಡಿ ಜೀವಕ್ಕೆ ಅಪಾಯ ಮಾಡುವ ಸಾಧ್ಯತೆ ಇದೆ ಆದ್ದರಿಂದ ಕೂಡಲೇ ತಂದೆ ಮಕ್ಕಳಿಬ್ಬರ ಮೇಲೆ ಸೂಕ್ತ ಕ್ರಮ ಕೈಗೊಂಡು ಸಂಘ ಪರಿವಾರದ ಕಾರ್ಯಕರ್ತರನ್ನು ಸಂರಕ್ಷಿಸಬೇಕೆಂದು ಆಗ್ರಹಿಸಿದ್ದಾರೆ.

ಕಾರ್ಯಕರ್ತರಾದ ಜಿ.ಎಸ್.ಗೊಂಬಿ, ಚನ್ನಪ್ಪ ಪಟ್ಟಣಶೆಟ್ಟಿ, ಗುರುಪಾದ ಅಂಬಿ, ಚನ್ನಬಸು ಯರಗಟ್ಟಿ, ಮಹೇಶ ಮುಕುಂದ, ವಿಜಯ ಸಬಕಾಳೆ, ಮಹಾಲಿಂಗಪ್ಪ ಕಂಠಿ, ನಾಗಪ್ಪ ಖೋತ, ಶಿವನಗೌಡ ಪಾಟೀಲ, ಜಗದೀಶ ಜಕ್ಕನ್ನವರ, ಶೇಖರ ಮಗದುಮ್, ಮಹೇಶ ಜಿಡ್ಡಿಮನಿ, ಮಹೇಶ ಚಿಂಚಲಿ, ಮಹಾದೇವ ಸಾವಂತ, ಮಹಾಲಿಂಗ ಬುದ್ನಿ, ವೀರೇಶ ಮುಂಡಗನೂರ, ಅಜಯ ಹಂದ್ರಾಳ, ಬಸವರಾಜ ಮಡಿವಾಳ, ಮಹಾಂತೇಶ ಪಾತ್ರೋಟ, ರವಿ ಗಿರಿಸಾಗರ, ಸಂತೋಷ ಭಜಂತ್ರಿ, ಕುಮಾರ ನಾರಾಯಣಕರ ಇತರರಿದ್ದರು.

ಶಂಕರಾಚಾರ್ಯರ ಜಯಂತಿ: ಶೋಭಾಯಾತ್ರೆ

ಮುಧೋಳ: ಶಂಕರ ಭಗವತ್ಪಾದಾಚಾರ್ಯರ ಜಯಂತಿಯನ್ನು ನಗರದ ಶ್ರೀದತ್ತ ದೇವಸ್ಥಾನದಲ್ಲಿ ಭಕ್ತಿಭಾವದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶ್ರೀಶಂಕರ ಸೇವಾ ಸಮಿತಿಯವರು ಮಹಿಳಾ ಭಜನಾ ಮಂಡಳಿಯವರು ಹಾಗೂ ವಿಪ್ರ ಸಮಾಜ ಬಾಂಧವರ ಆಶ್ರಯದಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವದ ನಿಮಿತ್ಯ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.

ಇದಕ್ಕೂ ಮೊದಲು ಬೆಳಗ್ಗೆ ನಗರದಲ್ಲಿ ಶ್ರೀಶಂಕರರ ಭಾವಚಿತ್ರದ ಮೆರವಣಿಗೆ ಸಕಲ ವಾದ್ಯಮೇಳದೊಂದಿಗೆ ನಡೆಸಲಾಯಿತು.

ನಂತರ ನಡೆದ ಸಭೆಯಲ್ಲಿ ಶಂಕರಾಚಾರ್ಯರರು ತಮ್ಮ ಅಲ್ಪಾಯುಷದಲ್ಲಿ ಕಾಲ್ನಡಿಗೆಯಲ್ಲಿ ದೇಶ ಸಂಚರಿಸಿ ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯನ್ನು ಮಾಡಿರುವುದನ್ನು ಸ್ಮರಿಸಲಾಯಿತು.

ಪ್ರಮುಖರಾದ ವಲ್ಲಭಕವಠೇಕರ, ಪ್ರಮೋದ ಬಾಜಿ, ಡಾ.ಆನಂದ ಕುಲಕರ್ಣಿ, ಅಶೋಕ ಕುಲಕರ್ಣಿ, ಬಾಲಚಂದ್ರ ಕವಠೇಕರ, ವೆಂಕಟೇಶ ಕೊಲ್ಹಾರ, ಸಂಜೀವ ದಿಡ್ಡಿ, ರವಿ ಕುಲಕರ್ಣಿ, ಯು.ಆರ್.ವಾಳ್ವೇಕರ, ಪ್ರವೀಣ ಬಾಜಿ, ಸುನೀಲ ನಾಯಿಕ, ರಾಮನಗೌಡ ನಾಡಗೌಡ, ವಿ.ಎಚ್.ಕುಲಕರ್ಣಿ, ರಮೇಶ ಘೋಡಖಿಂಡಿ, ರಿಸಬೂಡ, ಹಾಗೂ ಮಹಿಳೆಯರಿದ್ದರು.



ದಾಸಿಮಯ್ಯ ಮೂರ್ತಿ ಮೆರವಣಿಗೆ



ಕಮತಗಿ: ಪಟ್ಟಣದಲ್ಲಿ ದೇವರ ದಾಸಿಮಯ್ಯ ಮೂರ್ತಿಯ ಭವ್ಯ ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ ಸಂಭ್ರಮದಿಂದ ನಡೆಯಿತು.

ಪಟ್ಟಣದ ಹೊಳೆ ಹುಚ್ಚೇಶ್ವರ ಸಂಸ್ಥಾನ ಮಠದ ಆವರಣದಲ್ಲಿ ಹೊಳೆ ಹುಚ್ಚೇಶ್ವರ ಶ್ರೀಗಳು ಮೂರ್ತಿಗೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಮಠದಿಂದ ಆರಂಭವಾದ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪಾರ್ವತಿ ಪರಮೇಶ್ವರ ಸಾಂಸ್ಕೃತಿಕ ಭವನಕ್ಕೆ ಬಂದು ತಲುಪಿತು. ಮೆರವಣಿಗೆಯಲ್ಲಿ ಮಹಿಳೆಯರು ಆರತಿ ಹಾಗೂ ಕುಂಭ ಹೊತ್ತು ಭಕ್ತಿಭಾವದಿಂದ ಭಾಗವಹಿಸಿದ್ದು ಗಮನ ಸೆಳೆಯಿತು. ಪಾರ್ವತಿ ಪರಮೇಶ್ವರ ಸಾಂಸ್ಕೃತಿಕ ಭವನದ ಆವರಣದಲ್ಲಿ ದೇವರ ದಾಸಿಮಯ್ಯ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ದ್ವಾರ ಬಾಗಿಲು ಉದ್ಘಾಟನೆ ಕಾರ್ಯಕ್ರಮ ಜರುಗಿತು.

ಹಟಗಾರ ಸಮಾಜದ ಅಧ್ಯಕ್ಷ ಮಹಾದೇವಪ್ಪ ಚೌಡಾಪೂರ, ಮುರುಗೇಶ ಕಡ್ಲಿಮಟ್ಟಿ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಸವರಾಜ ಕುಂಬಳಾವತಿ, ಮಾಜಿ ಅಧ್ಯಕ್ಷ ರಮೇಶ ಜಮಖಂಡಿ, ಎಸ್.ಎಸ್.ಮಂಕಣಿ, ಗೋಪಾಲ ವನಕಿ, ಗಣೇಶ ಕ್ಯಾದಿಗ್ಗೇರಿ ಸೇರಿದಂತೆ, ಕಮತಗಿ ಪಟ್ಟಣದ ಎಲ್ಲ ಸಮಾಜದ ಗುರುಹಿರಿಯರು ಭಾಗವಹಿಸಿದ್ದರು.

ಕಿರುಸುದ್ದಿ

ಉತ್ತಮ ಸಾಧನೆ

ಇಂಡಿ: ತಾಲೂಕಿನ ಲಚ್ಯಾಣ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ 10 ನೇ ತರಗತಿ ವಿದ್ಯಾರ್ಥಿನಿ ಸ್ಥಳಿಯ ನಿವಾಸಿ ಬಡ ಕುಟುಂಬದ ಬಾಲಕಿ ಪಾರ್ವತಿ ಭೀಮರಾಯ ಬಡಿಗೇರ ಇತ್ತೀಚೆಗೆ ನಡೆದ ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 615 ಅಂಕ (ಶೇ. 98.40) ಪಡೆದು ಕನ್ನಡ ಮಾಧ್ಯಮ ವಿಭಾಗದಲ್ಲಿ ಇಂಡಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ.



ಇದಲ್ಲದೆ ಇದೇ ಶಾಲೆಯ ವಿದ್ಯಾರ್ಥಿಗಳಾದ ರಕ್ಷಿತಾ ಮುಜಗೊಂಡ ಶೇ. 97. 12 ರಷ್ಟು ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದರೆ, ಅಕ್ಷತಾ ಬಡಿಗೇರ ಹಾಗೂ ಸಾಯಿನಾಥ ಹೆಗಡ್ಯಾಳ ಶೇ. 93.76 ರಷ್ಟು ಅಂಕ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದು ಸಾಧನೆಗೈದಿದ್ದಾರೆ.

ಈ ಬಾರಿ ಶಾಲೆಯ ಒಟ್ಟು 164 ವಿದ್ಯಾರ್ಥಿಗಳಲ್ಲಿ 159 ಅಂದರೆ ಶೇ. 95. 38 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಪೈಕಿ 25 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 83 ಪ್ರಥಮ ಸ್ಥಾನ ಹಾಗೂ 34 ದ್ವಿತೀಯ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಸಕ ಯಶವಂತರಾಯಗೌಡ ಪಾಟೀಲ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಸಯಿದಾ ಮುಜಾವರ, ಶಾಲಾ ಅಭಿವೃದ್ಧಿ ಸಮೀತಿ ಅಧ್ಯಕ್ಷ ಈರಣ್ಣ ಕಾರಕಲ್, ಶಾಲೆಯ ಮುಖ್ಯೋಪಾಧ್ಯಾಯ ಬಿ. ಎಲ್. ಪಾಟೀಲ, ದೈಹಿಕ ಶಿಕ್ಷಕ ಎಂ. ಎಸ್. ಪಾಟೀಲ ಹಾಗೂ ಸಿಬ್ಬಂದಿ ವರ್ಗ, ಗ್ರಾಮದ ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಲುಕ್ಮಾನ್ ಯುನಾನಿ ಮೆಡಿಕಲ್ ಕಾಲೇಜಿಗೆ ಶೇ. 100 ಫಲಿತಾಂಶ

ವಿಜಯಪುರ: ಕಳೆದ ತಿಂಗಳು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಡೆಸಿದ ಯುನಾನಿ ಸ್ನಾತಕೋತ್ತರ ಕೋರ್ಸಿನ ಅಂತಿಮ ವರ್ಷದ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಸಿಕ್ಯಾಬ ಸಂಸ್ಥೆಯ ಲುಕ್ಮಾನ್ ಯುನಾನಿ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಂತಿಮ ವರ್ಷದ ಫಲಿತಾಂಶ ಶೇ. 100 ರಷ್ಟು ಆಗಿದೆ.



ಡಾ. ಶೇಕ್ ಸಬಾಹ್ ಶೇ. 78 ಅಂಕಗಳನ್ನು ಪಡೆದುಕೊಂಡು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗಕ್ಕೆ ಪ್ರಥಮ ಸ್ಥಾನ ಪಡೆದಿದ್ದು, ಡಾ. ಮೊಹಮ್ಮದಿ ಬೇಗಮ್ ಶೇ. 74.28 ಅಂಕಗಳನ್ನು ಪಡೆದು ಔಷಧಿ ವಿಭಾಗಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಕಾಲೇಜಿಗೆ ಕೀರ್ತಿ ತಂದ ಇಬ್ಬರೂ ವೈದ್ಯ ವಿದ್ಯಾರ್ಥಿನಿಯರನ್ನು ಸಿಕ್ಯಾಬ ಸಂಸ್ಥೆಯ ಅಧ್ಯಕ್ಷ ಎಸ್. ಎಸ್. ಪುಣೆಕರ್, ಪ್ರಧಾನ ಕಾರ್ಯದರ್ಶಿ ಎ.ಎಸ್. ಪಾಟೀಲ, ಪ್ರಾಚಾರ್ಯ ಡಾ. ಶಹನಾಜ್ ಬಾನು ಮತ್ತು ಸಮಸ್ತ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಇಂದು ಅಂತಾರಾಷ್ಟ್ರೀಯ ಯೋಗ ದಿನದ ಕೌಂಟ್ ಡೌನ್ ಕಾರ್ಯಕ್ರಮ

ವಿಜಯಪುರ: ಅಂತಾರಾಷ್ಟ್ರೀಯ ಯೋಗ ದಿನದ ಕೌಂಟ್ ಡೌನ್ – 2026 ಕಾರ್ಯಕ್ರಮ ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಕಾಲೇಜಿನಲ್ಲಿ ಏ. 27ರಂದು ಬೆಳಗ್ಗೆ 6.30 ರಿಂದ ಬೆಳಗ್ಗೆ 8 ಗಂಟೆಯವರೆಗೆ ನಡೆಯಲಿದೆ.

ಕೇಂದ್ರ ಆಯುಷ್ ಸಚಿವಾಲಯದ ಪ್ರಾಯೋಜಕತ್ವದ ಅಡಿಯಲ್ಲಿರುವ ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಸೇರಿ ವಿವಿಧ ಯೋಗ ಕೇಂದ್ರಗಳ ಆಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶ್ವದ್ಯಾಂತ ಯೋಗದ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಈ ಪೂರ್ವಸಿದ್ಧತೆ ಕಾರ್ಯಕ್ರಮವು ಅತ್ಯಂತ ಮಹತ್ವದ್ದಾಗಿದೆ. ಯೋಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಹುದಾಗಿದೆ. ಭಾಗವಹಿಸುವ ಸದಸ್ಯರುಗಳ ಹೆಸರನ್ನು ಆಯೋಜಕರ ಬಳಿ ನೋಂದಾಯಿಸಬಹುದಾಗಿದೆ.

ಈ ಕಾರ್ಯಕ್ರಮದಲ್ಲಿ ವಿಜಯಪುರದ ಸೈಕ್ಲಿಂಗ್ ತಂಡದ ಸದಸ್ಯರು, ಡಾ. ಮಹಾಂತೇಶ ಬಿರಾದಾರ, ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಸದಸ್ಯರು ಪಾಲ್ಗೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ (ಮೊ. 8904446624, 81235928 ಹಾಗೂ 8277192896) ಸಂಪರ್ಕಿಸಬಹುದಾಗಿದೆ ಎಂದು ಬಿಎಲ್‌ಡಿಇ ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಸುಕ್ಷೇತ್ರ ಉತ್ನಾಳ ಹಿರೇಮಠದ ಮಹಾಲಕ್ಷ್ಮೀ ದೇವಿ ಶಕ್ತಿಪೀಠದಲ್ಲಿ ಶುಕ್ರವಾರ ಜರುಗಿದ ಜಾತ್ರಾಮಹೋತ್ಸವದಲ್ಲಿ ಕನ್ನಡಪ್ರಭ ವರದಿಗಾರ ಬಸವರಾಜ ನಂದಿಹಾಳ ಅವರಿಗೆ ಶ್ರೀಮಠದ ಶಿವಪುತ್ರಯ್ಯ ಸ್ವಾಮೀಜಿ ಅವರು ಶ್ರೀಗುರು ಸೇವಾ ರತ್ನ–2026 ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಸ್ವಾಮೀಜಿ, ಗುರುಬಸವ ಸ್ವಾಮೀಜಿ, ಸಂಗಮೇಶ ಹಿರೇಮಠ ಇತರರು ಇದ್ದರು.

ಜಿಲ್ಲಾಧಿಕಾರಿಗೆ ಪಾಲಿಕೆ ಸದಸ್ಯ ರಾಜಶೇಖರ ಪತ್ರ

ವಿಜಯಪುರ: ಜಿಲ್ಲಾಡಳಿತ ವತಿಯಿಂದ ಆಚರಣೆಯಾಗುವ ಮಹನೀಯರ ಜಯಂತ್ಯುತ್ಸವ, ಸಭೆ-ಸಮಾರಂಭಗಳಿಗೆ ಮಹಾನಗರ ಪಾಲಿಕೆ ಸದಸ್ಯರನ್ನು ಆಹ್ವಾನಿಸಬೇಕು ಎಂದು ಪಾಲಿಕೆ ಸದಸ್ಯ ರಾಜಶೇಖರ ಕುರಿಯವರ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಜಯಂತ್ಯುತ್ಸವ ಹಾಗೂ ಸಭೆ-ಸಮಾರಂಭಗಳಿಗೆ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು ಭಾಗವಹಿಸುವುದು ಆಗತ್ಯವಾಗಿದೆ, ಸಾರ್ವಜನಿಕರ ಬೇಡಿಕೆಗಳನ್ನು ಮಂಡಿಸುವ ನಿಟ್ಟಿನಲ್ಲಿ ಈ ಎಲ್ಲ ಸಭೆ, ಸಮಾರಂಭಗಳಲ್ಲಿ ಪಾಲಿಕೆ ಸದಸ್ಯರು ಪಾಲ್ಗೊಳ್ಳಬೇಕಾಗಿರುವುದು ಅತ್ಯಂತ ಅಗತ್ಯವಾಗಿದೆ, ಆದರೆ ಬಹುತೇಕ ಸಭೆ-ಸಮಾರಂಭ, ವಿವಿಧ ಮಹತ್ವದ ಸಭೆಗಳಲ್ಲಿ ಜಿಲ್ಲಾಡಳಿತ ಪಾಲಿಕೆ ಸದಸ್ಯರನ್ನು ಆಹ್ವಾನಿಸುತ್ತಿಲ್ಲ, ಅನೇಕ ಕಡೆಗಳಲ್ಲಿ ಪಾಲಿಕೆ ಸದಸ್ಯರಿಗೆ ಆಹ್ವಾನ ನೀಡದೇ ಕಡೆಗಣಿಸಲಾಗುತ್ತಿದೆ, ಹೀಗಾಗಿ ಸಾರ್ವಜನಿಕರ ಸಂಬಂಧಿಸಿದ ವಿಷಯಗಳನ್ನು ಮಂಡಿಸುವುದು, ಅಧಿಕಾರಿಗಳ ಗಮನಕ್ಕೆ ತರುವುದು ಸಾಧ್ಯವಾಗುತ್ತಿಲ್ಲ, ಸಾರ್ವಜನಿಕರ ಅಭಿಪ್ರಾಯ, ಬೇಡಿಕೆಗಳು ಪೂರ್ಣ ಪ್ರಮಾಣದಲ್ಲಿ ಜಿಲ್ಲಾಡಳಿತದ ಗಮನಕ್ಕೆ ಬರುತ್ತಿಲ್ಲ, ಈ ಎಲ್ಲ ಸಮಸ್ಯೆಗಳನ್ನು ಜಿಲ್ಲಾಡಳಿತದ ಗಮನಕ್ಕೆ ತರುವ ನಿಟ್ಟಿನಲ್ಲಿ ಪಾಲಿಕೆ ಸದಸ್ಯರು ಭಾಗಿಯಾಗಬೇಕಾಗಿರುವುದು ಆಗತ್ಯವಾಗಿದೆ, ಪಾಲಿಕೆ ಸದಸ್ಯರು ಜನರಿಂದಲೇ ನೇರವಾಗಿ ಆಯ್ಕೆಯಾಗಿರುವುದಿರಂದ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸಂಪೂರ್ಣ ಅರಿವು ಅವರಿಗೆ ಇರುತ್ತದೆ, ಈ ಹಿನ್ನೆಲೆಯಲ್ಲಿ ನಗರ ವ್ಯಾಪ್ತಿಯಲ್ಲಿ ನಡೆಯುವ ಮಹತ್ವದ ಸಭೆಗಳಿಗೆ, ಸರ್ಕಾರಿ ಕಾರ್ಯಕ್ರಮಗಳಿಗೆ ಹಾಗೂ ಜಯಂತೋತ್ಸವಗಳಿಗೆ ಕಡ್ಡಾಯವಾಗಿ ಪಾಲಿಕೆ ಸದಸ್ಯರನ್ನು ಆಹ್ವಾನಿಸುವಂತೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೂ ಲಿಖಿತ ನಿರ್ದೇಶನ ನೀಡುವಂತೆ ಕುರಿಯವರ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನ ಕೆಲವು ಕಡೆಗಳಲ್ಲಿ 40 ಡಿಗ್ರಿ ಸೇಲ್ಸಿಯಸ್ ಸುಡು ಬಿಸಿಲಿಗೆ ಬಸವಾಳಿದ ಜನತೆಗೆ ಹಾಗೂ ಕಾವುವೇರಿದ ಭೂಮಿಗೆ ಭಾನುವಾರ ಮಧ್ಯಾಹ್ನ ರಭಸದ ಗಾಳಿ, ಗುಡುಗು, ಸಿಡಿಲುಸಹಿತ ಅಲ್ಪ ಮಳೆಗೆ ತುಸು ಹೊತ್ತು ಭೂಮಿಯನ್ನು ತಂಪೆರುವತ್ತೇ ಮಾಡಿತು.ರಭಸದ ಗಾಳಿ, ಗುಡುಗು, ಸಿಡಿಲು ಸಹಿತ ಅಲ್ಪ ಮಳೆಗೆ ಯಾವುದೇ ಪ್ರಾಣ ಹಾನಿಯಾದ ವರದಿಯಾಗಿಲ್ಲ ಎಂದು ತಹಶೀಲ್ದಾರ್ ವೈ. ಎಸ್. ಸೋಮನಕಟ್ಟಿ ತಿಳಿಸಿದ್ದಾರೆ. ಸಂಜೆ ವೇಳೆಗೆ ಪಟ್ಟಣದಲ್ಲಿ ಯಾವುದೇ ತಿಳಿಮೂಡದ ವಾತಾವರಣವಿದ್ದು ಝುಳದ ವಾತಾವರಣ ಮುಂದುವರಿದಿತು.

ಪ್ರಥಮ ಪುಸ್ತಕ ಮೇಳ ಯಶಸ್ವಿ | ಅನಿಲ ಹೊಸಮನಿ ಹೇಳಿಕೆ
30 ಲಕ್ಷಕ್ಕೂ ಹೆಚ್ಚು ಪುಸ್ತಕ ಖರೀದಿ

ವಿಜಯಪುರ: ಸಾಮಾಜಿಕ ಜಾಲತಾಣದಲ್ಲಿ ಮುಳುಗಿ ಹೋಗಿರುವ ಯುವಕರಿಗೆ ಪುಸ್ತಕದ ಬಗ್ಗೆ ಒಲವು ಮೂಡಿಸಿ ಅವರಲ್ಲಿ ಬುದ್ಧ, ಬಸವ, ಬಾಬಾಸಾಹೇಬರ ಚಿಂತನೆಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಥಮ ಪ್ರಯತ್ನವಾಗಿ ಮೇ ಸಾಹಿತ್ಯ ಬಳಗದಿಂದ ಸಂಘಟಿಸಲಾಗಿದ್ದ ಪುಸ್ತಕ ಮೇಳ ಯಶಸ್ವಿಯಾಗಿದೆ ಎಂದು ಮೇ ಸಾಹಿತ್ಯ ಬಳಗದ ಅನಿಲ ಹೊಸಮನಿ ಹೇಳಿದರು.



ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮೇಳದಲ್ಲಿ 30 ಲಕ್ಷಕ್ಕೂ ಹೆಚ್ಚು ಪುಸ್ತಕ ವಹಿವಾಟು ನಡೆದಿದೆ, ಜನರು ಪುಸ್ತಕದ ಬಗ್ಗೆ ಒಲವು ಕಡಿಮೆಯಾಗಿಲ್ಲಎನ್ನುವುದು ಇದಕ್ಕೆ ಮತ್ತೊಮ್ಮೆ ಸಾಕ್ಷೀಕರಿಸಿದೆ. ಈ ಮೇಳವನ್ನು ಮುಂದಿನ ವರ್ಷವೂ ಅತ್ಯಂತ ಅಚ್ಚುಕಟ್ಟುತನಿಂದ ಆಯೋಜಿಸಲಾಗುವುದು ಎಂದರು.

ಬುದ್ಧ, ಬಸವ ಹಾಗೂ ಬಾಬಾಸಾಹೇಬರ ತತ್ವ ಚಿಂತನೆ, ಆಶಯಗಳ ಆಧರಿಸಿ ಸಮಾಜ ಇನ್ನೂ ನಿರ್ಮಾಣವಾಗಿಲ್ಲ, ಈ ಮಹನೀಯರ ಸಮ ಸಮಾಜದ ಕನಸು ನನಸಾಗಿಸಲು ಪ್ರತಿಯೊಬ್ಬರು ಶ್ರಮಿಸಬೇಕಿರುವ ನಿಟ್ಟಿನಲ್ಲಿ ಪುಸ್ತಕ ಮೇಳ ಹಮ್ಮಿಕೊಳ್ಳಲಾಗಿತ್ತು. ನಮ್ಮ ಕರೆಗೆ ಓಗೊಟ್ಟು 35 ಕ್ಕೂ ಹೆಚ್ಚು ಪ್ರಕಾಶನ ಸಂಸ್ಥೆಗಳು ಆಗಮಿಸಿದ್ದವು ಎಂದರು.

ವಿಜಯಪುರದಲ್ಲಿ ಪುಸ್ತಕ ಖರೀದಿ ಆಗುವುದಿಲ್ಲ ಎಂಬ ಮನೋಭಾವ ಹೊಂದಿದ್ದರು, ಆದರೆ ಇಲ್ಲಿ ಬಂದ ಮೇಲೆ ಅವರ ಅಭಿಪ್ರಾಯ ಹಾಗೂ ಮನೋಭಾವ ಬದಲಾಗಿದ್ದು, ಅನೇಕರು ಆಸಕ್ತಿಯಿಂದ ಪುಸ್ತಕ ಖರೀದಿ ಮಾಡಿರುವುದು ಅನೇಕ ಪ್ರಕಾಶಕರಿಗೆ ಸಂತೋಷ ತಂದಿದೆ, ಹಲವು ಪ್ರಕಾಶಕರಿಗೆ ತಲಾ 5 ಲಕ್ಷ ರೂ.ಗಳಿಗೂ ಮಿಕ್ಕಿ ಪುಸ್ತಕದ ವ್ಯಾಪಾರ- ವಹಿವಾಟು ನಡೆದಿರುವುದು ಜನತೆ ಪುಸ್ತಕದ ಬಗ್ಗೆ ಹೊಂದಿರುವ ಒಲವಿಗೆ ಸಾಕ್ಷಿಯಾಗಿದೆ ಎಂದರು.

ಸಾಮಾನ್ಯ ಬಡ ಕುಟುಂಬದಿಂದ ಬಂದವರೇ ಸಂಘಟಿಸಿದ ಈ ಪುಸ್ತಕ ಮೇಳಕ್ಕೆ ಅನೇಕರು ಉದಾರವಾದ ಸಹಾಯ ಹಸ್ತ ಚಾಚಿದ್ದಾರೆ, ಅವರಿಗೆ ಮೇಳ ಚಿರಋಣಿಯಾಗಿದೆ, ಅನೇಕರು ಸ್ವಯಂ ಪ್ರೇರಿತವಾಗಿ ಶ್ರಮಿಸಿದ ದೊಡ್ಡ ಪಡೆಯೇ ಇದ್ದು, ಅವರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುವೆ ಎಂದರು.

ಮೇ ಸಾಹಿತ್ಯ ಬಳಗದ ಪ್ರಮುಖರಾದ ಚನ್ನು ಕಟ್ಟಿಮನಿ, ಯಮುನಪ್ಪ ಗುಣಕಿ, ಲಾಯಪ್ಪ ಇಂಗಳೆ, ಕಲ್ಲಪ್ಪ ಶಿವಶರಣ, ಸಾಯಬಣ್ಣ ಹಳ್ಳಿ, ಸೋಮಲಿಂಗ ರಣದೇವಿ, ಲಿಂಗರಾಜ ಬಿದರಕುಂದಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಕನ್ನಡ ಅಭಿಮಾನಿಗಳಿಗೆ ಜ್ಞಾನ ದಾಸೋಹ ಉಣ ಬಡಿಸುವಂತಾಗಲಿ: ಪೂಜಾರ

ಸಿಂದಗಿ: 2ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿದ್ವಾಂಸರಿಂದ ಗೋಷ್ಠಿಗಳನ್ನು ಏರ್ಪಡಿಸಿ ಸಮ್ಮೇಳನಕ್ಕೆ ಬಂದ ಕನ್ನಡ ಅಭಿಮಾನಿಗಳಿಗೆ ಜ್ಞಾನ ದಾಸೋಹ ಉಣ ಬಡಿಸುವಂತಾಗಲಿ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹ.ಮ ಪೂಜಾರ ಹೇಳಿದರು.

ಸಿಂದಗಿ ತಾಲೂಕ ಪಂಚಾಯತ ಸಭಾಂಗಣದಲ್ಲಿ ಜರುಗಿದ ಸಾಹಿತಿಗಳ, ಲೇಖಕರ, ಕವಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಳೆದ 14 ವರ್ಷದ ಹಿಂದೆ ಸಿಂದಗಿಯಲ್ಲಿ ಜಿಲ್ಲಾ ಸಮ್ಮೇಳನ ಜರುಗಿತ್ತು. ಈಗ ಹಮ್ಮಿಕೊಳ್ಳಲಾಗಿರುವ ಸಮ್ಮೇಳನಕ್ಕೆ ಸಿಂದಗಿ ತಾಲೂಕಿನ ಎಲ್ಲ ಕನ್ನಡ ಅಭಿಮಾನಿಗಳು ತನು, ಮನ, ದನದಿಂದ ಸಹಕಾರ ನೀಡುವುದು ಅತ್ಯಗತ್ಯ ಎಂದರು.

ಈ ವೇಳೆ ವಿಶ್ರಾಂತ ಗುರುಮಾತೆ ಜಯಶ್ರೀ ಕುಲಕರ್ಣಿ ಮಾತನಾಡಿ, ಮಹಿಳೆಯರ ಕುರಿತು ಗೋಷ್ಠಿಯನ್ನು ಏರ್ಪಡಿಸಬೇಕು. ಸ್ಥಳೀಯ ಮಹಿಳೆಯರಿಗೆ ಸೂಕ್ತ ವೇದಿಕೆ ನೀಡಬೇಕು. ಎಂಭತ್ತು ವರ್ಷ ಮೀರಿದ ಸಾಧಕ ಮಹಿಳೆಯರನ್ನು ವೇದಿಕೆಯಲ್ಲಿ ಗೌರವಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಎಚ್ .ಜಿ.ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎ.ಆರ್.ಹೆಗ್ಗನದೊಡ್ಡಿ, ವಿಶ್ರಾಂತ ಪ್ರಾಚಾರ್ಯ ರಾ.ಶಿ.ವಾಡೆದ, ತಾಲೂಕ ಕಸಾಪ ಅಧ್ಯಕ್ಷ ವೈ.ಸಿ.ಮಯೂರ, ಶಿಕ್ಷಕಿ ಶೋಭಾ ಚಿಗರಿ, ಶೈನಾಬಿ ಮಸಳಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಕಸಾಪ ತಾಲೂಕು ಗೌರವ ಕಾರ್ಯದರ್ಶಿ ಆನಂದ ಶಾಬಾದಿ, ಮಹಿಳಾಪರ ಹೋರಾಟಗಾರ್ತಿ ಜಗದೇವಿ ಬಿರಾದಾರ, ಶರಣು ಲಂಗೋಟಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್. ಎಸ್.ಸಾತಿಹಾಳ, ಶಿವಕುಮಾರ ಶಿವಸಿಂಪಿ, ಶಾಂತುರಾಣಾಗೋಳ,ಸುನಂದಾಯಂಪೂರೆ, ಅನಸೂಯಾ ಪಾರಗೊಂಡ, ಪುರುಶೋತ್ತಮ ಕುಲಕರ್ಣಿ, ಶಾಂತಾ ಮೋಸಲಗಿ, ರಾಚೂ ಕೊಪ್ಪ, ಡಾ.ವಾಯ್.ಡಿ.ನಾಟೀಕಾರ, ಡಾ.ಎನ್.ಎಮ್.ಚಪ್ಪರಬಂದ, ವೀರ್ ಪಾಟೀಲ, ನಾಗೇಶ ತಳವಾರ, ಬಸವರಾಜ ಅಗಸರ, ಅಮರ ಗಾಯಕವಾಡ, ರಮೇಶ ಬಡದಾಳ, ರಾಜಶೇಖರ ಕಂಬಾರ ಸೇರಿದಂತೆ ಇತರರು ಇದ್ದರು.



ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸಲು ಪೋಷಕರಿಗೆ ಮನವಿ

ವಿಜಯಪುರ: ಜಿಲ್ಲೆಯಲ್ಲಿ 5 ರಿಂದ 17 ವರ್ಷ ದ ಒಟ್ಟು 68,000 ಮಕ್ಕಳ ಕಡ್ಡಾಯ ಬಯೋಮೆಟ್ರಿಕ್ ಅಪ್ಡೇಟ್ ಬಾಕಿ ಇದ್ದು, ಈ ಮಕ್ಕಳ ಬಯೋಮೆಟ್ರಿಕ್ ಅನ್ನು ಸೆ. 30ರೊಳಗೆ ಉಚಿತವಾಗಿ ಮಾಡಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದ್ದಾರೆ.

ಜಿಲ್ಲೆಯ ಎಲ್ಲ ಆಧಾರ್ ಕೇಂದ್ರಗಳಲ್ಲಿ ಸೆ. 30 ರವರೆಗೆ ಉಚಿತವಾಗಿ ಅವಕಾಶ ಕಲ್ಪಿಸಲಾಗಿರುತ್ತದೆ. ಪೋಷಕರು ತಮ್ಮ ಮಕ್ಕಳ ಆಧಾರ್ ಕಾರ್ಡ್ ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ ತಮ್ಮ ಹತ್ತಿರದ ಆಧಾರ್ ಕೇಂದ್ರಗಳಿಗೆ ಭೇಟಿ ನೀಡಿ ನವೀಕರಿಸಿಕೊಳ್ಳಬಹುದಾಗಿದೆ.

ಹಾಗಾಗಿ ಜಿಲ್ಲೆಯ ಎಲ್ಲ ಪೋಷಕರು 5 ರಿಂದ 17 ವಯೋಮಿತಿಯ ಮಕ್ಕಳ ಆಧಾರ್ ಸಂಖ್ಯೆಗೆ ಕಡ್ಡಾಯ ಬಯೋಮೆಟ್ರಿಕ್ ಅಪ್ ಡೇಟ್ ಪ್ರಕ್ರಿಯೆಯನ್ನು ಜವಾಬ್ದಾರಿಯಿಂದ ನಿರ್ವಹಿಸಿ ತಮ್ಮ ಮಕ್ಕಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿ ಶಗುಫ್ತಾ ಮಸಳಿಗೆ ಸನ್ಮಾನ



ಇಂಡಿ: ಇತ್ತೀಚೆಗೆ ಜರುಗಿದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಇಂಗಳಗಿ ಗ್ರಾಮದ ಪ್ರತಿಭಾನ್ವಿತ ವಿದ್ಯಾರ್ಥಿನಿ ಶಗುಫ್ತಾ ಶಫಿಕ್ ಪಟೇಲ್ ಮಸಳಿ 625 ಅಂಕಗಳಿಗೆ 616 ಅಂಕಗಳನ್ನು ಪಡೆದು ಶೇಕಡಾ 98.56% ರಷ್ಟು ಅಂಕಗಳನ್ನು ಪಡೆಯುವ ಮೂಲಕ ಗ್ರಾಮೀಣ ಭಾಗದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಪ್ರತಿಭಾನ್ವಿತ ವಿದ್ಯಾರ್ಥಿನಿ ಮೂಲತಹ ಕೃಷಿ ಮನೆತನದಲ್ಲಿ ಜನಿಸಿದ ಶಗುಫ್ತಾ ಶಫಿಕ್ ಪಟೇಲ್ ಮಸಳಿ ಅವರು ಒಟ್ಟು 625 ಅಂಕಗಳಿಗೆ 616 ಅಂಕಗಳನ್ನು ಗಳಿಸಿರುವ ಶಗುಫ್ತಾ ಕನ್ನಡ ಮತ್ತು ಹಿಂದಿ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆಯುವ ಮೂಲಕ ಅದ್ವಿತೀಯ ಸಾಧನೆ ಮಾಡಿದ್ದಾರೆ. ಇವರ ಈ ಯಶಸ್ಸಿನಿಂದ ಇಡೀ ಇಂಗಳಗಿ ಗ್ರಾಮದಲ್ಲಿ ಸಂಭ್ರಮದ ವಾತಾವರಣ ಮನೆಮಾಡಿದೆ.

ಮಗಳ ಈ ಅತ್ಯುನ್ನತ ಸಾಧನೆಯ ಬಗ್ಗೆ ಹೆಮ್ಮೆಯಿಂದ ಮಾತನಾಡಿರುವ ಶಗುಫ್ತಾ ಅವರ ತಂದೆ ಶಫಿಕ್ ಪಟೇಲ್ ಅವರು, ''ನನ್ನ ಮಗಳ ಈ ಸಾಧನೆ ನಮಗೆ ಅತೀವ ಸಂತೋಷ ತಂದಿದೆ. ಅವಳು ಮೊದಲಿನಿಂದಲೂ ಓದಿನಲ್ಲಿ ಬಹಳ ಆಸಕ್ತಿ ಹೊಂದಿದ್ದಳು. ಸಮಯದ ವ್ಯರ್ಥ ಮಾಡದೆ ಶಿಸ್ತಿನಿಂದ ಅಭ್ಯಾಸ ಮಾಡುತ್ತಿದ್ದಳು. ಗ್ರಾಮೀಣ ಭಾಗದಲ್ಲಿ ಸೌಲಭ್ಯಗಳು ಕಡಿಮೆ ಇದ್ದರೂ, ಅವಳು ತೋರಿದ ದೃಢ ನಿರ್ಧಾರ ಇಂದು ಅವಳಿಗೆ ಈ ಮಟ್ಟದ ಯಶಸ್ಸನ್ನು ತಂದುಕೊಟ್ಟಿದೆ. ಅವಳು ಮುಂದೆ ಏನಾಗಬೇಕೆಂದು ಬಯಸುತ್ತಾಳೆಯೋ, ಅದಕ್ಕೆ ನಾವು ಸಂಪೂರ್ಣ ಬೆಂಬಲ ನೀಡುತ್ತೇವೆ. ಒಬ್ಬ ತಂದೆಯಾಗಿ ಅವಳ ಶೈಕ್ಷಣಿಕ ಪ್ರಗತಿಯನ್ನು ನೋಡುವುದೇ ನನಗೆ ದೊಡ್ಡ ಹೆಮ್ಮೆ ಎಂದರು. ಅವರ ಮುಂದಿನ ಉನ್ನತ ವ್ಯಾಸಂಗಕ್ಕೆ ಇಡೀ ಗ್ರಾಮವೇ ಶುಭ ಹಾರೈಸಿದೆ.

ಈ ಸಂದರ್ಭದಲ್ಲಿ ಆನಂದ ಪವಾರ, ಹಸನ ಮುಜಾವರ, ಶಕೀಲ ಮಣ್ಣೂರ, ರಸುಪಟೇಲ ಮಸಳಿ, ಆಶೀಮ ಮುಲ್ಲಾ, ಪಾಂಡುರಂಗ ಜಾದವ, ಬಾಬು ಪಟೇಲ, ಬುಡ್ಡು ಮಣ್ಣುರ, ರಫೀಕಪಟೇಲ ಮಸಳಿ, ಬಾಬುಪಟೇಲ ಮಸಳಿ ಸೇರಿದಂತೆ ಇತರರು ಇದ್ದರು.


ವಿಲಿಯಂ ಷೇಕ್ಸಪಿಯರ್ ಜನ್ಮದಿನಾಚರಣೆ

ಬಸವನಬಾಗೇವಾಡಿ: ಇಂದು ಆಂಗ್ಲಭಾಷೆ ಇಡೀ ವಿಶ್ವವನ್ನು ಆಳುತ್ತಿರುವ ಒಂದು ಪ್ರಬಲ ಹಾಗೂ ಶಕ್ತಿಶಾಲಿಯಾದ ಭಾಷೆಯಾಗಿದೆ. ಆಂಗ್ಲಭಾಷೆಯ ಕಿಟಕಿಯ ಮೂಲಕ ಇಡಿ ಪ್ರಪಂಚವನ್ನೇ ನೋಡಬಹುದಾಗಿದೆ ಎಂದು ಆಂಗ್ಲಭಾಷಾ ಪ್ರಾಧ್ಯಾಪಕಿ ಅರ್ಚನಾ ದಂಡಾವತಿ ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಗುರುವಾರ ವಿಲಿಯಂ ಷೇಕ್ಸಪಿಯರ್ ಅವರ ಜನ್ಮದಿನವನ್ನು ಆಂಗ್ಲಭಾಷಾ ದಿನವನ್ನಾಗಿ ಆಚರಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿಷಯ ಜ್ಞಾನಕ್ಕಿಂತ ಭಾಷಾಜ್ಞಾನ ಇಂದು ನಮಗೆ ಹೆಚ್ಚಿನ ಯಶಸ್ಸನ್ನು ತಂದುಕೊಡುತ್ತಿದೆ. ಕಲಿಕಾಹಂತ ದಲ್ಲಿಯೇ ವಿವಿಧ ಭಾಷೆಗಳ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಆದರಲ್ಲಿ ಮುಖ್ಯವಾಗಿ ಆಂಗ್ಲಭಾಷೆಯ ಪ್ರಭುತ್ವ ಗಳಿಸಿಕೊಳ್ಳುವುದು ತುಂಬಾ ಅವಶ್ಯಕವಾಗಿದೆ. ವಿಲಿಯಂ ಷೇಕ್ಸಪಿಯರ್ ಅವರು ಸುನಿತ, ಪ್ರಗಾಥಗಳಲ್ಲಿ ಉತ್ತಮ ಕೊಡುಗೆ ನೀಡಿ ಆ ಭಾಷೆಗೆ ಪ್ರಪಂಚದ ಮನ್ನಣೆ ದೊರಕುವಂತೆ ಮಾಡಿದ ಪ್ರತಿಭಾನ್ವಿತ ಕವಿ, ನಾಟಕಕಾರರಾಗಿದ್ದರು.ಇವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗೆ ಅನೇಕ ಉನ್ನತಮಟ್ಟದ ಪ್ರಶಸ್ತಿ ಪುರಸ್ಕಾರಗಳು ಲಭಿಸಿದ್ದು ಅವರ ವ್ಯಕ್ತಿತ್ವದ ಹೆಗ್ಗುರುತಾಗಿದೆ ಎಂದು ಹೇಳಿದರು.

ಮಹಾವಿದ್ಯಾಲಯದ ಆಂಗ್ಲ ಭಾಷಾ ಪ್ರಾಧ್ಯಾಪಕಿ ಆರ್.ಎಮ್. ಮುಜಾವರ ಅವರು ಮಾತನಾಡಿ, ಆಧುನಿಕ ಕಾಲಘಟ್ಟದಲ್ಲಿ ವ್ಯಕ್ತಿತ್ವ ಹಾಗೂ ವೃತ್ತಿ ಬೆಳವಣಿಗೆಯಲ್ಲಿ ಆಂಗ್ಲಭಾಷೆಯ ಮಹತ್ವವನ್ನು ಕುರಿತು ಮಾತನಾಡಿದರು.

ಡಾ.ಎ.ಫ್ವಿ.ಸೂರ್ಯವಂಶಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ದರು. ಆಯ್.ಕ್ಯೂ.ಎ.ಸಿ. ಸಂಯೋಜಕರಾದ ಪ್ರೊ. ಸಿ.ಪಿ.ಧಡೇಕರ ಉಪಸ್ಥಿತರಿದ್ದರು. ಎಸ್.ಜೆ. ಸೂರ್ಯವಂಶಿ, ಎ.ಯು.ಪಾಟೀಲ, ಪ್ರಶಾಂತ ಗೂಳಪ್ಪನವರ, ಡಾ.ಕಿರಣ ಸೂಡಿ ಸೇರಿ ಇತರರು ಇದ್ದರು. ಕು.ಶಾಕಾದೇವಿ ಲಮಾಣಿ ಪ್ರಾರ್ಥಿಸಿದಳು. ಎಮ್.ಕೆ.ಯಾದವ ನಿರೂಪಿಸಿ ವಂದಿಸಿದರು.



ಎಸ್‌ಎಸ್‌ಎಲ್‌ಸಿಯಲ್ಲಿ ಶ್ರೀ ಸಿದ್ಧೇಶ್ವರ ಪ್ರೌಢಶಾಲೆಯ ಉತ್ತಮ ಸಾಧನೆ

ಚಡಚಣ: ತಾಲೂಕಿನ ಲೋಣಿ (ಬಿಕೆ) ಗ್ರಾಮದಲ್ಲಿರುವ ಶ್ರೀ ಸಿದ್ದೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿಗಳು 2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಗಮನಾರ್ಹ ಸಾಧನೆ ಮಾಡಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಈ ಪರೀಕ್ಷೆಯಲ್ಲಿ ಸಾವಿತ್ರಿ ಸಿ. ಪಾಟೀಲ 98.40% ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ. ಲಕ್ಷ್ಮಿ ಆರ್. ಖೈನೂರ್ 97.3% ಅಂಕಗಳೊಂದಿಗೆ ದ್ವಿತೀಯ ಸ್ಥಾನ, ವೀಣಾ ಸಿ. ಮಾಳಬಾಗಿ 97.2% ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಶಾಲೆಯ ಒಟ್ಟು ಫಲಿತಾಂಶವೂ ಶ್ಲಾಘನೀಯವಾಗಿದ್ದು, 13 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ, 57 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 30 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಹಾಗೂ 18 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು, ಆಡಳಿತ ಮಂಡಳಿ, ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಸರ್ವ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪಾಲಕರ ಸಹಕಾರದಿಂದ ಈ ಯಶಸ್ಸು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಸಹ ವಿದ್ಯಾರ್ಥಿಗಳು ಇದೇ ರೀತಿಯಲ್ಲಿ ಉತ್ತಮ ಸಾಧನೆ ತೋರಿಸಿ ಶಾಲೆಯ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಏರಿಸಬೇಕು ಎಂದು ಸಂಸ್ಥೆ ಆಶಿಸಿದೆ.

ತೊಗರಿ ಖರೀದಿ ಕಾಲಾವಧಿ ವಿಸ್ತರಣೆ

ವಿಜಯಪುರ: 2025– 2026 ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ 8 ಸಾವಿರ ರೂ.ಗಳಂತೆ ಖರೀದಿಸಲಾಗುತ್ತಿದೆ. ಖರೀದಿ ಅವಧಿಯನ್ನು ಮೇ 18ರವರೆಗೆ ವಿಸ್ತರಿಸಲಾಗಿದೆ. ಈ ಹಿಂದೆ ಖರೀದಿ ಅವಧಿ ಮಾ. 31 ಕ್ಕೆ ಮುಕ್ತಾಯಗೊಂಡಿದ್ದು, ಸರ್ಕಾರದ ಆದೇಶದಲ್ಲಿ ತೊಗರಿ ಉತ್ಪನ್ನವನ್ನು ಖರೀದಿಸುವ ಅವಧಿಯನ್ನು ಮೇ 18 ರವರೆಗೆ ವಿಸ್ತರಿಸಿ ಈ ಮೊದಲು ನೋಂದಾಯಿಸಿದ ರೈತರಿಂದ ಮಾತ್ರ ಖರೀದಿಸುವ ನಿರ್ದೇಶನವಿದೆ. ಹಾಗಾಗಿ ವಿಸ್ತರಿಸಲಾದ ದಿನಾಂಕದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಗೆ ಡಿಜಿಟಲ್ ಬೋರ್ಡ್ ಕಾಣಿಕೆ



ಸಿಂದಗಿ: ನಗರದ ರಾಂಪೂರ ರಸ್ತೆಯ ಹೊರ ವಲಯದಲ್ಲಿರುವ ಸಮರ್ಥ ವಿದ್ಯಾವಿಕಾಸ ಸಂಸ್ಥೆಯ ಪ್ರೇರಣಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಅಪೇಕ್ಷಾ ಹುಗ್ಗಿ ಅವರು ಓದಿದ ಶಾಲೆಗೆ ರೂ.1.12ಲಕ್ಷ ಮೌಲ್ಯದ ಡಿಜಿಟಲ್ ಬೋರ್ಡ್ ಕಾಣಿಕೆಯಾಗಿ ನೀಡಿದ್ದಾರೆ.

ಪ್ರಸಕ್ತ ಸಾಲಿನ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದು ಪ್ರಯುಕ್ತ ಮುಂದಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹುಗ್ಗಿ ಕುಟುಂಬ ಡಿಜಿಟಲ್ ಬೋರ್ಡ್‌ನ್ನು ನೀಡಿದ್ದಾರೆ. ವಿದ್ಯಾರ್ಥಿನಿ ಅಪೇಕ್ಷಾ, ಅವರ ತಂದೆ ಎಂ.ಆರ್.ಹುಗ್ಗಿ ಹಾಗೂ ತಾಯಿ ದ್ರಾಕ್ಷಾಯಿಣಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ, ನಿರ್ದೇಶಕ ಪಿ.ಡಿ.ಕುಲಕರ್ಣಿ ಮುಖ್ಯಗುರುಮಾತೆ ಎಸ್.ಐ.ಆಸ್ಕಿ, ಬಿ.ಎಸ್.ಲಾಳಸಂಗಿ, ಸಂಗೀತ ಶಿಕ್ಷಕ ವಿನಾಯಕ ಕುಲಕರ್ಣಿ, ಜ್ಞಾನೇಶ್ವರ ಹುಗಾರ, ಅಭಿಷೇಕ, ಭಾಗ್ಯಾಶ್ರೀ ಮುರುಡಿ, ಎಸ್. ನಿವೇದಿತಾ ಉಮ್ಮರಗಿ, ಶೈನಾಜ್, ಯಾಸ್ಮೀನ್, ಅಶ್ವಿನಿ, ಕವಿತಾ ಪೂಜಾರ, ದ್ರಾಕ್ಷಾಯಣಿ ಹುಗ್ಗಿ, ಸಚಿನ ಮಠಪತಿ, ಗುರುರಾಜ ಮುದ್ದೇಬಿಹಾಳ ಸೇರಿದಂತೆ ಶಾಲೆಯ ಬೋಧಕ-ಬೋಧಕೇತರ ಸಿಬ್ಬಂದಿಗಳು ಇದ್ದರು.

ಏ.28ರಂದು ಅಂತಾರಾಷ್ಟ್ರೀಯ ವೆಬಿನಾರ್

ವಿಜಯಪುರ: ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಮತ್ತು ಅಂತಾರಾಷ್ಟ್ರೀಯ ಹದಿಹರೆಯದ ಆರೋಗ್ಯ ಸಂಘಟನೆ (ಐಎಎಚ್) ಆಶ್ರಯದಲ್ಲಿ ಬಿಐಟಿಇಎಸ್ (ಬಿಐಟಿಇಎಸ್) ಅಡಿಯಲ್ಲಿ ಹದಿಹರೆಯದವರಲ್ಲಿ ಸಾಮಾಜಿಕ ಜಾಲತಾಣ ಬಳಕೆ- ನಿಷೇಧ ಮತ್ತು ಆದರಾಚೆಗೆ: ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದೃಷ್ಟಿಕೋನಗಳು ಎಂಬ ವಿಷಯದ ಕುರಿತು ಅಂತಾರಾಷ್ಟ್ರೀಯ ವೆಬಿನಾರ್ ಏ. 28 ರಂದು ನಡೆಯಲಿದೆ. ಅಂದು ಮಧ್ಯಾಹ್ನ 3.30 ರಿಂದ 5 ಗಂಟೆಯವರೆಗೆ ಈ ವೆಬಿನಾರ್ ನಡೆಯಲಿದ್ದು, ಐಎಎಚ್ ಅಂತಾರಾಷ್ಟ್ರೀಯ ಸಂಯೋಜಕ ಮತ್ತು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ತಜ್ಞೆ ಡಾ. ಪ್ರೀತಿ ಗಲಗಲಿ ನೇತೃತ್ವ ವಹಿಸಲಿದ್ದಾರೆ. ಆಸ್ಟ್ರೇಲಿಯಾದ ಖ್ಯಾತ ತಜ್ಞರಾದ ಡಾ. ಸುಸನ್ ಸಾಯರ, ಎಐಎಎಚ್ ಅಧ್ಯಕ್ಷೆ ಮಾರಿಯಾ ಡಿ. ಕಾಲಮನ ಸೇರಿದಂತೆ ಅಂತಾರಾಷ್ಟ್ರೀಯ ತಜ್ಞರು, ಹದಿಹರೆಯರ ವಿಭಾಗ, ಭಾರತೀಯ ಮಕ್ಕಳ ಸಂಸ್ಥೆಯ (ಐಎಪಿ) ಅಧ್ಯಕ್ಷೆ ಡಾ. ಸುಷ್ಮಾ ದೇಸಾಯಿ, ಕಾರ್ಯದರ್ಶಿ ಡಾ. ಶೌಮಿಕ ಘೋಷ್, ಯುವ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಮಕ್ಕಳು ಮತ್ತು ಹದಿಹರೆಯದವರಲ್ಲಿ ಸಾಮಾಜಿಕ ಜಾಲತಾಣ ಬಳಕೆಯಿಂದ ಮಾನಸಿಕ ಆರೋಗ್ಯ, ವರ್ತನೆ, ಕಲಿಕೆ ಹಾಗೂ ಆನ್‌ಲೈನ್ ಸುರಕ್ಷತೆ ಸಂಬಂಧಿತ ಅನೇಕ ಸಮಸ್ಯೆಗಳು ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಈ ವಿಷಯದ ಕುರಿತು ಚರ್ಚೆ ನಡೆಯಲಿದೆ. ವಿಶೇಷವಾಗಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ಆಸ್ಟ್ರೇಲಿಯಾದಲ್ಲಿ ನಿರ್ಬಂಧಿಸಲಾಗಿದ್ದು, ಈ ವೆಬಿನಾರ್‌ಗೆ ಹೆಚ್ಚಿನ ಮಹತ್ವ ಬಂದಿದೆ. ರಾಜ್ಯ ಸರ್ಕಾರವೂ ಇದೇ ರೀತಿಯ ನಿರ್ಬಂಧಗಳನ್ನು ಹೇರುವ ಪ್ರಸ್ತಾಪ ಮಾಡಿರುವ ಕಾರಣ, ಈ ಚರ್ಚೆಯು ಇನ್ನೂ ಮಹತ್ವಪೂರ್ಣವಾಗಿದೆ.

ಈ ಮಹತ್ವದ ಕಾರ್ಯಕ್ರಮವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಬಿ.ಎಂ. ಪಾಟೀಲ ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ. ತೇಜಶ್ವಿನಿ ವಲ್ಲಭ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಮಿತಿ ಮೀರಿದ ತಾಪಮಾನ: ಜನಜೀವನ ಅಸ್ತವ್ಯಸ್ತ

ರವೀಂದ್ರ, ನಂದೆಪ್ಪನವರ

ಮುದ್ದೇಬಿಹಾಳ: ಬಿಸಿಲು ಜಳಕ್ಕೆ ಹೆಸರು ವಾಸಿಯಾದ ವಿಜಯಪುರ ಜಿಲ್ಲೆಯಲ್ಲಿ ಪ್ರಸಕ್ತ ವರ್ಷದ ಬೇಸಿಗೆ ಬಹಳ ತೀವ್ರವಾಗಿದ್ದು ಜಾಗತಿಕ ತಾಪಮಾನದ ಪರಿಣಾಮವಾಗಿ ಈಗಾಗಲೇ 40 ಡಿಗ್ರಿ ವರೆಗೆ ಏರಿದೆ. ಇದರಿಂದ ತಾಲೂಕಿನ ಜನರ ಜೀವನದ ವಿಧಾನವು ಬದಲಾಗಿದ್ದು ಬಿಸಿಲಿನ ತಾಪಕ್ಕೆ ತತ್ತರಿಸುವಂತೆ ಆಗಿದೆ.

ಕಳೆದ ಒಂದು ವಾರದಿಂದ ಆರೋಗ್ಯ ಇಲಾಖೆ ಪ್ರಕಟಣೆಯಂತೆ ರಾಜ್ಯದಲ್ಲಿ ಬಿಸಿಗಾಳಿ ಹಾಗೂ ತಾಪಮಾನ ಹೆಚ್ಚಾಗಿರುವುದರಿಂದ ಮಧ್ಯಾಹ್ನ 12 ಗಂಟೆಗಳಿಗೆ ಸಾರ್ವಜನಿಕರು ತಮ್ಮ ಕೆಲಸ ಕಾರ್ಯವನ್ನು ಬಿಟ್ಟು ಮನೆ ಸೇರುವ ಪರಿಸ್ಥಿತಿ ಉಂಟಾಗಿದೆ. ಮಧ್ಯಾಹ್ನದ ವೇಳೆಗೆ ರಸ್ತೆಗಳು ಬಿಕೋ ಎಂದು ವಾಹನ ಸಂಚಾರ ಕಡಿಮೆಯಾಗಿದೆ. ಪಾದಾಚಾರಿಗಳು ಬಿಸಿಲಿನ ಜಳಕ್ಕೆ ಹೆದರಿ ಮನೆ ಸೇರುವಂತೆ ಆಗಿದೆ.

ಈ ವರ್ಷ ಬಿಸಿಲಿನ ಪ್ರಕರತೆ ಜೊತೆಗೆ ಸಾಮಾನ್ಯ ಪ್ರಮಾಣಕ್ಕಿಂತ ಶೇ. 91 ತಾಪ ಹೆಚ್ಚಳ ಇದೆ ಎಂದು ವರದಿಗಳು ಹೇಳುತ್ತಿವೆ. ಇದರಿಂದ ಸೆಕೆ, ಬೆವರು, ಮಕ್ಕಳು ಮತ್ತು ವಯೋವೃದ್ಧರಿಗೆ ಆರೋಗ್ಯ ಸಮಸ್ಯೆಗಳು ಕಂಡುಬರುತ್ತಿವೆ. ತಲೆ ಬಿಸಿ ಆಗುವುದು, ಕಫ ಗಟ್ಟುವುದು, ಪಿತ್ತ ದೋಷ, ತಲೆ ಸುತ್ತುವ ಸಮಸ್ಯೆಗಳು ಕಂಡುಬಂದಿವೆ. ವಯೋವೃದ್ಧರಿಗೆ ಅಂಗಾಂಗ ವೈಫಲ್ಯವು ಕಂಡುಬರುತ್ತಿದೆ ಹೀಗಾಗಿ ಹಿರಿಯರು ಮನೆಯಿಂದ ಹೊರಗೆ ಬರಲು ಹೆದರುತ್ತಿದ್ದಾರೆ. ಮಧ್ಯಾಹ್ನದ ವೇಳೆಗೆ ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸದೆ ಇರುವುದರಿಂದ ಹಳ್ಳಿಗಳಿಂದ ಕಚೇರಿಗಳಿಗೆ ಬರುವ ಸಾರ್ವಜನಿಕರು ಹಾಗೂ ಗ್ರಾಮಾಂತರ ಜನರ ಓಡಾಟವೂ ಕಡಿಮೆಯಾಗಿದೆ. ವ್ಯಾಪಾರ ವಹಿವಾಟು ಕಡಿಮೆಯಾಗಿ ಜನ ಬಿಸಿಲಿನ ಬೇಗೆಗೆ ಹೆದರಿದಂತಾಗಿದೆ.



ಏನು ಮಾಡಬೇಕು?

- ಸೂರ್ಯನ ಶಾಖ ಅಘಾತ (ಸನ್ ಸ್ಟ್ರೋಕ್) ಆದರೆ ಹೆದರಬೇಡಿ ಚೇತರಿಕೆ ಆಗಲು ಲಘು ಪಾನೀಯ, ಆಹಾರ ತೆಗೆದುಕೊಳ್ಳಿ, ಚಟುವಟಿಕೆಯಿಂದ ಇರಿ.
- ಮೇಲಿಂದ ಮೇಲೆ ನೀರು, ತಂಪು ಪಾನೀಯ ಸೇವಿಸಬೇಕು
- ಮಕ್ಕಳು ಮತ್ತು ವಯಸ್ಕರು ಬಿಸಿಲಿನಲ್ಲಿ ಹೊರಗೆ ಹೋಗಲು ಮುಂದಾಗಬಾರದು
- ಪ್ರತಿನಿತ್ಯ ಬೆಳಿಗ್ಗೆ ಲಘು ವ್ಯಾಯಾಮ ಮಾಡಬೇಕು.
- ಹಿತ, ಮಿತ, ನಿಯಮಿತ, ಪೌಷ್ಟಿಕ ಆಹಾರ ತೆಗೆದುಕೊಳ್ಳಬೇಕು.
- ನೆರಳಿರುವ, ತಂಪು ವಾತಾವರಣದಲ್ಲಿ ಕಾರ್ಯ ನಿರ್ವಹಿಸಬೇಕು
- ವೈದ್ಯರ ಸಂಪರ್ಕದ ಜೊತೆ ವೈಯಕ್ತಿಕವಾಗಿ ಆರೋಗ್ಯ ಸಮಸ್ಯೆ ತಲೆದೋರದಂತೆ ಆಹಾರ, ವಿಹಾರ, ಶ್ರಮ, ವಿಶ್ರಾಂತಿ ರೂಢಿಸಿಕೊಳ್ಳಿ

ಕಿರುಸುದ್ದಿ

ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿ

ಕೊಪ್ಪಳ: ಜಿಲ್ಲೆಯಲ್ಲಿ ಬೇಸಿಗೆ ಸಂದರ್ಭದಲ್ಲಿ ಪ್ರಾರಂಭವಾಗಬೇಕಿದ್ದ ಇನ್ನೂವರೆಗೂ ಪ್ರಾರಂಭ ಆಗದಿರುವುದು ಖೇದನಿಯ ಸಂಗತಿ. ಕೇಂದ್ರ ಸರಕಾರದ ಮಹತ್ವಕಾಂಕ್ಷಿ ಜಿರಾಮ್‌ಜಿ ಯೋಜನೆ ಅನುಷ್ಠಾನ ಗೊಳ್ಳುವವರೆಗೂ ಯಾತಸ್ಥಿತಿ ಮನರೇಗಾ ನಿಲ್ಲಿಸಿಬಾರದೆಂದು ಕೇಂದ್ರ ಸರಕಾರ ಸ್ಪಷ್ಟ ಪಡಿಸಿದೆ.



ಆದಾಗಿಯೂ ನಮ್ಮ ಜಿಲ್ಲೆಯಲ್ಲಿ ಜನ ಗುಳೆ ಹೋಗುವದು ಪ್ರಾರಂಭವಾದರೂ ಇನ್ನು ಕೂಡ ಜಿಲ್ಲಾ ಪಂಚಾಯತ್ ಮನರೇಗಾಗೆ ಚಾಲನೆ ಸಿಕ್ಕಿಲ್ಲ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನಕುಮಾರ್ ಗುಳಗಣ್ಣವರ ಹೇಳಿದರು. ಈ ಕುರಿತು ಪ್ರಕಟಣೆ ನೀಡಿದ ಅವರು, ಉದ್ಯೋಗ ಬೇಡಿ ಪಂಚಾಯತಿಗಳಿಗೆ ಜನ ಫಾರಂ 6 ಸಲ್ಲಿಸಲು ಹೋದರೆ ಗ್ರಾಮ ಪಂಚಾಯಿತಿಗಳಿಂದ ಏನು ಸ್ಪಂದನೆ ಇಲ್ಲ, ಕೇಂದ್ರ ಗ್ರಾಮೀಣ ಅಭಿವೃದ್ಧಿ ಇಲಾಖೆ ಯು ವೇತನ ಪಾವತಿಗೆ ರಾಜ್ಯಕ್ಕೆ 17744 ಕೋಟಿ ಬಿಡುಗಡೆ ಮಾಡಿ, ಯಾವುದೇ ಕಾರಣಕ್ಕೂ ಯೋಜನೆ ನಿಲ್ಲಬಾರದೆಂದು ಸೂಚಿಸಿದ್ದರು ರಾಜ್ಯ ಸರ್ಕಾರ ಇದರ ಬಗ್ಗೆ ಆಸಕ್ತಿ ತೋರುತ್ತಿಲ್ಲ ಎಂದರು. ನಮ್ಮ ಜಿಲ್ಲೆಯಲ್ಲಿ ಈ ತಿಂಗಳು 10 ಲಕ್ಷ ಮಾನವ ದಿನಗಳ ಟಾರ್ಗೆಟ್ ಇದ್ದರೂ ಕೂಡ ಇಲ್ಲಿಯವರೆಗೂ 1 ಲಕ್ಷ ಮಾನವ ದಿನಗಳು ಆಗಿಲ್ಲ. ಇದೆ ಪರಿಸ್ಥಿತಿ ಜಿಲ್ಲೆಯಲ್ಲಿ ಮುಂದೆ ವರಿದರೆ ಜನ ಗುಳೆ ಹೋಗಲು ಪ್ರಾರಂಭ ವಾಗುತ್ತೆ. ಜಿಲ್ಲಾ ಆಡಳಿತ ಬೇಗ ಮನರೇಗಾ ಯೋಜನೆ ಪ್ರಾರಂಭವಾಗದಿದ್ದರೆ ಜಿಲ್ಲೆಯಲ್ಲಿ ಕೂಲಿ ಕಾರ್ಮಿಕರಿಂದ ದೊಡ್ಡ ಹೋರಾಟ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಎಚ್.ಎಫ್.ಮಸ್ಕಿ ನೇಮಕ

ಸಿಂಧನೂರ: ದಲಿತ ಸಾಹಿತ್ಯ ಪರಿಷತ್ತಿನ ಕಲಬುರ್ಗಿ ವಿಭಾಗೀಯ ಸಂಯೋಜಕರಾಗಿ ಎಚ್.ಎಫ್.ಮಸ್ಕಿ ಅವರನ್ನು ನೇಮಿಸಿ, ರಾಜ್ಯ ಘಟಕದ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ ಆದೇಶಿಸಿದ್ದಾರೆ.



ಕಲಬುರಗಿ ವಿಭಾಗದ 7 ಜಿಲ್ಲೆಗಳ ಅಧ್ಯಕ್ಷರ ನೇಮಕ ಮಾಡುವ ಮೂಲಕ ಪ್ರತಿ ಜಿಲ್ಲೆಯಲ್ಲಿ ಕಾರ್ಯಕ್ರಮಗಳ ರೂಪಿಸಿ ಉಸ್ತುವಾರಿ ವಹಿಸಬೇಕು.ಪ್ರತಿ ತಾಲೂಕು ಹಾಗೂ ಜಿಲ್ಲೆಯ ಅಧ್ಯಕ್ಷರ ಮಾಹಿತಿಯನ್ನು ರಾಜ್ಯ ಘಟಕಕ್ಕೆ ಕಳುಹಿಸಿ, ಆಸಕ್ತರನ್ನು ಸಂಪರ್ಕಿಸಿ ಪರಿಷತ್ತಿನ ಸದಸ್ಯತ್ವ ಕೊಡಿಸಬೇಕು, ದಸಾಪಕ್ಕೆ ದತ್ತಿನಿಧಿ ಸಂಗ್ರಹಿಸಬೇಕೆಂದು ಆದೇಶ ಪತ್ರದಲ್ಲಿ ಸೂಚಿಸಲಾಗಿದೆ.

ಚವದಾಪುರಿ ಹಿರೇಮಠ ಪ್ರೌಢ ಶಾಲೆಯ ಟಾಪರ್ಸ್



ಕಲಬುರಗಿ: ನಗರದ ಶಹಾಬಜಾರದಲ್ಲಿರುವ ಚವದಾಪುರಿ ಹಿರೇಮಠ ಪ್ರೌಢ ಶಾಲೆಯ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಶಾಲೆಯ ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಸಂತಸ ವ್ಯಕ್ತಪಡಿಸಿದ್ದಾರೆ. ಈ ವರ್ಷ ವನಿತಾ ಸ್ವರ್ಣಸಿಂಗ್ 612 ಅಂಕಗಳೊಂದಿಗೆ (97.9%) ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಸೃಷ್ಟಿ ಶ್ರೀಕಾಂತ 607 ಅಂಕಗಳೊಂದಿಗೆ (97.12%) ದ್ವಿತೀಯ ಸ್ಥಾನ ಪಡೆದಿದ್ದಾರೆ. ಸೃಷ್ಟಿ ಸಿದ್ದಪ್ಪ 600 ಅಂಕಗಳು (96%) ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ.ಇನ್ನೂ ಅಮೂಲ್ಯ ಚಂದ್ರಶೇಖರ 594 ಅಂಕಗಳೊಂದಿಗೆ (95.04%) ನಾಲ್ಕನೇ ಸ್ಥಾನ ಹಾಗೂ ಐಶ್ವರ್ಯ ಖುಬು 587 ಅಂಕಗಳೊಂದಿಗೆ (93.92%) ಐದನೇ ಸ್ಥಾನವನ್ನು ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಯನ್ನು ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಪಾಲಕರು ಅಭಿನಂದಿಸಿ,ಮುಂದಿನ ವಿದ್ಯಾಭ್ಯಾಸದಲ್ಲಿಯೂ ಇದೇ ರೀತಿ ಯಶಸ್ಸು ಸಾಧಿಸಲು ಶುಭ ಹಾರೈಸಿದ್ದಾರೆ.

ಹನುಮಂತಪ್ಪ ಮಸ್ಕಿ ನಿಧನ

ಕುಷ್ಟಗಿ: ತಾಲೂಕಿನ ವಣಗೇರಿ ಗ್ರಾಮದ ಪ್ರವಾಸಿ ಮಂದಿರದ ಪರಿಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದ ಹನುಮಂತಪ್ಪ ಮಸ್ಕಿ(48) ಶನಿವಾರ ರಾತ್ರಿ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಎರಡು ಜನ ಪುತ್ರರು, ಓರ್ವ ಪುತ್ರಿ ಸೇರಿ ಅಪಾರ ಬಂಧು ಬಳಗ ಇದೆ. ಅಂತ್ಯಕ್ರಿಯೆ ಭಾನುವಾರ ಸ್ವ-ಗ್ರಾಮದಲ್ಲಿ ನೇರವೇರಿತು.



ಕುಷ್ಟಗಿ: ತಾಲೂಕಿನ ಹಿರೇಬನ್ನಿಗೋಳ ಗ್ರಾಮದಲ್ಲಿ ಶ್ರೀಮಹರ್ಷಿ ಭಗೀರಥ ಜಯಂತಿಯನ್ನು ಸಕಲ ಮಂಗಳವಾದ್ಯಗಳೊಂದಿಗೆ ಅದ್ದೂರಿಯಾಗಿ ಭಾನುವಾರ ಆಚರಿಸಲಾಯಿತು. ನಿವೃತ್ತ ಪ್ರಧಾನ ಇಂಜಿನಿಯರ್ ಪ್ರಭಾಕರ್ ಚಿಣಿ,ಜಿಪಂ ಮಾಜಿ ಸದಸ್ಯ ಕೆ.ಮಹೇಶ, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಯಲ್ಲಪ್ಪ ಗದ್ದಿ, ನಾಗರಾಜ್ ಉಪ್ಪಾರ ವಕೀಲರು, ಭಗೀರಥ ಉಪ್ಪಾರ ಸಮಾಜದ ಮುಖಂಡರಾದ ದೇವಪ್ಪ ರ‍್ಯಾವಣಕಿ, ರಂಗಪ್ಪ ಸಮಗ್ರಿ, ರಾಮಣ್ಣ ಬಳೂಟಗಿ, ಶರಣಪ್ಪ ಚಳಗೇರಿ ಇತರರಿದ್ದರು.

ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಸಾಧನೆ: ಸನ್ಮಾನ

ಯಲಬುರ್ಗಾ: ತಾಲೂಕಿನ ಹಿರೇಅರಳಿಹಳ್ಳಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲೆಯ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ಶಾಲೆಯ 218 ವಿದ್ಯಾರ್ಥಿಗಳಲ್ಲಿ 202 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಶೇ.93ರಷ್ಟು ದಾಖಲೆಯಾಗಿದೆ. ಕು.ಸಂಗೀತಾ ರಮೇಶ ಬಂಗಾರಿ 577 ಅಂಕ ಪಡೆದು ಶೇ.93.32, ಕು.ವಿಜಯಲಕ್ಷ್ಮೀ ಹನಮಪ್ಪ ತರಲಕಟ್ಟಿ 572 ಅಂಕ ಪಡೆದು ಶೇ.91.68., ಕು.ಅಶ್ವಿನಿ ಶಿವಪ್ಪ ಹೊರಪೇಟಿ 557 ಅಂಕ ಪಡೆದು ಶೇ. 89.12ರಷ್ಟು ಪಡೆದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳನ್ನು ಗ್ರಾಮಸ್ಥರು ಸನ್ಮಾನಿಸಿದರು.

ಬಳಿಕ ಎಸ್ಸೆಸ್ಸೆಲ್ಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕೆಎಂಎಫ್ ಮಾಜಿ ಉಪಾಧ್ಯಕ್ಷ ಡಾ.ಶಿವಣ್ಣ ವಾದಿ.ಎಸ್ಡಿಎಂಸಿ ಅಧ್ಯಕ್ಷ ಶರಣಗೌಡ ಪಾಟೀಲ, ಅಮರೇಶಪ್ಪ ವಾದಿ ಮಾತನಾಡಿ, ವಿದ್ಯಾರ್ಥಿಗಳು ನಿರಂತರ ಅಭ್ಯಾಸದಿಂದ ಹೆಚ್ಚು ಅಂಕಗಳನ್ನು ಪಡೆದುಕೊಂಡು ಹೆತ್ತವರ ಹಾಗೂ ಕಲಿಸಿದ ಗುರುಗಳ, ಶಾಲೆಯ ಕೀರ್ತಿ ತರುವಲ್ಲಿ ಯಶಸ್ವಿಯಾಗಿದ್ದಾರೆ. ಇದು ನಮ್ಮ ಗ್ರಾಮಸ್ಥರಿಗೆ ಸಾಕಷ್ಟು ಸಂತಸ ತಂದಿದೆ ಎಂದು ಹೇಳಿದರು.

ಶಿಕ್ಷಕರಾದ ಬಸವರಾಜ್ ಉಳ್ಳಾಗಡ್ಡಿ, ಸುರೇಖಾ, ಶಿವಶಂಕರಾಯ, ಯಲ್ಲಮ್ಮ, ಪ್ರಹ್ಲಾದ ಆಚಾರ, ಬಸವರಾಜ, ಮೌನೇಶ್ ಪತ್ತಾರ ಸೇರಿದಂತೆ ಮತ್ತಿತರರು ಇದ್ದರು.



ಯಲಬುರ್ಗಾ: ತಾಲೂಕಿನ ಹಿರೇಅರಳಿಹಳ್ಳಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲೆಯ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಹೊನ್ನಪ್ಪ ಕುರುಬರ, ಲಕ್ಷ್ಮವ್ವ ಶರಣಪ್ಪ ಬೆಣಕಲ್, ಮರಿಯಪ್ಪ ಮಳೆಪಯ್ಯ, ಶರಣರ, ಮರಿಯಪ್ಪ ಹೊರಪೇಟಿ,ಮುಖ್ಯ ಗುರುಗಳು ಪವನ್‌ಕುಮಾರ ಕಲ್ಲಯ್ಯ ಇತರರಿದ್ದರು.

ಮಸ್ಕಿ ಪಟ್ಟಣದ ಸಾರ್ವಜನಿಕರ ಪರದಾಟ

ಜಿಒಎಸ್ ಅಳವಡಿಕೆಗೆ ಮೀನಮೇಷ

▸ಸಿದ್ದಯ್ಯ ಹೆಸರೂರು

ಮಸ್ಕಿ: ರಾಯಚೂರು ಜಿಲ್ಲೆ ರಣಬಿಸಿಲಿಗೆ ತತ್ತರಿಸಿ ಹೋಗಿದ್ದು, ಮನೆಯಿಂದ ಹೊರಗಡೆ ಬರಲಾದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಬಿರು ಬೇಸಿಗೆ ಹಿನ್ನೆಲೆಯಲ್ಲಿ ಆಗೊಮ್ಮೆ ಹೀಗೊಮ್ಮೆ ಕರೆಂಟ್ ತೆಗೆಯುವುದು ಒಂದು ಕಡೆ, ಇದರಿಂದ ಬೆಳಿಗ್ಗೆ ಹಾಗೂ ರಾತ್ರಿ ಮಕ್ಕಳು, ವೃದ್ಧರು ಪರಿತಪಿಸುವಂತಾಗಿದ್ದು, ಶ್ರೀಮಂತರಿಗೆ ಇನ್ವರ್ಟರ್ ಇದೆ. ಆದರೆ ಬಡವರು ಕರೆಂಟ್ ಹೋದಾಗ ಗುಡಿ ಗುಂಡಾರಕ್ಕೆ ಹೋಗಿ ಕಾಲ ಕಳೆಯುವಂತಾಗಿದೆ.

ಪಟ್ಟಣದ ಯಾವುದಾದರೂ ಒಂದು ಏರಿಯಾದಲ್ಲಿ ವಿದ್ಯುತ್ ಸಮಸ್ಯೆಯಾದರೆ ಇಡೀ ಪಟ್ಟಣವೆಲ್ಲ ಕರೆಂಟ್ ಹೋಗುತ್ತದೆ ಏಕೆಂದರೆ ಹಲವಾರು ವರ್ಷಗಳಿಂದ ಮಸ್ಕಿ ಪಟ್ಟಣದಲ್ಲಿ ಜಿಒಎಸ್ ಇಲ್ಲದೆ ಜನರು ಪರಿತಪಿಸುತ್ತಿದ್ದಾರೆ. ಈ ಬಿರು ಬೇಸಿಗೆಯಲ್ಲಿ ಆಗಾಗ ವಿದ್ಯುತ್ ಇಲ್ಲದ್ದರಿಂದ ಜನರು ಮನೆಯಲ್ಲೂ ಕೂಡ ನೆಮ್ಮದಿ ಇಲ್ಲದೆ ಬದುಕುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಪಟ್ಟಣದಲ್ಲಿ ಇಲ್ಲದ ಜಿಒಎಸ್.

ಹಾಗಾದರೆ ಜಿಒಎಸ್ ಎಂದರೆ ಏನು: ಗ್ಯಾಂಗ್ ಆಪರೇಟೆಡ್ ಸ್ವಿಚ್ ಎಂಬುದು ವಿದ್ಯುತ್ ವಿತರಣಾ ವ್ಯವಸ್ಥೆಗಳಲ್ಲಿ, ವಿಶೇಷವಾಗಿ 11 ಕೆವಿ ಮತ್ತು 33 ಕೆವಿ ಹೈ-ವೋಲ್ಟೇಜ್ (ಎಚ್‌ಟಿ) ಲೈನ್‌ಗಳಲ್ಲಿ ಬಳಸಲಾಗುವ ಒಂದು ಪ್ರಮುಖ ಹೊರಾಂಗಣ ಸ್ವಿಚಿಂಗ್ ಸಾಧನವಾಗಿದೆ.



ಇದರ ಮುಖ್ಯ ಕಾರ್ಯವೆಂದರೆ ಇದು ಮೂರು ಹಂತಗಳನ್ನು ಒಂದೇ ಹ್ಯಾಂಡಲ್‌ನಿಂದ ನಿಯಂತ್ರಿಸುತ್ತದೆ. ಅಂದರೆ ಎಲ್ಲ ಮೂರು ಹಂತಗಳು ಏಕಕಾಲದಲ್ಲಿ ಆನ್ ಅಥವಾ ಆಫ್ ಆಗುತ್ತವೆ. ಇವುಗಳನ್ನು ಸಾಮಾನ್ಯವಾಗಿ ಪೋಲ್‌ಗಳ ಮೇಲೆ ಅಳವಡಿಸಲಾಗುತ್ತದೆ. ಸಂಪರ್ಕಗಳು ತೆರೆದಾಗ,ಗಾಳಿಯು ವಿದ್ಯುತ್ ಕಂಸವನ್ನು ನಂದಿಸಲು ಸಹಾಯ ಮಾಡುತ್ತದೆ. ಆದ್ದರಿಂದ ಇದನ್ನು ಗ್ಯಾಂಗ್ ಆಪರೇಟೆಡ್ ಏರ್ ಬ್ರೇಕ್ ಸ್ವಿಚ್' ಎಂದೂ ಕರೆಯುತ್ತಾರೆ. ನೆಲಮಟ್ಟದಲ್ಲಿರುವ ಹ್ಯಾಂಡಲ್ ಬಳಸಿ ಇದನ್ನು ಕೈಯಾರೆ ಆಪರೇಟ್ ಮಾಡಲಾಗುತ್ತದೆ.

> **ಸದ್ಯಕ್ಕೆ ಮಸ್ಕಿಯಲ್ಲಿ ಕನಕಾಚಲ ವೃತ್ತದಲ್ಲಿ ಒಂದೇ ಜಿಒಎಸ್ ಇದೆ. ರೋಡ ಕೆಲಸ ನಡೀತಾಯಿದೆ,ರೋಡ್ ಕೆಲಸ ಆಗಿಲ್ಲ ಇನ್ನೂ,ಆದರಲ್ಲಿ ಕೆಇಬಿ ಕೆಲಸ ಪೂರ್ಣಗೊಂಡಿಲ್ಲ, ಡಿಪಾರ್ಟ್‌ಮೆಂಟ್ ಮಾಡಿಲ್ಲ. ಹಂಗಾಗಿ ನಾವು ಮಾಡೋಕೆ ಆಗ್ತಾಯಿಲ್ಲ.ಆದ್ದರಿಂದ ಜಿಒಎಸ್ ಮಾಡಲು ತೊಂದರೆ ಆಗ್ತಾಯಿದೆ. ಹುನಗುಂದ ಹೈವೇ ಪ್ರಾಜೆಕ್ಟ್ ಕಾಂಟ್ರಾಕ್ಟರ್ ಅವರು ಮಾಡ್ಬೇಕಾಗಿತ್ತು. ಆದ್ರೆ ಇದುವರೆಗೂ ಮಾಡಿ ಕೊಟ್ಟಿಲ್ಲ, ಜಿಸಿಸಿಗಳು ಕೆಲಸ ಮಾಡಿಕೊಟ್ಟರೆ ಕೆಲಸ ಬೇಗ ಆಗುತ್ತೆ.**
>
> ■ ವೆಂಕಟೇಶ, ಕೆಇಬಿ ಎಇಇ

ಪಟ್ಟಣದಲ್ಲಿ 23 ವಾರ್ಡ್‌ಗಳಲ್ಲಿ ಎರಡೇ ಕಡೆ ಮಾತ್ರ ಜಿಒಎಸ್ ಇದೆ. ಆದರೆ ಇನ್ನೂ ಉಳಿದ ವಾರ್ಡ್‌ಗಳಲ್ಲಿ ಜಿಒಎಸ್ ಅಳವಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರಿಂದ ಒತ್ತಾಯ ಕೇಳಿ ಬಂದಿದೆ.

ಯುವಕರು ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ವಹಿಸಲಿ

ಮುನಿರಾಬಾದ್: ಯುವಕರು ಹೆಚ್ಚು ಹೆಚ್ಚು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಸದೃಢಪಡಿಸಿಕೊಳ್ಳಬೇಕು ಎಂದು ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅವರ ಪತ್ನಿ ರಚನಾ ಸಲಹೆ ನೀಡಿದರು.

ಕಂಪಸಾಗರ ಗ್ರಾಮದಲ್ಲಿ ರವಿವಾರ ಆಯೋಜಿಸಿದ್ದ ಕಂಪಸಾಗರ ಪ್ರೀಮಿಯರ್ ಲೀಗ್ -2026ರ ಗಣಪ ರಂಗೋಲಿ ವಿರುದ್ಧ ಯೂಥ್ ಐಕಾನ್ ತಂಡಗಳ ಪೈನಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಯುವಕ-ಯುವತಿಯರು ಕೇವಲ ಕ್ರಿಕೆಟ್‌ಗೆ ಮಾತ್ರ ಸೀಮಿತವಾಗದೆ ಕಬ್ಬಡ್ಡಿ, ವಾಲಿಬಾಲ್, ಖೋ-ಖೋ, ಶಟಲ್ ಬ್ಯಾಡ್ಮಿಂಟನ್‌ನಂತಹ ವಿವಿಧ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಅಗತ್ಯವಿರುವ ಸಕಲ ನೆರವು ಮತ್ತು ಪ್ರೋತ್ಸಾಹ ನೀಡಲು ನಾವು ಸದಾ ಸಿದ್ಧರಿದ್ದೇವೆ,'' ಎಂದು ಭರವಸೆ ನೀಡಿದರು.

ಮಾಜಿ ಸೈನಿಕ ಸಂಜೀವ ತೋಟಗಂಟಿ ಮಾತನಾಡಿ, ಇಂದಿನ ಯುವಪೀಳಿಗೆ ದುಶ್ಚಟಗಳ ದಾಸರಾಗುತ್ತಿರುವುದು ಆತಂಕಕಾರಿ ವಿಷಯ. ಯುವಕರು ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ದೇಹವು ಸದೃಢವಾಗುವುದಲ್ಲದೆ, ಶಿಸ್ತು ಮತ್ತು ಏಕಾಗ್ರತೆ ಬೆಳೆಯುತ್ತದೆ. ಉತ್ತಮ ಆರೋಗ್ಯವೇ ಭಾಗ್ಯ ಎಂಬಂತೆ ಪ್ರತಿಯೊಬ್ಬರೂ ಕ್ರೀಡಾಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸ್ಫೂರ್ತಿ ತುಂಬಿದರು.

ಗ್ರಾಮ ಪಂಚಾಯತ್ ಮಾಜಿ ಸದಸ್ಯ ಮಂಜುನಾಥ್ ಹಣವಾಳ, ಪತ್ರಕರ್ತ ಧರ್ಮಣ್ಣ ಹಟ್ಟಿ, ಧರ್ಮನಗೌಡ ಪೋಲಿಸ್ ಪಾಟೀಲ್, ಮಲ್ಲೇಶ ಉಪ್ಪಾರ, ಈರಪ್ಪ ದೊಡ್ಡಮನಿ, ಕಾಜ್ ಸಾಬ್ ನರೆಗಲ್ಲ, ಭೀಮೇಶ, ಹಣವಾಳ, ಗಂಗಾಧರ ಕುರಿ, ನಾಗರಾಜ.ವೈ, ಪ್ರವೀಣ ಸಂಗಮೇಶ ಸೇರಿದಂತೆ ಊರಿನ ಯುವಕರು ಹಾಗೂ ಕ್ರೀಡಾ ಅಭಿಮಾನಿಗಳು ಇದ್ದರು.

ಕಂಪಸಾಗರ ಗ್ರಾಮದಲ್ಲಿ ಆಯೋಜಿಸಿದ್ದ ಕಂಪಸಾಗರ ಪ್ರೀಮಿಯರ್ ಲೀಗ್-2026ರ ಗಣಪ ರಂಗೋಲಿ ವಿರುದ್ಧ ಯೂಥ್ ಐಕಾನ್ ತಂಡಗಳ ಫೈನಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.



ಮನರೇಗಾ ಮುಂದುವರಿಸಲು ರಾಜ್ಯ ಸರ್ಕಾರ ಮುಂದಾಗಲಿ

ಕುಕನೂರು: ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಶೀಘ್ರ ಪ್ರಾರಂಭ ಮಾಡುಲು ಮುಂದಾಗಬೇಕು ಎಂದು ಭಾಜಪ ಜಿಲ್ಲಾ ಉಪಾಧ್ಯಕ್ಷ ಅರವಿಂದ್ ಗೌಡ ಪೊಲೀಸ್‌ಪಾಟೀಲ್ ಹೇಳಿದರು.

ಭಾನುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು ಜಿಲ್ಲೆಯಲ್ಲಿ ಬೇಸಿಗೆ ಸಂದರ್ಭದಲ್ಲಿ ಪ್ರಾರಂಭವಾಗಬೇಕಿದ್ದ ಕೇಂದ್ರ ಸರಕಾರದ ಮಹತ್ವಕಾಂಕ್ಷಿ ಜಿರಾಮ್‌ಜಿ ಯೋಜನೆ ಅನುಷ್ಠಾನ ಗೊಳ್ಳುವವರೆಗೂ ಯಾತಸ್ಥಿತಿ ಮನರೇಗಾ ನಿಲ್ಲಿಸಿಬಾರದೆಂದು ಕೇಂದ್ರ ಸರಕಾರ ಸ್ಪಷ್ಟ ಪಡಿಸಿ ಅದಕ್ಕೆ ಸಂಬಂಧಪಟ್ಟ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ನೀಡಿದ್ದರು ಇಲ್ಲಿವರೆಗೂ ನಮ್ಮ ಜಿಲ್ಲೆಯಲ್ಲಿ ಜನ ಗುಳೆ ಹೋಗುವದು ಪ್ರಾರಂಭವಾದರೂ ಇನ್ನು ಕೂಡ ಜಿಲ್ಲಾ ಪಂಚಾಯತ್ ಮನರೇಗಾ ಗೆ ಚಾಲನೆ ಸಿಕ್ಕಿಲ್ಲ, ಇದು ಕೆದುಕರವಾದ ಸಂಗತಿ ಇದನ್ನು ಹೀಗೆ ಮುಂದುವರಿಸದೆ ಆದಷ್ಟು ಬೇಗ ಮನರೇಗಾವನ್ನು ಮುಂದುವರಿಸಲು ಮುಂದಾಗಬೇಕು ರಾಜ್ಯ ಸರ್ಕಾರ ಎಂದು ಆಗ್ರಸಿದ್ದಾರೆ.

ವಾಸವಿ ಜಯಂತಿ ಆಚರಣೆ

ಮಾನ್ವಿ: ಪಟ್ಟಣದ ಶ್ರೀ ನಗರೇಶ್ವರ ಹಾಗೂ ಶ್ರೀ ವಾಸವಿ ದೇವಸ್ಥಾನದಲ್ಲಿ ಶ್ರೀ ವಾಸವಿ ಜಯಂತಿ ಅಂಗವಾಗಿ ಬೆಳಿಗ್ಗೆ ಸುಪ್ರಭಾತ ಸೇವೆ, ಶ್ರೀ ವಾಸವಿ ಮಾತೆಗೆ ಕುಂಭಾಭಿಷೇಕ,ಮಹಾಮಂಗಳಾರತಿ, ವಿಶೇಷ ಅಲಂಕಾರ ನಡೆಯಿತು.

ಶ್ರೀವಾಸವಿ ಮಾತೆಯ ಉತ್ಸವ ಮೂರ್ತಿಗೆ ಸುಮಂಗಲಿಯರಿಂದ ಉಡಿ ಅಕ್ಕಿ ತುಂಬುವ ಕಾರ್ಯಕ್ರಮ ನಡೆಯಿತು. ಭಕ್ತರಿಂದ ಜೋಡಿ ರಥೋತ್ಸವ ನಡೆಯಿತು. ಶ್ರೀವಾಸವಿ ಮಾತೆಯ ಉತ್ಸವ ಮೂರ್ತಿಯನ್ನು ರಜತ ಪಲ್ಲಕ್ಕಿಯಲ್ಲಿಟ್ಟು ದೇವಸ್ಥಾನದ ಆವರಣದಲ್ಲಿ ಉತ್ಸವ ನಡೆಸಿ ಬೆಳ್ಳಿ ರಥದಲ್ಲಿಟ್ಟು ಸುಮಂಗಲಿಯರು ಬೆಳ್ಳಿ ರಥವನ್ನು ಎಳೆದು ಸಂಭ್ರಮಿಸಿದರು, ನಂತರ ಭಕ್ತರಿಂದ ಕಟ್ಟಿಗೆ ರಥವನ್ನು ಎಳೆಯಲಾಯಿತು. ಶ್ರೀನಗರೇಶ್ವರ ಆರ್ಯವೈಶ್ಯ ಸಂಘದಿಂದ ವಿವಿಧ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್, ಶ್ರೀಸಾಯಿ ಪವನ ದಂತ ಚಿಕಿತ್ಸಾಲಯ, ಶ್ರೀಅಶೋಕ ಮಲ್ಟಿಸ್ಪೆಷಾಲಿಟಿ ಡೆಂಟಲ್ ಹಾಸ್ಪಿಟಲ್ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ರಾಯಚೂರಿನ ರಿಮ್ಸ್ ರಕ್ತಭಂಡರದ ಸಹಯೋಗದಲ್ಲಿ ಬೃಹತ್ ರಕ್ತದಾನ ಶಿಬಿರ ನಡೆಯಿತು. ಮನ್ನಾಲಿ ಯಂಕಯ್ಯಶೆಟ್ಟಿ ಕುಟುಂಬದವರಿಂದ ಪೂಜದ್ರವ್ಯಗಳ ವಿತರಣೆ ಮಾಡಲಾಯಿತು. ನಡೆಯಿತು. ಸಂಜೆ ಮಂಗಳೂರಿನ ಚೇತನ ಕಲಾ ತಂಡದವರ ಹುಲಿಕುಣಿತ ಹಾಗೂ ಚಂಡೆ ವಾದ್ಯಗಳೊಂದಿಗೆ ವಾಸವಿ ಮಾತೆಯ ಭವ್ಯ ಮೆರವಣಿಗೆ ನಡೆಯಿತು.

ಶ್ರೀನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ, ಕಾರ್ಯದರ್ಶಿ ಬಿ.ಈರಣ್ಣ, ಮೃತ್ಯುಂಜಯ ಮಂಚಾಲಿ ಆಂಜನೇಯ ಗಾಣದಾಳ್ ಶ್ರೀನಿವಾಸಕೊಂಡ ಸೇರಿದಂತೆ ಆರ್ಯವೈಶ್ಯ ಸಮುದಾಯದವರು ಭಾಗವಹಿಸಿದರು.



ಉದ್ಯಾನವನ, ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ

ರಾಯಚೂರು: ಕೆಕೆಆರ್‌ಡಿಬಿ ಅನುದಾನದಲ್ಲಿ ಕೈಗೊಳ್ಳಲಾಗುವ ಉದ್ಯಾನವನ ಹಾಗೂ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ವಿಪ ಸದಸ್ಯ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಎ.ವಸಂತಕುಮಾರ ಚಾಲನೆ ನೀಡಿದರು.

ನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ.21ರ ಕೃಷ್ಣದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನನ್ನು 30 ಲಕ್ಷ ಅನುದಾನದಲ್ಲಿ ಹಾಗೂ ನಗರ ವಿಧಾನ ಸಭಾ ಕ್ಷೇತ್ರದ ಬಾಯಿದೊಡ್ಡಿ ಗ್ರಾಮದಲ್ಲಿ 30 ಲಕ್ಷ ರೂ. ಅನುದಾನದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭಾನುವಾರ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿ, ಇಂದಿಗೂ ನಗರ ವಿಧಾನ ಸಭಾಕ್ಷೇತ್ರದ ಹಲವಾರು ಬಡಾವಣೆಗಳಲ್ಲಿ ಇರುವ ಉದ್ಯಾನವನಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಸಾಕಷ್ಟು ಇದ್ದು, ಸಾರ್ವಜನಿಕರಿಗೆ ವಾಯು ವಿಹಾರ, ಮಕ್ಕಳಿಗೆ ಆಡಲು ಸೂಕ್ತ ಸೌಲಭ್ಯ ಒದಗಿಸುವದು ನಮ್ಮ ಸರಕಾರದ ಜವಾಬ್ದಾರಿಯಾಗಿದೆ. ಇನ್ನು ಹೆಚ್ಚಿನ ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುವದು ಎಂದು ಹೇಳಿದರು.

ನಗರ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಸಾಕಷ್ಟು ಇದ್ದು, ರಸ್ತೆ, ಚರಂಡಿ, ಕುಡಿಯುವ ನೀರು ಒದಗಿಸುವದು ನಮ್ಮ ಸರಕಾರದ ಜವಾಬ್ದಾರಿಯಾಗಿದೆ ಎಲ್ಲ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ಒದಗಿಸಲಾಗುವುದು ಎಂದರು.



ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ ಕರೀಮ, ಮಾಹನಗರ ಪಾಲಿಕೆ ಮಾಜಿ ಸದಸ್ಯ ನಾಗರಾಜ್, ಯೋಜನಾ ಆಯೋಗದ ಸದಸ್ಯ ಡಾ.ರಝಾಕ ಉಸ್ತಾದ, ಪ್ರಮುಖರಾದ ಜಿ.ಸತ್ಯನಾಥ, ದೀಪಕ ರೆಡ್ಡಿ, ಅಂಜಿನಕುಮಾರ, ಮೊಹಮ್ಮದ ಉಸ್ಮಾನ, ಸೈಯದ ಸುಲ್ತಾನ, ಮೊಹಮ್ಮದ ರಫಿ,ನಿವೃತ್ತ ಇಂಜಿನಿಯರ್ ವೆಂಕಟೇಶ. ಜಿ.ಆನಂದ ರೆಡ್ಡಿ, ಬಿ.ಮಲ್ಲೇಶ, ಜಿ.ಶಿವಪ್ಪ, ಕುರುಬ ಜಯಪ್ಪ, ಕುಂಬಾರ ರಂಗಪ್ಪ, ಕುಂಬಾರ ಸೋಮಪ್ಪ, ಕುರುಬರ ಸಿದ್ದಪ್ಪ, ಎಸ್.ಹನುಮಂತರೆಡ್ಡಿ, ಜಿ.ಅಂಜನರೆಡ್ಡಿ, ಎಸ್. ಗೋವಿಂದ ಹಾಗೂ ಇತರರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕಲಬುರಗಿ: ನಗರದ ವಾರ್ಡ್ ನಂ.46ರ ಐ ವಾನ್ ಶಾಹಿ ಬಡಾವಣೆಯಲ್ಲಿ ಮಹಾನಗರ ಪಾಲಿಕೆಯ ಅನುದಾನದಲ್ಲಿ 89 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಮಾಜಿ ವಿಧಾನ ಪರಿಷತ್ ಸದಸ್ಯ ಅಮರನಾಥ ಪಾಟೀಲ ಹಾಗೂ ಮಾಜಿ ಮೇಯರ್ ವಿಶಾಲ್ ದರ್ಗಿ ಅವರು ಚಾಲನೆ ನೀಡಿದರು.

ಮಾತನಾಡಿದ ಅಮರನಾಥ ಪಾಟೀಲ ಹಾಗೂ ವಿಶಾಲ್ ದರ್ಗಿ ಅವರು, ನಗರದ ಬಡಾವಣೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಸಾರ್ವಜನಿಕರಿಗೆ ಉತ್ತಮ ವಾತಾವರಣ ಕಲ್ಪಿಸುವ ಉದ್ದೇಶದಿಂದ ಉದ್ಯಾನವನ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಉದ್ಯಾನವನದಿಂದ ಸ್ಥಳೀಯ ನಿವಾಸಿಗಳಿಗೆ ವಾಯುವಿಹಾರ, ಮಕ್ಕಳ ಆಟ-ಪಾಠ ಹಾಗೂ ವಿಶ್ರಾಂತಿಗೆ ಅನುಕೂಲವಾಗಲಿದೆ ಎಂದು ಹೇಳಿದರು.



ಮಹೇಶ್ ರೆಡ್ಡಿ, ಮಾದೇವಪ್ಪ ರಾಂಪುರೆ, ಡಾ.ಆರೋಹಿತ್ ಭಂಡಾರಿ, ಅತ್ತರ ಬಿದರಿ, ವಿಶಾಲ್ ದೇಶಮುಖ್, ಸುರೇಶ ಹೊಸಮನಿ ಸೇರಿದಂತೆ ಬಡಾವಣೆಯ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಎಸ್‌ಟಿ ಪ್ರಮಾಣಪತ್ರ ನೀಡಲು ತಾರತಮ್ಯ: ಮ್ಯಾಕೇರಿ

ಕಲಬುರಗಿ: ರಾಜ್ಯದ 29 ಜಿಲ್ಲೆಗಳಲ್ಲಿ ತಳವಾರ ಸಮುದಾಯಕ್ಕೆ ಸಂವಿಧಾನಬದ್ಧವಾಗಿ ಎಸ್‌ಟಿ (ಪರಿಶಿಷ್ಟ ಪಂಗಡ) ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದ್ದರೂ, ಕಲಬುರಗಿಯಲ್ಲಿ ಮಾತ್ರ ಉದ್ದೇಶಪೂರ್ವಕವಾಗಿ ತಡೆಹಿಡಿಯಲಾಗಿದೆ ಎಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣ ಮ್ಯಾಕೇರಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯದ ಅಂದಿನ ಬಿಜೆಪಿ ಸರ್ಕಾರ 2020ರಲ್ಲಿ ತಳವಾರ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರ್ಪಡೆ ಮಾಡಿತ್ತು.ಅದರಂತೆ 2022ರಲ್ಲಿ ಈ ಸಮುದಾಯವನ್ನು ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಿಂದಲೂ ತೆಗೆದುಹಾಕಲಾಗಿತ್ತು.ಆದರೆ, ಕಲಬುರಗಿ ಜಿಲ್ಲೆಯಲ್ಲಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಪ್ರಮಾಣ ಪತ್ರ ನೀಡದಂತೆ ತಡೆದಿದ್ದಾರೆ ಎಂದು ದೂರಿದರು.

ಮಾತೆತ್ತಿದರೆ ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಸಂವಿಧಾನದ ಬಗ್ಗೆ ಮಾತನಾಡುವ ಪ್ರಿಯಾಂಕ್ ಖರ್ಗೆ ಅವರಿಗೆ ಕಲಬುರಗಿ ಜಿಲ್ಲೆಯ ತಳವಾರರ ಮೇಲೆ ಇಷ್ಟೊಂದು ದ್ವೇಷವೇಕೆ? ರಾಜ್ಯದ ಉಳಿದ ಜಿಲ್ಲೆಗಳಿಗೆ ಅನ್ವಯವಾಗುವ ಕಾನೂನು ಕಲಬುರಗಿಗೆ ಅನ್ವಯವಾಗುವುದಿಲ್ಲವೇ? ಎಂದು ಪ್ರಶ್ನಿಸಿದ ಅವರು, ಜಿಲ್ಲಾಧಿಕಾರಿಗಳು ಕಾನೂನಿನಂತೆ ಕೆಲಸ ಮಾಡದೆ ಸಚಿವರ ಕೈಗೊಂಬೆಯಾಗಿದ್ದಾರೆ ಎಂದು ಕಿಡಿಕಾರಿದರು.

ಒಬಿಸಿ ಪಟ್ಟಿಯಿಂದ ತೆಗೆದು ಹಾಕಿರುವುದರಿಂದ ಮತ್ತು ಎಸ್‌ಟಿ ಪ್ರಮಾಣ ಪತ್ರ ಸಿಗದ ಕಾರಣ ವಿದ್ಯಾರ್ಥಿಗಳು, ರೈತರು ಹಾಗೂ ಉದ್ಯೋಗಾಕಾಂಕ್ಷಿಗಳು ಅತಂತ್ರರಾಗಿದ್ದಾರೆ. ಕೂಡಲೇ ಈ ತಾರತಮ್ಯ ನಿವಾರಿಸಿ ಪ್ರಮಾಣ ಪತ್ರ ನೀಡಬೇಕು. ಈ ಬೇಡಿಕೆಗಾಗಿ ಏಪ್ರಿಲ್ 27ರಂದು ಹಮ್ಮಿಕೊಂಡಿರುವ ಹೋರಾಟಕ್ಕೆ ನಮ್ಮ ಪೂರ್ಣ ಬೆಂಬಲವಿದ್ದು, ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.



> **ಸಚಿವ ಪ್ರಿಯಾಂಕ್ ಖರ್ಗೆ ಅವರು ಉದ್ದೇಶಪೂರ್ವಕವಾಗಿ ತಳವಾರ ಸಮುದಾಯದ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ. ರಾಜ್ಯದ ಇತರೆಲ್ಲಾ ಜಿಲ್ಲೆಗಳಲ್ಲಿ ಈ ಪ್ರಮಾಣ ಪತ್ರ ನೀಡಲಾಗುತ್ತಿದೆ. ಕಲಬುರಗಿಯಲ್ಲಿ ಮಾತ್ರ ಯಾಕೆ ತಡೆಹಿಡಿಯಲಾಗಿದೆ ಎಂಬುದಕ್ಕೆ ಸಚಿವರು ಉತ್ತರ ನೀಡಬೇಕು.**
>
> ■ ಅವ್ವಣ್ಣ ಮ್ಯಾಕೇರಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ ಒಬಿಸಿ ಮೋರ್ಚಾ

ಬಸವರಾಜ್ ಸಪ್ಪಣಗೋಳ, ವಿದ್ಯಾಧರ್ ಮಂಗಳೂರು, ಬಸವರಾಜ್ ಗುಂಡಲಗೇರಿ, ಸಾಯಬಣ್ಣ ಚಾಲಗಾರ, ಶಿವಕುಮಾರ ತಳವಾರ, ಸುಧೀರ್ ತಳವಾರ ಇದ್ದರು.

ಮಹಿಳೆಯರು ಸ್ವಾವಲಂಬಿ ಜೀವನ ಸಾಗಿಸಲಿ

ಕುಷ್ಟಗಿ: ತಾಲೂಕಿನ ದೋಟಿಹಾಳ ಗ್ರಾಮದ ಶ್ರೀಶುಕಮುನಿ ಸ್ವಾಮಿ ದೇವಸ್ಥಾನದ ಸಭಾಂಗಣದಲ್ಲಿ ವಿಪಿಕೆ ಫೌಂಡೇಶನ್, ಶ್ರೀದಯಾನಂದಪುರಿ ಸಂಘ, ಗಾಯತ್ರಿ ಮಹಿಳಾ ಸಂಘ, ಗ್ರಾಮ ಪಂಚಾಯತ ದೋಟಿಹಾಳ, ಆರೋಗ್ಯ ಕೇಂದ್ರ ದೋಟಿಹಾಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಸೀಮಂತ ಕಾರ್ಯಕ್ರಮ, ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಕಿತ್ತೂರುರಾಣಿ ಚನ್ನಮ್ಮ ಹಾಗೂ ಅಭಿನವ ಗವಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಅಂಗನವಾಡಿ ಮೇಲ್ವಿಚಾರಕಿ ಅನ್ನಪೂರ್ಣ ಪಾಟೀಲ ಮಾತನಾಡಿ, ಮಹಿಳೆಯರು ಸಮಾಜದ ಅಭಿವೃದ್ಧಿಗೆ ಪ್ರಮುಖ ಶಕ್ತಿಯಾಗಿದ್ದು, ಶಿಕ್ಷಣ, ಸ್ವಾವಲಂಬನೆ ಮತ್ತು ಆತ್ಮವಿಶ್ವಾಸದ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ತಿಳಿಸಿದರು. ಮಹಿಳಾ ಸಬಲೀಕರಣವೇ ಸಮಾನ ಸಮಾಜ ನಿರ್ಮಾಣದ ಅಡಿಪಾಯವಾಗಿದ್ದು, ಪ್ರತಿಯೊಬ್ಬ ಮಹಿಳೆಯೂ ತನ್ನ ಹಕ್ಕುಗಳ ಬಗ್ಗೆ ಅರಿವು ಹೊಂದಬೇಕು ಎಂದು ಹೇಳಿದರು.



ಕಸಾಪ ತಾಲೂಕು ಅಧ್ಯಕ್ಷ ಲೆಂಕಪ್ಪ ವಾಲಿಕಾರ ಮಾತನಾಡಿ, ಮಹಿಳೆಯರ ಸಾಧನೆಗಳು ಇಂದು ಎಲ್ಲಾಕ್ಷೇತ್ರಗಳಲ್ಲೂ ಗುರುತಿಸಿಕೊಂಡಿವೆ. ಸಾಹಿತ್ಯ, ಶಿಕ್ಷಣ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮುನ್ನಡೆ ಸಾಧಿಸುತ್ತಿರುವುದು ಸಮಾಜದ ಅಭಿವೃದ್ಧಿಗೆ ಉತ್ತಮ ಸೂಚನೆ ಎಂದು ಅಭಿಪ್ರಾಯಪಟ್ಟರು.

ಉಪ ಪ್ರಾಂಶುಪಾಲರು ಡಿ.ಸುರೇಶ್ ಮಾತನಾಡಿ, ಮಹಿಳೆಯರ ಹಕ್ಕುಗಳ ರಕ್ಷಣೆ ಹಾಗೂ ಸಮಾನ ಅವಕಾಶಗಳ ಕಲ್ಪನೆ ಅಗತ್ಯವಾಗಿದ್ದು, ಮಹಿಳಾ ಸಬಲೀಕರಣದ ಮೂಲಕ ಸಮಾಜದಲ್ಲಿ ಸಮಾನತೆ ಸಾಧ್ಯವೆಂದು ಹೇಳಿದರು.

11 ಜನ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮವನ್ನು ಮಾಡಲಾಯಿತು. 27 ಜನ ಸಾಧನೆಗೈದ ಸಾಧಕರಿಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಅಭಿನವ ಗವಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಸಾಪ ಹೋಬಳಿ ಘಟಕದ ಅಧ್ಯಕ್ಷ ನಿಂಗಪ್ಪ ಸಜ್ಜನ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಪವಾಡೆಪ್ಪ ಚೌಡ್ಕಿ, ರಾಜ್ಯಮಟ್ಟದ ಕಿತ್ತೂರ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಲಲಿತಮ್ಮ ಹಿರೇಮಠ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಶ್ರೀನಿವಾಸ ಕಂಟ್ಲಿ, ಚುಸಾಪ ತಾಲೂಕಾಧ್ಯಕ್ಷ ಮಹೇಶ ಹಡಪದ, ಶಾರದಾ ಶೆಟ್ಟರ, ಗೌರಮ್ಮ ಕುಡತಿನಿ, ಅನಿತಾ ಗೋಗಿ, ಅಡಿವೆಮ್ಮ ಹಿರೇಮಠ, ಉಮಾಪತಿ ಮಾಳಗಿ, ನಾಗರಾಜ ಕಾಳಗಿ, ಪರಶಿವಮೂರ್ತಿ ಮಾಟಲದಿನ್ನಿ, ಸಂಗಮೇಶ ಲೂತಿಮಠ, ಚನ್ನಬಸವ ಚೌರಿ ಸೇರಿದಂತೆ ಅನೇಕರು ಇದ್ದರು.

ಕಿರುಸುದ್ದಿ

ಗಾರೆ ಕೆಲಸ ಮಾಡುವವನ ಮಗಳಿಗೆ 594 ಅಂಕ

◆ಕೆಂಭಾವಿ: ಗಾರೆ ಕೆಲಸ ಮಾಡುವ ಮಹಿಳೆಯ ಮಗಳು ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. 594 ಪ್ರತಿಶತ 95.04 ಅಂಕ ಪಡೆದು ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಗೆ ಮೀನಾಕ್ಷಿ ನಾಮದೇವ ಚವ್ಹಾಣ ಪ್ರಥಮ ಸ್ಥಾನ ಬಂದಿರುವ ಈ ವಿದ್ಯಾರ್ಥಿ ಒಂದನೇ ತರಗತಿಯಿಂದ 5ನೇ ತರಗತಿಯ ವರೆಗೆ ಕಿರದಳ್ಳಿ ತಾಂಡಾ ಶಾಲೆಯಲ್ಲಿ ಓದಿ 6ನೇ ತರಗತಿಯಿಂದ 10ನೇ ತರಗತಿ ವರೆಗೆ ಕೆಂಭಾವಿಯ ಹಿಂದುಳಿದ ವರ್ಗಗಳ ವಸತಿ ನಿಲಯದಲ್ಲಿಯೇ ಇದ್ದು ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದಿರುತ್ತಾಳೆ. ಬಡತನದ ಬೇಗೆಯಲ್ಲೂ ಹಿಡಿದ ಛಲ ಬಿಡದ ವಿದ್ಯಾರ್ಥಿಯ ಪಾಲಕರು ಬೆಂಗಳೂರಿನಲ್ಲಿ ಗಾರೆ ಕೆಲಸಕ್ಕೆ ದುಡಿಯಲು ಇದ್ದರೆ, ಈ ವಿದ್ಯಾರ್ಥಿ ಸಾಧನೆಯ ಹಾದಿ ಹಿಡಿದಿರುವುದು ಶಾಲೆಗೆ ಪಟ್ಟಣಕ್ಕೆ ಹಾಗೂ ಖಾಸಗಿ ಶಾಲೆಗಳಿಗೆ ಸರ್ಕಾರಿ ಶಾಲೆಗಳು ಏನು ಕಮ್ಮಿ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ವಿದ್ಯಾರ್ಥಿಯ ಸಾಧನೆಗೆ ಶಾಲಾ ಮುಖ್ಯಗುರು, ಸಿಬ್ಬಂದಿ ಹಾಗೂ ಪಟ್ಟಣದ ನಾಗರಿಕರು ಹರ್ಷ ವ್ಯಕ್ತಪಡಿಸಿದ್ದಾರೆ.



ವಿಕಲಚೇತನರ ಕುಂದು ಕೊರತೆ ಸಭೆ ನಾಳೆ

◆ವಿಜಯನಗರ: ಜಿಲ್ಲಾ ವಿಕಲಚೇತನರ ಹೋರಾಟ ಸಮಿತಿಯ ವತಿಯಿಂದ ಜಿಲ್ಲಾ ಮಟ್ಟದ ವಿಕಲಚೇತನರ ಕುಂದುಕೊರತೆ ಸಭೆಯನ್ನು ಏಪ್ರಿಲ್ 28ರಂದು ಹಮ್ಮಿಕೊಳ್ಳಲಾಗಿದೆ. ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಜಿಲ್ಲೆಯ ವಿಕಲಚೇತನರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಬೇಡಿಕೆಗಳ ಕುರಿತು ಸಭೆಯಲ್ಲಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲಾಗುವುದು. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಮಿತಿಯ ಜಿಲ್ಲಾ ಸಂಚಾಲಕರಾದ ಡಿ. ಶಿವಕುಮಾರ ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದಲಿತ ಸಂಘಟನೆ ಪ್ರತಿಭಟನೆ ತಾತ್ಕಾಲಿಕ ಮುಂದೂಡಿಕೆ

◆ಹುಣಸಗಿ: ವಿವಿಧ ಬೇಡಿಕೆಗಳು ಈಡೇರಿಸುವಂತೆ ಆಗ್ರಹಿಸಿ ಬುಧವಾರ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಇಲ್ಲಿನ ಕೆಬಿಜೆಎನ್ಎಲ್ ಕಾರ್ಯಪಾಲಕ ಎಂಜಿನಿಯರ್ ವಿಭಾಗ ಕಚೇರಿಯ ಮುಂದೆ ನ್ಯಾಯ ಸಿಗುವವರೆಗೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.ದಲಿತ ಸಂಘದ ಮನವಿಯನ್ನು ಸ್ವೀಕರಿಸಿ ಮಾತನಾಡಿದ ಎಇಇ ರಾಘವೇಂದ್ರ ಕುಲಕರ್ಣಿ ಸಂಘದ ಮನವಿಯನ್ನು ಕೃಭಾಜನನಿ ಯ ಮೇಲಿನ ಅಧಿಕಾರಿಗಳಿಗೆ ಗಮನಕ್ಕೆ ತಂದು ಅವರ ಮಾರ್ಗದರ್ಶನದಲ್ಲಿ ಆದಷ್ಟು ಬೇಗನೆ ದಲಿತ ಸಂಘಟನೆಗಳ ಬೇಡಿಕೆ ಈಡೇರಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.ಆದುದರಿಂದ ಪ್ರತಿಭಟನೆಯನ್ನು ಮುಂದೂಡಲಾಗಿದೆ ಎಂದು ಸಂಘಟನೆ ಯವರು ಮಾಹಿತಿ ನೀಡಿದ್ದಾರೆ.ಈ ಸಂದರ್ಭದಲ್ಲಿ ಸ್ಥಳೀಯ ಪೋಲಿಸ್ ಅಧಿಕಾರಿಗಳು,ದಲಿತ ಸಂಘಟನೆಗಳ ಮುಖಂಡರು ಇದ್ದರು.

ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗೆ ನೂರಕೆ ನೂರು ಫಲಿತಾಂಶ





◆ವಿಜಯನಗರ: ಹೊಸಪೇಟೆ ಅಲ್ಪಸಂಖ್ಯಾತರ ಇಲಾಖೆಯ ಕರ್ನಾಟಕ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಯ 2025-26 ನೇ ಸಾಲಿನಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆದುಕೊಂಡಿದೆ. ಮೊಹಮ್ಮದ್ ಮುಬಾಷೀರ್ 605 (96.8%) ರಷ್ಟು ಅಂಕ, ಸುನೀತಾ 576 (92.16%) ಅಂಕ, ಸಾಯಿಮಣಿ 569 (91.04%) ಅಂಕಗಳು, ಮೊಹಮ್ಮದ್ ಅಬುಸುಫಿಯಾನ್ 538 (86.08%) ಅಂಗಳು, ಜೆ.ಜಿಕ್ರ್ಯತಿಕಾ 535 (85.6%) ಅಂಕಗಳು ಪಡೆದುಕೊಂಡಿದ್ದಾರೆ. ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 5 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 17 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 3 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮಂಡಳಿಯು ಫಲಿತಾಂಶವನ್ನು 'ಎ' ಗ್ರೇಡ್ಎಂದು ಗುರುತಿಸಿದೆ. ವಿದ್ಯಾರ್ಥಿಗಳ ಸಾಧನೆಗೆ ಪ್ರಾಂಶುಪಾಲರಾದ ಮಂಜುನಾಥ ಪಾಟೀಲ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಬಳ್ಳಾರಿ ನಗರದ ಡಾ.ರಾಜಕುಮಾರ್ ಉದ್ಯಾನವನದಲ್ಲಿ ಡಾ.ರಾಜ್ ಕುಮಾರ್ ಅವರ ಜನ್ಮದಿನ ನಿಮಿತ್ತ ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು, ಡಾ.ರಾಜ್‌ಕುಮಾರ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ವಿವಿಧ ಮುಖಂಡರು, ಡಾ.ರಾಜ್‌ಕುಮಾರ ಅವರ ಅಭಿಮಾನಿಗಳು ಇತರರಿದ್ದರು.

ಸಿಲಿಂಡರ್ ಸ್ಫೋಟ ಪ್ರಕರಣ: ಬಾಲಕನ ಆರೋಗ್ಯ ವಿಚಾರಿಸಿದ ಸಿದ್ದಪ್ಪ

◆ಸಿರುಗುಪ್ಪ: ತೆಕ್ಕಲಕೋಟೆ ಪಟ್ಟಣದಲ್ಲಿ ಆಕಸ್ಮಿಕ ಬೆಂಕಿ ತಗುಲಿ ಸಿಲಿಂಡರ್ ಸ್ಫೋಟಗೊಂಡು ಗಾಯಗೊಂಡ 10 ವರ್ಷದ ಬಾಲಕ ಬಳ್ಳಾರಿಯ ಬಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಅವರು ಆಸ್ಪತ್ರೆಗೆ ತೆರಳಿ ಮಗುವಿನ ಆರೋಗ್ಯ ವಿಚಾರಿಸಿದರು. ಸಿಲಿಂಡರ್ ಸ್ಫೋಟಗೊಂಡ ಹಿನ್ನೆಲೆಯಲ್ಲಿ ಹೋಟೆಲ್ ಮಾಲೀಕರ ಕುಟುಂಬದ ಸದಸ್ಯರು ಹಿಂಬದಿ ವಾಸವಾಗಿದ್ದರು, ಘಟನೆಯಲ್ಲಿ 10 ವರ್ಷದ ಬಾಲಕ ಶ್ರೀನಿವಾಸ ಎನ್ನುವವರಿಗೆ ಗಂಭೀರ ಗಾಯಗಳಾಗಿದ್ದವು. ಕೂಡಲೇ ಬಾಲಕನನ್ನು ಬಳ್ಳಾರಿಯ ಬಿಮ್ಸ್ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆಗೆ ದಾಖಲಿಸಿ, ಮಾನವೀಯತೆ ಮೆರೆದಿದ್ದ ಎಂ.ಎಸ್ ಸಿದ್ದಪ್ಪ ಅವರು, ಆಸ್ಪತ್ರೆಗೆ ದಾಖಲಿಸಿ ಕೈತೊಳೆದುಕೊಳ್ಳದೆ ವೈದ್ಯರೊಂದಿಗೆ ನಿರಂತರ ಸಂಪರ್ಕ ಹೊಂದಿ, ಆಗಾಗ್ಗೆ ಬಾಲಕನ ಆರೋಗ್ಯ ವಿಚಾರಣೆ ಮಾಡುವ ಮೂಲಕ ಬಾಲಕನ ಕುಟುಂಬದ ಸದಸ್ಯರ ನೋವಿನಲ್ಲಿ ಭಾಗಿಯಾಗಿದ್ದಾರೆ. ಮಗು ಆರೋಗ್ಯವಾಗಿದೆ. ಸದ್ಯ ಯಾವುದೇ ಆತಂಕವಿಲ್ಲ ಎಂದು ವೈದ್ಯರು ಸ್ಪಷ್ಟಪಡಿಸಿದ್ದಾರೆ.





ಬಳ್ಳಾರಿ: ಶ್ರೀ ವಾಸವಿ ಜಯಂತ್ಯುತ್ಸವ ನಿಮಿತ್ತ ನಗರದಲ್ಲಿ ಶ್ರೀ ಕನ್ನಿಕಾಪರಮೇಶ್ವರಿ ಭಾವಚಿತ್ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಕೆಎಂಎಫ್ ಮಾಜಿ ಅಧ್ಯಕ್ಷ ಗಾಲಿ ಸೋಮಶೇಖರ್ ರೆಡ್ಡಿ, ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ, ಉದ್ಯಮಿ ಡಾ.ಗೋಪಾಲ್ ಜೀ ಸೇರಿದಂತೆ ಅನೇಕ ಗಣ್ಯರು ಮೆರವಣಿಗೆಯಲ್ಲಿ ಭಾಗವಹಿಸಿ ಗಮನಸೆಳೆದರು.

ಸಿರುಗುಪ್ಪ ತಾಲೂಕಿನ ಹೊನ್ನರಹಳ್ಳಿ ಗ್ರಾಮಸ್ಥರ ಆಕ್ರೋಶ

ಅಕ್ರಮ ಖಾತೆ ಹಂಚಿಕೆ: ಆರೋಪ

◆ಸಿರುಗುಪ್ಪ: ಸ್ಥಳಾಂತರಗೊಂಡ ತಾಲೂಕಿನ ಹೊನ್ನರಹಳ್ಳಿ ಗ್ರಾಮದಲ್ಲಿ ಸರ್ಕಾರ ನಿರ್ಮಿಸಿದ ಮನೆ ಅಕ್ರಮವಾಗಿ ಬೇರೆ ಗ್ರಾಮದ ನಿವಾಸಿ ಖಾತೆ ವರ್ಗಾವಣೆ ಮಾಡಿರುವುದು ತಡವಾಗಿ ಬೆಳಕಿಗೆ ಬಂದಿದೆ.

2009ರಲ್ಲಿ ತುಂಗಾಭದ್ರ ನದಿ ಪ್ರವಾಹಕ್ಕೆ ಹೊನ್ನರಹಳ್ಳಿ ತುತ್ತಾದ ಸಂದರ್ಭದಲ್ಲಿ ಅಂದಿನ ಸರ್ಕಾರ, ಕಳೆದ 2011ರಲ್ಲಿ ಸುಮಾರು 250 ಮನೆ ನಿರ್ಮಿಸಿ ಗ್ರಾಮ ಸ್ಥಳಾಂತರಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ 124 ಮನೆಗಳನ್ನು ನೆರೆ ಸಂತ್ರಸ್ತರಿಗೆ ಹಸ್ತಾಂತರ ಮಾಡಿದ್ದರು. ಇನ್ನೂ 126 ಮನೆಗಳನ್ನು ಹಂಚಿಕೆ ಮಾಡದೇ ತಹಶೀಲ್ದಾರ್ ಹೆಸರಿನಲ್ಲಿ ಇರಿಸಲಾಗಿತ್ತು.ಅವುಇಲ್ಲಿವರೆಗೂಹಂಚಿಕೆಯಾಗಿಲ್ಲ, ಇತ್ತೀಚಿಗೆ ಮನೆ ಸಂಖ್ಯೆ 100 ಹೆರಕಲ್ಲ ಗ್ರಾಮದ ರಮಾದೇವಿ ಗಂಡನಾಥ ನಾಯ್ಕ, ಮನೆ ಸಂಖ್ಯೆ 101 ಚಿಕ್ಕಬಳ್ಳಾರಿ ಗ್ರಾಮದ ಡಿ.ಮಧುಸೂದನ ತಂದೆ ದ್ಯಾವಣ್ಣ, ಮನೆಸಂಖ್ಯೆ102 ಹಚ್ಚೊಳ್ಳಿ ಗ್ರಾಮದ ಎಚ್.ರೇಣುಕಮ್ಮ ಗಂಡ ಎಚ್.ಕೆ.ಸುರೇಶ ಅವರಿಗೆ ಅಕ್ರಮವಾಗಿ ನೀಡಿದ್ದಾರೆ ಎಂದು ಆರೋಪ ಹೇಳಿಬಂದಿದೆ.

ಸ್ವಗ್ರಾಮದ ಕೆಲವರಿಗೆ ಹಂಚಿಕೆ ಮಾಡಿದ್ದರೂ ಅವರ ಹೆಸರಿಗೆ ಖಾತೆಯನ್ನು ನೀಡಿರುವುದಿಲ್ಲ, ಖಾತೆಯನ್ನು ನೀಡುವಂತೆ 15 ವರ್ಷಗಳಿಂದ ಅಲೆದರು ಅವರಿಗೆ ಖಾತೆ ನೀಡುತ್ತಿಲ್ಲ, ಆದರೆ ಬೇರೆ ಗ್ರಾಮದ ನಿವಾಸಿಗಳಿಗೆ ಅಕ್ರಮವಾಗಿ ಖಾತೆ ನೀಡಿದ್ದಲ್ಲದೆ, ಚಿಕ್ಕಬಳ್ಳಾರಿ ಗ್ರಾಮದ ತಹಶೀಲ್ದಾರ್ ವಾಹನ ಚಾಲಕ ದ್ಯಾವಣ್ಣ ಅವರ ಮಗ ಡಿ.ಮಧುಸೂದನ ಅವರು ಮದುವೆಯಾಗದ ಯುವಕನಿಗೆ ಅಕ್ರಮವಾಗಿ ಖಾತೆ ನೀಡಿರುವುದು ಎಷ್ಟು ಸರಿ ಎಂದು ಅಲ್ಲಿನ ಮಹಿಳೆಯರು ಆರೋಪ ಮಾಡಿದರು.

ಏ.7ರಂದು ಅಕ್ರಮ ಖಾತೆ ಹಂಚಿಕೆ ಕುರಿತು ಹೊನ್ನರಹಳ್ಳಿ ಗ್ರಾಮಸ್ಥರು ಮನವಿ ಸಲ್ಲಿಸಿದ್ದಾರೆ. ಮನವಿ ಆಧಾರವಾಗಿಟ್ಟುಕೊಂಡು ತಹಸೀಲ್ದಾರ್ ಕಚೇರಿಯಿಂದ ಏ.09ರಂದು ವರದಿ ನೀಡುವಂತೆ ಪತ್ರ ಬರೆದಿದ್ದಾರೆ. ಏ.13ರಂದು ತಾಪಂ ಕಾರ್ಯಾಲಯದಲ್ಲಿನ ಟಾಪಲ್ ವಿಭಾಗದಲ್ಲಿ ಸಹಿ ಮೊಹರು ಹಾಕಿರುವ ಪ್ರತಿ ವರದಿಗಾರರಿಗೆ ನೀಡಿದ್ದಾರೆ. ಏ.18ರಂದು ತಾಪಂ ಇಒ ಅವರನ್ನು ಹೊನ್ನರಹಳ್ಳಿ ಗ್ರಾಮದ ಘಟನೆಯ ಕುರಿತು ಪತ್ರಕರ್ತರು ಮಾಹಿತಿ ಕೇಳಿದಾಗ ಅದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ಹಾರಿಕೆ ಉತ್ತರ ನೀಡುವುದು ಎಷ್ಟು ಸರಿ ಎಂದು ಪ್ರಜ್ಞಾವಂತ ನಾಗರಿಕರ ಪ್ರಶ್ನೆಯಾಗಿದೆ.



> **ಸ್ಥಳಾಂತರಗೊಂಡ ಹೊನ್ನರಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಖಾತೆಗಳನ್ನು ನೀಡಿರುವ ಕುರಿತು ತಹಸೀಲ್ದಾರರಿಂದ ಯಾವುದೇ ನಮಗೆ ಪತ್ರ ಬಂದಿರುವುದಿಲ್ಲ, ಅಲ್ಲಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹತ್ತಿರ ಈ ಕುರಿತು ಮಾಹಿತಿ ಪಡೆದುಕೊಂಡು ಪರೀಶಿಲನೆ ನಡೆಸಲಾಗುವುದು.**
> ■ **ಪವನಕುಮಾರ್ ಎಸ್.ದಂಡಪ್ಪನವರ್, ಸಿರುಗುಪ್ಪ ತಾಪಂ ಇಒ**

> **ಏ.9ರಂದು ತಾಲೂಕು ಪಂಚಾಯತಿ ಕಾರ್ಯನಿರ್ವಹಕರಿಗೆ ಹೊನ್ನರಹಳ್ಳಿ ಗ್ರಾಮದಲ್ಲಿ ಅಕ್ರಮ ಖಾತೆ ಹಂಚಿಕೆ ಕುರಿತು ಪರಿಶೀಲಿಸಿ ವರದಿಯನ್ನು ನೀಡುವಂತೆ ಪತ್ರವನ್ನು ಬರೆಯಲಾಗಿದ್ದು, ಅವರ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು.**
> ■ **ಗೌಸಿಯ ಬೇಗಂ, ಸಿರುಗುಪ್ಪ ತಹಶೀಲ್ದಾರ್**

ನೂತನ ದಂಪತಿಗಳು ಸಾಮರಸ್ಯದಿಂದ ಜೀವನ ನಡೆಸಲಿ: ಉಜ್ಜಯಿನಿ ಶ್ರೀಗಳು

◆ಕೊಟ್ಟೂರು: ನೂತನ ದಂಪತಿಗಳು ಸಾಮರಸ್ಯದಿಂದ ಅನ್ಯೋನ್ಯತೆಯಿಂದ ಬದುಕಿ ಬದುಕಿನ ಸಾರ್ಥಕ್ಯವನ್ನು ಕಂಡುಕೊಳ್ಳಬೇಕೆಂದು ಉಜ್ಜಯಿನಿ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನದಲ್ಲಿ ತಿಳಿಸಿದರು.

ಅವರು ಉಜ್ಜಯಿನಿಯಲ್ಲಿ ಶ್ರೀಮರಳು ಸಿದ್ದೇಶ್ವರ ರಥೋತ್ಸವ ಹಾಗೂ ಶಿಖರ ತೈಲಾಭಿಷೇಕದ ಪ್ರಯುಕ್ತ ಉಜ್ಜಯಿನಿಯ ಸದ್ಧರ್ಮ ಪೀಠದಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾಮೂಹಿಕ ವಿವಾಹಗಳಿಂದ ದುಂದುವೆಚ್ಚಕ್ಕೆ ಕಡಿವಾಣ ಹಾಕಿ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳಲು ಸಾಮೂಹಿಕ ವಿವಾಹಗಳು ಸಹಕಾರಿಯಾಗುತ್ತವೆ ಎಂದರು. ಸಾಮೂಹಿಕ ವಿವಾಹಗಳಲ್ಲಿ ವಿವಾಹವಾಗುವವರು ಕೇವಲ ಬಡವರು ಎನ್ನುವ ಕೀಳಿರುಮೆಯನ್ನು ತೊಡೆದು ಹಾಕಬೇಕು. ಶ್ರೀಮಂತರು ಬಡವರು ಎನ್ನದೆ ಸಾಮೂಹಿಕವಿವಾಹಗಳಲ್ಲಿವಿವಾಹಮಾಡಿದಾಗ ಸಾಕಷ್ಟು ಹಣವನ್ನು ಉಳಿತಾಯ ಮಾಡಿದಾಗ ಅದು ರಾಷ್ಟ್ರೀಯ ಸಂಪತ್ತನ್ನು ಉಳಿತಾಯ ಮಾಡಿದಂತೆ, ಸಾಮೂಹಿಕ ವಿವಾಹಗಳಲ್ಲಿ ಮದುವೆಯಾಗುವವರು ನಿಜವಾಗಲೂ ಪುಣ್ಯವಂತರು ಏಕೆಂದರೆ ಜಗದ್ಗುರುಗಳು ಹಾಗೂ ಅನೇಕ ಶಿವಾಚಾರ್ಯರ ಸಮ್ಮುಖದಲ್ಲಿ ಅವರು ವಿವಾಹವಾಗುವುದರಿಂದ ಅವರಿಗೆ ಎಲ್ಲರ ಆಶೀರ್ವಾದವೂ ದೊರಕಿದಂತಾಗುತ್ತದೆ. ಇಂತಹ ಅದೃಷ್ಟವೂ ಎಲ್ಲರಿಗೂ ಒದಗಿ ಬರುವುದಿಲ್ಲ, ಆದ್ದರಿಂದ ಹೆಚ್ಚು ಹೆಚ್ಚು ಸಾಮೂಹಿಕ ವಿವಾಹಗಳನ್ನು ಮಾಡುವುದನ್ನು ರೂಢಿಸಿಕೊಳ್ಳಬೇಕೆಂದು ತಿಳಿಸಿದರು.

ವಿವಿಧ ಮಠಾಧೀಶರು, ಬಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಗುಂಡುಮಣಗು ತಿಪ್ಪೇಸ್ವಾಮಿ, ಲೋಕಪ್ಪ, ರೇಣು, ಟಿ.ಜಿ.ಮಲ್ಲಿಕಾರ್ಜುನ ಗೌಡ, ಅಳವರ ಮರುಳ ಸಿದ್ದಪ್ಪ ಇತರರಿದ್ದರು. ಈ ಸಾಮೂಹಿಕ ವಿವಾಹದಲ್ಲಿ 20 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.



ವನಜಭಾವಿಯಲ್ಲಿ ಬಸವ ಜಯಂತಿ ಆಚರಣೆ

◆ಯಲಬುರ್ಗಾ: ತಾಲೂಕಿನ ವನಜಭಾವಿ ಗ್ರಾಮದಲ್ಲಿ ರಾಷ್ಟ್ರೀಯ ಬಸವದಳದ ವತಿಯಿಂದ 893ನೇ ಬಸವ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಬಳಿಕ ಪರಮ ಪೂಜ್ಯ ವಿರತೀಶಾನಂದ ಸ್ವಾಮಿಗಳು ವಿರಕ್ತ ಮಠ ಮನಗುಳಿ ಸಾನಿಧ್ಯ ವಹಿಸಿ ಮಾತನಾಡಿ ವಿಶ್ವಗುರು ಬಸವಣ್ಣನವರು ಸಮಾಜದಲ್ಲಿ ಜಾತಿಪದ್ಧತಿ,ಲಿಂಗ ತಾರತಮ್ಯ, ಅಜ್ಞಾನ, ಮೌಢ್ಯತೆ ಇದೆ, ಭ್ರಷ್ಟಾಚಾರ ಇದೆ, ಸುಲಿಗೆ ತುಂಬಿ ತುಳುಕುತ್ತಿದೆ ಇದೆ, ಬಡವ ಶ್ರೀಮಂತ ಎನ್ನುವ ಬೇದ ಭಾವವಿದೆ, ಇಂತಹ ಅನೇಕ ಸಾಮಾಜಿಕ ಮೌಢ್ಯಗಳು ಇಂದಿಗೂ ಇವೆ. ಇಂತಹ ಮೌಢ್ಯಗಳ ನಿವಾರಣೆಗೆ ನಿಜವಾದ ಔಷಧ ಗುರು ಬಸವಣ್ಣನವರು ಹೇಳಿದ ಕಾಯಕ, ದಾಸೋಹ, ಮತ್ತು ಲಿಂಗಪೂಜೆ ಎಂದರು.

ಶರಣ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷ ದೇವಪ್ಪ ಕೋಳೂರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವ ಗುರು ಬಸವಣ್ಣನವರನ್ನು ಸನ್ಮಾರ್ಗದತ್ತ ಕರೆದೊಯ್ಯುವ ಕಾಯಕ ಮಾಡಿದವರು ಅವರನ್ನು ನಾವೂ ಪೂಜಿಸಿ ಆರಾಧನೆ ಮಾಡಬೇಕು ಎಂದು ಹೇಳಿದರು.

ಡಾ.ಲಿಂಗಾನಂದ ಸ್ವಾಮಿಗಳು ಮತ್ತು ಹರ್ಡೇಕರ ಮಂಜಪ್ಪನವರದು ಅನುಕರಣೀಯ ಜೀವನ. ಅಪ್ರತಿಮ ರಾಷ್ಟ್ರ ಭಕ್ತರಾಗಿದ್ದ ಅವರು ಸಮಾಜ ಸೇವೆಗೆ ತಮ್ಮ ಜೀವನ ಮುಡಿಪಾಗಿಟ್ಟವರು. ಹರ್ಡೇಕರ್ ಮಂಜಪ್ಪನವರು ಬಸವೇಶ್ವರ ಜಯಂತಿ ಆಚರಣೆಗೆ ಜಾರಿಗೆ ತಂದರು.

ಶರಣ ಬಸವರಾಜಪ್ಪ ಇಂಗಳದಾಳ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಷಟಸ್ಥಲ ಧ್ವಜಾರೋಹಣವನ್ನು ತಾಪಂ ಮಾಜಿ ಸದಸ್ಯ ಶರಣ ರುದ್ರಪ್ಪ ಮರಕಟ್ ನೆರವೇರಿಸಿದರು.

ಬಸವನಗೌಡ ಪೋಲಿಸ್‌ಪಾಟೀಲ, ಹನುಮಂತಪ್ಪ ದಳಪತಿ, ಮಹಾದೇವಪ್ಪ ಚನ್ನಳ್ಳಿ, ಶರಣ ಅಮರೇಶಪ್ಪ ಗಡಿಹಳ್ಳಿ, ಶಿಕ್ಷಕ ಕೃಷ್ಣ ಪತ್ತಾರು, ಹನುಮಗೌಡ ಡಿ.ಗೌಡ್ರ, ಬಸವರಾಜ ಹೂಗಾರ, ಶರಣಪ್ಪ ಹೊಸಳ್ಳಿ, ಗಿರಿಮಲ್ಲಪ್ಪ ಪರಂಗಿ, ಚಿದಾನಂದಗೌಡ ಗೊಂದಿ, ನಿಂಗಪ್ಪ ಪರಂಗಿ, ವಿರುಪಾಕ್ಷಪ್ಪ ಮೇಟಿ, ಪರಮೇಶ್ವರ ಉಚ್ಚಲಕುಂಟಿ, ಹನುಮಂತಪ್ಪ ಮೇಟಿ, ಹನುಮಂತಪ್ಪ ಹೊರಪೇಟಿ, ಭೀಮನಗೌಡ ಗೌಡ್ರ, ಮಹಾಂತಗೌಡ ಪೋಲಿಸ್ ಪಾಟೀಲ್, ಅಮರೇಶ್ ನಿಡಶೇಸಿ, ಶರಣಪ್ಪ ಗೊಂದಿ, ಯಲ್ಲಪ್ಪ ಅತ್ತಿಗುಡ್ಡದ, ಅಕ್ಕ ನಾಗಲಾಂಬಿಕ ಮಹಿಳಾ ಗಣದ ಶರಣೆಯರಾದ ಸಾವಿತ್ರಮ್ಮ ಆವಾರಿ ಮತ್ತು ಬಸಮ್ಮ ಹೂಗಾರ ಇದ್ದರು.



ಶ್ರದ್ಧೆಯಿಂದ ವಾಸವಿ ಜಯಂತಿ ಆಚರಣೆ: ವೃತ್ತಕ್ಕೆ ಶಿಲಾನ್ಯಾಸ

◆ವಿಜಯನಗರ: ಹೊಸಪೇಟೆಯ ಆರ್ಯ ವೈಶ್ಯ ಸಂಘದ ವತಿಯಿಂದ ವಾಸವಿ ಜಯಂತಿಯನ್ನು ಭಾನುವಾರ ವಿಜೃಂಭಣೆಯಿಂದ ಆಚರಿಸಲಾಯಿತು ಹಾಗೂ ಹಂಪಿ ರಸ್ತೆಯ ಮಲ್ಲಿಗೆ ಹೋಟೆಲ್‌ಗೆ ತಿರುವ ಪಡೆಯುವ ಸ್ಥಳದಲ್ಲಿ ವಾಸವಿ ವೃತ್ತ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

ಬೆಳಿಗ್ಗೆ ಮೇನ್ ಬಜಾರ್‌ನ ನಗರೇಶ್ವರ ದೇವಸ್ಥಾನದಿಂದ ಸಮಾಜ ಬಂಧುಗಳು ಪೂರ್ಣಕುಂಭದೊಂದಿಗೆ ಕುಲದೇವತೆ ಶ್ರೀವಾಸವಿಯ ಭವ್ಯ ಮೆರವಣಿಗೆ ನಡೆಯಿತು. ಮಾರ್ಗ ಮಧ್ಯೆ ಸಂಘದ ಅಧ್ಯಕ್ಷ ಕಾಕುಬಾಳು ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಪ್ರಹ್ಲಾದ್ ಭೂಪಾಳ್, ನಗರಸಭೆ ಮಾಜಿ ಉಪಾಧ್ಯಕ್ಷ ರಮೇಶ್ ಗುಪ್ತ ಹಾಗೂ ಇತರ ಸಮಾಜದ ಮುಖಂಡರು ವಾಸವಿ ವೃತ್ತ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು.

ಇದೇ ವೇಳೆ ವೃತ್ತಕ್ಕೆ ಹೆಸರು ಇಡಲು ಕಾರಣೀಕರ್ತರಾದ ರಮೇಶ್ ಗುಪ್ತ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಶ್ರೀವಾಸವಿ ಮಾತೆಗೆ ಸುಮಂಗಲೆಯರಿಂದ ಮಡಿಲಕ್ಕಿ ಸಮರ್ಪಣೆ, ತುಲಾಭಾರ ಸೇವೆ, ಕನ್ನಿಕಾ ಪೂಜೆ ಹಾಗೂ ಹಾಗೂ ಧಾರ್ಮಿಕ ಸಭೆ ನಡೆಯಿತು. ದಾನಿಗಳು ಹಾಗೂ ವಿವಿಧ ಬಗೆಯಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.



38 ಜನರಿಂದ ರಕ್ತದಾನ: ಆರ್ಯವೈಶ್ಯ ಸಂಘವು ರೋಟರಿ ಕ್ಲಬ್ ಸಹಯೋಗದಲ್ಲಿ ನಡೆಸಿದ ರಕ್ತದಾನ ಶಿಬಿರದಲ್ಲಿ 38 ಮಂದಿ ರಕ್ತದಾನ ಮಾಡಿದರು. ಸಂಜೆ ವಾಸವಿ ದೇವಿಯ ಭವ್ಯ ಶೋಭಾಯಾತ್ರೆ ನಡೆಯಿತು. ಸಮಾಜದ ಸಾವಿರಾರು ಮಂದಿ ಇದರಲ್ಲಿ ಪಾಲ್ಗೊಂಡರು.

ಸಂಘದ ಖಜಾಂಚಿ ಕಾಕುಬಾಳ ಶ್ರೀನಿವಾಸ, ಸೇವಾ ಸಮಿತಿ ಅಧ್ಯಕ್ಷ ನರಸಿಂಹಮೂರ್ತಿ, ವಾಸವಿ ಮಹಿಳಾ ಮಂಡಳಿಯ ಸದಸ್ಯರು ಇದ್ದರು.

ಕಠಿಣ ಪರಿಶ್ರಮದಿಂದ ಯಶಸ್ಸು: ವಾಗೀಶ್

◆ಹೂವಿನಹಡಗಲಿ: ಕಠಿಣ ಪರಿಶ್ರಮದಿಂದ ಯಶಸ್ಸು ಸಾಧಿಸಲು ಸಾಧ್ಯ ಎಂದು ಎಂಪಿ ಅಜ್ಜಯ್ಯ ಟ್ರಸ್ಟ್ ಅಧ್ಯಕ್ಷ ಎಂಪಿ ವಾಗೀಶ್ ಹೇಳಿದರು.

ಎಂಪಿ ಅಜ್ಜಯ್ಯ ಟ್ರಸ್ಟ್ ವತಿಯಿಂದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ ಸರ್ಕಾರಿ ಅನುದಾನಿತ ಅನುದಾನರಹಿತ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ನೆರವೇರಿಸಿ ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪಿಯುಸಿ ಪರೀಕ್ಷೆಗಳಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದಿರುವುದು ಹೆಮ್ಮೆಯ ವಿಷಯ. ಫಲಿತಾಂಶ ಸುಧಾರಣೆಗಾಗಿ ಶಾಲಾ ಶಿಕ್ಷಣ ಇಲಾಖೆಯ ಕೈಗೊಂಡ ಕ್ರಮಗಳು ಹೆಚ್ಚು ಫಲಿತಾಂಶ ಬರಲು ಪೂರಕವಾಗಿದೆ ಎಂದು ಹೇಳಿದರು. ತಾಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದ ಎ.ಪೂಜಶ್ರೀ 620, ಇಟ್ಟಿಗಿ ಆಶಾಬಾನು 619, ನಂದಿಹಳ್ಳಿ ಆಂಗ್ಲ ಮಾಧ್ಯಮದ ಕೆ.ಬಿ.ಪೂಜಾ 619, ಸೋಗಿ ಸಂಧ್ಯಾಬಾಯಿ 593 ಅಡವಿಮಲ್ಲನಕೇರಿ ತಾಂಡಾ ಟಾಪರ್ ಮನೆಗಳಿಗೆ ಭೇಟಿ ನೀಡಿ ಗೌರವ ಸನ್ಮಾನ ನೆರವೇರಿಸಿದರು.

ತಮ್ಮ 33ನೇ ವಿವಾಹ ವಾರ್ಷಿಕೋತ್ಸವದ ಅಂಗವಾಗಿ ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಉತ್ತೇಜಿಸುವ ಸಲುವಾಗಿ ಈ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಎಂಪಿ ಸಾವಿತ್ರಮ್ಮ ಶಿಕ್ಷಣ ಸಂಯೋಜಕ ಹಣ್ಣಿ ನರೇಶ್, ಕನ್ನಡ ಜಾಗೃತಿ ಸಮಿತಿ ಜಿಲ್ಲಾ ಸದಸ್ಯ ಸುರೇಶ ಅಂಗಡಿ ಇದ್ದರು.



ಆಶಾಬಾನುಗೆ ಸಹಾಯಧನ ವಿತರಣೆ



◆ಹೂವಿನಹಡಗಲಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕಿನ ಸರ್ಕಾರಿ ಪ್ರೌಢಶಾಲೆಗಳ ಪೈಕಿ ಅತಿ ಹೆಚ್ಚು ಅಂಕ ಪಡೆದ ಆಶಾಬಾನು ಬಡತನದಲ್ಲಿ ಅರಳಿದ ಪ್ರತಿಭೆ ಎಂದು ಮುಖ್ಯ ಶಿಕ್ಷಕಿ ಹನಸಿ ಮಂಗಳಾ ಹೇಳಿದರು.

ತಾಲೂಕಿನ ನಂದಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಟಾಪರ್ ಆಶಾಬಾನು ಮನೆಗೆ ಶಾಲೆಯ ಶಿಕ್ಷಕರೊಂದಿಗೆ ಭೇಟಿ ನೀಡಿ ಸನ್ಮಾನ ನೆರವೇರಿಸಿ ಅವರು ಮಾತನಾಡಿದರು. ಶಾಲೆಯಲ್ಲಿ ಶಿಕ್ಷಕರ ಪಾಠ ನಿರಂತರ ಅಧ್ಯಯನ ಆಸಕ್ತಿಯಿಂದ ಅಭ್ಯಾಸ ಮಾಡಿದ ಪರಿಣಾಮ ವಿದ್ಯಾರ್ಥಿನಿಗೆ ಉತ್ತಮ ಫಲಿತಾಂಶ ಬಂದಿದೆ ಎಂದು ತಿಳಿಸಿದರು. 10,000 ಕೊಡುಗೆ: ತಾಲೂಕು ಗ್ರೇಡ್ 1 ದೈಹಿಕ ಶಿಕ್ಷಕರ ಸಂಘದ ಕಾರ್ಯದರ್ಶಿ ಜೆ.ಪ್ರಸನ್ನಕುಮಾರ್ ಅವರ ತಾಯಿ ಅಮೃತಬಾಯಿ ಸ್ಮರಣಾರ್ಥವಾಗಿ ಪ್ರತಿಭಾವಂತ ವಿದ್ಯಾರ್ಥಿನಿ ಆಶಾಬಾನು ಅವರಿಗೆ 10,000 ರೂ. ಕೊಡುಗೆ ನೀಡಿದರು. ಜೆ.ಪ್ರಸನ್ನಕುಮಾರ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಬಿಕ್ಕಟ್ಟಿನ ನಡುವೆ ಆಶಾಬಾನು ಸಾಧನೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಆಗಲಿ ಎಂದು ಹೇಳಿದರು. ಗ್ರಾಮದ ಮುಖಂಡ ವಿ.ಬಿ.ಶಿವಾನಂದ ನಂದಿಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಶೇ.100 ಫಲಿತಾಂಶ ಹಾಗೂ ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಿದರು. ಗ್ರಾಮದ ಆರಣಿ ಬಸವರಾಜ ಶಿಕ್ಷಕರಾದ ಬಸವರಾಜ ಮಾಗಳದ, ಲಕ್ಷ್ಮೀದೇವಿ ಪಿ.ಎ., ಕೆ.ವಿಶ್ವನಾಥ, ಬಿ.ಎಚ್. ಎಂ.ರುದ್ರಯ್ಯ, ಎಂ.ಶಾಂತ, ಎಂ.ಷಡಕ್ಷರಿ ಇತರರಿದ್ದರು.

ಕನಿಷ್ಠ ವೇತನ ಜಾರಿಗೆ ಪ್ರಯತ್ನ: ಸಚಿವ ಲಾಡ್

◆ಸಂಡೂರು: ಅಮೆಜಾನ್, ಜುಮ್ಯಾಟೊ, ಸ್ವಿಗ್ಗಿ ಮುಂತಾದ ಆನ್‌ಲೈನ್ ಕಂಪನಿಗಳಲ್ಲಿ ಕೆಲಸ ಮಾಡುವ ಡೆಲಿವರಿ ಬಾಯ್‌ಗಳ ಹಿತರಕ್ಷಣೆಗಾಗಿ ಭಾರತದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಗಿಗ್ ವರ್ಕರ್ಸ್ ಬಿಲ್ ಕಾನೂನು ತರಲಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರು ಹೇಳಿದರು.

ತಾಲೂಕಿನ ತಾಳೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಕಾರ್ಮಿಕ ಇಲಾಖೆ ಹಾಗೂ ವಿವಿಧ ಇಲಾಖೆ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಡೂರು ಸಂಕಲ್ಪ ಸಮರ್ಪಣಾ ಸಮಾವೇಶ-2 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಚಾಲಕರು ಮತ್ತು ಕ್ಲೀನರ್‌ಗಳ ಹಿತದೃಷ್ಟಿಯಿಂದ ಸ್ಮಾರ್ಟ್ ಕಾರ್ಡ್ ವಿತರಿಸುವ ಟ್ರಾನ್ಸ್‌ಪೋರ್ಟ್ ಬಿಲ್ ಯೋಜನೆಜಾರಿಯಲ್ಲಿದೆ. ಅದರಂತೆ ಚಿತ್ರರಂಗದ ಕಾರ್ಮಿಕರು ಹಾಗೂ ಮನೆಗೆಲಸಮಾಡುವಮಹಿಳೆಯರ ಸಾಮಾಜಿಕ ಭದ್ರತೆಗಾಗಿ ಸಿನಿ ಬಿಲ್ ಮತ್ತು ಡೊಮೆಸ್ಟಿಕ್ ಬಿಲ್ ನಂತಹ ಹೊಸ ಕಾನೂನುಗಳನ್ನು ರೂಪಿಸಲಾಗುತ್ತಿದೆ ಎಂದರು.



ಸಂಡೂರು ವಿಧಾನಸಭೆ ಕ್ಷೇತ್ರದ ಶಾಸಕಿ ಈ.ಅನ್ನಪೂರ್ಣ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಡೂರು ತಾಲೂಕಿನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದು, ತಾಲೂಕಿನ ಒಟ್ಟು 175 ಶಾಲೆಗಳ ಪೈಕಿ 65 ಶಾಲೆಗಳನ್ನು 'ಮಾದರಿ ಶಾಲೆ'ಗಳನ್ನಾಗಿ ರೂಪಿಸಲಾಗಿದೆ. ಉಳಿದ 110 ಶಾಲೆಗಳ ಅಭಿವೃದ್ಧಿಗಾಗಿ ಈಗಾಗಲೇ ರೂಪರೇಷೆಗಳನ್ನುಸಿದ್ಧಪಡಿಸಲಾಗಿದೆ ಎಂದರು.

ಬಳ್ಳಾರಿ ಲೋಕಸಭೆ ಕ್ಷೇತ್ರದ ಸಂಸದ ಈ.ತುಕಾರಾಮ್, ರಾಜ್ಯ ಖನಿಜ ನಿಗಮ ನಿಯಮಿತದ ಉಪಾಧ್ಯಕ್ಷ ಎಚ್.ಲಕ್ಷ್ಮಣ್ ಮಾತನಾಡಿದರು. ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ.ವೆಂಕಟೇಶ್ ಆ.ಶಿಂಧಿಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ಮೋಟಾರ್ ಸಾರಿಗೆಮತ್ತು ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯಲ್ಲಿ ನೋಂದಾಯಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಯಿತು. ಹಾಗೂ ಸಂಡೂರು ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಗೊಳಿಸಲಾಯಿತು. ಫಲಾನುಭವಿಗಳಿಗೆ ಸೌಲಭ್ಯ ಹಂಚಿಕೆ ಮತ್ತು ವಿವಿಧ ಸಾಧಕರಿಗೆ ಸನ್ಮಾನಿಸಲಾಯಿತು.

ಮಾಜಿ ವಿಧಾನ ಪರಿಷತ್ ಸದಸ್ಯ ಕೆಎಸ್‌ಎಲ್ ಸ್ವಾಮಿ, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಷಯ ಲಾಡ್, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಉಪಾಧ್ಯಕ್ಷೆ ಆಶಾಲತಾ ಸೋಮಪ್ಪ, ಸಂಡೂರು ತಾಲೂಕು ಅಧ್ಯಕ್ಷ ನೂರುದ್ದೀನ್. ಎಸ್., ಸಂಡೂರು ತಹಶೀಲ್ದಾರ್ ಅನಿಲ್ ಕುಮಾರ್ ಜಿ., ಸಂಡೂರು ತಾಪಂ ಇಒ ಮಡಗಿನ ಬಸಪ್ಪ, ಬಳ್ಳಾರಿ ಉಪವಿಭಾಗದ ಕಾರ್ಮಿಕ ಅಧಿಕಾರಿ ಎಸ್.ಜಿ.ಖೈನೂರು ಸೇರಿದಂತೆ ಇತರರಿದ್ದರು.

ನೂತನ ತೋಟಗಾರಿಕಾ ಕಚೇರಿ ಉದ್ಘಾಟನೆ

◆ಕೊಟ್ಟೂರು: ಪಟ್ಟಣದ ಎಪಿಎಂಸಿ ಆವರಣದಲ್ಲಿ ನೂತನ ತೋಟಗಾರಿಕೆ ಇಲಾಖೆಯ ಕಚೇರಿಯ ಉದ್ಘಾಟನೆಯನ್ನುಶಾಸಕಕೆ.ನೇಮಿರಾಜ್ ನಾಯ್ಕ್ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಇನ್ನೂ ಕೆಲವೇ ತಿಂಗಳುಗಳಲ್ಲಿ ಎಲ್ಲ ತಾಲೂಕು ಮಟ್ಟದ ಇಲಾಖೆಯ ಕಚೇರಿಗಳನ್ನು ಕೊಟ್ಟೂರಿಗೆ ತರಲಾಗುವುದೆಂದು ಭರವಸೆಯನ್ನು ನೀಡಿದರು. ಹಾಗೆಯೇ ಮಳೆಗಾಲದಲ್ಲಿ ಕೊಟ್ಟೂರು ಬಸ್ ಸ್ಟ್ಯಾಂಡ್‌ನಲ್ಲಿ ನೀರು ನಿಂತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದಕ್ಕೂ ಸಹ ಹೆಚ್ಚಿನ ಅನುದಾನ ದೊರಕಿರುವುದರಿಂದ ಆದಷ್ಟು ಬೇಗ ನೂತನ ಬಸ್ ಸ್ಟ್ಯಾಂಡ್ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯ ಅಧಿಕಾರಿ ಸಿಬ್ಬಂದಿ ಮತ್ತು ಮುಖಂಡರು ಎಂ.ಎಂ. ಜೆ.ಶೋಭಿತ್, ತಿಮ್ಲಾಪುರ ಕೊಟ್ರೇಶ್, ಅಯ್ಯನಹಳ್ಳಿ ಮಲ್ಲಿಕಾರ್ಜುನ್, ಚಪ್ಪರದಹಳ್ಳಿ ನಂದೀಶ್, ತೋಮರಾಜ್, ವೀರಯ್ಯ ಹಾಗೂ ಉಮೇಶ್ ಗೌಡ ಮತ್ತು ಅನೇಕ ಮುಖಂಡರು ಉಪಸ್ಥಿತರಿದ್ದರು.

